
ಕರಾವಳಿ ಕರ್ನಾಟಕದ
ಕ್ರೈಸ್ತ ಚಿತ್ರಕಲೆ

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ



ಸಂಶೋಧಕ
ಡಿ.ಆರ್.ಸುರೇಂದ್ರನಾಥ

ಮಾರ್ಗದರ್ಶಕರು
ಡಾ.ಎಸ್.ಸಿ.ಪಾಟೀಲ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
೨೦೧೨

1003

1003

ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ
ಡಿ.ಆರ್. ಸುರೇಂದ್ರನಾಥ

ಮಾರ್ಗದರ್ಶಕರು
ಡಾ. ಎಸ್.ಸಿ. ಪಾಟೀಲ್
ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು
ಡೀನ್, ಲಲಿತಕಲಾ ನಿಕಾಯ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೨

ಪ್ರಮಾಣ ಪತ್ರ

"ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಡಾ.ಎಸ್.ಸಿ. ಪಾಟೀಲ್‌ರ** ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ, ಲಲಿತಕಲಾ ನಿಕಾಯದ, ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಒಪ್ಪಿಸುತ್ತಿದ್ದು, ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಪದವಿ ಅಥವಾ ಬೇರೆ ಉದ್ದೇಶಗಳಿಗೆ ಬಳಸಿಕೊಂಡಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ:

(ಡಿ.ಆರ್. ಸುರೇಂದ್ರನಾಥ)
ಸಂಶೋಧನಾ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಘೋಷಣಾ ಪತ್ರ

ಡಿ.ಆರ್. ಸುರೇಂದ್ರನಾಥ ಇವರು "**ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆ**" ಎಂಬ ಶೀರ್ಷಿಕೆಯ ಸಂಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿನ ಲಲಿತಕಲಾ ನಿಕಾಯದ, ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ.

ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವು ಇಡಿಯಾಗಿ ಅಥವಾ ಬಿಡಿಯಾಗಿ ಈ ಮೊದಲ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 30-6-12

(ಡಾ. ಎಸ್.ಸಿ. ಪಾಟೀಲ್)
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಡೀನ್, ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ



ಪ್ರಾರ್ಥನಾ ಮಂದಿರ. ಸೆಂಟ್ ಅಲೋಶಿಯಸ್ ಚರ್ಚ್. ಮಂಗಳೂರು

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಒಂದು ಜನಾಂಗದ ಆಂತರಿಕ ವಿಕಾಸವು ಕಲೆಯಾದರೆ ಅದರೊಂದಿಗೆ ಅಭಿವ್ಯಕ್ತಿಯಾದ ಕೃತಿಗಳು ಆ ಜನಾಂಗದ ಬಾಹ್ಯ ವಿಕಾಸವೆನಿಸುತ್ತವೆ. ಒಂದು ತಳಪಾಯ ಇನ್ನೊಂದು ಕಟ್ಟಡ ಎಂಬಂತೆ ಭಾರತೀಯ ಪರಿಸರದಲ್ಲಿ ಅನೇಕ ಕಲೆಗಳು ಬೆಳೆದು ಬಂದಿವೆ. ಅಲ್ಲದೆ ಯಾವುದೇ ಜನಾಂಗದ ಬದುಕು, ಜೀವನ ಚರಿತ್ರೆಯೆನಿಸಿದರೆ, ಕಲೆಗಳು ಅದರ ಆತ್ಮ ಚರಿತ್ರೆಯೆನಿಸುತ್ತವೆ. ವ್ಯಾಪಕವಾದ ಅರ್ಥದಲ್ಲಿ ಜನತೆ ಬದುಕಿದ ರೀತಿ ಅನುಸರಿಸಿದ ಧರ್ಮ, ಬೆಳೆಸಿದ ಕಲೆ ಅವರ ಜೀವನ ಮೌಲ್ಯ ಇತ್ಯಾದಿಗಳ ವಿವರಣೆಯೇ ಇಡಿಯಾಗಿ ಇತಿಹಾಸವಾಗಿದೆ.

ಸೃಷ್ಟಿಯು ಸ್ವರೂಪವು ವಿಸ್ಮಯದಿಂದ ಕೂಡಿದೆ. ಅದು ತನ್ನ ಒಡಲಲ್ಲಿ ಕೂತೂಹಲಕರವಾದ ಅನೇಕ ಗೂಡಾರ್ಥಗಳನ್ನು ಹೊಂದಿದೆ. ಇಂತಹ ಸಂಗತಿಯನ್ನು ಅರ್ಥೈಸಿಕೊಳ್ಳಲು ಮಾನವ ಹಲವಾರು ಮಾರ್ಗಗಳಡಿಯಲ್ಲಿ ಸಾಗುತ್ತಾ ಬಂದಿದ್ದಾನೆ. ತನ್ನ ಜೀವಿತಾವಧಿಯಲ್ಲಿ ಬೌದ್ಧಿಕ ಹಾಗೂ ಭೌತಿಕ ಜಗತ್ತಿನೊಡನೆ ಹೊಂದಿಕೊಂಡು ಬದುಕಲು ತನ್ನದೇ ಆದ ನಾಗರಿಕ ಜೀವನವನ್ನು ಸೃಷ್ಟಿಸಿಕೊಂಡಿದ್ದು, ವಿನೂತನ ಸಂಸ್ಕೃತಿಯ ಅಡಿಯಲ್ಲಿ ಹೊಂದಾಣಿಕೆ ಮಾಡಿಕೊಂಡು ಬದುಕನ್ನು ಸಾಗಿಸುತ್ತಾ ಬಂದಿದ್ದಾನೆ.

ಮಾನವನ ಜೀವಿತಾವಧಿಯಲ್ಲಿ ಕಂಡು ಬರುವ ಅನುಭವ-ಭಾವಭಿವ್ಯಪೆಗಳಾದ ಸುಖ-ದುಃಖ, ನೋವು-ನಲಿವು, ದುಗುಡ-ದುಮ್ಮಾನಗಳನ್ನು ಅನೇಕ ರೂಪಗಳಲ್ಲಿ ಅಭಿವ್ಯಕ್ತಿಗೊಳಿಸುವ ಪ್ರಯತ್ನದಡಿಯಲ್ಲಿ ಸಂಸ್ಕೃತಿಯ ಭಾಗವಾದ ಚಿತ್ರಕಲೆಯ ಮಾಧ್ಯಮವನ್ನು ಸೃಷ್ಟಿಸಿಕೊಳ್ಳುತ್ತಾ ಬಂದಿದ್ದಾನೆ. ಚಿತ್ರಕಲೆಯನ್ನು ಪ್ರಾಗ್ಯೆತಿಹಾಸಿಕ ಕಾಲವಾದ ಪ್ರಸ್ತುತ ದಿನಗಳವರೆಗೂ ಹಲವು ರೂಪಗಳಲ್ಲಿ ಅಭಿವ್ಯಕ್ತಿಸುತ್ತಾ ಬಂದಿದ್ದಾನೆ. ಇದು ಇಂದು ವಿಶ್ವಭಾಷೆಯಾಗಿ ಪರಿಗಣಿಸಲ್ಪಟ್ಟಿದೆ. ಚಿತ್ರಕಲೆ ಆಯಾ ಕಾಲದ ನಿತ್ಯದ ಬದುಕಿನಲ್ಲಿ ಆಚಾರ-ವಿಚಾರ, ನಂಬಿಕೆ, ಆಚರಣೆ ಮತ್ತು ಧಾರ್ಮಿಕ ಕ್ರಿಯಾ ವಿಧಿ-ವಿಧಾನಗಳಂತಹ ಸಂಗತಿಗಳು ಮಾನವನು ರಚಿಸಿದ ಚಿತ್ರ, ಶಿಲ್ಪ, ಇತ್ಯಾದಿಗಳನ್ನು ಲಲಿತಕಲೆಗಳಲ್ಲಿ ಒಡಮೂಡಿಸಿದ್ದಾನೆ. ಇಂತಹ ಕಲೆಗಳನ್ನು ವೃದ್ಧಿಸಿಕೊಂಡು ತನ್ನ ಜೀವನ ವಿಧಾನವನ್ನು ಒಂದು ಕಲಾತ್ಮಕ ಪ್ರಕ್ರಿಯೆಯಾಗಿ ಮೈಗೂಡಿಸಿಕೊಂಡು

ಬಂದಿದ್ದಾನೆ.[೧] ಎಂದರೆ ಇಂದಿನ ಪರಿಸ್ಥಿತಿಯಲ್ಲಿ ನಾವು ಕಾಣುವಂತಹ ಅಳಿದುಳಿದಿರುವ ಕಲೆಯನ್ನು, ಕಲಾಕೃತಿಗಳನ್ನು ವೀಕ್ಷಿಸಿದರೆ ಗೊತ್ತಾಗುತ್ತದೆ.

ಜೀವನ ಬದಲಾದಂತೆ, ಜೀವನದ ಮೌಲ್ಯಗಳು ಬದಲಾದಂತೆ, ಕಲೆಯೂಸಹ ಬದಲಾಗುತ್ತಾ ಹೋಗುತ್ತದೆ. ಹಳೆಯದರ ಸ್ಥಾನಕ್ಕೆ ವಿಶೇಷ ವಸ್ತುಗಳ ಸೇರ್ಪಡೆಯೊಂದಿಗೆ ಬದಲಾವಣೆಯ ಅಂಶಗಳನ್ನೊಳಗೊಂಡ "ಹೊಸದು" ನಿಲ್ಲುತ್ತದೆ. ಈ ಹೊಸದು ಕೂಡ ಮುಂದೆ ಮತ್ತೊಂದು ಹೊಸ ಸಂಪ್ರದಾಯದಲ್ಲೇ ದಾರಿ ಮಾಡಿಕೊಡುತ್ತದೆ. ಈ ಕಾಲಕ್ಕನುಗುಣವಾಗಿ ಅಭಿವ್ಯಕ್ತಿಯು ನಿರಂತರವಾಗಿ ನಡೆಯುವ ಕ್ರಿಯೆಗೆ ಕಲೆಗಳು[೨] ಸಾರ್ಥಕ ರೀತಿಯಲ್ಲಿ ಕೆಲಸ ಮಾಡುತಿದ್ದು, ವಿವಿಧ ಬಗೆಯ ಆಕರಗಳನ್ನೊಳಗೊಂಡಂತಹ ಕಲೆಗಳು ಬೆಳಕಿನೆಡೆಗೆಬರುತ್ತವೆ. ರಸ ಋಷಿ ಡಿ.ವಿ.ಜಿ. ಅವರು ಹೇಳಿರುವಂತೆ "ಕಲೆಯಲ್ಲಿ ಪರಮ ಕಲೆ ಜೀವನಕಲೆ" ಎಂಬುದು ಈ ಹಿನ್ನೆಲೆಯಲ್ಲಿ ಸಾರ್ಥಕವೆನಿಸುತ್ತದೆ. ಇದರಲ್ಲಿ ಸೌಂದರ್ಯ ತುಂಬುವ ಶಕ್ತಿಯು ಸಹ ಅಂದಿನ ಆದಿಮಾನವನಿಂದ ಇಂದಿನ ಕಲಾವಿದನವರೆಗೂ ಸೇರಿರುವುದರ ಜೊತೆಗೆ ಆಸ್ವಾಧಿಸುವಂತಹ ಪ್ರಜ್ಞಾಪೂರ್ವಕ ಅಂಶಗಳನ್ನು ಗಮನಿಸಬೇಕಾಗುತ್ತದೆ. ಹೀಗೆ ಸಹೃದಯರು ಇರುವುದು ಅದಕ್ಕೊಂದು ಮೌಲ್ಯ ತಂದು ಕೊಟ್ಟಿದೆ.[೩] ಆದರೂ ಅವರವರ ಸಮುದಾಯಕ್ಕೆ ಸಂಬಂಧಿಸಿದಂತೆ ಸಾಂಸ್ಕೃತಿಕತೆಯನ್ನು ಉಳಿಸಿ-ಬೆಳೆಸುವ ದೃಷ್ಠಿಯಿಂದ ದೇವರ ಮಹಿಮೆಯನ್ನು ಮತ ಬಾಂಧವರಿಗೆ ಚಿತ್ರ ರಚಿಸಿ, ತೋರಿಸಿ, ಸ್ಮರಿಸುವುದನ್ನು ಪ್ರಸ್ತುತ ದಿನಗಳಲ್ಲಿನ ಕಲೆಯ ಬೆಳವಣಿಗೆಯನ್ನು ಉನ್ನತ ಮಟ್ಟಕ್ಕೆ ಕರೆದುಕೊಂಡು ಹೋಗಲು ಪ್ರಯತ್ನ ಪಟ್ಟು ಯಶಸ್ಸನ್ನು ಕಂಡಿದ್ದು ಸೂಕ್ತವೆನಿಸುತ್ತದೆ. ನಿತ್ಯದ ಬದುಕು ಸಹ ಹಸನಾಗಿ ನೆಡೆಯುವಂತೆ ಒಂದು ಸೂತ್ರದಲ್ಲಿ ಯಾವುದು ಲಬಿಸಿದೆಯೋ ಅದು ಧರ್ಮವೆನಿಸುತ್ತದೆ. ಈ ಧರ್ಮ ಪ್ರಜ್ಞೆಯ ಆಚಾರ-ವಿಚಾರಗಳು ನೂರಾರು ಸಂಪ್ರದಾಯ ನಂಬಿಕೆಗಳಿಗೆ, ಮೌಲ್ಯಗಳಿಗೆ ಕಾರಣವಾಗಿ ಸಂಗೀತ, ಚಿತ್ರ, ಶಿಲ್ಪ, ಮುಂತಾದ ಕಲೆಗಳು ಹುಟ್ಟಿ ವಿಕಾಸಗೊಂಡವು ಈ ದೃಷ್ಟಿಯಿಂದ ಮನುಷ್ಯನ ಕ್ರಿಯಾಶೀಲ ಮನಸ್ಸು ಬದುಕನ್ನು ಸುಂದರವಾಗಿಸಲು ಜಡದಿಂದ ಚೈತನ್ಯಕ್ಕೆ ಸಾಗುವಂತೆ ಮಾಡಲು ಪಟ್ಟ ಪರಿಶ್ರಮವೇ ಕಲೆಗಳ ಹುಟ್ಟಿಗೆ ಕಾರಣವಾಗಿದೆಯನ್ನಬೇಕು.[೪] ಇಂತಹ ಕಲೆಗಳ ಬೆಳವಣಿಗೆಯ ವಿಕಾಸಗಳೇ ಸಂಸ್ಕೃತಿಯ ವೈಭವವನ್ನು ಸೂಚಿಸುತ್ತವೆ.

---

೧. ಡಾ. ಎಸ್.ಸಿ. ಪಾಟೀಲ್. (ಸಂ.): ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ-೩೭

೨. ಡಾ. ಎಸ್.ಸಿ. ಪಾಟೀಲ್ : ವರ್ಣಸಂಚಯ, ಪುಟ-೪೭.

೩. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಕಲಾವಿದ ಜೆ.ಎಸ್. ಖಂಡೇರಾವ್, ಪುಟ-೪.

೪. ಡಾ. ಎಸ್.ಸಿ. ಪಾಟೀಲ್ : ಕರ್ನಾಟಕದ ಜನಪದ ಚಿತ್ರಕಲೆ, ಪುಟ-೩.

ಪ್ರಪಂಚ ಸೃಷ್ಟಿಯಾದಾಗಿನಿಂದಲೂ ಹುಟ್ಟಿರುವ ಸಮಸ್ತ ಜೀವರಾಶಿಯಲ್ಲಿ ಮಾನವನು ಒಬ್ಬ ಜೀವಿ. ಆದರೆ ಇತರ ಜೀವಿಗಳಿಗಿಂತ ಭಿನ್ನವಾಗಿದ್ದಾನೆ. ಅಂದರೆ ಮಾನವ ಬುದ್ಧಿಜೀವಿ, ಆದರೆ ಇತರ ಜೀವಿಗಳಿಗಿಂತ ಭಿನ್ನ. ಅಂದರೆ ಮಾನವ ತನ್ನ ಬುದ್ಧಿಶಕ್ತಿಯಿಂದ ತನ್ನ ಹಾಗೂ ಸಮಾಜದ ಸುಧಾರಣೆಯೊಂದಿಗೆ ಇತರ ಜೀವಿಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಅವುಗಳಿಂದ ಪ್ರಯೋಜನ ಪಡೆಯುತ್ತಾ ಬಂದಿರುತ್ತಾನೆ. ಮೊದಲೇ ಮಾನವನು ಕಾಡು ಮನುಷ್ಯನಾಗಿ ಕ್ರಮೇಣ ನಾಗರಿಕನಾಗಿ ಸಮಾಜದ ಸುಧಾರಣೆ ಹಾಗೂ ಸುಸಂಸ್ಕೃತ ಜೀವನ ನೆಡೆಸತೊಡಗಿದ. ಸಮಾಜದಲ್ಲಿ ಸುಧಾರಣೆಯುಂಟಾಗುವಂತೆ ಪ್ರಯತ್ನಿಸುತ್ತಾ ಬಂದಿರುತ್ತಾನೆ. ಸಾಮಾಜಿಕ ವ್ಯವಸ್ಥೆ[೫] ಸಮಾಜಗಳ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಲ್ಲದೇ ಧಾನವನಾಗಿದ್ದನು. ಈ ಮಾನವನಿಂದ ದೈವ ಮಾನವನಾಗಲು ಸತತವಾಗಿ ಪ್ರಬಲ ಪ್ರಯತ್ನ ಮಾಡುತ್ತಲೇ ಬಂದಿರುತ್ತಾನೆ. ತನ್ನ ಬುದ್ಧಿಶಕ್ತಿ, ಆಚಾರ-ವಿಚಾರ, ಒಳಿತು-ಕೆಡುಕುಗಳ ವಿವೇಚನೆ, ಸಾಮಾಜಿಕ ಜೀವನದಲ್ಲಿ ಬಹಳಷ್ಟು ಸುಧಾರಣೆಯಾಗುತ್ತಾ ಬಂದಿರುತ್ತದೆ. ಇವೆಲ್ಲಕ್ಕೂ ಸಾವಿರಾರು ವರ್ಷಗಳ ಇತಿಹಾಸವಿರುವುದನ್ನು ಕಾಣಬಹುದು.

ಹಿಂದಿನಿಂದಲೂ ಮಾನವ ಸಮಾಜದಲ್ಲಿ ಕಂಡುಕೊಳ್ಳಬಹುದಾದ ವಿಶೇಷತೆ ಏನೆಂದರೆ ಮಾನವನು, ಸಮಾಜದ ಅನ್ಯ, ಅವ್ಯಕ್ತ ಶಕ್ತಿ ತನ್ನ ಮೇಲೆ ಪ್ರಭಾವ ಬೀರುತ್ತದೆಂದು ತಿಳಿದುಕೊಂಡನು. ಹಾಗೂ ಅದರಿಂದ ಅಪಾಯವಾಗದಂತೆ ಭಯ-ಭಕ್ತಿಯಿಂದ ಆ ಶಕ್ತಿಯನ್ನು ವಿವಿಧ ರೀತಿಯಲ್ಲಿ ಕಲ್ಲು, ಮಣ್ಣು, ಮರ ಅಥವಾ ಯಾವುದೇ ವಿಶೇಷ ವಸ್ತು ಸಂಕೇತವಾಗಿಟ್ಟುಕ್ಕೊಂಡು ಪೂಜಿಸತೊಡಗಿದನು. ಇಂತಹ ಪೂಜಾ ವಿಧಾನಗಳು ಹಲವರಿದ್ದಾರೆ. ತಾನೇ ಉಪಯೋಗಿಸುವ ಹೂವು, ಹಣ್ಣು, ಹಂಪಲು, ತಿಂಡಿ-ತಿನಿಸುಗಳನ್ನು ಮುಂದಿಟ್ಟು ಪ್ರಾಣಿ ಬಲಿಗಳನ್ನು ಕೊಟ್ಟು ಆರಾಧಿಸಿಕೊಂಡು ಬಂದಿರುವುದು ಇತಿಹಾಸದಿಂದ ತಿಳಿದ ವಿಚಾರವಾಗಿದೆ. ಇದು ಭಾರತದಲ್ಲಾಗಲಿ ಅಥವಾ ಯಾವುದೇ ಒಂದು ದೇಶಕ್ಕಾಗಲಿ ಸೀಮಿತವಲ್ಲ. ಮಾನವನಿರುವ ಜಗತ್ತಿನ ಎಲ್ಲಾ ದೇಶಗಳಿಗೆ ಸೀಮಿತವಾಗಿದೆ. ಮಾನವನಿರುವ ಜಗತ್ತಿನ ಯಾವುದೇ ಮೂಲೆಯಲ್ಲಿರುವ ಪ್ರದೇಶದಲ್ಲೂ ವಿಶೇಷವಾಗಿ ಕಂಡುಬರುವಂತಹ ವಿಚಾರವಾಗಿದೆ.

ತನ್ನ ಮೇಲೆ ಪ್ರಭಾವ ಬೀರುವ ತನಗಿಂತ ಅಧಿಕ ಅವ್ಯಕ್ತ ಶಕ್ತಿಯ ದಿವ್ಯ ಶಕ್ತಿಯಾಗಿ ಮಾನವ ಸಮುದಾಯದಿಂದಲೇ ಪೂಜಿಸಲ್ಪಟ್ಟು ನಿರಂತರ ಬೆಳೆದುಬಂದ ವಿಧಾನವಾಗಿದೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಸಹ ಹಾಜರಾಗಿ ತನ್ನದೇ ಆದ ರೀತಿಯಲ್ಲಿ ಅಥವಾ ಸಮಾಜ ರೂಪಿಸಿಕೊಂಡ ರೀತಿಯಲ್ಲಿ ಪ್ರಾರ್ಥನೆ, ಪೂಜಾಧಿಗಳನ್ನು ಸಲ್ಲಿಸುತ್ತಾ ಅದರ

೫. ವೇದವ್ರತ : ಸರ್ವಧರ್ಮ (ಮತ) ಸಂಗ್ರಹ, ಪುಟ-೨.

ಕೋಪಕ್ಕೆ ಬಲಿಯಾಗದಂತೆ ನೋಡಿಕೊಂಡು ಈಗಲೂ ಬಂದಿರುತ್ತಾನೆ. ಈ ಒಂದು ದಿವ್ಯ ಅವ್ಯಕ್ತ ಶಕ್ತಿಗೆ ಭಯಪಟ್ಟು ಸಮಾಜದ ಯಾವುದೇ ಒಬ್ಬ ವ್ಯಕ್ತಿ ಕೆಡುಕನ್ನು ಮಾಡಲು ಹಿಂಜರಿಯುತ್ತಾನೆ. ಈ ದೆಸೆಯಿಂದಾಗಿ ಸಮಾಜದಲ್ಲಿ ನ್ಯಾಯಸಮ್ಮತವಾದ ಸೌಹಾರ್ದತೆ ಬೆಳೆದುಕೊಂಡು ಬಂದಿರುತ್ತದೆ. ಈ ದಿವ್ಯಶಕ್ತಿಯನ್ನೇ ದೇವರೆಂದು ಕರೆಯುತ್ತಾ ಅದರ ಕೋಪಕ್ಕೆ ಬಲಿಯಾಗದಂತೆ ಎಚ್ಚರ ವಹಿಸಿಕೊಳ್ಳುತ್ತಿದ್ದರು. ಇವರಲ್ಲಿ ಮುಖ್ಯರೂ ವಿಚಾರವಂತರು ಇನ್ನೂ ಮುಂದಕ್ಕೆ ಚಿಂತನೆ ಮಾಡಿ ಈ ಶಕ್ತಿಯನ್ನು ಒಲೈಸಿಕೊಳ್ಳುವ ಪ್ರಯತ್ನ ಮಾಡತೊಡಗಿದರು. ಚಿಂತನೆ ಮುಂದೆ ಸಾಗಿದಂತೆಲ್ಲಾ ಜೀವನದಲ್ಲಿ ಸುಖ-ದುಖಃಗಳಿಗೆ ಕಾರಣಗಳನ್ನು ಹುಡುಕುತ್ತಾ, ಅವನ್ನು ಸರಿಪಡಿಸುವುದಕ್ಕೋಸ್ಕರ ನವೀನ ಸುಧಾರಣಾ ಕ್ರಮಗಳನ್ನು ಹಂತ ಹಂತವಾಗಿ ಅವುಗಳನ್ನು ಅನುಸರಿಸತೊಡಗಿದರೆಂದರೆ ತಪ್ಪಾಗಲಾರದು.[೬] ಆದರೆ ಸಮಾಜದಲ್ಲಿ ಸಂಸ್ಕೃತಿಯನ್ನು ಅರಿಯಲು ಇರುವ ಪ್ರಮುಖ ಆಕರಗಳಲ್ಲಿ ಚಿತ್ರ ಹಾಗೂ ಶಿಲ್ಪಕಲೆಗೆ ವಿಶಿಷ್ಟವಾದ ಸ್ಥಾನವಿದ್ದು ಆ ದಿಸೆಯಲ್ಲಿ ಚಿತ್ರಕಲೆಯ ಮುಖಾಂತರ ಮಾನವ ತನ್ನ ಸಂಸ್ಕೃತಿಯನ್ನು ಅಭಿವ್ಯಕ್ತಗೊಳಿಸಿದ್ದಾನೆ. ಸಂಸ್ಕೃತಿಯ ಒಂದು ಭಾಗವೇ ಆಗಿರುವ ಚಿತ್ರಕಲೆ ಇತರ ಆಕರಗಳಿಗಿಂತ ಭಿನ್ನವಾಗಿದೆ. ನಮ್ಮ ಸಾಂಸ್ಕೃತಿಕ ಹಿನ್ನೆಲೆಯ ಅವರವರ ಧರ್ಮಗಳಲ್ಲಿನ ಇತಿಹಾಸ ಹಾಗೂ ಆಚರಣೆಗಳ ವೈಭವದ ಬಿಂಬಿತವೇ ಈ ಅಧ್ಯಯನದ ಪ್ರಮುಖ ಅಂಶವಾಗಿದ್ದು. ಹಿಂದೂ, ಮುಸ್ಲಿಂ, ಮತ್ತು ಕ್ರೈಸ್ತ ಇತರೆ ಸಮೂಹಗಳಲ್ಲಿನ ಧಾರ್ಮಿಕ ಹಿನ್ನೆಲೆಯ ಪರಂಪರೆಯನ್ನು ಚಿತ್ರಕಲೆಯಲ್ಲಿ ನಮ್ಮ ಪೂರ್ವಜರು ಧರ್ಮ ಪ್ರಚಾರಕ ಸಾಧನವಾಗಿ ಸಮಾಜವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಹಾಗೂ ಮನರಂಜನೆಗಾಗಿ ವೈಯಕ್ತಿಕ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಗಾಗಿ, ರಾಜಕೀಯ ಉದ್ದೇಶಗಳಿಗಾಗಿ ಚಿತ್ರಗಳನ್ನು ಸಂದರ್ಭಕ್ಕನುಸಾರವಾಗಿ ಬಳಸಿಕೊಂಡರು ಎಂಬುದನ್ನು ಗಂಭೀರವಾಗಿ ಚಿಂತನೆ ಮಾಡುವುದರ ಜೊತೆಗೆ ಚಿತ್ರ, ಭಿತ್ತಿ ಚಿತ್ರ ಮತ್ತು ಶಿಲ್ಪಗಳಲ್ಲಿನ ಶೈಲಿ ಕಾಲದಿಂದ ಕಾಲಕ್ಕೆ ಬದಲಾದ ಅವುಗಳ ಬಳಕೆ, ಮುಖ್ಯವಾಗಿ ಭಿತ್ತಿಚಿತ್ರಗಳ ಅಧ್ಯಯನದಿಂದ ನೋಡಬಹುದಾಗಿದೆ. ಹಾಗೆಯೇ ಈ ಅಧ್ಯಾಯದ ಪ್ರಮುಖ ಅಂಶ ಕರಾವಳಿಯಲ್ಲಿರುವ ಕ್ರೈಸ್ತ ಚಿತ್ರಕಲೆ, ಈ ಕರಾವಳಿ ಎಂದಾಗ ತಂಪಾಗಿರುವ ಅಂಶವನ್ನು ಪರಿಗಣಿಸಬಹುದು. ತುಂಬಾ ಬುದ್ಧಿವಂತಿಕೆಯನ್ನೂ ಹೊಂದಿದವರು ಎಂದರೆ ತಪ್ಪಾಗಲಾರದು. ಶಿಸ್ತಿನ ಸಿಪಾಯಿಗಳು ಒಂದೇ ಮಾತಿನಲ್ಲಿ ಹೇಳಬೇಕಾದರೆ ಮೀನಿನ ತಲೆಯಂತಹ ಚುರುಕಾದ, ಸೂಕ್ಷ್ಮವಾದ ಬುದ್ಧಿವುಳ್ಳವರಾಗಿದ್ದಾರೆ. ಇಂತಹ ಕರಾವಳಿ ಭಾಗದಲ್ಲಿ ಸುಮಾರು ಕ್ರೈಸ್ತ ದೇವಾಲಯಗಳಿದ್ದು, ಸುಮಾರು ನೂರು, ಅದಕ್ಕಿಂತ ಹೆಚ್ಚಿನ ಆಯಸ್ಸನ್ನು ಹೊಂದಿರುವಂತಹ ಕೆಲವೇ ಕೆಲವು

೬ ವೇದವ್ರತ : ಸರ್ವಧರ್ಮ (ಮತ) ಸಂಗ್ರಹ, ಪುಟ-೨.

ದೇವಾಲಯಗಳಲ್ಲಿ ಚಿತ್ರಕಲೆ, ಭಿತ್ತಿಚಿತ್ರ ಮತ್ತು ಶಿಲ್ಪ ರಚನೆಯನ್ನು ಕಾಣಬಹುದು. ಹಾಗೆಯೇ ಇಲ್ಲಿನ ಎಷ್ಟೋ ದೇವಾಲಯಗಳು ಪ್ರಸ್ತುತ ದಿನಗಳಲ್ಲಿ ಮಾಯವಾಗುತ್ತಿದ್ದು. ಆಧುನಿಕತೆಯ ವಿನ್ಯಾಸವನ್ನು ಹೊಂದಿ ವಿಜೃಂಭಿಸುತ್ತಿವೆಯಾದರೂ ಹಿಂದಿನ ಶ್ರೀಮಂತಿಕೆಯುನ್ನು ಕಳೆದುಕೊಂಡಿವೆ. ಅಂತಹ ವಿಷಯವನ್ನು ಮುಖ್ಯವಾಗಿ ಇಲ್ಲಿಪ್ರಸ್ತಾಪಿಸಿ, ಕೆಲ ಕ್ರೈಸ್ತ ಮಂದಿರಗಳಲ್ಲಿ ಕಾಣಬರುವ ಚಿತ್ರ-ಶಿಲ್ಪ-ಭಿತ್ತಿಚಿತ್ರಗಳನ್ನು ದಾಖಲಿಸುವಂತಹ (ಸಂಶೋಧನೆ) ಕೆಲಸಕ್ಕೆ ಕೈ ಹಾಕಲಾಗಿದೆ. ಜೊತೆಗೆ ಚಿತ್ರ ರಚನೆಯ ಸಂದರ್ಭಗಳಲ್ಲಿ ಅನುಸರಿಸಿರಬಹುದಾದ ತಾಂತ್ರಿಕತೆಯ ವಿಚಾರಗಳನ್ನು ಆಳವಾದ ಅಧ್ಯಯನದ ಅವಶ್ಯಕತೆ ಇದ್ದು, ಅದನ್ನು ಸಾಧ್ಯವಾದಷ್ಟು ಮಟ್ಟಕ್ಕೆ ಅಧ್ಯಯನ ಮಾಡುವ ಪ್ರಯತ್ನಮಾಡಲಾಗಿದೆ.

ಅಧ್ಯಯನದ ಉದ್ದೇಶ

ಭಾರತೀಯ ಕಲಾವಲಯದಲ್ಲಿ ಲಲಿತಕಲೆಗಳ ತವರೂರೆಂಬ ಹೆಗ್ಗಳಿಕೆಗೆ ಪಾತ್ರವಾದ ಕರ್ನಾಟಕವು ತನ್ನದೇ ಆದ ಹಲವು ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಂಡಿದೆ. ಇದಕ್ಕೆ ಈ ನಾಡಿನ ಕಲಾವಿದರ ಪರಿಶ್ರಮದ ಬೆವರಿನ ಫಲಕಾರಣವಾಗಿದೆ. ಪ್ರಾಗೈತಿಹಾಸಿಕ ಕಾಲದಿಂದ ವಿಜಯನಗರ, ಮೈಸೂರು, ಸುರಪುರ, ಕರಾವಳಿ ಪ್ರದೇಶ, ಪಹಡಿ, ದಖ್ಖನಿ, ಮುಸ್ಲಿಂ, ಬ್ರಿಟೀಷ್, ಹಾಗೂ ಪಾಶ್ಚಾತ್ಯ ಕಲಾವಿದರಿಂದ ಅನೇಕ ಶೈಲಿಗಳು ಹುಟ್ಟಿಕೊಂಡಿದ್ದು ಇವುಗಳೆಲ್ಲಾವು ತನ್ನದೇ ಆದ ರಾಜಾಶ್ರಯ, ಧರ್ಮಾಶ್ರಮದ ಅನೇಕ ನೆಲೆಗಳಲ್ಲಿ ಬೆಳೆದು ಬಂದಿದ್ದು, ಇಂತಹ ಸೃಷ್ಟಿಯಿಂದಾದ ಶೈಲಿ ರೂಪಿತ ಚಿತ್ರಕಲೆ, ಶಿಲ್ಪಕಲೆ, ಉಬ್ಬುಶಿಲ್ಪ, ಮೂರ್ತಿ (ಶಿಲ್ಪ) ಕಲೆಗಳು ನಮ್ಮ ನಾಡಿನ ಸಾಂಸ್ಕೃತಿಕತೆಯನ್ನು ಎತ್ತಿ ಹಿಡಿದಿವೆ. ಇವುಗಳ ಸೃಷ್ಟಿಗೆ ಕಾರಣೀಭೂತರಾದ ವರ್ಗದವರು, ಕಲಾದರ್ಶನಿಕರು ಹಾಗೂ ಕಲಾವಿದರು, ಕಲಾಕೃತಿಗಳ ವಿಜೃಂಭಣೆಯೇ ಕರ್ನಾಟಕದ ಸಂಸ್ಕೃತಿಯ ಕಲಾ ಇತಿಹಾಸವನ್ನು ಸೃಷ್ಟಿಸುವಂತಾಗಲು ಕಾರಣವಾಗಿದೆ. ಈ ಮೇಲಿನ ಎಲ್ಲಾ ಬೆಳವಣಿಗೆಗಳು ಪ್ರಮುಖವಾಗಿ ಧರ್ಮಗಳು ಸಹ ತಮ್ಮ ಪ್ರಭಾವವನ್ನು ಬೀರಿವೆ. ವಿಶೇಷವಾಗಿ ಧರ್ಮಪ್ರಚಾರದ ದೃಷ್ಟಿಯಿಂದಲೇ ಸೃಷ್ಟಿಯಾದ ಚಿತ್ರಕಲೆ ಮತ್ತು ಶಿಲ್ಪಕಲೆಗಳನ್ನು ಪ್ರಮುಖವಾಗಿ ಕಾಣಬಹುದು.

ಇಂತಹ ಕಲಾ ಇತಿಹಾಸವನ್ನು ಪುನರ್‌ರೂಪಿಸಿ ರಚಿಸುವಂತಹ ಅಥವಾ ದಾಖಲಿಸಿಕೊಳ್ಳುವಂತಹ ಪ್ರಮುಖ ದೃಶ್ಯಕಲೆಗಳ ನೆಲೆಗಳನ್ನು ಸಂಶೋಧನಾ ಅಧ್ಯಯನಕ್ಕೆ ಪರಿವರ್ತಿಸಿಕೊಂಡು ದಾಖಲೀಕರಣಗೊಳಿಸುವುದು ಹಾಗೂ ಕಲಾ ಸಾಹಿತ್ಯ ರೂಪಕ್ಕೆ ಬದಲಿಸಿಕೊಳ್ಳುವುದು ಸುಲಭದ ಮಾತಲ್ಲ. ಈ ಕಲಾ ಸಾಹಿತ್ಯವು ಇತ್ತೀಚೆಗಷ್ಟೇ ಪ್ರಚಲಿತದಲ್ಲಿ ಬಂದಿದ್ದು, **ಡಾ. ಶಿವರಾಮ ಕಾರಂತರವರು** ಹೇಳಿರುವಂತೆ ನಮ್ಮ ದೇಶದ ಮಟ್ಟಿಗೆ ಹೇಳುವಲ್ಲಿ ಬಹು ಮಂದಿ ವಿದ್ಯಾವಂತರಿಗೆ ಜಗತ್ತಿನ ವಿವಿಧ ಕಲೆಗಳ ಪರಿಚಯ ಇರುವುದಂತಿರಲಿ,

ಸ್ವದೇಶದ ಚಿತ್ರ, ಶಿಲ್ಪಾದಿ ಕಲೆಗಳ ಪರಿಚಯವು ಸಾಕಷ್ಟಿಲ್ಲ. ಅವರನ್ನು ಕುರಿತು ದೇಶ-ಭಾಷೆಗಳಲ್ಲಿ ತಿಳಿಸಿ ಹೇಳುವ ಸಾಹಿತ್ಯದ ಕೊರತೆ ತುಂಬಾ ಇದ್ದು, ನಮ್ಮ ದೇಶದ ಭಾಷೆಗಳಲ್ಲಿ ಕಾಣಿಸುವ ಈ ಶೂನ್ಯತೆ ಬೃಹತ್ ಗಾತ್ರದ್ದು[೭] ಎಂಬ ಅವರ ಮಾತು ಅಕ್ಷರಶಃ ಸತ್ಯ. ಈ ಹಿನ್ನೆಲೆಯಲ್ಲಿ ಚಿತ್ರ, ಶಿಲ್ಪ ಮತ್ತು ಭಿತ್ತಿ ಚಿತ್ರಗಳ ಐತಿಹಾಸಿಕ ನೆಲೆ, ಹಿನ್ನೆಲೆ, ವಸ್ತು ವಿಷಯ. ವರ್ಗೀಕರಣ ಸಿದ್ಧತಾ-ವಿಧಿ ವಿಧಾನ, ಸಂರಕ್ಷಣೆ ಇತ್ಯಾದಿಗಳು ಅವಶ್ಯಕವಾಗಿರುತ್ತವೆ.

ಕಲೆ ಎನ್ನುವುದು ಮೂಲತಃ ಪ್ರಕೃತಿಯ ಮಡಿಲಲ್ಲಿ ಬೆಳೆದ ಮಾನವ ಸ್ವಭಾವಕ್ಕೆ ಸಂಬಂಧಿಸಿದ್ದು, ಅವನ ಮಿಡಿತ-ತುಡಿತ-ದುಡಿತಗಳಿಗನುಗುಣವಾಗಿ, ಅನುಭವಗಳಿಗೆ ಜೀವ ಕೊಡುವ ಕ್ರಿಯೇ ಸಹಜವಾಯಿತು. ಈ ಅನುಭವ ಭಾಷಾ ಮಾಧ್ಯಮದ ಮೂಲಕ ಅಭಿವ್ಯಕ್ತಗೊಂಡರೆ ಸಾಹಿತ್ಯಕವಾಗಿ, ಅಭಿನಯ ಮಾಧ್ಯಮದ ಮೂಲಕ ಹೊರಹೊಮ್ಮಿದರೆ ನೃತ್ಯವಾಗಿ, ಬಣ್ಣದ ಮಾಧ್ಯಮದಲ್ಲಿ ಅರಳಿದರೆ ಚಿತ್ರಕಲೆಯಾಗಿ ರೂಪ ಪಡೆಯಿತು. ಹೀಗೆ ಕಲೆಗಳಿಗೆ ಬದುಕಿನ ಅನುಭವವೇ ಮೂಲ ದ್ರವ್ಯವೆಂದು ಹೇಳಬಹುದು. ಇಂತಹ ಕಲೆಗಳು ಸಾಂಸ್ಕೃತಿಕ ಬದುಕಿನ ಜೀವಂತ ಸಾಕ್ಷಿಗಳೆನಿಸಿಕೊಂಡಿರುವುದರ ಜೊತೆಗೆ[೮] ಅವರವರ ಸಮಾಜಕ್ಕೆ ಅನುಗುಣವಾಗಿ ಸಾಂಸ್ಕೃತಿಕ ಹಿನ್ನೆಲೆಯ ಕಥೆ, ಪುರಾಣಗಳಲ್ಲಿ ಕಂಡು ಬರುವಂತಹ ದೃಶ್ಯಗಳನ್ನು ದೇವಾಲಯಗಳಲ್ಲಿ, ಮಠಗಳಲ್ಲಿ ಹಾಗೂ ಚರ್ಚುಗಳಲ್ಲಿ ಚಿತ್ರಗಳನ್ನು ರಚಿಸುವುದರ ಜೊತೆಗೆ ಆ ಸಮುದಾಯದ ಸಾಮಾನ್ಯರು ದೇವರ ರೂಪವನ್ನು ಕಂಡಂತೆ, ತಮ್ಮ ಅನುಭವ ಹಾಗೂ ಭಕ್ತಿಯ ಪರವಶತೆಯ ರೂಪವನ್ನು ಪ್ರದರ್ಶಿಸಿದ ಸಂದರ್ಭಗಳಲ್ಲಿ ಆ ಧರ್ಮವು ಬೆಳೆಯಲು, ಬೆಳೆಸಲು ಮುಂದಾಗುವರು. ಇಂತಹ ಅನೇಕ ಚಿತ್ರಗಳನ್ನು ಮುಖ್ಯ ಚರ್ಚು (ದೇವಾಲಯ)ಗಳಲ್ಲಿ ಕಂಡಿರುವ ದೃಷ್ಟಿಯಲ್ಲಿ ಶೋಧಿಸಿ ಇತಿಹಾಸ ಕಟ್ಟಿಕೊಡುವ ಹಾಗೂ ಸಂರಕ್ಷಿಸುವುದು ಈ ಅಧ್ಯಯನದ ಪ್ರಮುಖ ಅಂಶವಾಗಿದೆ.

ಕರಾವಳಿ ಎಂದಾಗ ಕಡಲ ತೀರದ ಅಲೆಗಳ ಶಬ್ದವಾಗುವುದಂತಲೂ ಸತ್ಯ ಕರ್ನಾಟಕದ ಸಮುದ್ರದಂಚಿನಲ್ಲಿರುವ ಮಂಗಳೂರು, ಉಡುಪಿ ಮತ್ತು ಕಾರವಾರ ಜಿಲ್ಲೆಗಳ ಸಂಗಮವೇ ಕರಾವಳಿ ಕರ್ನಾಟಕ. ಈ ಭಾಗದಲ್ಲಿ ಎಲ್ಲಾ ಸಮುದಾಯದ ಜನರು ವಾಸಿಸುತ್ತಿದ್ದು, ಅದರಲ್ಲಿ ವಿಶೇಷತೆಯನ್ನು ಗಳಿಸಿರುವುದು ಕ್ರೈಸ್ತ ಮತ ಭಾಂದವರು. ಆ ಭಾಗದ ಸುತ್ತಲಿರುವ ಪ್ರತಿಯೊಂದು ಹಳ್ಳಿಯಲ್ಲೂ ದೇವಾಲಯ (ಚರ್ಚು)ಗಳನ್ನು ಕಾಣಬಹುದು. ಹಾಗೆಯೇ ಮಂಗಳೂರು ಮತ್ತು ಉಡುಪಿಯಲ್ಲಿ ಸುಮಾರು ನೂರಅರವತ್ತು, ಕಾರವಾರ ಜಿಲ್ಲೆಯಲ್ಲಿ ನೂರೈವತ್ತು ಪ್ರಮುಖ ಚರ್ಚುಗಳು ಕಂಡುಬರುತ್ತವೆ. ಇಲ್ಲಿನ ಪ್ರಮುಖ ಚರ್ಚುಗಳಲ್ಲಿ

೭. ಡಾ. ಶಿವರಾಮ ಕಾರಂತ : ಕಲಾ ಪ್ರಪಂಚ, ಪುಟ-೨.

೮. ಡಾ. ಎಸ್.ಸಿ. ಪಾಟೀಲ್ : ಕರ್ನಾಟಕದ ಜನಪದ ಚಿತ್ರಕಲೆ, ಪುಟ-೧೯.

ಕ್ರೈಸ್ತ ಧರ್ಮ ಆರಾಧ್ಯ ದೈವ ಯೇಸು ಸ್ವಾಮಿಯ ಜನನ, ಮರಣ, ಪವಾಡ, ಸಂತಾನ ಮತ್ತು ಸಂರಕ್ಷಣೆ, ಹಾರೈಕೆ. ಹೀಗೆ ಅನೇಕ ಚಿತ್ರಗಳ ಜೊತೆಗೆ ಪಾದ್ರಿಗಳು, ಚರ್ಚುಗಳ ಬೆಳವಣಿಗೆಗೆ ಮುಖ್ಯ ಪಾತ್ರದಾರಿಗಳ ಚಿತ್ರಗಳು, ಹೀಗೆ ಅನೇಕ ದೃಶ್ಯಗಳನ್ನೊಳಗೊಂಡ ಚಿತ್ರಗಳು ಇಲ್ಲಿ ಕಾಣಿಸುತ್ತವೆ. ಅದನ್ನು ಸುರಕ್ಷಿತವಾಗಿಟ್ಟುಕೊಂಡಿರುವುದು ಅವರ ಜವಾಬ್ದಾರಿಯಾದರೂ ಚಿತ್ರ-ಶಿಲ್ಪ, ಗಾಜಿನ ಮೇಲಿನ ಚಿತ್ರ ಹೀಗೆ ಅನೇಕ ಮಾಧ್ಯಮಗಳಲ್ಲಿ ರಚಿಸಿದ ಚಿತ್ರಗಳನ್ನು ಸಂಶೋಧಿಸುವ ಜೊತೆಗೆ ಇತಿಹಾಸವನ್ನು ಸಂರಕ್ಷಿಸುವ ಪ್ರಮುಖ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆಯಾದರೂ ಪ್ರಮುಖವಾಗಿ ಕ್ರೈಸ್ತ ಚಿತ್ರಕಲೆಗೆ ಸಂಬಂಧಿಸಿದಂತೆ ಈ ಕಲೆಯ ಮೇಲಿನ ಪ್ರಭಾವ, ಪ್ರೇರಣೆ, ಚಿತ್ರದಲ್ಲಿ ಕಾಣುವ ತಂತ್ರಗಾರಿಕೆ, ಶೈಲಿಗಳನ್ನು ತಿಳಿದುಕೊಳ್ಳುವ, ಮತ್ತೊಬ್ಬರಿಗೆ ತಿಳಿಸುವ, ಪ್ರೋತ್ಸಾಹಿಸುವ ಹಾಗೂ ಸಂರಕ್ಷಿಸುವಂತಹ ಹಲವಾರು ಪ್ರಮುಖ ಉದ್ದೇಶವನ್ನು ಇಟ್ಟುಕೊಂಡು ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳನ್ನು ಮುಖ್ಯವಾಗಿಟ್ಟುಕೊಂಡು ಶೋಧಿಸುತ್ತಾ ಸಿಕ್ಕಂತಹ ಉಪಯುಕ್ತ ವಸ್ತು-ವಿಷಯಗಳನ್ನು ಸಂರಕ್ಷಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ.

ಕರಾವಳಿಯ ಕ್ರೈಸ್ತರು ಮತ್ತು ಚರ್ಚುಗಳು

ಕರ್ನಾಟಕದ ನೆಲವು ಅನೇಕ ಕಲೆಗಳ ಬೀಡಾಗಿದ್ದು, ಹಲವು ರೀತಿಯ ಕಲೆಗಳು ಇಲ್ಲಿ ಹರಡಿವೆ ಅವುಗಳ ವೈವಿಧ್ಯ, ವೈಭವ, ಧಾರ್ಮಿಕ ಸಂಬಂಧವನ್ನು ಹಿಡಿದು ಅವುಗಳ ಪರಿಶೋಧನೆಗೆ ಹೊರಟಾಗ ನಮ್ಮ ಸಂಸ್ಕೃತಿ, ಸಂಪ್ರದಾಯಗಳ ಬಗೆಗೆ ವಿಶೇಷವಾದ ಆಸಕ್ತಿಯನ್ನು ತೋರಬೇಕಾಗುತ್ತದೆ. ಕಲಾದೃಷ್ಟಿಯಿಂದ ಶೋಧನೆಯ ಸಂದರ್ಭದಲ್ಲಿ ನಾಡಿನ ಭವ್ಯ ಪರಂಪರೆಯ ಅರಿವನ್ನುಂಟುಮಾಡುವ ಈ ಕಲೆಗಳು ನಾಡಿನ ಸತ್ವಪೂರ್ಣ ಹಾಗೂ ಮಹತ್ವಪೂರ್ಣ ಸ್ವತ್ತಾಗಿ ಪರಿಣಮಿಸುತ್ತವೆ. ಹಾಗಾಗಿ ಇಂತಹ ಅಪೂರ್ವ ಕಲೆಗಳ ಅಧ್ಯಯನ ಯಾವುದೇ ಒಂದು ದೇಶದ ಅಥವಾ ಪ್ರದೇಶದ ಸಾಂಸ್ಕೃತಿಕತೆಯನ್ನು ಕಲೆಗಳ ಮೂಲಕ ಭಿನ್ನವೆನಿಸುವಂತಹ ಕೆಲಸಗಳು ಆಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯವಾದ ಕಲೆಗೆ ಸಂಬಂಧಿಸಿದ ವಿಷಯಗಳ ಕುರಿತು ಅಧ್ಯಯನದ ಅವಶ್ಯಕತೆ ಇಂದು ಮಹತ್ವದ್ದೆನಿಸಿದೆ.

ಕರಾವಳಿ ಕರ್ನಾಟಕ ಎಂದಾಗ ಮಂಗಳೂರು, ಉಡುಪಿ, ಮತ್ತು ಕಾರವಾರ ಜಿಲ್ಲೆಗಳನ್ನು ಒಳಗೊಂಡಿದ್ದು, ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಕಡಲತೀರದ ನಾಡಿನಲ್ಲಿ ಕ್ರೈಸ್ತ ಧರ್ಮಿಯರು ತುಂಬಾ ಇದ್ದು, ಅನೇಕ ಚರ್ಚುಗಳನ್ನು ಕಾಣಬಹುದಾಗಿದೆ. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲೇ ಈ ಕರಾವಳಿ ಪ್ರದೇಶಕ್ಕೆ ಆಧುನಿಕವೆನಿಸುವಂತಹ ತೈಲ ಚಿತ್ರ ರಚನೆ ಕಾಲಿರಿಸಿತ್ತು. ಅದಕ್ಕೂ ಮೊದಲೇ **ಬಾಸೆಲ್ ಮಿಷನ್** ಎಂಬಾತನು ಕಲ್ಲಚ್ಚಿನಲ್ಲಿ, ಮುಂದೆ ಪಡಿಯಚ್ಚಿನಲ್ಲಿ (ಬ್ಲಾಕ್) ಚಿತ್ರಗಳನ್ನು ಪತ್ರಿಕೆ, ಪುಸ್ತಕಗಳಾಗಿ ರಚಿಸಿ

ಮುದ್ರಿಸಿದ್ದರು. ಮಂಗಳೂರಿನ ಹೆಸರಾಂತ ಚರ್ಚ್‌ಗಳಲ್ಲಿ ಒಂದಾದ "**ಸೆಂಟ್ ಎಲೋಷಿಯಸ್ ಚರ್ಚ್**" ೧೮೮೫ರಲ್ಲಿ "**ಪಾಥರ್ ಜೋಸೆಫ್ ವಿಲ್ಲಿ**" ಎಂಬುವವರಿಂದ ನಿರ್ಮಿತವಾಗಿದ್ದು, ೧೮೯೯ರಲ್ಲಿ ಯುರೋಪಿನಿಂದ ಮಂಗಳೂರಿಗೆ ಬಂದ ಪೂಜ್ಯ ಸಹೋದರ **ಆ್ಯಂಟೋನಿ ಮೋಶ್ಚಿನ** (Antony moscnini) ಎಂಬಾತ ರಚಿಸಿದ ನೂರಾರು ಭಿತ್ತಿಚಿತ್ರಗಳನ್ನು ಕಾಣಬಹುದು.

ನಯವಾದ ಗಾರೆಹಾಕಿದ ಗೋಡೆಯ ಮೇಲೆ ಕಂಬಗಳ ಮೇಲಿನ ಪಕ್ಕದ ಗೋಡೆಗಳ ಮೇಲೆ ನೇರವಾಗಿ ಚಿತ್ರಿಸಿದ್ದಾರೆ. ಒಳಮೇಲ್ಛಾವಣಿಗೆ ಕ್ಯಾನ್ವಸ್ ಮೇಲೆ ರಚಿಸಿ ಮರದ ಚೌಕಟ್ಟಿನಿಂದ ಸುಂದರವಾಗಿಸಿರುವುದನ್ನು ಕಾಣಬಹುದಾಗಿದೆ. ಇದಲ್ಲದೇ ಚರ್ಚ್‌ನ ಒಳಾಂಗಣದಲ್ಲಿ ಹಾಗೂ ಕೆಳ ಮನೆಯ ಭೋಜನಾ ಶಾಲೆಗಳಲ್ಲೂ ಭಿತ್ತಿ ಹಾಗೂ ಬಿಡಿ ಚಿತ್ರಗಳನ್ನು ಕಾಣಬಹುದಾಗಿದೆ. ಇದರೊಂದಿಗೆ ಕರಾವಳಿ ಭಾಗದಲ್ಲಿ ಕಂಡು ಬರುವ ಕ್ರೈಸ್ತ ಚಿತ್ರ ಕಲಾಕೃತಿಗಳು, ಬಿತ್ತಿ ಚಿತ್ರ, ಸ್ಟೈನ್ ಗ್ಲಾಸ್ ಪೆಂಟಿಂಗ್ ಇರುವಂತಹ ಕ್ರೈಸ್ತ ಚಿತ್ರಗಳ ಕುರಿತು ವಿಶ್ಲೇಷಣೆಮಾಡುವುದು ಅಧ್ಯಯನದ ಮಹತ್ವವಾಗಿದೆ.

ಕರಾವಳಿ ಕರ್ನಾಟಕದ ಭಾಗದಲ್ಲಿ ಸುಮಾರು ಮುನ್ನೂರಕ್ಕೂ ಹೆಚ್ಚು ದೇವಾಲಯಗಳಿದ್ದರೂ ದೇವರ ದಂತಕಥೆಗಳನ್ನು ಚಿತ್ರರಚನೆಮಾಡಿಸಿರುವುದು ಕೆಲವೇ ಚರ್ಚುಗಳಲ್ಲಿ ಮಾತ್ರ. ಇತ್ತೀಚಿನ ದಿನಗಳಲ್ಲಿ ಹಳೆಯ ಕಟ್ಟಡಗಳಿಗೆ ಮುಕ್ತಿಯನ್ನು ಕೊಟ್ಟು, ಹೊಸ ರೂಪ ಕೊಡುವುದರ ಮೂಲಕ ಅಲ್ಲಿರುವ ಕಲಾಕೃತಿಗಳು ಮಾಯವಾಗುತ್ತಿರುವುದು ನೋವಿನ ಸಂಗತಿ. ಆದರೆ ಸುಮಾರು ನೂರು ವರ್ಷಗಳ ಇತಿಹಾಸವಿರುವ ಮಂಗಳೂರಿನ **ಸೆಂಟ್ ಅಲೋಷಿಯಸ್ ಚರ್ಚ್**‌ನಲ್ಲಿ ಮಾತ್ರ. ಅಚ್ಚಳಿಯದ ರೀತಿಯಲ್ಲಿ ಜೋಡಿಸಿ, ಅಂಟಿಸಲಾಗಿರುವ ಯೇಸು ಸ್ವಾಮಿಗೆ ಸಂಬಂಧಿಸಿದ ಚಿತ್ರಕಲಾಕೃತಿಗಳ ಜೊತೆಗೆ ಪವಾಡಗಳ ದೃಶ್ಯಗಳು ನೋಡುಗರನ್ನು ಚಕಿತಗೊಳಿಸುತ್ತವೆ. ಇಕ್ಕೆಲಗಳಲ್ಲಿ ಪೀಟರ್ ಪಾಲ್ ಜೇಮ್ಸ್ ಜೋನ್‌ನ ಜೊತೆಗೆ ಹನ್ನೆರಡು ಮಂದಿ ಧರ್ಮ ಪ್ರಚಾರಕ (Apostles)ರ ಚಿತ್ರಣಗಳಿವೆ. ಮುಖ್ಯವಾದ ಈ ಚರ್ಚಿನಲ್ಲಿ ಸುಮಾರು ನಲ್ವತ್ತು ಅಂಕಣಗಳಿದ್ದು, ಇನ್ನಿತರ ಸಂತರ ಜೀವನವನ್ನು ಚಿತ್ರಿಸಲಾಗಿದೆ. ಕಂಬಗಳಿಂದ ಪ್ರತ್ಯೇಕಿಸಿರುವ ಭಾಗ ಉದ್ದನೆಯ ಹಜಾರದಂತಿದ್ದು, ಪಕ್ಕದ ಅಂಕಣಕ್ಕಿಂತ ಹೆಚ್ಚು ಎತ್ತರಿಸಿವೆ. ಅಲ್ಲಿಯ ಇಕ್ಕೆಲದ ಗೋಡೆಗಳಲ್ಲಿ ಏಸುವಿನ ಜನನ, ಏಸುವು ಭಕ್ತರಿಗೆ ಸಾಂತ್ವನ ನೀಡುತ್ತಿರುವುದು. ಅನೇಕ ಪವಾಡಗಳ ದೃಶ್ಯ, ಆರ್ತರಿಗೆ ದೃಶ್ಯ ಶಮನ ಮಾಡಿದ್ದು, ಭಕ್ತರಿಗೆ ಉಪದೇಶ ನೀಡಿದ್ದು, ಕೊನೆಯ ಭೋಜನ, ಅಂತಿಮ ವಿಚಾರಣೆ, ಏಸುವನ್ನು ಶಿಲುಬೆಗೆ ಏರಿಸಿದ ಸಂದರ್ಭ ಕೆಲದಿನಗಳ ನಂತರ ಪುಣ್ಯ ಪುರುಷನಾಗಿ ಕಾಣಿಸಿಕೊಂಡಿದ್ದು. ಇನ್ನೂ ಅನೇಕ ಚಿತ್ರಗಳನ್ನು ಕಾಣಬಹುದಾಗಿದೆ. ಕೈಸಾಲೆಯಲ್ಲಿ ಏಸು-ಮೇರಿಗೆ ಸಂಬಂಧಿಸಿದ ಹಲವಾರು ಬಿಡಿ ಚಿತ್ರಗಳನ್ನು ಕಾಣುವುದರ ಜೊತೆಗೆ ಏಸು

ಸ್ವಾಮಿಯ ಅತ್ಯಂತ ಹದಿನಾಲ್ಕು ಪುಟಗಳ ಕ್ಯಾನ್ವಾಸ್‌ನ ಮೇಲೆ ಬಿಡಿಯಾಗಿ ಚಿತ್ರಿಸಿ ಗೋಡೆಯಲ್ಲಿ ಪ್ರರ್ಶಿಸಲಾಗಿದೆ. ಇಂತಹ ಅನೇಕ ಚರ್ಚ್‌ಗಳಲ್ಲಿ ಕಂಡುಬರುವ ಕ್ರೈಸ್ತ ಚಿತ್ರಕಲೆಯ ಕುರಿತು ಅಂತ್ಯದ ಕಲೆಯ ಸಂಶೋಧನೆ ಮಾಡುವ ಉದ್ದೇಶವನ್ನು ಅಧ್ಯಯನವು ಹೊಂದಿದೆ.

ಯುರೋಪಿನಿಂದ ೧೯೦೨ರಲ್ಲಿ ಭಾರತಕ್ಕೆ ಬಂದು ಸ್ವಲ್ಪ ದಿನಗಳ ನಂತರ ಕರಾವಳಿಗೆ ಬಂದ ಕಲಾವಿದ **ಆ್ಯಂಟನಿ ಮೊಶ್ಚಿನಿ**ರವರು ಬರೀ ಎರಡು ವರ್ಷಗಳಲ್ಲಿಯೇ ಅನೇಕ ಚರ್ಚ್‌ಗಳಿಗೆ ಭೇಟಿ ನೀಡಿದರಲ್ಲದೇ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದಂತೆ ಸಾವಿರಾರು ಚಿತ್ರಗಳನ್ನು ರಚಿಸಿದರು. ಅನೇಕ ಚರ್ಚುಗಳಲ್ಲಿನ ಅಂಕಣಗಳಲ್ಲಿ ಸಾವಿರಾರು ವ್ಯಕ್ತಿ ಚಿತ್ರಗಳು, ಅವರ ಬಿಂಬಿತ ಸಂಕೇತಗಳು, ಉಡುಗೆ-ತೊಡುಗೆ, ವೈವಿಧ್ಯತೆ ಅನುಸರಿಸಿ ಇಡೀ ದೃಶ್ಯಕ್ಕೆ ಜೀವಂತಿಕೆಯ ರೂಪ ಕೊಟ್ಟಿರುವುದು ಗಮನಾರ್ಹವಾಗಿದೆ. ಯೂರೋಪಿನ ನೈಜ ಶೈಲಿಯಲ್ಲಿ ನೆರಳು-ಬೆಳಕಿನಿಂದ ಕೂಡಿದ, ಅಷ್ಟು ಪ್ರಕರ ವಲ್ಲದ ಹಿತಮಿತ ಬಣ್ಣಗಳಿಂದ ರಚಿತವಾಗಿದ್ದು, ಈ ಚಿತ್ರಗಳನ್ನು ತೀರ ಹತ್ತಿರದಿಂದ ಕಂಡಾಗ ಒರಟಾಗಿ ಕಂಡರೂ ದೂರದಿಂದ ವಿಜೃಂಭಿಸುತ್ತವೆ. ಒಟ್ಟು ಸಂಯೋಜನೆಯಲ್ಲಿ ಮುಖ್ಯ ವ್ಯಕ್ತಿಗತ ಗಮನ ಸೆಳೆಯುವಂತೆ ಒಂದು ದೃಶ್ಯದಿಂದ ಮತ್ತೊಂದು ದೃಶ್ಯಕ್ಕೆ ಹೋಗುವಂತೆ ಪ್ರೇಕ್ಷಕರನ್ನು ಪ್ರೇರೇಪಿಸುವಂತೆ ಕಥೆಯು ಇಡೀ ದೃಶ್ಯದಿಂದಲೇ ನಾಟಕದ ರೂಪದಲ್ಲಿ ತನ್ನನ್ನು ತಾನು ಮೈ ಮರೆತು ಆ ಕಥೆಯಲ್ಲಿ ಬೆರೆತು ಹೋಗುವಂತೆ ಚಿತ್ರಿಸಿರುವುದರಿಂದ ನಶಿಸಿ ಹೋಗಲು ಅವಕಾಶ ಕೊಡದ ಹಾಗೆ ಸಂಶೋಧಿಸುವುದು ತುಂಬಾ ಅವಶ್ಯಕವಾಗಿದ್ದು, ಇಂತಹ ಪ್ರಮುಖ ವಿಷಯಗಳ ಸಂರಕ್ಷಣೆಯ ಅಂಶವನ್ನು ಪರಿಗಣಿಸಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಕರಾವಳಿಯ ಅನೇಕ ಕಡೆ ಚರ್ಚುಗಳಿರುವುದನ್ನು ಕಾಣುವುದರ ಮುಖೇನ **ಬಂಟ್ವಾಳ ತಾಲೂಕಿನ ಜಕ್ರಿಬೆಟ್ಟು** ಎಂಬ ಗುಡ್ಡದ ಮೇಲಿರುವ **ಸೆಂಟ್ ಹೋಲಿಸೋವಿನಿಯಾರ್** ಚರ್ಚ್‌ನಲ್ಲಿಯೂ ಕೂಡ ಉತ್ತಮ ಭಿತ್ತಿಚಿತ್ರಗಳನ್ನೂ ಕಾಣಬಹುದು. ಇದರಲ್ಲಿ ಪ್ರಾರ್ಥನಾ ವೇದಿಕೆಯ ಒಳ ಹಾಗೂ ಹೊರ ಭಾಗದಲ್ಲಿ ಬಿತ್ತಿಚಿತ್ರವಿದ್ದು, ಬೈಬಲ್‌ನಲ್ಲಿನ ವಿಷಯಗಳನ್ನು ಕುರಿತು ಚಿತ್ರಿಸಲಾಗಿದೆ. ಶೈಲಿ, ಆಕಾರಗಳ ನಿಲುವು, ಬಣ್ಣಗಾರಿಕೆ, ಚಾಮಂಕಾರನ ಚಿತ್ರಿತ ವಿಷಯಗಳ ನಿರೂಪಣೆ ಇತ್ಯಾದಿಗಳೆಲ್ಲಾ **ಸೆಂಟ್-ಎಲೋಷಿಯಸ್ ಚರ್ಚ್‌**ನ ಹೋಲಿಕೆಯನ್ನೇ ಹೊಲುತ್ತವೆಯಾದರೂ ಬೇರೆ ಯಾವುದೇ ಚರ್ಚುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಗಳಿಲ್ಲ. ಈ ಪ್ರಮುಖ ಚರ್ಚಿನಲ್ಲಿ ೧೯೫೬ರಲ್ಲಿ ಮೊಶ್ಚಿನಿಯೇ ಮೊದಲಿಗೆ ಚಿತ್ರ ಚರಿಸಿದ್ದು ನಂತರದಲ್ಲಿ ಎಲೋಷಿಯಸ್‌ನಲ್ಲಿ ರಚನೆ ಮಾಡಲಾಗಿದೆ. ಮಂಗಳೂರಿನ ಶಹರದ ಒಂದು ಭಾಗವೇ ಆದ ಕೊರ್ಡೆಲ್ (ಕುಲಶೇಖರ) ಪ್ರದೇಶ ಹೋಲಿಕ್ರಾಸ್ ಚರ್ಚ್‌ನ ವಿಶಾಲವಾದ ಗೋಡೆಗಳ ಮೇಲ್ಭಾಗದಲ್ಲಿ ದೊಡ್ಡ ಅಳತೆಯ ಕಿಟಕಿಗಳಿಗೆ ಪಾದ್ರಿಗಳು ಹಾಗೂ ಯೇಸುವಿನ ಚಿತ್ರವಿರುವ

ಗಾಜಿನ ಚಿತ್ರಗಳನ್ನು ಅಳವಡಿಸಲಾಗಿದೆ. ಹೊರ ಹಾಗೂ ಒಳಭಾಗದಲ್ಲಿ ಭಿತ್ತಿ ಚಿತ್ರಗಳಿದ್ದು, ಅವು ಕ್ರೈಸ್ತ ಧರ್ಮಿಯ ಚಿತ್ರಗಳಾಗಿವೆ. ಕ್ರಿಸ್ತ ಮೇರಿ ಹಾಗೂ ದೇವತೆಗಳ ನೈಜ ಪ್ರಮಾಣದ ಗಾರೆಯ ಶಿಲ್ಪಗಳಿರುವುದು ಭಾವ ಪೂರ್ಣವಾಗಿದೆ. ಪೂರ್ಣವಾಗಿದೆ. ಪ್ರಸ್ತುತ ದಿನದಲ್ಲಿ ಹಳೆಯ ಗೋಡೆಯನ್ನು ಒಡೆದು ಹೊಸದಾಗಿ ನಿರ್ಮಿಸಿರುವುದರಿಂದ ಅನೇಕರ ಭಿತ್ತಿ ಚಿತ್ರಗಳು ನಶಿಸಿ ಹೋಗಿದ್ದಾವೆ. ಇಂತಹ ಅನೇಕ ಚರ್ಚುಗಳು ಕಾರವಾರ, ಉಡುಪಿಯಲ್ಲಿದ್ದು ಚಿತ್ರ ಹಾಗೂ ಭಿತ್ತಿ ಚಿತ್ರಗಳಿರುವುದು ತುಂಬಾ ಕಡಿಮೆ ಎಂದು ಹೇಳಬಹುದು.

ಬಂಟ್ವಾಳದ **ಮೊಡಂಕಾಪು** ಪ್ರದೇಶದ **ಇನ್ಫೆಂಟ್ ಜೀಸಿಸ್ ಚರ್ಚ್, ಕಲ್ಯಾಣಪುರದ ಮಿಲಾಗ್ರಿಸ್, ಉದಯವಾರ, ಬಾರಕೂರು, ಹೊನ್ನಾವರ ಕುಮ್ಮಟ, ಚಂದಾಮೂರು, ಅಂಕೋಲ,** ಸಿದ್ಧಾಪುರ, **ಸಿರ್ಸಿ, ಬೆನಿಗೆನ್, ಮಂಗಳೂರಿನ ರೂಸಾರಿಯಾ ಮಿಲಾಗ್ರಿಸ್, ಕುಂಬಳ, ಆಗ್ರಾರ, ಬಿದರಿ, ಮುಲ್ಕಿ ಕಾರ್ಕಟ ಮುಡೇಶ್ವರ, ಕುಂದಾಪುರ, ಗಂಗೊಳ್ಳಿ, ಸುಂಕೇರಿ ಕಲ್ಯಾಣಪುರ, ಬಸರೂರ, ಬೈಂದೂರ** ಇನ್ನೂ ಮುಂತಾದ ಕಡೆಗಳಲ್ಲಿ ಭಿತ್ತಿ ಚಿತ್ರದ ಜೊತೆಗೆ ಶಿಲೆ ಹಾಗೂ ಗಾಜಿನ ಮೇಲಿನ ಚಿತ್ರಕಲೆಯನ್ನು ಕಾಣಬಹುದು. ಹಾಗೆಯೇ ಹೆಚ್ಚು ವಿದೇಶದಿಂದ ತಂದಂತಹ ಗಾಜನ್ನು ಚರ್ಚಿನ ಕಿಟಕಿ ಮತ್ತು ಬಾಗಲಗಳಿಗೆ ಉಪಯೋಗಿಸಿ ಚರ್ಚಿನ ಸೌಂದರ್ಯ ಹೆಚ್ಚಾಗಿಸುವ ಉದ್ದೇಶ ಇರಬಹುದಾದರೂ, ಸ್ವಚ್ಛತೆಯ ಪ್ರತಿರೂಪದಂತೆ ಕಂಡರು. ಅವರ ಧರ್ಮದ ಪ್ರತೀಕ ತಮ್ಮ ತಮ್ಮ ನಿಯಮಗಳನ್ನು ಪಾಲಿಸುತ್ತಾ, ಪೋಷಿಸುತ್ತಾ ಹೆಚ್ಚು ಗಮನಹರಿಸುವುದು ಪ್ರಸ್ತುತ ದಿನಗಳಲ್ಲಿಡಗಿರುವ ಅಂಶ, ಹಾಗೆಯೇ ಕಲೆಯು ಎಲ್ಲಾ ಸಮುದಾಯಗಳಲ್ಲೂ ಶ್ರೀಮಂತಿಕೆಯನ್ನುಂಡಿದ್ದು, ಅದರಂತೆ ಇಲ್ಲಿಯೂ ಕೂಡ ಭಕ್ತಿಯ ಮಾನ್ಯತೆಗೆ, ಮನೋರಂಜನೆಗೆ, ಹಿನ್ನಲೆಯ ಕಥೆಗೆ ಒಪ್ಪಿಕೊಳ್ಳುವಂತಹ ಸನ್ನಿವೇಶಗಳನ್ನು ವಿವಿಧ ರೀತಿಯಲ್ಲಿ ಸಂಯೋಜನೆಗೊಳಿಸಿ ಕಲಾಕೃತಿಗಳನ್ನು ರೂಪಿಸಿಕೊಂಡಿರುವುದು ಆಶ್ಚರ್ಯ ಹಾಗೆಯೇ ಅನಿವಾರ್ಯಮೂ ಕೂಡ, ಇಂತಹ ವಿಶೇಷವುಳ್ಳಂತಹ ಒಂದು ಧರ್ಮದ ಕುರಿತು. ಸಂಶೋಧನೆಯಾಗಬೇಕಾಗಿರುವುದು ಅನಿವಾರ್ಯವಾಗಿದೆ. ಇಂತಹ ಒಂದು ಎಳೆಯನ್ನಿಟ್ಟುಕೊಂಡು ಪ್ರಸ್ತುತ ಅಧ್ಯಯನದಲ್ಲಿ ಕರಾವಳಿ ಭಾಗದಲ್ಲಿರುವ ಕ್ರೈಸ್ತ ಚಿತ್ರಕಲೆಯ ಪ್ರಭಾವ ಪ್ರೇರಣೆಯ ಉತ್ಪ್ರೇಕ್ಷೆ ಹಾಗೂ ಉಳಿದಿರುವ ಅಂಶಗಳ ಜೊತೆ, ಸಂರಕ್ಷಿಸಲ್ಪಟ್ಟಿರುವ ಕಲಾಕೃತಿಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಅಧ್ಯಯನ ಹೊಂದಿರುವುದು ಮುಖ್ಯವಾದ ಅಂಶವಾಗಿದೆ.

ಸಂಶೋಧನ ಅಧ್ಯಯನಗಳ ದಾರಿ

"ಸಂಶೋಧನೆ ಎನ್ನುವುದು ಬಹಳ ಹಿಂದಿನಿಂದಲೂ ನೆಡೆದು ಬಂದಿದ್ದರೂ ಅದೊಂದು ಸ್ವರೂಪ ಪಡೆದು ಪದವಿ ಪ್ರಾಪ್ತಿಗಾಗಿ ಬಳಕೆ ಆಗಿರುವುದು ತೀರಾ ಇತ್ತೀಚೆಗೆ

ಎಂದೇಹೇಳಬಹುದು. ಕ್ರಿ.ಶ. ಪೂರ್ವದಲ್ಲಿಯೇ ನಳಂದಾದಂತಹ ವಿಶ್ವವಿದ್ಯಾಲಯದ ಉಲ್ಲೇಖ ಭಾರತದಲ್ಲಿದೆ. ಆದರೆ ಆಂಗ್ಲದ "ರೀಸರ್ಚ್"ಗೆ ಸಂವಾದಿಯಾಗಿ "ಸಂಶೋಧನೆ"ಯ ಒಂದು ಶಿಸ್ತು ರೂಪದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಬೆಳೆದು ಬಂದಿರುವುದು. ಪಾಶ್ಚಾತ್ಯರ ಪ್ರಭಾವದಿಂದಲೇ ಕರ್ನಾಟಕದಲ್ಲಂತೂ ಶತಮಾನದ ಈಚೆಗಷ್ಟೆ ಇಂತಹ ಸಂಶೋಧನಾ ಪದ್ಧತಿ ಬೆಳೆದು ಬಂದಿದೆ. "**ಸಮ್ಯಕ್ ಶೋಧ**" ಅರ್ಥಾತ್ "**ಸತ್ಯಶೋಧ**" ಎಂಬರ್ಥ ನೀಡುವ ಸಂಶೋಧನೆ ಮೂಲತಃ ವೈಜ್ಞಾನಿಕ ಶಿಸ್ತಿಗೆ ಸಂಬಂಧಿಸಿದಂತೆ ಕಂಡು ಬಂದರೂ, ಮುಂದೆ ಅದು ಸಮಾಜ ವಿಜ್ಞಾನ ಕ್ಷೇತ್ರಕ್ಕೆ ವಿಸ್ತರಿಸಿಕೊಂಡು, ಇಂದು ಚಿತ್ರಕಲೆಯು ಸೇರಿದಂತೆ ಲಲಿತಕಲೆಯ ಎಲ್ಲಾ ಅಂಗಗಳಿಗೂ ತನ್ನ ಬಾಹುಗಳನ್ನು ಚಾಚಿಕೊಂಡಿದೆ. ಜೊತೆಗೆ ಒಂದು ದೃಷ್ಠಿಯಿಂದ ಸಂಶೋಧನಾ ಅಧ್ಯಯನ ಎನ್ನುವುದು ಶಿಕ್ಷಣೊನ್ನತಿಗೆ ತನ್ಮೂಲಕ ವೃತ್ತಿಯ ಪದನ್ನೋತಿಗೆ ಅನಿವಾರ್ಯ ಎನ್ನುವಷ್ಟು ವ್ಯಾಪಕವಾಗಿ ಬೆಳೆದು ಬರುತ್ತಿರುವುದನ್ನು ಕಾಣಬಹುದು. ಐವತ್ತು ವರ್ಷಗಳ ಹಿಂದೆ ಅಲ್ಲೊಂದು ಇಲ್ಲೊಂದು ಎಂಬಂತೆ ಗುರುತಿಸಬಹುದಾಗಿದ್ದ, ಸಂಶೋಧನ ಅಧ್ಯಯನಗಳು ಇಂದು ಒಂದೊಂದು ವಿಶ್ವವಿದ್ಯಾಲಯದಲ್ಲೂ ವರ್ಷಕ್ಕೆ ಐವತ್ತರಿಂದ ನೂರರ ಸಂಖ್ಯೆಯಲ್ಲಿ ಹೊರಬರುತ್ತಿರುವುದನ್ನು ಗಮನಿಸದೆ ಯುವಜನತೆ ಇಂದು ಸಂಶೋಧನೆಯತ್ತ ಹೆಚ್ಚಿನ ಆಸಕ್ತಿ ತೋರುತ್ತಿರುವುದನ್ನು ನೋಡುತ್ತೇವೆ.

ಇಪ್ಪತ್ತು ವರ್ಷಗಳ ಹಿಂದೆ ವಿಶ್ವವಿದ್ಯಾಲಯ ಮಟ್ಟದ ಯಾವುದೇ ಸಂಶೋಧನಾ ಪ್ರಬಂಧ ರಚನೆಗೊಂಡದ್ದೆ ಇಲ್ಲ. ಹೆಸರಾಂತ ಕಲಾವಿದರು, ಅದರ ಕಲಾ ಚಟುವಟಿಕೆ ಮತ್ತು ಅವರ ಕಲಾಕೃತಿಗಳು, ಹಾಗೂ ಕಲೆಗೆ ಸಂಬಂಧಿಸಿದ ಅನೇಕ ಸಂಶೋಧನೆಗಳ ತಾಣವೇ ಇದಾಗಿದ್ದರೂ ಅವುಗಳ ಕುರಿತು ತೀರಾ ಇತ್ತೀಚಿನವರೆಗೂ ಅಧ್ಯಯನಗಳು ನೆಡೆದಿರಲಿಲ್ಲ. ಆದರೆ ೧೯ನೇ ಶತಮಾನದ ಅಂತಿಮ ದಿನಗಳಲ್ಲಿ ಅಂದರೆ ೧೯೯೦ರ ನಂತರ ವಿಶ್ವವಿದ್ಯಾಲಯಗಳಲ್ಲಿ ಪಿಎಚ್.ಡಿ. ಮಹಾಪ್ರಬಂಧಗಳು ರಚನೆಯಾಗುವುದರ ಮುಖೇನ ಚಿತ್ರಕಲಾಕ್ಷೇತ್ರದಲ್ಲೂ ಉನ್ನತವಾದ ಅಂಶಗಳನ್ನು ಶೋಧಿಸಿ, ಇತಿಹಾಸವನ್ನು ಹುಡುಕಿಡುವಂತಹ ಕೆಲಸಗಳು ಪ್ರಾರಂಭವಾದವು.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನೆಡೆದ ಅಧ್ಯಯನಗಳು

ಕರ್ನಾಟಕದ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನೆಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರೆತಿದ್ದು, ತೀರ ಇತ್ತೀಚೆಗಷ್ಟೇ ನಂತರದಲ್ಲಿ ಅಧ್ಯಯನಗಳು ೯೦ರ ದಶಕದಲ್ಲಿ ತೀವ್ರಗೊಂಡಿವೆ. ೧೯೬೦ರ ದಶಕದಿಂದ ಇಲ್ಲಿಯವರೆಗೆ ಕರ್ನಾಟಕದಲ್ಲಿ ನೆಡೆದ ಚಿತ್ರ ಕಲಾ ಅಧ್ಯಯನಗಳ ವಿವರವನ್ನು ಇಲ್ಲಿ ಸ್ಥೂಲವಾಗಿ ಸಮೀಕ್ಷಿಸಲಾಗಿದೆ.

ಪಿಎಚ್.ಡಿ ಮಹಾಪ್ರಬಂಧಗಳು

೧೯೮೦ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. **ಡಾ. ಎಸ್.ಸಿ. ಪಾಟೀಲರು** ೧೯೮೩ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ **ಮಾಧ್ಯಮಿಕ ಶಾಖಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ: ಒಂದು ಅಧ್ಯಯನ** [೯] ಎಂಬ ಸಂಶೋಧನ ಕಿರುಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ರಲ್ಲಿ ಡಾ. ಚುಡಾಮಣಿ ನಂದಗೋಪಾಲರವರ **ಡ್ಯಾನ್ಸ್ ಅಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಟಿಂಗ್ಸ್**,[೧೦] ಮೈಸೂರು ವಿಶ್ವವಿದ್ಯಾಲಯದಿಂದ ಬಂದಿದೆ. ೧೯೮೭ರಲ್ಲಿ **ಡಾ. ಬಿ.ಕೆ. ಹಿರೇಮಠರು ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ**[೧೧] ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಾಗಿ ಎರಡು ಅಧ್ಯಾಯಗಳನ್ನು ಮೀಸಲಾಗಿಟ್ಟು ಅಧ್ಯಯನ ಮಾಡಿದ್ದಾರೆ. ಇದರ ನಂತರ ೧೯೯೧ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ**[೧೨] ಈ ಮಹಾಪ್ರಬಂಧವನ್ನು **ಡಾ.ಎಸ್.ಸಿ ಪಾಟೀಲರು** ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ **ಡಾ. ಅ.ಲ. ನರಸಿಂಹನ್** ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**[೧೩] ೧೯೯೭ಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ತಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು**,[೧೪] ಕನ್ನಡ ವಿಶ್ವವಿದ್ಯಾಲಯಕ್ಕೆ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು**[೧೫], ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ**[೧೬], ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರು

---

೯. ಡಾ. ಎಸ್.ಸಿ. ಪಾಟೀಲ್ : **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ: ಒಂದು ಅಧ್ಯಯನ**, ಕರ್ನಾಟಕ ವಿ.ವಿ. ಧಾರವಾಡ, ೧೯೮೩.

೧೦. ಡಾ. ಚುಡಾಮಣಿ ನಂದಗೋಪಾಲ : **ಡ್ಯಾನ್ಸ್ ಅಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಟಿಂಗ್ಸ್**, ಮೈಸೂರು ವಿ.ವಿ. ೧೯೮೭

೧೧. ಡಾ. ಬಿ.ಕೆ. ಹಿರೇಮಠ : **ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ**, ಕರ್ನಾಟಕ ವಿ.ವಿ. ಧಾರವಾಡ, ೧೯೮೭.

೧೨. ಡಾ. ಎಸ್.ಸಿ ಪಾಟೀಲರು : **ಕರ್ನಾಟಕ ಜನಪದ ಚಿತ್ರಕಲೆ**, ಕರ್ನಾಟಕ ವಿ.ವಿ. ಧಾರವಾಡ, ೧೯೯೧.

೧೩. ಡಾ. ಅ.ಲ. ನರಸಿಂಹನ್ : **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**, ಬೆಂಗಳೂರು ವಿ.ವಿ. ೧೯೯೫.

೧೪. ಡಾ. ಸಂಪದಾ ಭಟ್ : **ಹಿಂದೂಸ್ತಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು**, ಬೆಂಗಳೂರು ವಿ.ವಿ. ೧೯೯೭

೧೫. ಡಾ. ಪುಷ್ಪಾ : **ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು**, ಬೆಂಗಳೂರು ವಿ.ವಿ.೧೯೯೭

೧೬. ಡಾ. ಯಾದಪ್ಪ ಪರದೇಶಿ : **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ**, ಕನ್ನಡ ವಿ.ವಿ. ೨೦೦೧

ಇವರ **ಕರ್ನಾಟಕ ಜನಪದ ಶಿಲ್ಪಕಲೆ: ಒಂದು ಅಧ್ಯಯನ**[೧೭], ೨೦೦೨ರಲ್ಲಿ ಡಾ. ಗಿರೀಶ ಅವರ **ಬುಡಕಟ್ಟು ಚಿತ್ರಕಲೆ**[೧೮], ೨೦೦೨ರಲ್ಲಿ ಡಾ. ಲಕ್ಷ್ಮೀದೇವಿ ಗವಾಯಿಯವರ ಕಲಾವಿದ **ಎಂ.ಎ.ಚೆಟ್ಟಿಯವರ ಜೀವನ-ಕಲಾಕೃತಿಗಳು: ಒಂದು ಅಧ್ಯಯನ**[೧೯], ೨೦೦೨ರಲ್ಲಿ ಶರಣಪ್ಪ ಕೋಲ್ಕಾರ ಅವರ **ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**[೨೦], ೨೦೦೨ರಲ್ಲಿ ಡಾ. ಸೌಮ್ಯ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೨೧], ೨೦೦೨ರಲ್ಲಿ ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್**[೨೨], ೨೦೦೩ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ**[೨೩] (೧೭೮೦-೧೮೧೦), ೨೦೦೩ರಲ್ಲಿ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್. ಹಡಪದ : ಒಂದು ಅಧ್ಯಯನ**[೨೪], ೨೦೦೩ರಲ್ಲಿ ಡಾ. ಎಸ್.ಸಿ. ಪಾಟೀಲರು ಕರ್ನಾಟಕ ವಿವಿಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್**[೨೫], ೨೦೦೪ರಲ್ಲಿ ಡಾ. ವಿ.ಎಮ್. ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ** (೧೪೦೦-೧೮೦೦)[೨೬], ೨೦೦೪ರಲ್ಲಿ ಡಾ. ಶಿವಕುಮಾರ ಜಿ.ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**[೨೭], ೨೦೦೪ರಲ್ಲಿ ಡಾ. ಪಿ. ಗೌರೀಶ ಅವರ ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ [೨೮], ೨೦೦೫ರಲ್ಲಿ ಡಾ.

---

೧೭. ಡಾ. ಶಿವಾನಂದ ಬಂಟನೂರು : **ಕರ್ನಾಟಕ ಜನಪದ ಶಿಲ್ಪಕಲೆ: ಒಂದು ಅಧ್ಯಯನ**, ಕನ್ನಡ ವಿ.ವಿ, ೨೦೦೨

೧೮. ಡಾ. ಗಿರೀಶ : **ಬುಡಕಟ್ಟು ಚಿತ್ರಕಲೆ**, ಕನ್ನಡ ವಿ.ವಿ, ೨೦೦೨

೧೯. ಡಾ. ಲಕ್ಷ್ಮೀದೇವಿ ಗವಾಯಿ : **ಕಲಾವಿದ ಎಂ.ಎ.ಚೆಟ್ಟಿಯವರ ಜೀವನ-ಕಲಾಕೃತಿಗಳು: ಒಂದು ಅಧ್ಯಯನ**, ಕನ್ನಡ ವಿ.ವಿ, ೨೦೦೨

೨೦. ಶರಣಪ್ಪ ಕೋಲ್ಕಾರ : **ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**, ಕನ್ನಡ ವಿ.ವಿ, ೨೦೦೨

೨೧. ಡಾ. ಸೌಮ್ಯ : **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**, ಬೆಂಗಳೂರು ವಿ.ವಿ, ೨೦೦೨

೨೨. ಡಾ. ಪ್ರಮಿಳಾ ಲೋಚನ : **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್**, ಬೆಂಗಳೂರು ವಿ.ವಿ, ೨೦೦೨

೨೩. ಡಾ. ವೀಣಾ ಶೇಖರ : **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ** (೧೭೮೦-೧೮೧೦), ಬೆಂಗಳೂರು ವಿ.ವಿ, ೨೦೦೩

೨೪. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : **ಕಲಾವಿದ ಆರ್.ಎಮ್. ಹಡಪದ : ಒಂದು ಅಧ್ಯಯನ**, ಕನ್ನಡ ವಿ.ವಿ, ೨೦೦೩

೨೫. ಡಾ. ಎಸ್.ಸಿ. ಪಾಟೀಲ್ : **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್**, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ, ೨೦೦೩

೨೬. ಡಾ. ವಿ.ಎಮ್. ಬಾಗಾಯತ್ : **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ** (೧೪೦೦-೧೮೦೦), ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೪

೨೭. ಡಾ. ಶಿವಕುಮಾರ ಜಿ.ಓ : **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ, ೨೦೦೪

೨೮. ಡಾ. ಪಿ. ಗೌರೀಶ : **ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ**, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ, ೨೦೦೪

ಶಶಿಕಲಾ ಹೂಗಾರ ಅವರ **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ**[೨೯], ೨೦೦೫ರಲ್ಲಿ ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೩೦], ೨೦೦೫ರಲ್ಲಿ ಡಾ. ಎಚ್.ಎನ್. ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೩೧], ೨೦೦೫ರಲ್ಲಿ ಡಾ. ಎಸ್.ವಿ. ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು: ಒಂದು ಅಧ್ಯಯನ**[೩೨], ೨೦೦೬ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**[೩೩], ೨೦೦೭ಲ್ಲಿ ಡಾ. ಮಲ್ಲಿಕಾರ್ಜುನ ಬಾಗೋಡಿ ಅವರ **ಸುರಪುರ ಶೈಲಿಯ ಚಿತ್ರಕಲೆ: ಒಂದು ಅಧ್ಯಯ**[೩೪], ಡಾ. ಗೀತಾಂಜಲಿ ಬಿ.ಆರ್. ಅವರ **ಐತಿಹಾಸಿಕ ದೀಪಸ್ತಂಭಗಳು**[೩೫], ೨೦೦೭ರಲ್ಲಿ ಡಾ. ರಾಠೋಡ್ ಅವರ **ಅನ್ವಯಿಕ ಕಲೆ ಹಿಂದಿನಿಂದ ಇಂದಿನವರೆಗೆ**[೩೬], ೨೦೦೮ರಲ್ಲಿ ಡಾ. ಮೋಹನ್‌ರಾವ್ ಬಿ. ಪಂಚಾಳ ಅವರ **ಚಿತ್ರ ಕಲಾವಿದ ಡಾ. ಎಸ್.ಎಮ್.ಪಂಡಿತ್ ಬದುಕು ಮತ್ತು ಕಲೆ** [೩೭], ೨೦೦೮ರಲ್ಲಿ ಡಾ. ವಿಶ್ವನಾಥ ಎ.ಎಸ್. ಅವರ **ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗು ವೇಷಭೂಷಣಗಳು**[೩೮], ಡಾ. ರವೀಂದ್ರ ಎಸ್. ಕಮ್ಮಾರ ಅವರ **ಕಲಾವಿದ ವ್ಹಿ.ಬಿ. ಹಿರೇಗೌಡರ್ ಬದುಕು ಮತ್ತು ಕಲಾಕೃತಿಗಳು**[೩೯], ಡಾ. ಪ್ರೇಮಾನಂದ ಟಿ. ಲಕ್ಕಣ್ಣನವರ್ ಅವರ **ಕರ್ನಾಟಕದ ದೃಶ್ಯಕಲಾ ಸಾಹಿತ್ಯ ಒಂದು ವೈಚಾರಿಕ ಅಧ್ಯಯನ**[೪೦], ಡಾ. ಜಿ. ಲಕ್ಷ್ಮೀಪತಿ ಅವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ**[೪೧], ಡಾ.ಮಂಠಗಿ ಅವರ **ಧನಂಜಯ ಶಿಲ್ಪಿಯವರ**

---

೨೯. ಡಾ. ಶಶಿಕಲಾ ಹೂಗಾರ : **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೫

೩೦. ಡಾ. ಶಿವಪ್ರಕಾಶ ತುಕ್ಕಣ್ಣವರ : **ಕರ್ನಾಟಕ ರಥ ಶಿಲ್ಪಕಲೆ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೫

೩೧. ಡಾ. ಎಚ್.ಎನ್. ಚಿತ್ರಗಾರ : **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೫

೩೨. ಡಾ. ಎಸ್.ವಿ. ವೆಂಕಟೇಶಯ್ಯ : **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು: ಒಂದು ಅಧ್ಯಯನ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೫

೩೩. ಡಾ. ವಿಶ್ವೇಶ್ವರಿ ತಿವಾರಿ : **ರಂಗೋಲಿ ಕಲೆ**, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ, ೨೦೦೬

೩೪. ಡಾ. ಮಲ್ಲಿಕಾರ್ಜುನ ಬಾಗೋಡಿ : **ಸುರಪುರ ಶೈಲಿಯ ಚಿತ್ರಕಲೆ: ಒಂದು ಅಧ್ಯಯನ**, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ, ೨೦೦೭

೩೫. ಡಾ. ಗೀತಾಂಜಲಿ ಬಿ.ಆರ್ : **ಐತಿಹಾಸಿಕ ದೀಪಸ್ತಂಭಗಳು**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೭

೩೬. ಡಾ. ರಾಠೋಡ್: **ಅನ್ವಯಿಕ ಕಲೆ ಹಿಂದಿನಿಂದ ಇಂದಿನವರೆಗೆ**, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ, ೨೦೦೭

೩೭. ಡಾ. ಮೋಹನ್‌ರಾವ್ ಬಿ. ಪಂಚಾಳ : **ಚಿತ್ರ ಕಲಾವಿದ ಡಾ. ಎಸ್.ಎಮ್.ಪಂಡಿತ್ ಬದುಕು ಮತ್ತು ಕಲೆ**, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ, ೨೦೦೮

೩೮. ಡಾ. ವಿಶ್ವನಾಥ ಎ.ಎಸ್ : **ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗು ವೇಷಭೂಷಣಗಳು**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೮

೩೯. ಡಾ. ರವೀಂದ್ರ ಎಸ್. ಕಮ್ಮಾರ : **ಕಲಾವಿದ ವ್ಹಿ.ಬಿ. ಹಿರೇಗೌಡರ್ ಬದುಕು ಮತ್ತು ಕಲಾಕೃತಿಗಳು**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೮

೪೦. ಡಾ. ಪ್ರೇಮಾನಂದ ಟಿ. ಲಕ್ಕಣ್ಣನವರ್ : **ಕರ್ನಾಟಕದ ದೃಶ್ಯಕಲಾ ಸಾಹಿತ್ಯ ಒಂದು ವೈಚಾರಿಕ ಅಧ್ಯಯನ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೮

೪೧. ಡಾ. ಜಿ. ಲಕ್ಷ್ಮೀಪತಿ : **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೮

ಜೀವನ ಮತ್ತು ಕಲೆ: ಒಂದು ಅಧ್ಯಯನ[೪೨], ಡಾ. ರೆಹಮಾನ್ ಪಟೇಲ್ ಅವರ **ಕರ್ನಾಟಕದ ಬಿದರಿ ಕಲೆ: ಒಂದು ಅಧ್ಯಯನ-ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ**[೪೩] ೨೦೧೦ರಲ್ಲಿ ಶ್ರೀಮತಿ ಸುನಿತಾ ಪಾಟೀಲ್ ಅವರ **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು**[೪೪], ನಿಂಗಪ್ಪ ಎಂ. ಅಂಗಡಿಯವರ **ಕರ್ನಾಟದ ಗಾಜಿನ ಮೇಲಿನ ಚಿತ್ರಕಲೆ**[೪೫], ೨೦೧೦ರಲ್ಲಿ ಕಿಶೋರ್ ಎನ್. ದಾಟನಾಳ್ ಅವರ **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು: ಒಂದು ಅಧ್ಯಯನ**[೪೬], ೨೦೧೧ರಲ್ಲಿ ಡಾ. ಕಾಶಿನಾಥ ಡಿ. ವಡ್ಡರ, **ಶಾಂತಿ ನಿಕೇತನದ ಭಿತ್ತಿ ಚಿತ್ರಗಳು,**[೪೭] ಡಾ. ಸತೀಶ ಕುಮಾರ ವಲ್ಲ್ಯೇಪೂರೆ ಅವರ **ಜೆ.ಜೆ.ಕಲಾ ಶಾಲೆಯ ಪ್ರಾಥಿನಿಧಿಕ ಕಲಾವಿದರು,**[೪೮] ಶಂಕ್ರಪ್ಪ ಎಂ. ಕುಂದಗೋಳ ಅವರ **ಕರ್ನಾಟಕದ ಗಂಜೀಫಾ ಚಿತ್ರಕಲೆ**[೪೯] ಡಾ. ಭಾರತಿ ಮರವಂತಿ, **ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ** ೨೦೧೧,[೫೦] ಡಾ. ಕಾಮಾಕ್ಷಿ ಸಿ. ಸೊಪ್ಪಣ್ಣ **ಕರ್ನಾಟಕ ಬಟ್ಟೆ ಮಾಧ್ಯಮದ ಚಿತ್ರಕಲೆ,**[೫೧] ಇವು ದೃಶ್ಯಕಲೆಗಳ ಕುರಿತು ಬಂದ ಪಿಎಚ್.ಡಿ ಮಹಾಪ್ರಬಂಧಗಳು.

ಡಿ.ಲಿಟ್ ಮಹಾಪ್ರಬಂಧಗಳು

೨೦೦೧ರಲ್ಲಿ ಡಾ. ದೇವದಾಸ್ ಕಳಸದ ಅವರ **ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ**[೫೨], ೨೦೦೫ರಲ್ಲಿ ಡಾ. ಆನಂದ ಪೂಜಾರ ಅವರ **ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ**[೫೩], ೨೦೦೫ರಲ್ಲಿ ಡಾ. ಡಿ.ಎ. ಉಪಾಧ್ಯ ಅವರ **ದೃಶ್ಯಕಲೆಗಳ ತೌಲನಿಕ ಅಧ್ಯಯನ**[೫೪],

---

೪೨. ಡಾ. ಮಂಠಗಿ : **ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ: ಒಂದು ಅಧ್ಯಯನ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೯

೪೩. ಡಾ. ರೆಹಮಾನ್ ಪಟೇಲ್ : **ಕರ್ನಾಟಕದ ಬಿದರಿ ಕಲೆ : ಒಂದು ಅಧ್ಯಯನ**, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ, ೨೦೦೯

೪೪. ಶ್ರೀಮತಿ ಸುನಿತಾ ಪಾಟೀಲ್ : **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೧೦

೪೫. ನಿಂಗಪ್ಪ ಎಂ. ಅಂಗಡಿ : **ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೧೦

೪೬ ಕಿಶೋರ್ ಎನ್. ದಾಟನಾಳ್ : **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು: ಒಂದು ಅಧ್ಯಯನ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೧೦

೪೭. ಡಾ. ಕಾಶಿನಾಥ ಡಿ. ವಡ್ಡರ : **ಶಾಂತಿ ನಿಕೇತನದ ಭಿತ್ತಿ ಚಿತ್ರಗಳು**, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ, ೨೦೧೧

೪೮. ಡಾ. ಸತೀಶ ಕುಮಾರ ವಲ್ಲ್ಯೇಪೂರೆ : **ಜೆ.ಜೆ.ಕಲಾ ಶಾಲೆಯ ಪ್ರಾಥಿನಿಧಿಕ ಕಲಾವಿದರು**, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ, ೨೦೧೧

೪೯. ಶಂಕ್ರಪ್ಪ ಎಂ. ಕುಂದಗೋಳ : **ಕರ್ನಾಟಕದ ಗಂಜೀಫಾ ಚಿತ್ರಕಲೆ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ೨೦೧೧

೫೦. ಡಾ. ಭಾರತಿ ಮರವಂತಿ : **ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ** ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ, ೨೦೧೨

೫೧. ಡಾ. ಕಾಮಾಕ್ಷಿ ಸಿ. ಸೊಪ್ಪಣ್ಣ : **ಕರ್ನಾಟಕ ಬಟ್ಟೆ ಮಾಧ್ಯಮದ ಚಿತ್ರಕಲೆ**, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿ.ವಿ, ೨೦೧೨

೫೨. ಡಾ. ದೇವದಾಸ್ ಕಳಸದ : **ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ**, ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೧

೫೩. ಡಾ. ಆನಂದ ಪೂಜಾರ : **ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ**, ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿ.ವಿ, ೨೦೦೫

೫೪. ಡಾ. ಡಿ.ಎ. ಉಪಾಧ್ಯ : **ದೃಶ್ಯಕಲೆ ಗಳ ತೌಲನಿಕ ಅಧ್ಯಯನ**, ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೫

೨೦೦೯ರಲ್ಲಿ ಡಾ. ಎಂ.ಎಸ್.ಮೂರ್ತಿ ಅವರ **ಮಕ್ಕಳ ಮನಸ್ಸಿನ ಚಿತ್ರಗಳು**[೫೫], ಮುಂತಾದ ಡಿ.ಲಿಟ್ ಮಹಾಪ್ರಬಂಧಗಳಿವೆ.

ಎಂ.ಫಿಲ್ ಪ್ರಬಂಧಗಳು

೨೦೦೨ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್ ಪದವಿಗಾಗಿ ಮಂಡಿಸಿದ **ಚಿತ್ರಕಲಾವಿದ ಜೆ.ಎಸ್. ಖಂಡೇರಾವ್ ಒಂದು ಅಧ್ಯಯನ**[೫೬], ಮತ್ತು ೨೦೦೩ರಲ್ಲಿ ಎ.ಎಸ್.ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು**[೫೭], ೨೦೦೫ರಲ್ಲಿ ಸಿ.ಡಿ. ಜಟ್ಟೆಣ್ಣನವರ **ಎಂ.ವಿ. ಮಿಣಜಗಿ ಜೀವನ ಮತ್ತು ಕಲಾಬದುಕು**,[೫೮] ಶಂಕರಪ್ಪ ಎಂ. ಕುಂದಗೋಳ ಅವರ **ಕಲಾವಿದ ಡಿ.ವಿ. ಹಾಲಭಾವಿಯರ ಬದುಕು ಮತ್ತು ಕಲಾಕೃತಿಗಳು**[೫೯], ೨೦೦೬ರಲ್ಲಿ ಸುಚಿತ್ರ ಜಿ. ಲಿಂಗದಳ್ಳಿ ಇವರ **ವಿಜಯನಗರದ ಭಿತ್ತಿಚಿತ್ರಕಲೆ: ಒಂದು ಅಧ್ಯಯನ**[೬೦], ರವಿ ವಸರಾಮ ನಾಯಕ ಇವರ **ಕಿನ್ನಾಳ ಕಲೆ ಒಂದು ಅಧ್ಯಯ**[೬೧], ೨೦೦೭ರಲ್ಲಿ ಬಿ.ಎಮ್. ಪಾಟೀಲ ಅವರ **ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು**[೬೨], ಶೈಲಾ ಬರಡೋಲ ಅವರ **ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು**[೬೩], ಉಮೇಶ ಎಸ್. ಅವರ **ಕರ್ನಾಟಕ ಜೈನ ಚಿತ್ರಕಲೆ**[೬೪], ಶಶಿಕಾಂತ ಬಸರಿಕಟ್ಟಿ ಅವರ **ಕಲಘಟಗಿ ಕಲೆ**[೬೫], ೨೦೦೮ರಲ್ಲಿ ಕೃಷ್ಣವೇಣಿಯವರ **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ**[೬೬], ಯೋಗೀಶ್ ಹೆಚ್. ಅವರ **ಚಿತ್ರದುರ್ಗ ಜಿಲ್ಲೆಯ ಚಿತ್ರಗಳು**[೬೭], ಮಹಾಕೋಟೇಶ್ವರಗೌಡ ಪಾಟೀಲ್ ಅವರ **ಬೆಳಗಾವಿ ಜಿಲ್ಲೆಯ ಚಿತ್ರಕಲೆ**[೬೮], ಸುರೇಶ ಬಡಿಗೇರ್ ಅವರ **ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಗಳ ಚಿತ್ರಕಲೆ**[೬೯],

೫೫. ಡಾ. ಎಂ.ಎಸ್.ಮೂರ್ತಿ : **ಮಕ್ಕಳ ಮನಸ್ಸಿನ ಚಿತ್ರಗಳು**, ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೯

೫೬. ಮಲ್ಲಿಕಾರ್ಜುನ ಬಾಗೋಡಿ : **ಚಿತ್ರಕಲಾವಿದ ಜೆ.ಎಸ್. ಖಂಡೇರಾವ್ ಒಂದು ಅಧ್ಯಯನ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೨

೫೭. ಎ.ಎಸ್.ವಿಶ್ವನಾಥ : **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೩

೫೮. ಸಿ.ಡಿ. ಜಟ್ಟೆಣ್ಣನವರ : **ಎಂ.ವಿ. ಮಿಣಜಗಿ ಜೀವನ ಮತ್ತು ಕಲಾಬದುಕು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ೨೦೦೫

೫೯. ಶಂಕರಪ್ಪ ಎಂ. ಕುಂದಗೋಳ : **ಕಲಾವಿದ ಡಿ.ವಿ. ಹಾಲಭಾವಿಯರ ಬದುಕು ಮತ್ತು ಕಲಾಕೃತಿಗಳು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ ೨೦೦೫

೬೦. ಸುಚಿತ್ರ ಜಿ. ಲಿಂಗದಳ್ಳಿ : ಜಯನಗರದ **ಭಿತ್ತಿಚಿತ್ರಕಲೆ: ಒಂದು ಅಧ್ಯಯನ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೬

೬೧. ರವಿ ವಸರಾಮ ನಾಯಕ : **ಕಿನ್ನಾಳ ಕಲೆ ಒಂದು ಅಧ್ಯಯನ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೭

೬೨. ಬಿ.ಎಮ್. ಪಾಟೀಲ : **ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೭

೬೩. ಶೈಲಾ ಬರಡೋಲ : **ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೭

೬೪. ಉಮೇಶ ಎಸ್ : **ಕರ್ನಾಟಕ ಜೈನ ಚಿತ್ರಕಲೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೭

೬೫. ಶಶಿಕಾಂತ ಬಸರಿಕಟ್ಟಿ : **ಕಲಘಟಗಿ ಕಲೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೮

೬೬. ಕೃಷ್ಣವೇಣಿ : **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೮

೬೭. ಯೋಗೀಶ್ ಹೆಚ್ : **ಚಿತ್ರದುರ್ಗ ಜಿಲ್ಲೆಯ ಚಿತ್ರಗಳು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೮

೬೮. ಮಹಾಕೋಟೇಶ್ವರಗೌಡ ಪಾಟೀಲ್ : **ಬೆಳಗಾವಿ ಜಿಲ್ಲೆಯ ಚಿತ್ರಕಲೆ**,ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ,

೬೯. ಸುರೇಶ ಬಡಿಗೇರ್ : **ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಗಳ ಚಿತ್ರಕಲೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ೨೦೦೮

ಸಂತೋಷ್‌ಕುಮಾರ್ ಕುಲಕರ್ಣಿ ಅವರ **ದಾವಣಗೆರೆ ಜಿಲ್ಲೆಯ ಚಿತ್ರಕಲೆ**[೨೦], ಜಯರಾಜ ಚಿಕ್ಕ ಪಾಟೀಲ್ ಅವರ **ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು**[೨೧], ಮಹೇಶ ಉಮತಾರ್ **ಬಿ.ಪಿ. ಬಾಯಿರಿ ಕಲೆ ಮತ್ತು ಕಲಾಸಾಹಿತ್ಯ**[೨೨], ಗಿರಿಜಾ ಬಿರಾದಾರ್ ಅವರ **ಬಿಜಾಪುರ ಜಿಲ್ಲೆಯ ಚಿತ್ರಕಲೆ**[೨೩], ಬಸಯ್ಯ ಗವಿಮಠ ಅವರ **ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ**[೨೪], ಕೃಷ್ಣೇಗೌಡ. ಹೆಚ್.ಎನ್. ಅವರ **ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ**[೨೫], ಮಹಾಂತೇಶ್ ಎಂ. ಫಲದಿನ್ನಿ ಅವರ **ಕರ್ನಾಟಕದ ಲಜ್ಜಾಗೋರಿ ಶಿಲ್ಪಗಳು**[೨೬], ಕಾಂತರಾಜು ಅವರ **ತುಮಕೂರು ಜಿಲ್ಲೆಯ ಚಿತ್ರಕಲೆ**[೨೭], ರಂಗಸ್ವಾಮಿ ಅವರ **ಕಲಾವಿದ ರುಮಾಲೆ ಚೆನ್ನಬಸವಯ್ಯನವರ ಜೀವನ ಮತ್ತು ಕಲಾಕೃತಿಗಳು**[೨೮], ಶ್ಯಾಮ್ ಜಮಂದರ ಅವರ **ಕಲಾವಿದ ಸಿ.ಎನ್. ಪಾಟೀಲರ ಜೀವನ ಮತ್ತು ಕಲಾಕೃತಿಗಳು**[೨೯], ದೀನೇಶ ಬಿ. ಅವರ **ಚನ್ನಪಟ್ಟಣದ ಚಿತ್ತಾರ ಗೊಂಬೆ ಚಿತ್ರಕಲೆ**[೩೦], ಭಾನುಮತಿ ಕೆ.ಎಲ್. ಅವರ **ಕಲಾವಿದ ವಾಚೇದ್ ಮಠ ಅವರ ಜೀವನ ಮತ್ತು ಕಲಾಕೃತಿಗಳು**[೩೧], ವಾದಿರಾಜ್ ಅವರ **ಕಲಾವಿದ ಎಲ್.ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು**[೩೨], ಚಿಂತಾಮಣಿ ಅವರ **ಬಹುರೂಪಿಗಳ ಮುಕವರ್ಣಿಕೆ ಮತ್ತು ವೇಷಭೂಷಣಗಳು**[೩೩], ಈ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ. ಹೀಗೆ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಎಚ್.ಡಿ ಪದವಿಗಾಗಿ ೨೯ ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ನಿಟ್ಟಿನಲ್ಲಿ ೧೫ಕ್ಕೂ ಹೆಚ್ಚು ಸಂಶೋಧಕರು ಅಧ್ಯಯನ ನಿರತರಾಗಿದ್ದಾರೆ.

---

೨೦. ಸಂತೋಷ್‌ಕುಮಾರ್ ಕುಲಕರ್ಣಿ : **ದಾವಣಗೆರೆ ಜಿಲ್ಲೆಯ ಚಿತ್ರಕಲೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ ಹಂಪಿ, ೨೦೦೮

೨೧. ಜಯರಾಜ ಚಿಕ್ಕ ಪಾಟೀಲ್ : **ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೮

೨೨. ಮಹೇಶ ಉಮತಾರ್ : **ಬಿ.ಪಿ. ಬಾಯಿರಿ ಕಲೆ ಮತ್ತು ಕಲಾಸಾಹಿತ್ಯ**,ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೮

೨೩. ಗಿರಿಜಾ ಬಿರಾದಾರ್ : **ಬಿಜಾಪುರ ಜಿಲ್ಲೆಯ ಚಿತ್ರಕಲೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೮

೨೪. ಬಸಯ್ಯ ಗವಿಮಠ : **ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೮

೨೫. ಕೃಷ್ಣೇಗೌಡ ಹೆಚ್.ಎನ್ : **ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ

೨೬. ಮಹಾಂತೇಶ್ ಎಂ. ಫಲದಿನ್ನಿ : **ಕರ್ನಾಟಕದ ಲಜ್ಜಾಗೋರಿ ಶಿಲ್ಪಗಳು**,ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ

೨೭. ಕಾಂತರಾಜು : **ತುಮಕೂರು ಜಿಲ್ಲೆಯ ಚಿತ್ರಕಲೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೯

೨೮. ರಂಗಸ್ವಾಮಿ : **ಕಲಾವಿದ ರುಮಾಲೆ ಚೆನ್ನಬಸವಯ್ಯನವರ ಜೀವನ ಮತ್ತು ಕಲಾಕೃತಿಗಳು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೯

೨೯. ಶ್ಯಾಮ್ ಜಮಂದರ : **ಕಲಾವಿದ ಸಿ.ಎನ್. ಪಾಟೀಲರ ಜೀವನ ಮತ್ತು ಕಲಾಕೃತಿಗಳು**,ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೦೯

೩೦. ದಿನೇಶ ಬಿ : **ಚನ್ನಪಟ್ಟಣದ ಚಿತ್ತಾರದ ಗೊಂಬೆ ಚಿತ್ರಕತೆ**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೧೦

೩೧. ಭಾನುಮತಿ ಕೆ.ಎಲ್ : **ಕಲಾವಿದ ವಾಚೇದ್ ಮಠ ಅವರ ಜೀವನ ಮತ್ತು ಕಲಾಕೃತಿಗಳು**,ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೧೦

೩೨. ವಾದಿರಾಜ್ : **ಕಲಾವಿದ ಎಲ್.ಶಿವಲಿಂಗಪ್ಪನವರ ಜೀವನ ಮತ್ತು ಕಲಾಕೃತಿಗಳು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೧೦

೩೩. ಚಿಂತಾಮಣಿ : **ಬಹುರೂಪಿಗಳ ಮುಕವರ್ಣಿಕೆ ಮತ್ತು ವೇಷಭೂಷಣಗಳು**, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ, ಹಂಪಿ, ೨೦೧೦

ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. ಪದವಿ ಡಿಪ್ಲೋಮಾ ಸ್ನಾತಕೋತ್ತರ ಹಂತದಲ್ಲಿ ಸುಮಾರು ೫೦೦ಕ್ಕೂ ಹೆಚ್ಚಿನ ಲಘಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ಸಂಶೋಧನಾ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿಯೂ ಬಳಗೊಳ್ಳುವ ಆಶಯವನ್ನು ನಿರೀಕ್ಷಿಸಬಹುದು.

ಇಲ್ಲಿಯವರೆಗೆ ಕ್ರೈಸ್ತಚಿತ್ರಕಲೆಯ ಕುರಿತು ಬಂದಂತಹ ಸಾಹಿತ್ಯ ಸಮಿಕ್ಷೆ

ತೊಂಬತ್ತರ ದಶಕ ದಿಂದ ಬಂದಂತಹ ಕ್ರೈಸ್ತ ಚಿತ್ರಕಲೆ ಇತಿಹಾಸ ಹಾಗು ಚಿತ್ರಕಲಾಕೃತಿಗಳ ಕುರಿತು ಬಂದಿರುವ ಪುಸ್ತಕಗಳು ಲೇಖನಗಳು, ೧೯೯೫ರಲ್ಲಿ ಕರ್ನಾಟಕದ "**ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**"[೮೪] ಎಂಬ ಪಿಎಚ್.ಡಿ ಮಹಾಪ್ರಬಂಧವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅ.ಲ.ನರಸಿಂಹನ್ ಅವರಿಂದ ಸಲ್ಲಿಸಲ್ಪಟ್ಟಿದ್ದು ಇದರಲ್ಲಿ ಕ್ರೈಸ್ತ ಚಿತ್ರಗಳ ಕುರಿತು ಸಂಶೋಧನಾ ದೃಷ್ಟಿಯಿಂದ ವಿವರಿಸಿದ್ದಾರೆ. ೨೦೦೨ರಲ್ಲಿ ಯಾದಪ್ಪ ಪರದೇಶಿಯವರು "**ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ**"[೮೫] ಎಂಬ ಪಿ.ಎಚ್.ಡಿ ಮಹಾಪ್ರಬಂಧದಲ್ಲಿ ಮಂಗಳೂರಿನಲ್ಲಿರುವ ವಿಶೇಷ ಚರ್ಚ್‌ಗಳಲ್ಲಿ ಬಿತ್ತಿ ಚಿತ್ರಗಳು ಹಾಗೂ ಹಂಚಿನ ಚಿತ್ರಗಳ ಕುರಿತು ಹೇಳಲಾಗಿದೆ, ೨೦೧೨ರಲ್ಲಿ ಎನ್.ಎಂ. ಅಂಗಡಿಯವರ "**ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ**"[೮೬] ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕರಾವಳಿ ಭಾಗದಲ್ಲಿ ಕಂಡುಬರುವ ಚರ್ಚ್‌ಗಳಲ್ಲಿ ಗಾಜಿನ ಚಿತ್ರಕಲೆಯ ವಿವರಗಳೊಂದಿಗೆ ಚಿತ್ರಪಟಗಳನ್ನು ತೋರಿಸಲಾಗಿದೆ. ಎನ್.ಎಸ್. ಪತ್ತಾರ್ ರವರ ದೃಶ್ಯಕಲಾ ವಿಶ್ವಕೋಶದ "**ಕರ್ನಾಟಕದ ಕ್ರೈಸ್ತಚಿತ್ರಕಲೆ**"[೮೭] ಎಂಬ ಲೇಖನ ವಿದ್ದು, ವಿಶೇಷವಾಗಿ ಕರಾವಳಿ ಭಾಗದಲ್ಲಿ ಕಂಡುಬರುವ ಚರ್ಚ್‌ಗಳಲ್ಲಿನ ಚಿತ್ರ, ಭಿತ್ತಿ ಚಿತ್ರ ಹಾಗೂ ಗ್ಲಾಸ್ ಪೆಂಟಿಂಗ್ ಕುರಿತು ಚರ್ಚಿಸಲಾಗಿದೆ. ಹಾಗೆಯೇ ಪ್ರಸ್ತುತ ದಿನಗಳಲ್ಲಿ ಮಂಗಳೂರು, ಉಡುಪಿ, ಕಾರವಾರ ಮತ್ತು ಬದಾಮಿ ಕಲಾಕಾಲೇಜುಗಳಲ್ಲಿ ಕಿರುಯೋಜನಾ ವರದಿ ಸಲ್ಲಿಸುವ ಪ್ರಮುಖ ವಿಷಯವಾಗಿ ಆಯ್ಕೆಗೊಂಡು ರಚನೆಯಾಗಿರುತ್ತವೆ.

ಕ್ರೈಸ್ತ ಕಲೆಯ ಇತಿಹಾಸದ ಕುರಿತು ಬಂದ ಅಧ್ಯಯನಗಳು ತುಂಬಾ ಕಡಿಮೆ ಎಂದರೆ ತಪ್ಪಾಗಲಾದು. ಅದೇ ರೀತಿ ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆ ಕುರಿತು ರಾಜ್ಯದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಅಲ್ಪ ಸ್ವಲ್ಪ ಮಾಹಿತಿಗಳು ಸಿಗುವುದಾಗಿದ್ದು,

---

೮೪. ಅ.ಲ. ನರಸಿಂಹನ್ : **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**, ಪಿಎಚ್.ಡಿ ಮಹಾಪ್ರಬಂಧ, ೧೯೯೫

೮೫. ಯಾದಪ್ಪ ಪರದೇಶಿ : **ಉತ್ತರಕರ್ನಾಟಕದ ಭಿತ್ತಿ ಚಿತ್ರಕಲೆ**, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ೨೦೦೨

೮೬. ಎನ್.ಎಂ. ಅಂಗಡಿ :**ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ**, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ೨೦೧೧.

೮೭. ಡಾ. ಎಸ್.ಸಿ. ಪಾಟೀಲ (ಸಂ) : ಲೇ. ಎನ್.ಎಸ್. ಪತ್ತಾರ್, **ಕರ್ನಾಟಕದ ಕ್ರೈಸ್ತ ಚಿತ್ರಕಲೆ**, ೨೦೧೧

ಮುಂದುವರೆದಂತೆ ಕರ್ನಾಟಕದಲ್ಲಿ ಕ್ರೈಸ್ತ ಚಿತ್ರಕಲೆಯ ಕುರಿತು ಪುಸ್ತಕಗಳ ಹಾಗೂ ಸಂಶೋಧನೆಗಳು ನಡೆಯದೆ ಇರುವುದನ್ನು ಗಮನಿಸಿ ಪ್ರಸ್ತುತ ಈ ಅಧ್ಯಯನವನ್ನು ನಡೆಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರಮುಖವಾಗಿ ಈ ಅಧ್ಯಯನವನ್ನು ಏಳು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸಲ್ಪಡುವ ವಿವರವನ್ನು ಸಂಕ್ಷಿಪ್ತದಲ್ಲಿ ಈ ಕೆಳಗಿನಂತೆ ವಿವರಿಸಬಹುದು.

ಒಂದನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ಕುರಿತು ಸ್ಪಷ್ಟಪಡಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಕರಾವಳಿ ಪ್ರದೇಶದ ಸಾಂಸ್ಕೃತಿಕ ಪರಿಸರ. ವಿವಿಧ ಧರ್ಮಗಳ ಸಮನ್ವಯ ಮತ್ತು ಲಲಿತ ಕಲೆಗಳು ಕುರಿತು ಅಧ್ಯಯನ ಮಾಡಲಾಗುವುದು.

ಮೂರನೇ ಅಧ್ಯಾಯದಲ್ಲಿ ಕರಾವಳಿ ಕರ್ನಾಟಕದಲ್ಲಿ ಸಿಗುವಂತಹ ಅನೇಕ ಚರ್ಚ್‌ಗಳು ಹಾಗೂ ಅವುಗಳಲ್ಲಿ ಕಂಡುಬರುವಂತಹ ವಿಶೇಷ ಭಿತ್ತಿ ಮಾಧ್ಯಮದ ಚಿತ್ರಗಳ ನೋಟಗಳನ್ನು ಬಿಂಬಿಸುವುದರ ಜೊತೆಗೆ ರೇಖೆಗಳು, ಸಂಯೋಜನೆ ಹಾಗೂ ಬಣ್ಣಗಳ ಕುರಿತು ವಿವರವಾಗಿ ಹೇಳಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಕರಾವಳಿ ಭಾಗವಾದ ಮಂಗಳೂರು, ಕಾರವಾರ ಮತ್ತು ಉಡುಪಿ ಜಿಲ್ಲೆಗಳ ಒಟ್ಟು ವಿಸ್ತೀರ್ಣದಲ್ಲಿ ಕಂಡುಬರುವಂತಹ ಚರ್ಚ್‌ಗಳಲ್ಲಿ ಇತಿಹಾಸವುಳ್ಳಂತಹ ಮಂದಿರಗಳಲ್ಲಿ ಸಂರಕ್ಷಿಸಲ್ಪಟ್ಟಿರುವ ಗಾಜಿನ ಮೇಲೆ ಚಿತ್ರವಿರುವ ವಿಶೇಷತೆಯನ್ನು ಶೋಧಿಸಿದೆ. ಅವುಗಳ ಕುರಿತು ಸಮಗ್ರವಾದ ಬರಹ ಹಾಗೂ ವಿಮರ್ಶಾತ್ಮಕತೆಯ ಚಿಂತನೆಗೆ ಹೆಚ್ಚು ಪ್ರಾಶಸ್ತ್ಯಗಳ ಒಂದು ನೋಟವನ್ನು ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಮೂರು ಮತ್ತು ನಾಲ್ಕನೇ ಅಧ್ಯಾಯದಲ್ಲಿರುವಂತೆ ಸ್ವಲ್ಪ ಭಿನ್ನವೆಂದೇಳಬಹುದು. ಗೋಡೆ ಮತ್ತು ಗಾಜಿನ ಮೇಲೆ ಚಿತ್ರ ರಚನೆ ಮಾಡುವುದು ಹಾಗೆಯೇ ಬಟ್ಟೆ ಮಾಧ್ಯಮದಲ್ಲಿ ಚಿತ್ರರಚನೆ ಮಾಡಿರುವ ಅನೇಕ ಕಲಾಕೃತಿಗಳು ಕರಾವಳಿ ಭಾಗದಲ್ಲಿ ಸಂಗ್ರಹಗೊಂಡಿರುತ್ತವೆ. ಅಂತಹ ಕಲಾಕೃತಿಗಳ ಕುರಿತು ಅಧ್ಯಯನದ ವಿವರವನ್ನು ಪ್ರಸ್ತುತಪಡಿಸಲಾಗುತ್ತದೆ.

ಆರನೇಯ ಅಧ್ಯಾಯದಲ್ಲಿ ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆಯ ಪ್ರಮುಖ ಲಕ್ಷಣಗಳು, ಕಲಾವಿದರು, ಕಲಾಕೃತಿಗಳು ಮೇಲಾದ ಪ್ರಭಾವ, ಪ್ರೇರಣೆ ಹಾಗೂ ಶೈಲಿಯ ಕುರಿತು ಚರ್ಚಿಸುವುದರ ಮುಖೇನ ಉಪಯುಕ್ತ ಅಂಶಗಳನ್ನು ಹೊರತರಲಾಗುವುದು.

ಏಳನೇ ಅಧ್ಯಾಯವು ಸಮಾರೋಪವಾಗಿದ್ದು, ಪ್ರಸ್ತುತ ಅಧ್ಯಯನದ ಎಲ್ಲಾ ಅಧ್ಯಾಯಗಳ ಫಲಿತಗಳ ಸಮೀಕ್ಷೆಯನ್ನು ಹೊಂದಿರುತ್ತದೆ.

ವ್ಯಾಪ್ತಿ

ಕ್ರೈಸ್ತ ಧರ್ಮವನ್ನು ಸ್ವೀಕರಿಸಿದ ಕ್ರಿಸ್ತನ ಅನುಯಾಯಿಗಳು ಕ್ರೈಸ್ತರೆನಿಸಿಕೊಳ್ಳುತ್ತಾರೆ. ಒಂದೇ ಧರ್ಮ ಸಭೆಯ ಅಡಿಯಲ್ಲಿ (Church) ಧರ್ಮ ಪಾಲನೆ ಮಾಡುತ್ತಿರುವ ಇವರು ಹಲವಾರು ಪಂಗಡಗಳಿಗೆ ಸೇರಿದವರಾಗಿದ್ದು, ವಿಭಿನ್ನ ರೀತಿಯ ಸಂಪ್ರದಾಯ, ಆಚರಣೆಗಳನ್ನು ರೂಪಿಸಿಕೊಂಡಿರುವುದು ಒಂದು ವೈಶಿಷ್ಟ್ಯವೇ ಆಗಿದೆ. ಯಾವುದೇ ಒಂದು ಸಮುದಾಯದ ಸಾಂಸ್ಕೃತಿಕ ಅಧ್ಯಯನದಲ್ಲಿ ತೊಡಗುವಾಗ ಆ ಸಮುದಾಯದ ಮೂಲ ಮತ್ತು ಪರಂಪರೆ, ನೆಲೆಸಿರುವ ಪ್ರದೇಶಗಳು, ಮುಖ್ಯವಾಗಿ ಕ್ರೈಸ್ತರ ಚಿತ್ರಕಲೆಗಳ ಪ್ರಭಾವ, ಶೈಲಿ, ರೂಢಿಯಲ್ಲಿರುವ ಸಂಪ್ರದಾಯಗಳು, ಆಂತರಿಕ ಸಮಾಜ ರಚನೆ, ಅವರಿಗಿರುವ ಸಾಮಾಜಿಕ ಸ್ಥಾನ-ಮಾನಗಳನ್ನು ಗಮನಿಸಬೇಕಾಗುತ್ತದೆ.

ಕ್ರೈಸ್ತ ಧರ್ಮವು ಕರ್ನಾಟಕವನ್ನು ಪ್ರವೇಶಿಸಿ ಹಲವಾರು ಶತಮಾನಗಳೇ ಸಂದಿವೆ. ಹಾಗೆಯೇ ಕರಾವಳಿ ಕರ್ನಾಟಕ ಪ್ರದೇಶಕ್ಕೆ ಪೋರ್ಚ್‌ಗೀಸ್ ಕ್ರೈಸ್ತರ ಪ್ರಭಾವದಿಂದ ಕ್ರೈಸ್ತಧರ್ಮವು ಬಂದಿದ್ದು, ಈ ಅಧ್ಯಯನದಲ್ಲಿ ಪ್ರಮುಖವಾಗಿ ಕ್ರೈಸ್ತಧರ್ಮದ ಇತಿಹಾಸ, ಚರ್ಚ್‌ಗಳು, ಇಲ್ಲಿ ಕಂಡು ಬರುವಂತಹ ಚಿತ್ರಕಲಾಕೃತಿಗಳೂ ಒಟ್ಟಾರೆ ಲಲಿತಕಲೆಗಳ ಮುಖ್ಯ ಅಂಶಗಳನ್ನು ಮುಖ್ಯವಾಗಿರಿಸಿಕೊಳ್ಳಲಾಗಿದೆ.

ಕ್ರೈಸ್ತ ಧರ್ಮಿಯರು ಕರ್ನಾಟಕದಲ್ಲಿ ಹೆಚ್ಚು ಕರಾವಳಿ ಭಾಗದಲ್ಲಿ ಇದ್ದು, ಈ ಭಾಗದ ಪ್ರತಿಯೊಂದು ಹಳ್ಳಿಯಲ್ಲೂ ತಮ್ಮ ಧರ್ಮಕ್ಕೆ ಸಂಬಂಧಿಸಿದ ದೇವಾಲಯವನ್ನು ನಿರ್ಮಿಸಿಕೊಂಡಿರುತ್ತಾರೆ. ಒಟ್ಟಾರೆ ಕರಾವಳಿ ಭಾಗದಲ್ಲಿ ಸುಮಾರು ೨೫೦ ರಿಂದ ೩೦೦ರವರೆಗೂ ಚರ್ಚ್‌ಗಳನ್ನು ಕಾಣಬಹುದಾಗಿದೆ. ಅದರಲ್ಲಿ ಮುಖ್ಯವಾಗಿ ಮಂಗಳೂರಿನ **ಸೆಂಟ್ ಅಲಾಯಿಸಿಸ್ ಚರ್ಚ್, ಕುಲಶೇಖರ ಚರ್ಚ್, ಕ್ಯಾಥಡ್ರಿಕ್ ಚರ್ಚ್, ಬಿಷಪ್ ಚರ್ಚ್, ಕುಂಡಾಪುರ ಚರ್ಚ್, ಶಿರ್ವ, ಉಡುಪಿ, ಅಂಕೋಲಾ, ಸಿದ್ಧಾಪುರ, ಕಾರ್ಕಳ, ಮೂಡಬಿದರೆ**, ಹೀಗೆ ಅನೇಕ ಕಡೆ ಉತ್ತಮ ಚರ್ಚುಗಳನ್ನು ಕಾಣಬಹುದು. ಇತ್ತೀಚಿನ ದಿನಗಳಲ್ಲಿ ಹಳೆಯ ಚರ್ಚುಗಳಿಗೆ ಮುಕ್ತಿಯನ್ನು ಕೊಟ್ಟು ಹೊಸ ರೂಪವನ್ನಲಂಕರಿಸಿರುವುದರಿಂದ ಅನೇಕ ಚರ್ಚುಗಳಲ್ಲಿನ ಚಿತ್ರವಿನ್ಯಾಸಗಳು, ಚಿತ್ರಗಳು, **ಗಾಜಿನ ಚಿತ್ರ**, ವಾಸ್ತುಶಿಲ್ಪ, ಶಿಲ್ಪಿಗಳು ನಾಶವೊಂದಿರುತ್ತವೆ. ಆದರೂ ಕೆಲವೊಂದು ಚರ್ಚ್‌ಗಳಲ್ಲಿ ಸಂರಕ್ಷಿಸಿರುವ ಚಿತ್ರಗಳನೇಕವಿದ್ದು, ಅವುಗಳನ್ನು ಸಂಶೋಧಿಸುವ ವ್ಯಾಪ್ತಿಯನ್ನು ಅಧ್ಯಾಯನವು ಹೊಂದಲಾಗಿದೆ.

ಅಧ್ಯಯನದ ವೈಧಾನಿಕತೆ

ಪ್ರಸ್ತುತ ಸಂಪ್ರಬಂಧಕ್ಕೆ ಮುಖ್ಯವಾಗಿ ಎರಡು ರೀತಿಯ ಆಕಾರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

ಈ ಎರಡು ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗಿದೆ.

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಾಗ್ರಿಯಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ (Field work) ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರಕಾರ್ಯ ಅತ್ಯಂತ ಮಹತ್ವ ಪೂರ್ಣವಾದುದ್ದಾಗಿದೆ. ಕ್ಷೇತ್ರಕಾರ್ಯವಿಲ್ಲದೆ ದೃಶ್ಯಕಲೆಯ ಒಂದು ಪ್ರಕಾರವಾದಂತಹ ಕ್ರೈಸ್ತ ಚಿತ್ರಕಲೆಯಂತಹ ಅಧ್ಯಯನ ಸಾಧ್ಯವಿಲ್ಲ. ಇಂತಹ ಪ್ರಮುಖ ಅಧ್ಯಯನಗಳ ಮೂಲ ಆಕರ ಮತ್ತು ಕ್ಷೇತ್ರಾಧ್ಯನವೇ ಈ ಅಧ್ಯಯನದ ಮೂಲ ಗುರಿ ಎಂದರೆ ತಪ್ಪಾಗಲಾರದು. ಈ ಕ್ಷೇತ್ರಕಾರ್ಯದಲ್ಲಿ ಅ. **ಸಂದರ್ಶನ,** ಆ. **ಸಂಭಾಷಣೆ,** ಇ. **ಧ್ವನಿಮುದ್ರಣ,** ಈ. **ಛಾಯಚಿತ್ರಣ,** ಉ. **ಚಿತ್ರಗಳ ರಚನೆಗೆ ಬಳಸಲಾದ ಮಾಧ್ಯಮದ ವಿವರಣೆ,** ಊ. **ಸಂಗ್ರಹಿತ ವಿಷಯಗಳ ಪಟ್ಟಿಕೆ**ಗಳನ್ನು ಸಿದ್ಧಪಡಿಸುವಿಕೆ ಹೀಗೆ ವಿವಿಧ ಸ್ವರೂಪದಲ್ಲಿರುತ್ತದೆ. ಹೀಗೆ ಸಮಕಾಲೀನ ಕ್ಷೇತ್ರದ ಮುಖಾಂತರ ದೊರಕುವ ಮೂಲ ಆಕರ ಸಾಮಾಗ್ರಿಯಿಂದ ವಿಷಯ ಸಂಗ್ರಹ ಮಾಡಿಕೊಂಡು ಆನುಷಂಗಿಕ ಆಕರ ಸಾಮಾಗ್ರಿಯಿಂದ ದೊರೆತ ಮಾಹಿತಿಗಳೊಡನೆ ತೌಲನಿಕವಾಗಿ ವಿಶ್ಲೇಷಣೆಗೊಳಪಡಿಸಿ ಪ್ರಸ್ತುತ ಸಂಪ್ರಬಂಧವನ್ನು ರಚಿಸಲಾಗುವುದು.

ಅ. ಸಂದರ್ಶನ

ಕರಾವಳಿ ಕರ್ನಾಟಕ ಪ್ರದೇಶದ ಅಧ್ಯಯನದ ಕ್ಷೇತ್ರಗಳನ್ನು ವಿಂಗಡಿಸಿಕೊಂಡು ಜಿಲ್ಲಾಸ್ಥಳಕ್ಕೆ ಬೇಟಿಕೊಡುವುದು. ಜಿಲ್ಲೆಯ ಸಮಗ್ರ ಪರಿಚಯಕ್ಕಾಗಿ ಪ್ರಮುಖವಾದ ತಾಲೂಕು ಘಟಕಗಳನ್ನು ಮಾಡಿಕೊಂಡು ಈ ತಾಲೂಕುಗಳಲ್ಲಿ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳಿರುವ ಊರುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹೀಗೆ ಆಯ್ಕೆ ಮಾಡಿಕೊಂಡ ಊರು, ಆ ಊರಿನ **ಚರ್ಚ್, ಅರಮನೆ, ಕಾಲೇಜು, ಗುರುಮನೆ,** ಇತ್ಯಾದಿಗಳಲ್ಲಿ ಕ್ರೈಸ್ತ ಚಿತ್ರಗಳಿರುವ ಎಲ್ಲಾ ಸ್ಥಳಗಳಿಗೂ ಬೇಟಿ ನೀಡಿ, ಸಂದರ್ಶಿಸಿ ವಿಷಯವನ್ನು ಸಂಗ್ರಹಿಸಲಾಗಿದೆ. ಕೆಲವೊಮ್ಮೆ ಕ್ರೈಸ್ತ ಚಿತ್ರ ರಚನೆ ಮಾಡಿರುವ ಅಂಶವನ್ನು ತಿಳಿಯಬೇಕಾದಲ್ಲಿ ಸಂಬಂಧಪಟ್ಟವರಲ್ಲಿ ತಿಳಿದುಕೊಳ್ಳಬೇಕಾಗುತ್ತದೆ. ನಂಬಿಕೆ, ಆಚರಣೆಗಳು ಒಂದೇ ಆಗಿದ್ದರು. ತಮ್ಮ ತಮ್ಮ ಕಾಲೇಜು, ಚರ್ಚ್, ಮನೆಗಳಲ್ಲಿ ಭಿನ್ನವಾಗಿ ಚಿತ್ರ ರಚನೆ ಮಾಡಿರುವುದನ್ನು ಈ ಭಾಗದಲ್ಲಿ ಕಾಣುತ್ತೇವೆ.

ಅದೇ ರೀತಿ ಚಿತ್ರರಚನೆಗೆ ಬಳಸುವ ಮಾಧ್ಯಮಗಳು, ವಿಧಾನಗಳು ಎಷ್ಟೋ ವೇಳೆ ಭಿನ್ನವಾಗಿರುವುದು. ಈ ಬಗೆಯ ಸಂದರ್ಶನ ಮೂಲಕವೇ ತಿಳಿಯಲು ಸಹಾಯಕವಾಗಿದೆ. ಹಾಗಾಗಿ ಕ್ರೈಸ್ತ ಚಿತ್ರಕಲೆಯ ಕುರಿತ ಈ ಅಧ್ಯಯನಕ್ಕೆ ಸಂದರ್ಶನ ಎನ್ನುವುದು ಅತ್ಯಂತ ಅಗತ್ಯವಾದದ್ದು ಆಗಿದೆ. ಹಾಗಾಗಿ ಈ ಸಂಪ್ರಬಂಧ ಕಟ್ಟುವಲ್ಲಿ ಸಂದರ್ಶನ ಅತ್ಯಂತ ಪ್ರಯೋಜನಕಾರಿಯಾಗಿದೆ.

ಆ. ಸಂಭಾಷಣೆ

ಕ್ರೈಸ್ತ ಚಿತ್ರಕಲೆಯು ಮೂಲತಃ ದೃಶ್ಯಮೂಲದ್ದು, ಈ ಕಲೆಯನ್ನು ನೋಡಿ ಆರಾಧಿಸಿ, ಪ್ರೋತ್ಸಾಹಿಸುವವರೆ ಹೆಚ್ಚು, ಆದರೆ ಈ ಕಲಾ ಸೃಷ್ಟಿಯ ಹಿಂದೆ ಅನೇಕ ವಿಷಯಗಳು ಗೌಪ್ಯವಾಗಿರುತ್ತವೆ. ಅಂತಹ ಅನೇಕ ವಿಷಯಗಳನ್ನು ತಿಳಿಯಬೇಕಾದರೆ ಸಂಭಾಷಣೆ ಅನಿವಾರ್ಯ ಮತ್ತು ಅತ್ಯಗತ್ಯ, ಹೀಗಾಗಿ ಕ್ರೈಸ್ತ ಚಿತ್ರಕಲೆಯ ಸೃಷ್ಟಿಯ ಹಿಂದೆ ಇರುವ ಕಲಾವಿದರ ಬದುಕು ಎಂತಹದು, ಚಿತ್ರಗಳ ಸೃಷ್ಟಿಯ ಹಿಂದಿನ ತುರ್ತು ಅಗತ್ಯವೇನು ಎಂಬುದನ್ನು ಸಂದರ್ಶಿಸಿದ ಆಯಾ ಪ್ರದೇಶದ ಸಮುದಾಯದ ಪ್ರಿಯರಿಂದ, ನಿರ್ಮಾತೃಗಳಿಂದ, ಆಡಳಿತಾಧಿಕಾರಿಗಳಿಂದ ತಿಳಿದುಕೊಳ್ಳಲಾಯಿತು. ಅಲ್ಲದೇ ಸೃಷ್ಟಿಯ ಹಿಂದೆ ಇರುವ ಕಥೆ, ಐತಿಹ್ಯ, ಹಾಗೂ ಸೌಂದರ್ಯಗಳನ್ನು ಹೇಳಬಲ್ಲವರನ್ನು ಮಾತಿಗೆಳೆದು ಅಧ್ಯಯನಕ್ಕೆ ಸಂಬಂಧಿಸಿದ ವಿಷಯವನ್ನು ಅವರ ಮನಸ್ಸಿಗೆ ಮುಟ್ಟಿಸಿ, ತಟ್ಟಿಸಿ ಚರ್ಚೆಯ ಮೂಲಕ ವಿಷಯ ಸಂಗ್ರಹಿಸಿಕೊಳ್ಳಲಾಗಿದೆ. ಅಲ್ಲದೇ ಈ ಮಾಧ್ಯಮದ ವಿವಿಧ ವೃತ್ತಿಕಾರ ಕಲಾವಿದರ ಮೂಲಕ ಚಿತ್ರರಚನೆಗೆ ಬಳಸುವ ಮಾಧ್ಯಮ, ಮಹತ್ವ ಮತ್ತು ವಿಶೇಷತೆ, ಚಿತ್ರ ರಚನಾಕ್ರಮ ಮತ್ತು ಅವುಗಳ ಹಿಂದೆ ಇರುವ ಪವಾಡಗಳು, ಸತ್ಯಾ-ಸತ್ಯತೆಗಳ ಪ್ರತಿರೂಪಗಳನ್ನು ಸಂಭಾಷಣೆಗಳ ಮೂಲಕವೇ ದಾಖಲಿಸಿಕೊಂಡು ಬರಹ ರೂಪಕ್ಕೆ ತಂದುಕೊಳ್ಳಲಾಗಿದೆ.

ಇ. ಧ್ವನಿ ಮುದ್ರಣ

ಕ್ರೈಸ್ತ ಚಿತ್ರಕಲೆಯನ್ನು ಪರಂಪರೆ ಮತ್ತು ಸಂಪ್ರದಾಯಗಳಿಂದ ಹೊರತುಪಡಿಸುವುದು ಸಾಧ್ಯವಿಲ್ಲ. ಪ್ರಮುಖವಾಗಿ ಚಿತ್ರರಚನೆ, ವಿನ್ಯಾಸ, ಪ್ರಮಾಣ ಬದ್ಧತೆ, ಮಾಧ್ಯಮ, ಸಂದರ್ಭಗಳು, ನಿರ್ದಿಷ್ಟ ಸ್ವರೂಪದವುಗಳಾಗಿದ್ದು, ಅವುಗಳ ಹಿಂದೆ ಐತಿಹ್ಯ ಅಡಗಿರುವುದರಿಂದ ಅವುಗಳನ್ನು ಧ್ವನಿಮುದ್ರಣಗಳ ಮೂಲಕ ದಾಖಲಿಸಿಕೊಂಡು ಬರಹಕ್ಕೆ ಬಳಸಲಾಗಿದೆ. ಹಾಗೆಯೇ ಕಲಾಕೃತಿಗಳು ಕಂಡು ಬರುವಂತಹ ಸ್ಥಳಕ್ಕೆ ಬೇಟಿಕೊಟ್ಟ ಸಂದರ್ಭದಲ್ಲಿ **ಚರ್ಚ್, ಮನೆ, ಶಾಲಾ-ಕಾಲೇಜು,** ಮಠಗಳಲ್ಲಿ ಹಿರಿಯ ಪ್ರಮುಖ ಧಾರ್ಮಿಕರನ್ನು ಸಂದರ್ಶಿಸಿ ಅವರ ಅಭಿಪ್ರಾಯಗಳನ್ನು ಧ್ವನಿಮುದ್ರಿಸಿಕೊಂಡು ಅನಂತರ ಅವುಗಳ ವಸ್ತು-ವಿಷಯಗಳನ್ನು ವಿವೇಚಿಸಿ ಬರಹಕ್ಕೆ ಪರಿವರ್ತಿಸಲಾಗಿದೆ.

ಈ. ಛಾಯಾಚಿತ್ರ

ಪ್ರಸ್ತುತ ಅಧ್ಯಯನವು ವಿಶಾಲವಾದ ಚಿತ್ರಕಲಾ ಕ್ಷೇತ್ರದಲ್ಲಿ ತನ್ನದೇ ಆದ ವಿಭಿನ್ನ ಶೈಲಿಯಲ್ಲಿ ಬೆಳೆದು ಬಂದಿರುವ ಚಿತ್ರಕಲೆಯ ಪ್ರಮುಖ ಲಕ್ಷಣಗಳನ್ನು ಹೊಂದಿರುವುದೇ ಮುಖ್ಯ ಕೇಂದ್ರಿಕೃತವಾಗಿದ್ದು, ಅದಕ್ಕಾಗಿ ಅಗತ್ಯವೆನಿಸಿದ ನೂರಾರು ಕ್ರೈಸ್ತ ಚಿತ್ರಗಳನ್ನು ಛಾಯಾಚಿತ್ರಗಳ ಮೂಲಕ ಸೆರೆಹಿಡಿದುಕೊಳ್ಳಲಾಗಿದೆ. ಅವು ಮನೆಗಳಲ್ಲಿರುವ ಚಿತ್ರಗಳಾಗಿರಬಹುದು. ಚರ್ಚುಗಳಲ್ಲಿರುವ ಚಿತ್ರಕಲಾಕೃತಿಗಳಾಗಿರಬಹುದು, ಭಿತ್ತಿಚಿತ್ರ ಹಾಗೂ ಗಾಜಿನ ಮೇಲಿನ ಚಿತ್ರಗಳಾಗಿರಬಹುದು. ಆವೆಲ್ಲಾವುಗಳನ್ನು ಆಗಾಗ ಕ್ಷೇತ್ರಕಾರ್ಯ ಕೈಗೊಂಡು ಛಾಯಚಿತ್ರಗಳ ಮೂಲಕ ದಾಖಲಿಸಿಕೊಂಡು ಅವುಗಳನ್ನು ವ್ಯವಸ್ಥಿತವಾಗಿ ವಿಭಾಗಿಸಿಕೊಂಡು ಚಿತ್ರಗಳ ಹಲವು ಆಯಾಮಗಳನ್ನು, ಶೈಲಿಗಳನ್ನು, ವಿಷಯ ವಸ್ತುಗಳನ್ನು ವಿವೇಚಿಸಲಾಗಿದೆ. ಇನ್ನೂ ಹೆಚ್ಚಿನದಾಗಿ ಈ ಕಲಾಕೃತಿಯ ಆರಾಧಕರು, ಆಸಕ್ತಿವುಳ್ಳವರ, ಸಹಾಯವನ್ನು ಇಲ್ಲಿ ಪಡೆದುಕೊಳ್ಳಲಾಗಿದೆ. ಹೀಗೆ ಸಂದರ್ಶನ ಸಂಭಾಷಣೆ, ಮತ್ತು ಛಾಯಚಿತ್ರಣವೆಂಬ ಈ ಮೂರು ಮುಖ್ಯ ಅಂಶಗಳ ಒಗ್ಗಟ್ಟಿನೊಂದಿಗೆ ಪ್ರಸ್ತುತ ಅಧ್ಯಯನವನ್ನು ಸವಿಸ್ತಾರಗೊಳಿಸಲಾಗಿದೆ.

ಉ. ಕಲಾಕೃತಿಗಳ ರಚನೆಗೆ ಬಳಸಲಾಗುವ ಮಾಧ್ಯಮಗಳ ವಿವರಣೆ

ಚಿತ್ರಕಲಾಕೃತಿಗಳ ರಚನೆಗೆ ಮಾಧ್ಯಮ ತುಂಬಾ ಮುಖ್ಯವಾದುದು. ಪ್ರಸ್ತುತ ಕ್ರೈಸ್ತ ಚಿತ್ರಕಲೆಗೆ ಬಳಸಿರುವಂತಹ ಮಾಧ್ಯಮ, ಆ ಮಾಧ್ಯಮದ ಸಾಧ್ಯತೆ, ಆ ಮಾಧ್ಯಮ ದೊರಕುವ ಮೂಲ, ಆ ಮಾಧ್ಯಮದ ಮಹತ್ವ, ಚಿತ್ರ ರಚನೆಗೆ ಬಳಸುವ ಕುಂಚ, ಬಟ್ಟೆ, ವರ್ಣ, ಪರಿಕರಗಳನ್ನು ಕುರಿತು ಕಲಾವಿದರು, ಕಲಾಸಕ್ತರಿಂದ ಪಡೆದ ಮಾಹಿತಿಗಳನ್ನು ಆಧರಿಸಿ ಅನೇಕ ಉಪಯುಕ್ತ ಅಂಶಗಳನ್ನು ವಿವೇಚಿಸಲಾಗಿದೆ.

ಊ. ಸಂಗ್ರಹಿತ ವಿಷಯಗಳ ಪಟ್ಟಿಕೆಗಳನ್ನು ಸಿದ್ಧಪಡಿಸುವಿಕೆ

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಿಕ್ಕಂತಹ ಅನುಭವ ವೇದ್ಯ, ಚಿತ್ರವೇದ್ಯ ವಿವರಗಳನ್ನು ಅಭ್ಯಾಸಕ್ಕೆ ಟಿಪ್ಪಣಿ ರೂಪದಲ್ಲಿ ಬಳಸಿಕೊಂಡಿದ್ದು, ಈ ಪ್ರಬಂಧಕ್ಕೆ ಅವಶ್ಯವಾದ ವಿಷಯಗಳ ಸಂಗ್ರಹ ಸಿಕ್ಕಂತಾಗಿ, ಜೊತೆಗೆ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡು ಅಧ್ಯಯನ ರಚಿಸಲಾಗಿದೆ.

೨. ಅನುಷಂಗಿಕ ಆಕರ ಸಾಮಗ್ರಿ

ಪ್ರಕಟಿತ-ಅಪ್ರಕಟಿತ ಸಾಹಿತ್ಯ ಕತಿಗಳು, ಸಂದರ್ಸನ, ಶಾಸನ ಸಂಪುಟಗಳು, ಡಿ.ಲಿಟ್, ಪಿಎಚ್.ಡಿ ಮಹಾಪ್ರಬಂಧಗಳು ನಿಘಂಟು, ವಿಶ್ವಕೋಶ, ಗೆಜೆಟಿಯರ್‌ಗಳು, ಪುಸ್ತಕಗಳು, ದೇಶಿಭಾಷೆಗೆ ಅನುವಾದಿಸಿದ ಅನುವಾದ ಗ್ರಂಥಗಳು, ವಾರ್ತಾಸಂಚಿಕೆಗಳು, ಪತ್ರಿಕೆ, ವಾರಪತ್ರಿಕೆ,

ನಿಯತಕಾಲಿಕೆ, ಲೇಖನಗಳು, ಸಂಪಾದನೆಗಳು, ಇವೆಲ್ಲಾವುಗಳನ್ನು ಕ್ರೈಸ್ತ ಚಿತ್ರಕಲೆ ಈ ಪ್ರಮುಖ ಅಧ್ಯಯನಕ್ಕೆ ಅನುಷಂಗಿಕ ಆಕರ ಸಾಮಗ್ರಿಯಲ್ಲಿ ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ವಿಷಯದ ಸಂಗ್ರಹಕ್ಕೆ ಕ್ಷೇತ್ರಕಾರ್ಯದ ಸಮಗ್ರ ಮಾಹಿತಿಯನ್ನು ಪಟ್ಟಿಕೆಗಳಲ್ಲಿ ಸಂಗ್ರಹಿಸಿಕೊಂಡಂತೆ ಅನುಷಂಗಿಕ ವಿವರಗಳನ್ನು ಒಂದೊಂದು ವಿಷಯಕ್ಕೊಂದರಂತೆ ಹಾಗೆಯೇ ಜಿಲ್ಲಾವಾರು ಮಾಹಿತಿ ದೊರೆಯುವಂತೆ ಬೇರೆ ಬೇರೆ ಉಪಪಟ್ಟಿಕೆಗಳಲ್ಲಿ ಟಿಪ್ಪಣಿಸಿಕೊಂಡು ಈ ಸಂಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

* * *

ಅಧ್ಯಾಯ : ಎರಡು

ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಪರಿಸರ ಹಾಗೂ ವಿವಿಧ ಧರ್ಮಗಳ ಸಮನ್ವಯ ಮತ್ತು ಲಲಿತಕಲೆಗಳು

ಕರಾವಳಿಯೆಂದರೆ ಸಮುದ್ರತೀರದ ಪ್ರದೇಶ. ಕರ್ನಾಟಕದ ತೀರ ಪ್ರದೇಶಗಳಾದ ಉತ್ತರ ಕನ್ನಡ, ಉಡುಪಿ, ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಪ್ರದೇಶ ಕರಾವಳಿ ಕರ್ನಾಟಕ. ಈ ಮೂರು ಜಿಲ್ಲೆಗಳು ಜುಲೈ ೮, ೧೭೯೯ರಲ್ಲಿ ಕೆನರಾ ಜಿಲ್ಲೆಯಾಗಿ ಉದಯಗೊಂಡು ೧೮೬೨ರ ಪೂರ್ವದಲ್ಲಿ ಒಂದೇ ಆಗಿದ್ದು, ಅದು ಮದ್ರಾಸ್ ಪ್ರಾಂತದ ಒಂದು ಭಾಗವಾಗಿತ್ತು. ಆಗ ಇದನ್ನು ಕನ್ನಡ ಜಿಲ್ಲೆಯೆಂದು ಕರೆಯಲಾಗುತ್ತಿತ್ತು. ಅನಂತರ ೧೮೬೨ರಲ್ಲಿ ಈ ಪ್ರದೇಶದ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳೆಂದು ಎರಡಾಗಿ ದಕ್ಷಿಣ ಕನ್ನಡ ಮದ್ರಾಸ್ ಪ್ರಾಂತದ ಅಧಿಪತ್ಯಕ್ಕೂ ಉತ್ತರ ಕನ್ನಡ ಜಿಲ್ಲೆ ಮುಂಬಯಿ ಪ್ರಾಂತ್ಯದ ಅಧಿಪತ್ಯಕ್ಕೂ ಸೇರಿದವು. ಅನಂತರ ಇವೆರಡೂ ಜಿಲ್ಲೆಗಳೂ ೧೯೫೬ ರಿಂದ ಕರ್ನಾಟಕದ ಜಿಲ್ಲೆಗಳಾದವು. ೧೯೯೭ ರಲ್ಲಿ ಜಿಲ್ಲೆಗಳ ಪುನರ್ವಿಂಗಡಣೆ ಮಾಡಿದಾಗ ದಕ್ಷಿಮ ಕನ್ನಡ ಮತ್ತು ಉಡುಪಿ ಎಂದು ಎರಡು ಜಿಲ್ಲೆಗಳಾದವು. ಹೀಗೆ ಒಂದು ಕಾಲದಲ್ಲಿ ಒಂದೇ ಆಗಿದ್ದ ಕನ್ನಡ ಜಿಲ್ಲೆ ಮೂರು ಜಿಲ್ಲೆಗಳಾಗಿ ಸೀಳಲ್ಪಟ್ಟರೂ, ಈ ಜಿಲ್ಲೆಗಳ ಜನ ಜೀವನ - ಸಂಸ್ಕೃತಿ ಒಂದೇ ಬಗೆಯದ್ದಾಗಿದೆ. ದಕ್ಷಿಣ ಕನ್ನಡ ಸಂಸ್ಕೃತಿಯ ಮೇಲೆ ಕನ್ನಡ ಸೋದರ ಭಾಷೆಗಳಾದ ತುಳು, ಕೊಡಗು, ಮಲೆಯಾಳಿ, ಸಂಸ್ಕೃತ ಹಾಗೂ ಉತ್ತರ ಕನ್ನಡ ಸಂಸ್ಕೃತಿಯ ಮೇಲೆ ಕನ್ನಡೇತರ ಕೊಂಕಣಿ ಭಾಷೆ ಪ್ರಭಾವ ಕೊಂಚಮಟ್ಟಿಗೆ ಕಂಡು ಬಂದರೂ ಒಟ್ಟಾರೆ ಮೂರು ಜಿಲ್ಲೆಗಳಲ್ಲಿ ಕನ್ನಡ ಸಂಸ್ಕೃತಿಯೇ ಪ್ರಧಾನವಾಗಿ ಹರಿಯುವುದನ್ನು ಕಾಣಬಹುದಾಗಿದೆ.

ವನಸಿರಿ, ಜಲಸಿರಿ, ಗಿರಿ ಪಂಕ್ತಿಗಳ ಮೋಹಕ ನಡೆ ಕರಾವಳಿ ಕನ್ನಡ ಜಿಲ್ಲೆಗಳದ್ದು. ಉತ್ತರ ಕನ್ನಡ, ದಕ್ಷಿಣ ಕನ್ನಡಗಳ ನಡುವೆ ಈಗ ಉಡುಪಿಯು ಹೊಸ ಜಿಲ್ಲೆಯಾಗಿದೆ. ಒಂದಕ್ಕಿಂತ ಇನ್ನೊಂದು ನೈಸರ್ಗಿಕ ಸೊಬಗಿನಿಂದ ಕೂಡಿದ ಅದ್ಭುತ ಪ್ರವಾಸಿ ನೆಲೆಗಳು. ಒಂಡು ಕಡೆ ಭೋರ್ಗರೆಯುವ ಅರಬ್ಬಿ ಸಮುದ್ರ ಇನ್ನೊಂದು ಬದಿ ನಿಸರ್ಗನಿಧಿ, ಪಶ್ಚಿಮಘಟ್ಟ, ಹಸಿರು ಕಾಡಿನೊಳಗೆ ಅಡಿಗಿಕೊಂಡು ಕಡಲಕಡೆಗೆ ಮುನ್ನುಗ್ಗುವ ನಾನಾ ತೊರೆ, ಹೊಳೆ, ನದಿಗಳು, ಈ ನೀರ ಹರಿವಿನ ಎಡಬದಿಗಳಲ್ಲಿ ಸೊಂಪಾಗಿ ಬೆಳೆದ ತೆಂಗು-ಭತ್ತದ ಗದ್ದೆಗಳ

ನಡುವೆ ತಲಪಾಡಿಯಿಂದ ಪೈಂದೂರುವರೆಗೆ ಸದ್ದುಗದ್ದಲವಿರುವ ರಾಷ್ಟ್ರಿಯ ಹೆದ್ದಾರಿ ನಿತ್ಯ ನಿರಂತರ ಕದನ ರೇಖೆ. ಬಂದರು, ವಿಮಾನ ನಿಲ್ದಾಣ, ಕೊಂಕಣ ರೈಲು, ಮೀನುಗಾರಿಕೆಗೆ ಬೆವರಿಳಿಸುವ ಜನ ಸಾಹಸದ ಬದುಕು ಗುರಿ ಸಾಧಿಸುವ ತವಕ ಹಂಗು ಹಠ ಹಿಡಿದು ಪಣಕ್ಕೊಡ್ಡುವ ಬದುಕು. ನಿರಂತರವಾಗಿ ಸಾಗುತ್ತಾ ಇದೆ. ಕರಾವಳಿ ಜಿಲ್ಲೆಗಳ ಸಾಂಸ್ಕೃತಿಕ ಪರಿಸರ ವರ್ಣರಂಜಿತ. ಇಲ್ಲಿಯ ಸಂಸ್ಕೃತಿ ಪರಂಪರೆ ಚೇತೋಹಾರಿಯಾಗಿ, ಬಹುಬಗೆಯ ಜನಾಂಗ -ಬುಡಕಟ್ಟು, ಜಾನಪದ ಲಾಲಿತ್ಯ, ವೈವಿದ್ಯ, ಯಕ್ಷಗಾನ, ಸಂಗೀತ, ಕೋಟೆಕೊತ್ತಲ, ಖತೇರಿ-ಬಸದಿಗಳು, ಚರ್ಚು-ದೇವಾಲಯ, ಮಸೀದಿಗಳ ಶಿಲ್ಪ-ಕಾಷ್ಠ ವೈಭವಗಳು, ಜನರ ಭಾಷೆ ಬಣ್ಣ-ಬದುಕು, ಎಲ್ಲನ್ನೂ ವೈಶಿಷ್ಟ್ಯಪೂರ್ಣ, ವ್ಯಾಪಾರಕ್ಕಾಗಿ ಬಂದ ವಿದೇಶಿಯರು ಈ ನೆಲದಲ್ಲಿ ಇನ್ನೂ ತಮ್ಮ ಸಂಸ್ಕೃತಿಯ ಸಾರವನ್ನು ಉಳಿಸಿದ್ದಾರೆ. ಮೇಜರ್ ಮನ್ರೊ ಕೆನರಾ ಜಿಲ್ಲೆಯ ಮೊಟ್ಟಮೊದಲ ಜಿಲ್ಲಾಧಿಕಾರಿ. ಈ ಮೂರು ಜಿಲ್ಲೆಗಳು ಸೇರಿ ಕರಾವಳಿಯ ಎರಡುನೂರು ಕಿ.ಮೀ. ಇಡೀ ರಾಜ್ಯಕ್ಕೊಂದು ಪ್ರವಾಸಿ ಭಾಗ್ಯವಾಗಿದೆ, ಇಲ್ಲಿ ಪ್ರವಾಸೋದ್ಯಮಕ್ಕೆ ವ್ಯಾಪಕ ಅವಕಾಶಗಳಿವೆ. ಉಲ್ಲಾಳ ಸೋಮೇಶ್ವರ, ಬೆಂಗೆ, ಪಣಂಬೂರು, ಸೆಂಟ್‌ಮೇರಿಸ್ ದ್ವೀಪ, ಮಲ್ಪೆ, ಗಂಗೊಳ್ಳಿ, ಮರವಂತೆ, ಮುರುಡೇಶ್ವರ, ದ್ವಾರಕೇಶ್ವರ, ಗೋಕರ್ಣ, ಅಂಕೋಲಾ, ಕುಮಟ, ತೋರ್ಮಗಡ, ಉಲ್ಲಾಳ ಹೀಗೆ ಇನ್ನೂ ಅನೇಕ ಮಂಜೇಶ್ವರದಿಂದ ಸದಾಶಿವ ಗಡದವರೆಗೆ ಉಕ್ಕಿ ಹರಿಯುವ ತೋರೆ ಜಲಪಾತಗಳಿವೆ.

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರದ "ಅಗಡಿ ಆಟ" ವಿಶೇಷವಾಗಿದೆ. ದೊಡ್ಡಾಟ ಮಾದರಿಯ ಹೊಸ ಪ್ರಯೋಗವಾದ ಅಗಡಿ ಆಟ ಕೊಂಡ್ಲಿ ಮತ್ತು ಹೊಸೂರು ಗ್ರಾಮಗಳಲ್ಲಿ ಜನಪ್ರಿಯವಾಗಿದೆ. "ಡೊಳ್ಳುಕುಣಿತ" ಮತ್ತು ಕೋಲಾಟ ಸಹ ಅಷ್ಟೇ ಪ್ರಸಿದ್ಧಿಯಾಗಿವೆ. ಹಬ್ಬ ಹರಿದಿನಗಳಲ್ಲಿ ಹುಲಿವೇಷ, ಛದ್ಮವೇಷಗಳೂ ಇರುತ್ತವೆ. ಮುಂಡುಗೊಡದಲ್ಲಿ ಜಾನಪದ ಕಲೆಗಳಾದ ಲಂಬಾಣಿಗಳ ಕುಣಿತ ಮತ್ತು ಗೌಳಿಗಳ ಸಾಂಪ್ರದಾಯಿಕ ನೃತ್ಯ ಹೆಸರುವಾಸಿಯಾಗಿವೆ. ಯಲ್ಲಾಪುರ ತಾಲೂಕಿನಲ್ಲಿ ಹವ್ಯಕರ ಯಕ್ಷಗಾನ ತಾಳ ಮದ್ದಲೆ, ಹಳೇ ಪೈಕರ ಡೊಳ್ಳಾಟ, ಬಲಿಯೆಂದ್ರನ ಜಾನಪದ ಕೂಟ ಕುಣುಬಿ ಜನರ ಗುಮಟಿ ಪಾಂಗ, ಕುಣುಬಿ ದಶಾವತಾರ ಸುಗ್ಗಿಕುಣಿತ, ಮರಾಠಿಗರ ಲಾವಣಿ, ಕೋಲಾಟ, ಹಾಗೂ ಸಿದ್ದೀ ಜನರ ಸಂಗ್ಯಾಬಾಳ್ಯಾ ಜಾನಪದ ಕುಣಿತ ಆಯಾ ಜನಾಂಗದ ಕಲಾಸಕ್ತಿಯ ಸಂಸ್ಕೃತಿಯ ರೀತಿಯನ್ನು ತೋರಿಸುತ್ತಾ ಬಂದಿವೆ.

ಸಿರ್ಸಿ ತಾಲ್ಲೂಕಿನಲ್ಲಿ ಯಕ್ಷಗಾನ ಮತ್ತು ಬೇಡರ ವೇಷ ಜನಪ್ರಿಯ ಜಾನಪದ ಕಲೆಗಳಾದರೆ, ಜಾತ್ರೆಯ ವೇಳೆಯಲ್ಲಿ ಕೋಲ, ನಾಗಮಂಡಲ, ಭೂತ ಭೂತಾರಾಧನೆ, ಸುಗ್ಗಿಕುಣಿತ ಮತ್ತು ಭೀತಿ ಹುಟ್ಟಿಸುವ ಬೇಡರ ವೇಷ, ಜನಾಕರ್ಷಣೆ ಕಲೆಗಳಾಗಿವೆ. ಕೆಂಪು

ವರ್ಣದ ನಿಕ್ಕರ ಅಂಗಿ ಮೇಲೆ ವಸ್ತ್ರ ಸೊಂಟಕ್ಕೆ ಹಸಿರು ಬಟ್ಟೆ, ಕಾಲಲ್ಲಿ ಗೆಜ್ಜೆ, ಕೊರಳಲ್ಲಿ ಗಂಟೆಸರ, ಕೆಂಪು ಬಣ್ಣದಲ್ಲಿ ಎದ್ದಿ ಉಬ್ಬಿಸಿಟ್ಟ ಹತ್ತಿರ ಮೂಗು, ತಲೆಯಲ್ಲಿ ನವಿಲು ಗರಿಯ ಕಿರೀಟ, ಹಿಂಬದಿಗೆ ನವಿಲುಗರಿಯ ಕುಚ್ಚ ಧರಿಸುತ್ತಾರೆ. ಸಮಾಂತವಾಗಿ ಕುಣಿಸುವ ಕೈಗಳಲ್ಲಿ ಒಂದರಲ್ಲಿ ಖಡ್ಗ ಇನ್ನೊಂದರಲ್ಲಿ ಡಾಲು, ಆವೇಶ ಭರಿತ ವೇಷ ನಿಯಂತ್ರಿಸಲು ಎರಡು ತೋಳುಗಳಿಗೆ ಕಟ್ಟಿದ ಹಗ್ಗ ಇದನ್ನು ಹಿಡಿಯುವ ದಾಂಡಿಗರು ತ್ರಿತಾಳದಲ್ಲಿ ಹಲಗೆಯ ಬಡಿತದೊಂದಿಗೆ ಹೆಜ್ಜೆ ಹಾಕುತ್ತಾ ನೋಡುಗರಲ್ಲಿ ರುದ್ರ ನೃತ್ಯ ಭೀತಿಯ ಸೃಷ್ಟಿ ಏರ್ಪಡಿಸುತ್ತಾರೆ.

ಅಂಕೋಲಾ ತಾಲೂಕಿನ ಜಾನಪದ ಕಲೆಗಳಲ್ಲಿ ಗಮ್ಮಟೆ, ಪಾಂಗುಲ, ಪುಗಡಿ, ಸುಗ್ಗಿಕುಣಿತ, ಮೂಡಲ ಪಾಯ, ಯಕ್ಷಗಾನ ಮತ್ತು ವಿವಿಧ ಜನಾಂಗಗಳ ಕಲೆಗಳನ್ನು ಈ ಭಾಗದಲ್ಲಿ ಕಾಣಬಹುದು. ಕುಮುಟ ತಾಲೂಕು, ವಿವಿಧ ಧರ್ಮಗಳಲ್ಲಿ ಇರುವ ವೈಶಿಷ್ಟ್ಯಪೂರ್ಣವಾದ ಜನಪದ ಕಲೆಯನ್ನು ನೋಡಬಹುದು. ಇಲ್ಲಿನ ಹಾಲಕ್ಕಿ ಒಕ್ಕಲಿಗರ ಹಗಣ ಪ್ರಸಿದ್ಧವಾಗಿದೆ. ಸುಗ್ಗಿಯ ಪದ, ಸುಗ್ಗಿಯ ಕುಣಿತ, ಮತ್ತು ಯಕ್ಷಗಾನ ಪ್ರಸಿದ್ದಿಯಾಗಿವೆ. ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ನಾಗಮಂಡಲ, ಭೂತರಾಧನೆ, ಸೂತ್ರದ ಗೊಂಬೆ, ಯಕ್ಷಗಾನ ಬಯಲಾಟ, ವಾಣಾರ್ರ ಆಟದಂತಹ ಪ್ರಾಚೀನ ಜನಪದ ಕಲೆಗಳು ಜನಪ್ರಿಯವಾಗಿವೆ. ಮಂಗಳೂರು ಜಿಲ್ಲೆಯಲ್ಲಿ ನಾಗಾರಾಧನೆ, ಭೂತಾರಾಧನೆ, ಹಾಗೂ ಲಲಿತ ಕಲೆಗಳಾದ ರಂಗೋಲಿ, ಹಚ್ಚೆ, ಮೆಹಂದಿ, ಕಸೂತಿ, ಚಿತ್ರಕಲೆ, ಶಿಲ್ಪಕಲೆ ಮತ್ತು ಜನಪದ ಕಲೆಗಳು ಪ್ರಸಿಧ್ಧಿಯಾಗಿವೆ.

ಮಂಗಳೂರಿನಿಂದ ಕಾರವಾರದವರೆಗೆ ಕರ್ನಾಟಕದ ಕರಾವಳಿ ಪ್ರದೇಶವೆಂದು ಭೌಗೋಳಿಕವಾಗಿ ಕರೆಯಲಾಗಿದೆ. ಸಾಂಸ್ಕೃತಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿರುವುದು ಸುಸ್ಪಷ್ಟ. ಪಶ್ಚಿಮದ ಉದ್ದಕ್ಕೂ ವ್ಯಾಪಿಸಿಕೊಂಡಿರುವ ಭೋರ್ಗರೆಯುವ ಕಡಲು, ಅಗಣಿತ, ಕೆರೆ, ತೊರೆ, ನದಿಗಳು, ತೆಂಗು, ಹಸಿರುಹೊದ್ದ ಭತ್ತದ ಗದ್ದೆಗಳು ನೋಡುಗನ ಚಿತ್ತ ಬಿತ್ತಿಯಲ್ಲಿ ವರ್ಣಮಯವಾಗಿ ಕಂಗೊಳಿಸುತ್ತವೆ. ಹೆಜ್ಜೆಗೊಂದರಂತೆ ಗೋಚರಿಸುವ ದೈವ, ದೇವರುಗಳ ಗುಡಿ ಗೋಪುರಗಳು ಬೃಹತ್ ದೇವಾಲಯಗಳು. ಚರ್ಚುಗಳು ಮಸೀದಿಗಳು, ಈ ಪ್ರದೇಶದ ಜನರ ಸಾಮಾಜಿಕ ಸೌಹಾರ್ದತೆಯ ಪ್ರತೀಕವಾಗಿ ಮೆರೆಯುತ್ತವೆ. ಕತ್ತಲಾದರೆ ಸಾಕು ವರ್ಷದ ಎಂಟು ತಿಂಗಳು ಮೂಲೆ ಮೂಲೆಗಳಲ್ಲಿ ರಿಂಗಟಿಸುತ್ತವೆ. ಯಕ್ಷಗಾನ ಚೆಂಡೆಯ ನಾದ, ಭಾದ್ರಪದದ ಬರುವಿನೊಂದಿಗೆ ತೊಡಗುವ ಕೋಲ, ಕಂಬಳ, ನೇಮ, ಜಾತ್ರೆ, ನಾಗಮಂಡಲ, ಡಕ್ಕೆ ಬಲಿಗಳ ಸಡಗರ ಕೊನೆಗೊಳ್ಳುವುದು ವೈಶಾಖದ ಉರಿಯಲ್ಲಿ ಮುಂದಿನ ಮೂರು ತಿಂಗಳು ಭುಸು ಗುಟ್ಟುವ ತೆಂಕಣಗಾಳಿಯ ರುದ್ರ ರಮಣೀಯ ಆಟ!

ಆಚಾರ ಭಾಷೆಗಳಲ್ಲಿ ಬಹುತ್ವವನ್ನು ಇತ್ಯಾತ್ಮಕವಾಗಿ ಬಳಸಿಕೊಂಡಿರುವ ಇಲ್ಲಿನ ಜನರು ಸಾಹಸಿಗಳು, ಶ್ರಮ ಜೀವಿಗಳು, ಹಾಗೂ ಛಲಗಾರರು. ಹುಟ್ಟಿದ ಊರನ್ನು ತೊರೆದು ಹೊರನಾಡಿನಲ್ಲಿ ನೆಲೆ ನಿಂತಾಗಲೂ ಸಾಮುದಾಯಿಕ ಸಾಮರಸ್ಯದಿಂದ ಉದ್ಯಮಶೀಲತೆಯನ್ನು ಸಾಧಿಸುವಲ್ಲಿ ಕರಾವಳಿಯ ಜನರು ಯಶಸ್ವಿಯಾಗಿದ್ದಾರೆ. ದೂರದ ತಮಿಳು ನಾಡಿರಲಿ, ನೆರೆಯ ಕೇರಳ, ಮಹಾರಾಷ್ಟ್ರಗಳಿರಲಿ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಿಗೆ ಇಲ್ಲಿನ ಅಧ್ಯಯನಗಳು ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಸಾಹಿತ್ಯ, ಸಂಗೀತ, ಯಕ್ಷಗಾನ, ಚಿತ್ರಕಲೆ, ನಾಟಕ, ಪತ್ರಿಕೋದ್ಯಮ, ಶಿಕ್ಷಣ ವೈದ್ಯಕೀಯ ರಂಗಗಳಿಗೆ ಪ್ರತಿಭಾ ಸಂಪನ್ನರನ್ನು ನೀಡಿದ ನೆಲ ಇದಾಗಿದೆ.[೧]

ಕರಾವಳಿ ಪ್ರದೇಶದ ಭೌಗೋಳಿಕ ಹಿನ್ನೆಲೆ

ಕರಾವಳಿ ಪ್ರದೇಶ ಏರು ತಗ್ಗುಗಳಿಂದ ಕೂಡಿದ ಮಲೆನಾಡು ಮಟ್ಟಸವಾದ ಬಯಲು ನಾಡಿದು. ಸುಮಾರು ೧೯೨೨೦೪ ಚ.ಕಿ.ಮೀ ವಿಸ್ತೀರ್ಣ ಹೊಂದಿದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಈ ಭಾಗದ ತೀರ ಪ್ರದೇಶವೇ ಕರಾವಳಿ ಒಂದು ಕಡೆ ಬಹು ವಿಶಾಲವಾದ ಅರಬ್ಬೀ ಸಮುದ್ರ, ಇನ್ನೊಂದು ಕಡೆ ಕಡಿದಾದ ಪಶ್ಚಿಮ ಘಟ್ಟ ಪ್ರದೇಶವನ್ನು ಹೊಂದಿ ನೈಸರ್ಗಿಕವಾಗಿ ಭಿನ್ನತೆಯನ್ನು ಪಡೆದಿದೆ. ಇಲ್ಲಿಯ ಜನರ ಮುಖ್ಯ ಕಸುಬು ವ್ಯವಸಾಯ ಹಾಗೂ ಪಶುಪಾಲನೆ. ತೋಟದ ಬೆಳೆಗಳೆಂದರೆ ತೆಂಗು, ಅಡಿಕೆ, ಕಾಪಿ ಮತ್ತು ಟೀ, ಮುಂತಾದವುಗಳು. ಅಘನಾಸಿನಿ, ವರಾಹಿ, ಬೇಡ್ತಿ, ಕಾಳಿ, ತದಡಿ, ಗಂಗಾವಳಿ, ಶರಾವತಿ, ಹೇಮಾವತಿ ಹಾಗೂ ನೇತ್ರಾವತಿ ಮುಖ್ಯ ನದಿಗಳು ಹರಿಯುತ್ತವೆ. ಸುಮಾರು ೩ ಸಾವಿರ ಮೀ. ನಷ್ಟು ಮಳೆ ಆಗುತ್ತದೆ. ಇಲ್ಲಿನ ದಟ್ಟ ಕಾಡಿನಲ್ಲಿ ತೇಗ, ಬೀಟೆ, ನೀಲಗಿರಿ, ಕೂಲಿ, ಸಾಗವಾನಿ, ಹಲಸು, ನಂದಿ, ಮತ್ತಿ, ಹೊನ್ನೆ, ಬೇಳಾಲೆ, ಮಾವು, ಶ್ರೀಗಂಧ, ಜಂಬೆ, ಎರಿತ್ತೇನ, ದೊಡ್ಡಿಮರ, ತಡಬಾಡ, ಕಾಡುಕೋಗಿಲೆ, ಕವಲು ಮರ, ನೆಲ್ಲಿ, ಬಿದಿರು, ಮತ್ತು ಬೆತ್ತ ಮುಂತಾದ ಗಿಡ-ಮರಗಳಿವೆ. ಕಾಡೆಮ್ಮೆ, ಆನೆ, ಜಿಂಕೆ, ನವಿಲು ಬಾವುಲಿಗಳು, ಆಮೆ, ಕೋತಿ, ಕರಿಕರಡಿ, ಮುಂಗಸಿ, ಕಾಡುಹಂದಿ, ಕಡವೆ, ನಾಯಿ, ಕಾಡುನಾಯಿ, ಹುಲಿ, ಚಿರತೆ, ನರಿ, ಉಡ, ಹಾವು, ಹೀಗೆ ಇನ್ನೂ ವಿವಿಧ ಜಾತಿಯ ಸಣ್ಣ ದೊಡ್ಡ ಪ್ರಾಣಿಗಳನ್ನು ನೋಡಬಹುದಾಗಿದೆ. ಇನ್ನು ಕಡಲ ತೀರಪ್ರದೇಶದಲ್ಲಿ ಹಾವು, ಮೊಸಳೆ, ತಿಮಿಂಗಲ, ಮೀನು ಕಡಲಾಮೆ. ಸೀಗೆಕಾಯಿ, ಹಸ್ತಿದಂತ, ಜೇನುತುಪ್ಪ, ಮೇಣ, ಶ್ರೀಗಂಧ, ಮೆಣಸು, ಗೋಡಂಬಿ, ವೀಳ್ಯಗದೆಲೆಯ ಬಳ್ಳಿ ಮುಂತಾದವುಗಳನ್ನು ಹೇರಳವಾಗಿ ಬೆಳೆಯುತ್ತಾರೆ.

ಮಾನವ ಸಂಘಜೀವಿ ಒಂದನ್ನು ಬಿಟ್ಟು ಮತ್ತೊಂದಿಲ್ಲ ಎನ್ನುವಂತೆ ಒಬ್ಬರನ್ನು ಬಿಟ್ಟು ಇನ್ನೊಬ್ಬ ಇರುವಂತಿಲ್ಲ. ಪ್ರಕೃತಿಯ ಮಡಿಲಲ್ಲಿ ಬೆಳೆದು; ಕೊನೆಗೆ ಮರಣ ಹೊಂದುವುದು

೧. ಡಾ. ಆನಂದ ಪೂಜಾರ್ : ಕರಾವಳಿ ಕರ್ನಾಟಕದ ಕಾವಿಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ, ಪುಟ-೩೬

ಈತನಿಗೆ ಬಿಟ್ಟಿಲ್ಲ. ದೇಶದ ನಾನಾ ಭಾಗದಲ್ಲಿ ಮೂಲೆ ಮೂಲೆಗಳಲ್ಲಿ ನೇಕ ಬುಡಕಟ್ಟು ಸಮುದಾಯಗಳು ಕಂಡುಬರುತ್ತವೆ. ಅದರಂತೆ "ಈ ಸುತ್ತಮುತ್ತಲ ಈ ಪ್ರದೇಶದಲ್ಲಿ ಕಾಡಿಯರು, ಕಾಡುಕುರುಬರು. ಕೊರಚರು, ಕೊರಗರು, ಜೇನುಕುರುಬರು, ಬೇಡರು, ಹಾಲಕ್ಕಿ ಒಕ್ಕಲಿಗರು, ಹಸಲರು ಕುಣಬಿಯರು, ಕುಡಿಯರು, ಇನ್ನೂ ಮುಂತಾದ ಬುಡಕಟ್ಟು ಜನರು ಕಂಡು ಬರುತ್ತಾರೆ. ಇವರು ಹೆಚ್ಚಾಗಿ ಅರಣ್ಯಗಳನ್ನು ಅವಲಂಬಿಸಿ ಬದುಕು ನಡೆಸುತ್ತಿದ್ದಾರೆ.[೨]"

ಕರಾವಳಿ ಕರ್ನಾಟಕದ ಭೌಗೋಳಿಕ ಸನ್ನಿವೇಶ

ಕರಾವಳಿ ಪ್ರದೇಶವು ಪಶ್ಚಿಮದಲ್ಲಿರುವ ಅರಬ್ಬಿಸಮುದ್ರ ಹಾಗೂ ಪೂರ್ವದಲ್ಲಿರುವ ಪಶ್ಚಿಮ ಘಟ್ಟಗಳ ಪ್ರಾಕೃತಿಕ ಗಡಿಗಳ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹರಡಿದೆ. ಪಶ್ಚಿಮ ಕಿನಾರೆಯನ್ನು ತೆರೆ ನೊರೆಗಳಿಂದ ಬೋರ್ಗರೆಯುವ ಅರಬ್ಬಿ ಸಮುದ್ರವು ಸದಾ ತೊಳೆಯುತ್ತಿದ್ದರೆ, ಪೂರ್ವ ಗಡಿಯ ಎತ್ತರದ ನೀಲವರ್ಣದಿಂದ ಕಂಗೋಳಿಸುವ ಪಶ್ಚಿಮ ಘಟ್ಟಗಳು ಜಿಲ್ಲೆಯ ಸೌಂದರ್ಯವನ್ನು ಹೆಚ್ಚಿಸಿವೆ. ಈ ಪರ್ವತಗಳು ವಿವಿಧ ಜಾತಿಯ ದೋಪು, ಕಾಡುತ್ಪತ್ತಿ, ಮತ್ತು ಖನಿಜಗಳಿಂದ ಸಮೃದ್ಧವಾಗಿದ್ದು, ಕರ್ನಾಟಕದ ಹೆಚ್ಚಿನ ಎಲ್ಲಾ ನದಿಗಳ ಜನ್ಮಸ್ಥಾನವಾಗಿರುವುದರಿಂದ ಈ ಪರ್ವತಗಳನ್ನು "ಮುಚ್ಚಿರುವ ಸೌಭಾಗ್ಯದ ಬಾಗಿಲು"ಗಳೆಂದು ಕರೆಯಲಾಗುತ್ತಿದೆ. ಇಲ್ಲಿ ಕೊಲ್ಲೂರು ಬಳಿಯ ಕೊಡಚಾದ್ರಿ ಮತ್ತು ಸುಬ್ರಹ್ಮಣ್ಯ ಬಳಿಯ ಕುಮಾರ ಪರ್ವತ ಅತ್ಯುನ್ನತವಾದ ಪ್ರಸಿದ್ಧ ಪರ್ವತ ಶೃಂಗಗಳು.

ಪಶ್ಚಿಮ ಘಟ್ಟಗಳನ್ನು ಸಹ್ಯಾದ್ರಿ ಪರ್ವತಗಳೆಂದು ಕರೆಯಲಾಗುತ್ತದೆ. ಇವುಗಳ ಉನ್ನತಿಯಿಂದಾಗಿ ಹಾಗೂ ಮುಗುಲಲ್ಲಿರುವ ದಟ್ಟವಾದ ಕಾಡುಗಳಿಂದಾಗಿ ಕರಾವಳಿ ಪ್ರದೇಶಕ್ಕೆ ವಿಪರೀತ ಮಳೆ ಬರುವಂತಾಗಿದೆ. ಆದುದರಿಂದಲೇ ಇಲ್ಲಿರುವ ಆಗುಂಬೆಯನ್ನು ಕರಾವಳಿಯ ಚಿರಾಪುಂಜಿ ಎನ್ನುತ್ತಾರೆ. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಮಳೆಗಾಲದಲ್ಲಿ ಕೇಸರಿ ಬಣ್ಣದ ನೀರಿನಿಂದ ಹರಿಯುವ ಇಲ್ಲಿಯ ಮುಖ್ಯ ನದಿಗಳು ನೇತ್ರಾವತಿ, ಸ್ವರ್ಣಾ, ಸೀತಾ, ಚಕ್ರಾ, ಸೌಪರ್ಣಿಕ ಶಾಂಭವಿ ಪಲ್ಗುಣಿ. ಇವು ಇಲ್ಲಿನ ಕೃಷಿಗೆ ಹಾಗೂ ಜೀವನಕ್ಕೆ ಬೇಕಾದ ನೀರನ್ನು ಒದಗಿಸುವದಲ್ಲದೇ ಹಂಚು, ಮಡಕೆ, ಮತ್ತು ಇಟ್ಟಿಗೆಗಳನ್ನು ತಯಾರಿಸಲು ಬೇಕಾದ ಆವೆ ಮಣ್ಣನ್ನು ಒದಗಿಸುತ್ತದೆ. ಹಿಂದಿನ ಕಾಲದಲ್ಲಿ ನೇತ್ರಾವತಿ, ಸ್ವರ್ಣಾ, ಸೀತಾ ಮತ್ತು ಚಕ್ರಾ ನದಿಗಳು ಕೆಲವು ಕಿಲೋಮೀಟರ್ ಜಲಮಾರ್ಗವನ್ನು ಒದಗಿಸುತ್ತಿದ್ದವು. ಕರಾವಳಿಯಲ್ಲಿ ಅತ್ಯಂತ ದಕ್ಷಿಣಕ್ಕಿರುವ ಮಂಗಳೂರು ಒಂದು ಅಂತರಾಷ್ಟ್ರೀಯ ಬಂದರು. ಕರ್ನಾಟಕದ ಸಮಗ್ರ ಅಂತರಾಷ್ಟ್ರೀಯ ವ್ಯಾಪಾರಕ್ಕೆ ಮುಖ್ಯದ್ವಾರವಾಗಿದೆ. ಕರಾವಳಿ ಪ್ರದೇಶವು

೨. ಸ.ಚಿ. ರಮೇಶ್, (ಸಂ) : ಮಾಟ-ಮಂತ್ರ-ಮೋಡಿ, ಪುಟ-೧೮

ಸುಮಾರು ೨೪° ಡಿಗ್ರಿ ಮತ್ತು ೨೫° ಡಿಗ್ರಿ ಪೂರ್ವ ಅಕ್ಷಾಂಶ ಹಾಗೂ ೧೨ ಮತ್ತು ಸುಮಾರು ೧೪ ಡಿಗ್ರಿ ಉತ್ತರ ರೇಖಾಂಶದಲ್ಲಿ ಹರಡಿರುವುದರಿಂದ ಪಶ್ಚಿಮ ಘಟ್ಟಗಳಿಂದಾಗಿ ಹಾಗೂ ಪಶ್ಚಿಮದಲ್ಲಿರುವ ಅರಬ್ಬಿಸಮುದ್ರದಿಂದಾಗಿ ಹವಾಗುಣವು ತಂಪಾಗಿರುವಂತಾಗಿದೆ. ಸಾಮಾನ್ಯವಾಗಿ ಮಧ್ಯಾಹ್ನದ ನಂತರ ಸಮುದ್ರದ ಗಾಳಿಯು ಈ ಪ್ರದೇಶದ ಉದ್ದಗಲಕ್ಕೆ ಬೀಸುವುದರಿಂದ ಇದು ಸಾಗರಿಕ ಹವಾಗುಣವನ್ನು ಹೊಂದಿದೆ. ಎನ್ನಬಹುದು. ಈ ಹವಾಗುಣವು ಇಲ್ಲಿಯ ಜನರನ್ನು ತೀಕ್ಷ್ಣಮತಿಗಳನ್ನಾಗಿ ಸದಾ ಕಾರ್ಯೋತ್ಸಾಹಿಗಳಾಗಿ ಹಾಗೂ ಹಾಗೂ ಸ್ಪುರದ್ರೂಪಿಗಳನ್ನಾಗಿಯೂ ಮಾಡಿದೆ.

ಇಲ್ಲಿಯ ಪ್ರಕೃತಿಯ ಸನ್ನಿವೇಶ ಹಾಗೂ ಹವಾಗುಣದ ಪ್ರಭಾವದಿಂದಾಗಿ ಪ್ರಾಚೀನ ಕಾಲದಲ್ಲೂ ಇಲ್ಲಿ ಉನ್ನತ ಮಟ್ಟದ ನಾಗರೀಕತೆ ಮತ್ತು ಸಂಸ್ಕೃತಿಗಳು ಬೆಳೆದಿದ್ದವು. ಪರುಶುರಾಮನ ಕಾಲವೆಂಬ ಅತಿ ಪ್ರಾಚೀನ ಸಮಯದಲ್ಲಿ ಇಲ್ಲಿಯ ದಟ್ಟವಾದ ಕಾಡುಗಳನ್ನು ಕಡಿದು ಜನವಾಸವನ್ನು ಪ್ರಾರಂಭಿಸಲಾಗಿತ್ತು. ಆದುದರಿಂದ ಇಲ್ಲಿ ಪ್ರಾಚೀನ ಶಿಲಾಯುಗದ ಮತ್ತು ಕಬ್ಬಿಣ ಶಿಲಾಯುಗದ ಜನಜೀವನದ ಅವಶೇಷಗಳು ಪುತ್ತೂರು, ಬಡಕಜ್ಜಿಕಾರು, ಕಾರ್ಕಳ ಬಳಿಯ ಗುಹೆಗಳಲ್ಲಿ ಮೂಡಬಿದ್ರೆಯ ಬಳಿಯ ಕೊಡಂಗಲ್ಲು, ಬೆಳ್ತಂಗಡಿ ತಾಲೂಕಿನ ಪಾಂಡವರ ಕಲ್ಲು ಮೊದಲಾದೆಡೆ ಕಂಡುಬಂದಿದೆ. ಕ್ರಿ.ಪೂ.ದಲ್ಲಿ ಈ ಪ್ರದೇಶಕ್ಕೆ ಗ್ರೀಕ್, ರೋಮ್, ಈಜಿಪ್ಟ್ ಮೊದಲಾದ ದೇಳಗಳೊಡನೆ ವ್ಯಾಪಾರ ವಾಣಿಜ್ಯ ಸಂಬಂಧವಿದ್ದುದಕ್ಕೆ ಹಲವಾರು ಪುರಾವೆಗಳು ದೊರೆಯುತ್ತವೆ.

ಅಶೋಕನ ಶಾಸನದಲ್ಲಿ ಉಲ್ಲೇಖಿತವಾಗಿ ಆತ ಸಾಮ್ರಾಜ್ಯದ ದೊರೆಯಾಗಿದ್ದ ಸನ್ನತಿಯ ಪರ್ವತವು ಈ ಪ್ರದೇಶವೇ ಆಗಿಕ ಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಕ್ರಿಸ್ತ ಶಕಾರಂಭದಲ್ಲಿ ರಚಿತವಾದ "ಪೆರಿಪ್ಲಸ್" ಆಫ್ ಎರಿತ್ರಿಯನ್ ಸಿ" ಎಂಬ ಗ್ರಂಥದಲ್ಲೂ ಗ್ರೀಸ್ ದೇಶದ ಖಗೋಳ ಶಾಸ್ತ್ರಜ್ಞ ಜಿಲೆಮಿಯ "ಟಾಗ್ರಪಿ" ಎಂಬ ಗ್ರಂಥದಲ್ಲೂ ಈ ಪ್ರದೇಶದ ಕೆಲವು ಬಂದುರುಗಳು ಹಾಗೂ ನಿರ್ಯಾತವಾಗುತ್ತಿದ್ದ ವಸ್ತುಗಳ ಉಲ್ಲೇಖವು ಸಿಗುತ್ತದೆ. ಪಶ್ಚಿಮ ಕರ್ನಾಟಕವನ್ನಾಳಿದ ಕದಂಬ ವಂಶದ ಮೊತ್ತ ಮೊದಲ ದೊರೆ ಮಯೂರ ವರ್ಮನ ರಾಜ್ಯಕ್ಕೂ ಮೈಸೂರು ಜಿಲ್ಲೆಯ ತಲಕಾಡಿನಿಂದ ಆಳಿದ ಮೊದಲ ದೊರೆ ಕೊಂಗಣಿ ವರ್ಮ ಮಾಧವನ ರಾಜ್ಯಕ್ಕೂ ಈ ಪ್ರದೇಶವು ಸೇರಿದಂತೆ ತಿಳಿದು ಬರುತ್ತದೆ. ಪ್ರದೇಶದ ಉದ್ಯಾವರ ಮತ್ತು ಮಂಗಳೂರಿನಿಂದ ಆಳಿದ ಆಳುಪ ಅರಸು ಮನೆತನವು ಈ ಪ್ರದೇಶದವನ್ನಾಳಿದ ಮೊತ್ತಮೊದಲ ಸ್ಥಳೀಯ ರಾಜವಂಶ. ಕನ್ನಡದ ಮೊದಲನೆ ಶಾಸನ ಹಲ್ಮಿಡಿ ಶಾಸನ (ಕ್ರಿ.ಶ. ೪೫೦) ದಲ್ಲಿ ಪಶುಪತಿ ಆಳಿದ ಎಂಬ ಉಲ್ಲೇಖ ಬಂದಿದ್ದು ಆತ ಕದಂಬ ರಾಜವರ್ಮನ ಸಾಮಂತನಾಗಿ ಆಳ್ವಿಕೆ ನಡೆಸುತ್ತಿದ್ದನೆಂದು ಕರ್ನಾಟಕದ ಸಾರ್ವಭೌಮ

ಇಮ್ಮಡಿ ಪುಲಕೇಶಿಗೆ ಆಳುಪ ಅರಸು ಮನೆತನದ ರಾಜಕುಮಾರಿಯನ್ನಿತ್ತು ವಿವಾಹ ಮಾಡಲಾಗಿತ್ತು ಎಂದೂ ಹೇಳಲಾಗುತ್ತದೆ. ತನ್ಮೂಲಕ ಸಾರ್ವಭೌಮ ಆಳ್ವಿಕೆಯ ಪ್ರಭಾವವು ಈ ಪ್ರದೇಶದ ಮೇಲೆ ಬಿದ್ದಿತ್ತು.

ಚಾಲುಕ್ಯ ದೊರೆ ವಿನಯಾದಿತ್ಯ (ಕ್ರಿ.ಶ. ೬೮೧-೯೬) ನ ಮಗಳಾದ ಕುಂಕಮದೇವಿಯನ್ನು ಆಳುಪದೊರೆ ಚಿತ್ತವಾಹನನಿಗೆ ಕೊಟ್ಟು ವಿವಾಹವೇರ್ಪಡಿಸಿ ಅದರಿಂದಾಕೆಯೊಂದಿಗೆ ಜೈನ ಧರ್ಮವು ಹರಡಲಿ ಪ್ರಾರಂಭವಾಯಿತು. ಇದು ಮುಂದುವರೆದಂತೆ ಜೈನ ಅರಸು ಮನೆತನಗಳ ಆಳ್ವಿಕೆಯ ಸ್ಥಿರಗೊಳ್ಳಲು ಬೇಕಾದ ಸನ್ನಿವೇಶವನ್ನು ಸಿದ್ದಗೊಳಿಸಿತು. ಬೌದ್ಧ ದರ್ಮವು ಆ ಸಮಯಕ್ಕೆ ಇಲ್ಲಿ ಹರಡಿಕೊಂಡಿತ್ತು.

ಆಳುಪ ದೊರೆಗಳು ಶಿವಭಕ್ತರಾಗಿದ್ದಂತೆ ಜೈನ ಮತ್ತು ಬೌದ್ಧ ಮತಗಳಿಗೂ ಆಶ್ರಯವನ್ನು ನೀಡಿದ್ದರು.ಆಳುಪ ದೊರೆ ಕುಂದು ವರ್ಮನು ಕ್ರಿ.ಶ. ೯೬೮ರಲ್ಲಿ ಮಂಗಳೂರಿನ ಕದಿರೆಯ ಮಂಜುನಾಖ ದೇವಸ್ಥಾನದಲ್ಲಿ ಬೌದ್ಧ ಮತದ ಲೋಕೇಶ್ವರನ ಕಂಚಿನ ಮೂರ್ತಿಯನ್ನು ಸ್ಥಾಪಿಸಿದ್ದ. ಇದೇ ಅರಸರು ಶಿವಮೊಗ್ಗ ಜಿಲ್ಲೆ ಹುಂಚರಿಂದಾಳುತ್ತಿದ್ದ ಶಂತರ ವಂಶದೊಂದಿಗೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಂಡಿದ್ದರಿಂದ ಆಳುಪರ ಪ್ರಭಾವವು ಆ ಕಡೆಗೂ ಹರಡಿದ್ದುದು ಮಾತ್ರವಲ್ಲದೇ ಈ ಕಡೆಗೆ ದಾಳಿ ಮಾಡುತ್ತಿದ ಚೋಳರನ್ನು ಸಮರ್ಥವಾಗಿ ಹಿಮ್ಮೆಟ್ಟಿಸಲು ಸಾಧ್ಯವಾಗುತ್ತಿತ್ತು.[೩]

ಕ್ರಿ.ಶ. ೫ನೇ ಶತಮಾನದಿಂದ ಸುಮಾರು ೭ನೇ ಶತಮಾನಗಳ ಕಾಲ ಆಳಿದ ಆಳುಪ ವಂಶವು ಕ್ಷೀಣಗೊಳ್ಳುತ್ತಿದ್ದ ಕಾಲದಲ್ಲಿ ಜೈನರ ಆಡಳಿತ ತಲೆ ಎತ್ತಿತು. ಬೇಳ್ತಂಗಡಿ ಬಳಿಯ ಬಂಗಾಡಿಯಿಂದ ಬಂಗರೂ, ವೇಣೂರಿನಿಂದ ಅಚೆಲರೂ, ಮಂಗಳೂರು, ಉಳ್ಳಾಲ, ಪುತ್ತಿಗೆಗಳಿಂದ ಚೌಟರೂ, ಮುಲ್ಕಿಯಿಂದ ಸಾಮಂತರೂ, ಉಡುಪಿ ಬಳಿಯ ಸುರಾಲಿನಿಂದ ತೂಳಹರು ರಾಜ್ಯವಾಳ ತೊಡಗಿದರು. ಅದರಂತೆ ಬೈಲಂಗಿಡಿಯಿಂದ ಮೂಲರೂ, ಹೊಸಂಗಿಯಿಂದ ಬಿನ್ನಾಣಿಗಳು ಮುಂದೆ ವಿಟ್ಲದಿಂದ ಡೊಂಬ ಹೆಗ್ಗಡೆ ವಂಶದವರೂ ತಮ್ಮ ಆಡಳಿತವನ್ನು ಪ್ರಾರಂಭಿಸಿದರು. ಸಮಗ್ರ ಕರ್ನಾಟಕವನ್ನಾಳುತ್ತಿದ್ದ ರಾಷ್ಟ್ರಕೂಟರೂ, ಹೊಯ್ಸಳರು, ಸ್ಥಳೀಯ ಆಡಳಿತ ಮತ್ತು ಕಂದಾಯ ವಸೂಲಿಗಾಗಿ, ಬಲ್ಲಾಳರನ್ನು ಹೆಗ್ಗಡೆಯವರನ್ನು ನೇಮಿಸಿದ್ದರು. ಈ ಆಡಳಿತ ವ್ಯವಸ್ಥೆಯಿಂದಾಗಿ ಕರಾವಳಿ ಪ್ರದೇಶ ರಕ್ಷಣೆ, ಶಾಂತಿ, ಸೌಹಾರ್ದ ಮತ್ತು ಆರ್ಥಿಕೊನ್ನತಿಗಳು ಸಾಧ್ಯವಾದುದರಿಂದ ಇಲ್ಲಿ ಸಾಹಿತ್ಯ ಸೃಷ್ಟಿ, ದೇವಾಲಯ ಜಿನಾಲಯ ನಿರ್ಮಾಣ ವಿಪುಲಪ್ರಮಾಣದಲ್ಲಿ ನಡೆಯಿತು. ಜನರಲ್ಲಿ ಧರ್ಮ, ಪರಂಪರೆಗಳ ಬಗ್ಗೆ ಗೌರವಾದರಗಳು ಹೆಚ್ಚಿದವು.

---

೩. ಡಾ. ಆನಂದ ಪೂಜಾರ್ : ಕರಾವಳಿ ಕರ್ನಾಟಕದ ಕಾವಿಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ, ಪುಟ-೩೬

ಹೊಯ್ಸಳರು ವೈಯಕ್ತಿಕವಾಗಿ ಜೈನರಾಗಿದ್ದರೂ, ವೈಷ್ಣವ ಮತ ಅನುಸರಿಸುತ್ತಿದ್ದರು. ಇವರ ಕಾಲದಲ್ಲಾದ ಒಂದು ಮುಖ್ಯ ಘಟನೆಯೆಂದರೆ ಶ್ರೀ ಮಧ್ವಾಚಾರ್ಯರ ಜನನ, ವೈಷ್ಣವ ಮತಪ್ರಚಾರ, ಉಡುಪಿ ಶ್ರೀಕೃಷ್ಣ ದೇವಾಲಯದ ಹಾಗೂ ಅಷ್ಟಮಠಗಳ ನಿರ್ಮಾಣ, ಶ್ರೀ ಮಧ್ವಾಚಾರ್ಯರು ಸಮಕಾಲೀನ ಪಂಡಿತರು ಹಾಗೂ ಅವರ ಮಠ ಪರಂಪರೆಯಿಂದ ವಿಪುಲ ಸಂಸ್ಕೃತಿ ಸಾಹಿತ್ಯವು ಸೃಷ್ಟಿಯಾಗಿರುವುದನ್ನು ಇಲ್ಲಿ ಕಾಣಬಹುದಾಗಿದೆ. ವಿಜಯನಗರದ ಉತ್ತರಾಧಿಕಾರಿಗಳಾದ ಕೆಳದಿಯ ನಾಯಕರು ಈ ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಿದ ಕ್ರಿ.ಶ. ಸುಮಾರು ೧೬೦೦ ಬಳಿಕ ಇಲ್ಲಿ ವೀರಶೈವ ಮತವು ಪ್ರಚಾರಗೊಂಡಿತು. ಅಲ್ಲಲ್ಲಿ ಅವರ ಮಠಗಳು, ಅನ್ನದಾನದ ಕೇಂದ್ರಗಳು ಸ್ಥಾಪಿಸಲ್ಪಟ್ಟಿತು. ಶಿವಪ್ಪನಾಯಕನ "ಶಿಸ್ತಿನ" ಅನುಸಾರ ಇಲ್ಲಿ ಕಂದಾಯ ಪದ್ಧತಿಯಲ್ಲಿ ಸುದಾರಣೆಗಳಾದವು. ರಾಮಕ್ಷತ್ರಿಯರು ಇಲ್ಲಿ ನೆಲಸ ತೊಡಗಿದರು.

ಕ್ರಿ.ಶ. ೧೭೬೩ರಲ್ಲಿ ಕೆಳದಿ ವಂಶದ ಆಡಳಿತವನ್ನು ಕೊನೆಗೊಳಿಸಿದ ಹೈದರಾಲಿ ಈ ಕರಾವಳಿಯ ಪ್ರದೇಶದ ಮೇಲೆ ಅಧಿಕಾರವನ್ನು ಸ್ಥಾಪಿಸಿದ. ಆತನ ಮಗ ಟಿಪ್ಪು ಸುಲ್ತಾನನ ಕಾಲದಲ್ಲಿ ಈ ಪ್ರದೇಶದ ಮೇಲೆ ಬ್ರಿಟಿಷರ ಕಣ್ಣು ಬಿದ್ದಿದ್ದರಿಂದ ಟಿಪ್ಪುವಿನ ಮರಣದ ನಂತರ ಇದು ಬ್ರಿಟಿಷರ ನೇರ ಆಡಳಿತಕ್ಕೆ ಒಳಗಾಯಿತು.

ಸರ್ ಥಾಮಸ್ ಮನ್ರೊ ಈ ಪ್ರದೇಶದ ಮೊದಲ ಜಿಲ್ಲಾಧಿಕಾರಿಯಾಗಿ ತನ್ನ ಸಮರ್ಥ ಆಡಳಿತದ ಒಂದು ಯುಗವನ್ನು ಸ್ಥಾಪಿಸಿದ. ಆದರೆ ಆಗಲೇ ದೇಶದಾದ್ಯಂತ ತೀವ್ರ ಬ್ರಿಟಿಷ್ ವಿರೋಧಿ ಚಟುವಟಿಕೆಗಳು ನಡೆಯುತ್ತಿದ್ದರಿಂದ ಕರ ನಿರಾಕರಣೆ ಚಳುವಳಿಗಳು ಆರಂಭಗೊಂಡವು. ಕೊಡಗಿನ ಕಲ್ಯಾಣಪ್ಪನ ದಂಡು ೧೮೩೭ರಲ್ಲಿ ಈ ಪ್ರದೇಶದ ದಕ್ಷಿಣ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟದ ಭುಗಿಲೆಬ್ಬಿಸಿತು. ಇದರ ನೇತೃತ್ವವಹಿಸಿದ್ದ ಕಲ್ಯಾಣಪ್ಪ ಮತ್ತು ನಂದಾವರದ ಲಕ್ಕಪ್ಪಸಂಗನನ್ನು ಮಂಗಳೂರಿನ ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸಲಾಯಿತು. ೧೮೩೪ ರಿಂದ ಜರ್ಮನಿಯ ಬಾಸೆಲ್ ಮಿಷನ್‌ರವರು ಇಂಗ್ಲೀಷ್ ಶಾಲೆ ಮತ್ತು ಮುದ್ರಣಾಲಯವನ್ನು ಸ್ಥಾಪಿಸಿದರು. ೧೮೬೮ ರಲ್ಲಿ ಮಂಗಳೂರಿನ ಸರಕಾರಿ ಕಾಲೇಜು ಸ್ಥಾಪಿಸಲ್ಪಟ್ಟಿತು. ೧೮೮೭ರಲ್ಲಿ ಸೈಂಟ್ ಎಲೋಷಿಯಸ್ ಕಾಲೇಜು ಸ್ಥಾಪಿಸಲ್ಪಟ್ಟಿತು. ೧೮೬೨ರಲ್ಲಿ ಕರಾವಳಿ ಪ್ರದೇಶದ ದಕ್ಷಿಣ ಕನ್ನಡ ಮತ್ತು ಉತ್ತರಕನ್ನಡ ಎಂದು ವಿಭಾಗಿಸಲ್ಪಟ್ಟಿತು. ದೇಶದ ಇತರೆಡೆಗಳಂತೆ ಇಲ್ಲಿಯೂ ಕೂಡ ಹರಿಜನರ ಉದ್ದಾರದ ಕಾರ್ಯಕ್ರಮಗಳು ಥಿಯೋಸೋಫಿಕಲ್ ಸೊಸೈಟಿ, ಬ್ರಹ್ಮಸಮಾಜ ಮುಂತಾದ ಸಂಸ್ಥೆಗಳ ಸುಧಾರಣ ಕಾರ್ಯಕ್ರಮಗಳು ನಡೆದವು. ೧೯೧೭ರಲ್ಲಿ ಕಾರ್ನಾಡು ಸದಾಶಿವರಾಯರು ಗಾಂಧೀಜಿಯವರಿಗೆ ಪತ್ರವನ್ನು ಬರೆದು ಸ್ವದೇಶಕ್ಕೆ ಬಂದು, ಈ ಹೋರಾಟದ ನಾಯಕತ್ವವಹಿಸಿ, ಸೂಕ್ತ

ಮಾರ್ಗದರ್ಶನ ನೀಡಬೇಕೆಂದು ವಿನಂತಿಸಿದರು. ೧೯೨೦ ನೇ ಆಗಸ್ಟ್ ತಿಂಗಳಲ್ಲಿ ಮತ್ತೊಮ್ಮೆ ಗಾಂಧೀಜಿಯವರು ಈ ಪ್ರದೇಶಕ್ಕೆ ಬಂದಾಗ ಅವರ ಕಾರ್ಯಕ್ರಮಗಳಿಗೆ ಕೊಡುಗೆಯಾಗಿ ದೊಡ್ಡ ಮೊತ್ತದ ನಿಧಿಯನ್ನು ಸಮರ್ಪಿಸಲಾಯಿತು. ೧೯೩೦ ಉಪ್ಪಿನ ಸತ್ಯಾಗ್ರಹವು ಮಂಗಳೂರು, ಸುರತ್ಕಲ್, ಪಡುಬಿದ್ರೆ, ಕಟಪಾಡಿ, ಮಲ್ಪೆ, ಕುಂದಾಪುರ, ಮುಂತಾದೆಡೆ ನಡೆದಾಗ ಅಸಂಖ್ಯಾತ ಜನರು ಬಂಧನಕ್ಕೊಳಗಾಗಿ ಶಿಕ್ಷಿಸಲ್ಪಟ್ಟರು. ಗಾಂಧೀಜಿಯವರು ೧೯೩೪ ರಲ್ಲಿ ಈ ಕರಾವಳಿ ಪ್ರದೇಶಕ್ಕೆ ಬಂದು ಮತ್ತೊಮ್ಮೆ ಹೋರಾಟವನ್ನು ಚುರುಕುಗೊಳಿಸಿರುವುದನ್ನು ಕಾಣಬಹುದು. ನಂತರ ೧೯೪೨ರಲ್ಲಿ ನಡೆದ "ಕ್ವಿಟ್ ಇಂಡಿಯಾ ಚಳುವಳಿ" ಯಶಸ್ವಿಯಾಯಿತು.

ಕರಾವಳಿ ಕರ್ನಾಟಕವನ್ನು ಆಳಿದ ಅರಸು ಮನೆತನದವರು

ಕರ್ನಾಟಕದ ಕರಾವಳಿ ಒಂದು ವಿಶಿಷ್ಟ ಗುಣದ ಭೂಪ್ರದೇಶ. ಭೋರ್ಗರೆಯುವ ಕಡಲು ಒಂದೆಡೆಯಾದರೆ ಹಚ್ಚಹಸುರಿನ ಹೊದಿಕೆಯ ಮೇಘಾಚ್ಛಾದಿತ ಸಹ್ಯಾದ್ರಿ ಪರ್ವತ ಶ್ರೇಣಿಗಳು ಸುತ್ತಲು ಗುಡ್ಡಗಳು ಮತ್ತು ವಿವಿಧ ಸಸ್ಯರಾಶಿಯ ಕಾನನಗಳಿವೆ. ಕಿರಿದಾದ ಕಣಿವೆಗಳ ಎಡೆಯಲ್ಲಿ ಮಾನವ ಪಾದಕ್ಕೂ ಸಿಲುಕದ ಲಾಸ್ಯದ ಗಿರಿ ಕಂದರುಗಳು ಕೆಲವೊನ್ನೆ ರುದ್ರತಾಂಡವದ, ಕೆಲವೊಮ್ಮೆ ಸುಂದರ ಲಾಸ್ಯ ನರ್ತನದ ಮತ್ತು ಸೌಮ್ಯ ಝುಳು ಝುಳು ನಿನಾದದ ಜಲದಾರೆಗಳಿವೆ. ಆಗಾಧ ಜಲರಾಶಿಯ ನಡುವೆ ಸದಾ ನೋಡುಸಿಗುವ ಹಸುರಿನ ಸಾಗರ ಕಡಲು ತೀರ ಮೈದಾನ ಕಣಿವೆ ಇವೆ. ಬಯಲು ಗುಡ್ಡ, ಬೆಟ್ಟ, ಶಿಖರ, ಕಾಡು, ದಟ್ಟರಣ್ಯ ತೊರೆ, ಹೊಳೆ, ನದಿ, ಸಸ್ಯ, ಸಂಕುಲದೊಳಗಿರುವ ಅಸಂಖ್ಯ ಜೀವ ಸಂಕುಲಗಳಿವೆ. ಹೀಗೆ ಬೇಕು, ಬೇಕಾದದ್ದನ್ನು ಒಂದೆಡೆ ಊಹಿಸಲು ಮತ್ತು ಕಾಣಲು ದೊರೆಯುವ ಸ್ಥಳ ಕರ್ನಾಟಕದ ಕರಾವಳಿ ಎಂದರೆ ತಪ್ಪಾಗಲಾರದು. ಪರುಶುರಾಮ ಸೃಷ್ಟಿಯೆಂಬ ನಂಬಿಕೆಗೆ ತಕ್ಕದಾಗಿ ಮತ್ತು ಕದಂಬರ ಹುಟ್ಟಿಗೆ ಕಾರಣವಾದ ಶಿವಪಾರ್ವತಿ ವಿಹಾರದ ತಾಣವಾಗಿ ಮೆರೆದ ಸ್ಥಳ ಇದು. ಮಿಗಿಲಾಗಿ ಆದಿಕವಿ ಪಂಪನು ಅತ್ಯಂತ ಮೋಹಕ "ಆರಂಕುಶಮಿಟ್ಟೊಡಮ್ ನೆನೆವುದೆನ್ನಮನಂ ಬನವಾಸಿ ದೇಶಮಂ" ನುಡಿಯ ತಾಣ ಇದು. ಇಂತಹ ಪ್ರದೇಶ ಕರ್ನಾಟಕದ ಇತಿಹಾಸದಲ್ಲಿ ತನ್ನದೇ ಆದ ಪ್ರತಿಭೆ, ಕೊಡುಗೆಗಳಿಂದ ಮೆರೆದು ಈಗಲೂ ಆ ವಿಶಿಷ್ಟ ಸ್ಥಾನ ಮಾನವನ್ನು ಉಳಿಸಿಕೊಂಡಿದೆ.

ಪ್ರಕೃತಿಯೊಂದಿಗೆ ಸಹಬಾಳ್ವೆ ನಡೆಸಿದ ಮಾನವನ ಕುರುಹುಗಳು ಶಿಲಾಯುಗಗಳ ಕಾಲದಿಂದಲೂ ಇದ್ದದ್ದು ಬೆಳಕಿಗೆ ಬಂದಿದೆ. ಕಡಲು ಕಣಿವೆಗಳ ಸಂಪರ್ಕದಿಂದ ದೊರೆತ ಸಹಜ ಶಿಕ್ಷಣದೊಂದಿಗೆ ಹೊರಗಿನ ಬದಲಾವಣೆಯ ಗಾಳಿ ಬೆರೆತು ಬೆಳವಣಿಗೆಗೆ ನಾಂದಿಯಾಯಿತು. ವೇದ ಕಾಲದಿಂದ ಮತ್ತು ಹಿಂದೂ ಸಂಸ್ಕೃತಿಗಳ ನೇರ ಪ್ರಭಾವ ಈ

ಭಾಗದ ಮೇಲೆ ಇತ್ತು ಎಂಬುದು ಇನ್ನೂ ನಿರ್ಧರಿತವಾಗಬೇಕಿದೆ. ಆದರೂ ಎರಡು ಸಂಸ್ಕೃತಿಗಳ ಪರೋಕ್ಷ ಪ್ರಭಾವ ಇದರ ಮೇಲಾಗಿರುವುದು ನಿರ್ವಿವಾದದ ಸಂಗತಿ.[೪]

ಮೌರ್ಯರು

ಕ್ರಿ.ಪೂ. ಮೂರನೇ ಶತಮಾನಕ್ಕೆ ಮುಂಚೆ ಇಲ್ಲಿಯ ರಾಜಕೀಯ ಪರಿಸ್ಥಿತಿಯ ಬಗ್ಗೆ ಯಾವುದೇ ಸೂಚನೆಗಳಿಲ್ಲ. ಮೌರ್ಯ ಚಕ್ರವರ್ತಿ ಅಶೋಕನ ಬನವಾಸಿ ನಾಡಿ ಬೌದ್ಧಧರ್ಮ ಪ್ರಚಾರಕ್ಕೆ ಭಿಕ್ಷು ಸಂಘವನ್ನು ಕಳುಹಿಸಿರುವುದನ್ನು ನೋಡಿದರೆ, ಇಲ್ಲೊಂದು ಸ್ವತಂತ್ರ ಆಡಳಿತ ಇದ್ದಿರಬೇಕೆಂಬ ಅನುಮಾನ ಮೂಡುತ್ತದೆ. ಬಹುಶಃ ಆನಂತರ ಅಶೋಕ ಚಕ್ರವರ್ತಿಯೇ ಈ ಭಾಗವನ್ನು ತನ್ನ ನೇರ ಆಳ್ವಿಕೆಗೆ ಒಳಪಡಿಸಿಕೊಂಡಿದ್ದನು.

ಶಾತವಾಹನರು

ಮೌರ್ಯರ ನಂತರ ಶಾತವಾಹನರು ಈ ಭಾಗದ ಆಳ್ವಿಕೆ ನಡೆಸಿದವರು. ಸಾಗರೋತ್ತರ ವ್ಯಾಪಾರ ತಮ್ಮ ವಾಣಿಜ್ಯ ವ್ಯವಹಾರವನ್ನು ಹೊಂದಿದ್ದ ಬೃಹತ್ ಸಾಮ್ರಾಜ್ಯ ಇವರದು. ಕರಾವಳಿ ಭಾಗದ್ದು ಕೈಗಾರಿಕೆ, ವಾಣಿಜ್ಯ ವ್ಯವಹಾರ, ಹಡಗುಕಟ್ಟೆ ಮತ್ತು ಬಂದರು ಚಟುವಟಿಕೆಗಳಿಂದ ವಿಜೃಂಭಿಸಿದವು. ಬನವಾಸಿ ಸ್ಥಾನ ಕುಂದೂರು (ತಾಳಗುಂದ) ಪಟ್ಟಿಯ ನಗರ (ಹಟ್ಟಿಯಂಗಡಿ) ಇತ್ಯಾದಿ ನಗರಗಳು ಶಾತವಾಹನರ ಪ್ರಮುಖ ಕೇಂದ್ರಗಳಾಗಿದ್ದವು. ಶಾತವಾಹನರ ಆಡಳಿತವು ಕರ್ನಾಟಕದ ಕರಾವಳಿಗೆ ವಿಶೇಷವಾಗಿ ಹೊಸದೊಂದು ಜೀವನದ ಆಯಾಮನ್ನೊದಗಿಸಿತು. ಪಾಶ್ಚಾತ್ಯ ರಾಜ್ಯಗಳ ಸಂಪರ್ಕಾನುಭವ ಇದರಿಂದ ಕರಾವಳಿಗಾಯಿತು. ಕಾರವಾರ, ಹೊನ್ನಾವರ, ಹಟ್ಟಯಂಗಡಿ, ಬಸರೂರ, ಮಲ್ಪೆ, ಉದ್ಯಾವರ, ಮಂಗಳೂರುಗಳು ಪ್ರಮುಖ ರೇವು ಪಟ್ಟಣಗಳಾಗಿ ಅಭಿವೃದ್ಧಿ ಹೊಂದಿದ್ದವು. ಅನಂತರ ಸ್ವಲ್ಪ ಕಾಲ ಆಳ್ವಿಕೆಗೊಂಡು ಭದ್ರಬುನಾದಿ ಹಾಕಿಕೊಟ್ಟವು.

ಕದಂಬರು

ಕರಾವಳಿಯ ಇತಿಹಾಸದ ತೆರೆ ಏಳುವುದು ಕದಂಬರ ಆಳ್ವಿಕೆಯಿಂದ ಹುಟ್ಟು ಮತ್ತು ವೃತ್ತಿ ಎರಡರಿಂದಲೂ ವೈದಿಕರಾದರೂ ಕ್ಷತ್ರಿಯರಾದ ಕಂಚಿಯ ಪಲ್ಲವರ ಗರ್ವವನ್ನು ಮೆಟ್ಟಿನಿಂತು ಸ್ವತಂತ್ರ ರಾಜ್ಯ ಸ್ಥಾಪನೆ ಮಾಡಿದ ಗೌರವ ಇವರಿಗೆ ಸಲ್ಲುತ್ತದೆ. ಕೈಯಲ್ಲಿದ್ದ ದರ್ಬೆಯನ್ನು ಬಿಟ್ಟುಕತ್ತಿ ಹಿಡಿದ ಇವರು ಬ್ರಹ್ಮ ಕ್ಷತ್ರಿಯರಾದರು. ಕರಾವಳಿಯಷ್ಟೇ ಅಲ್ಲದೇ ಉತ್ತರ ಕರ್ನಾಟಕದ ಬಹು ಭಾಗಗಳಲ್ಲಿ ಹೊಸ ರಾಜಕೀಯ ಶಕೆ ಪ್ರಾರಂಭಕ್ಕೆ ಕದಂಬರು ನಾಂದಿ ಹಾಡಿದರು. ಬೌದ್ಧ ಧರ್ಮದ ಪ್ರಖರ ಪ್ರಭಾವದಿಂದ ಬಹುತೇಕ ಅವಸಾನದಂಚಿಗೆ ಹೋಗಿದ್ದ ವೈದಿಕ ಮತ್ತು ಜೈನ ಧರ್ಮಗಳ ಪುರುತ್ಥಾನ ಈ ಕಾಲದಲ್ಲಾಯಿತು. ದಕ್ಷಿಣ

೪. ಉದಯವಾಣಿ (ಸಂ) : ಕರಾವಳಿ ಕರ್ನಾಟಕ ಇತಿಹಾಸ, ಪುಟ-೮೮

ಕನ್ನಡದಲ್ಲಿ ಅಗ್ರಹಾರಗಳ ರಚನೆ ರಾಜ ಮಯೂರವರ್ಮನ ಕಾಲದಲ್ಲಿ ಆದುದರ ಬಗ್ಗೆ ಜನಜನಿತವಾದ ಕಥೆಗಳೇ ಇಲ್ಲಿ ನಡೆದಿವೆ.

ಆಳುಪರು

ಕದಂಬರ ಸಮಕಾಲೀನರಾಗಿ ಅವರ ಅತ್ಯಂತ ನಂಬಿಗಸ್ಥ ಸಾಮಂತರಾಗಿ ತುಳು ನಾಡನ್ನಾಳಿದವರು. ಆಳುಪರು ಇವರ ಆಪ್ತ ಸೇವಕರು (ಕೆಲ್ಲಪುತ್ತಿಗೆಯ) ಕೆಲ್ಲರು. ಆ ಮೂವರ ಉಲ್ಲೇಖ ಕನ್ನಡದ ಪ್ರಪ್ರಥಮ ಶೀಲಾಲೇಖವಾದ ಹಲ್ಮಿಡಿ ಶಾಸನದಲ್ಲಿದೆ. ಆಳುಪರು ತಮ್ಮ ಆಡಳಿತ ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದಲ್ಲದೆ, ಕದಂಬ ಅರಸರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸುವಷ್ಟು ಪ್ರಭಾವ ಶಾಲಿಗಳಾಗಿದ್ದರು.

ಆಳುಪ - ಚಾಲುಕ್ಯ

ಬಾದಾಮಿ ಚಾಲುಕ್ಯರ ಕಾಲದಲ್ಲಿ ಆಳುಪರು ಇಡೀ ಕರಾವಳಿಯನ್ನು ಅಲ್ಲದೇ ಘಟ್ಟದ ಮೇಲಣ ಬಹುವಿಸ್ತಾರವಾದ ಭಾಗವನ್ನು ಆಳುತ್ತಿದ್ದರು. ಜವಾಬ್ದಾರಿಯ ನಿರ್ವಹಣೆಗಾಗಿ ಅತ್ಯಂತ ನಂಬಿಗಸ್ಥ, ಅಖ್ಯಸಾಮಂತ ಮತ್ತು ಅಧಿಕಾರಿ ವರ್ಗ ಇವರೊಂದಿಗಿತ್ತು. ಇವರಲ್ಲಿ ಹೆಸರಿಸಬಹುದಾದವರೆಂದರೆ ಕೆಲ್ಲರು ತೋಳಹರು ಮತ್ತು ಸಾಂತರರು.

ಆಳುಪರು ಸುಮಾರು ಒಂದು ಸಾವಿರ ವರ್ಷಗಳಷ್ಟು ಕಾಲ ರಾಜ್ಯವಾಳಿದರು. ಇಷ್ಟು ಧೀರ್ಘಕಾಲದವರೆಗೆ ರಾಜ್ಯವಾಳಿದವರು ಭಾರತದ ಇತಿಹಾಸದ ಸಂದರ್ಭದಲ್ಲಿ ತೀರ ವಿರಳ, ಇದರಿಂದಾಗಿಯೇ ಇವರು ಕದಂಬ, ಚಾಲುಕ್ಯ, ರಾಷ್ಟ್ರಕೂಟ ಮತ್ತು ಹೊಯ್ಸಳ ಚಕ್ರೇಶ್ವರ ಸಮಕಾಲೀನ ಸಾಮಂತ ಅರಸು ಮನೆತನದವಾರದು.

ಆಳುಪ - ರಾಷ್ಟ್ರಕೂಟರು

ರಾಷ್ಟ್ರಕೂಟರೊಂದಿಗೆ ಆಳುಪರ ಸಂಬಂಧ ಅಷ್ಟೇನೂ ಮಧುರವಾಗಿರ್ಲಿಲ್ಲ. ಹಾಗಾಗೂ ರಾಜ್ಯ ಎಲ್ಲೆ ಕಿರಿದಾಯಿತು. ಇದು ವಂಶದೊಳಗಿನ ಅಂತಃ ಕಲಹಕ್ಕೆ ನಾಂದಿಯಾಯಿತು. ಉದಿಯಾವರದ ಶಾಸನಗಳು ಇದಕ್ಕೆ ಸೂಕ್ತ ನಿದರ್ಶನವಾಗಿವೆ. ಆಳುಪ ಶಕ್ತಿ ಕ್ರಮೇಣ ಕಳೇ ಗುಂದದ್ದರಿಂದ ಹೊಯ್ಸಳರೊಂದಿಗೆ, ಹೆಚ್ಚುಕಾಲ ಸೆಣಸದೆ ವೈವಾಹಿಕ ಸಂಬಂಧದ ಮೂಲಕ ಶಾಂತಿ ಕಾಪಾಡಿಕೊಂಡು ಬಂದರು. ಹೊಯ್ಸಳ ಚಕ್ರವರ್ತಿ ಮೂರನೆಯ ಬಲ್ಲಾಳನು ಈ ಭಾಗದ ಆಡಳಿತವನ್ನು ನೇರವಾಗಿ ನಡೆಸಿದ, ಈತನ ರಾಣಿ ಚಿಕ್ಕಾಯಿ ತಾಯಿ ಆಡಳಿತದ ಹೊಣೆಹೊತ್ತು ಬಾರಕೂರು ರಾಜಧಾನಿಯಲ್ಲಿದ್ದಳು ಮುಂದೆ ಹೊಯ್ಸಳ ರಾಜ ವಿಜಯನಗರ ಸಾಮ್ರಾಜ್ಯದಲ್ಲಿ ಲೀನವಾದಾಗ ಕರ್ನಾಟಕದ ಕರಾವಳಿಯೂ ವಿಜಯನಗರದಲ್ಲಿ ಲೀನವಾಯಿತು.

ವಿಜಯನಗರಕಾಲ

ಚಕ್ರವರ್ತಿ ಒಂದನೆ ಹರಿಹರನ ಕಾಲಕ್ಕೆ ಕರ್ನಾಟಕ ಕರಾವಳಿ ವಿಜಯನಗರದ ವ್ಯವಸ್ಥಿತ ಆಡಳಿತದ ತೆಕ್ಕೆಯೊಳಗಿತ್ತು ಇಡೀ ಕರಾವಳಿಯು ಮೂರು ರಾಜ್ಯಗಳಾಗಿ ವಿಂಗಡನೆಗೊಂಡು ಇವುಗಳಿಗೆ ಹೊನ್ನಾವರ, ಬಾರಕೂರು, ಮತ್ತು ಮಂಗಳೂರು ರಾಜಧಾನಿಗಳಾದವು. ಗೋವಾ ಪ್ರತ್ಯೇಕ ರಾಜ್ಯವಾಯಿತು. ಚಕ್ರವರ್ತಿಯಿಂದ ನೇಮಕಗೊಂಡ ರಾಜ್ಯಪಾರು ಇದ ಆಡಳಿತ ನಡೆಸಿದರು. ಅಧಿಕಾರಿಗಳ ಬದಲಾವಣೆ ಮತ್ತು ರಾಜ್ಯಪಾಲರ ವರ್ಗಾವಣೆ ವಿಜಯನಗರ ಕಾಲದ ಆಡಳಿತ ಒಂದು ವೈಶಿಷ್ಟ್ಯ. ಕರಾವಳಿ ಕರ್ನಾಟಕ ಇದರ ಅನುಭವ ಪಡೆಯಿತು.[೫]

ಜೈನ ಅರಸೊತ್ತಿಗೆಗಳು

ಕರಾವಳಿಯು ಅಸಂಖ್ಯ ರಾಜಮನೆತನಗಳು ಚಕ್ರವರ್ತಿಗಳ ಆಡಳಿತದ ಚೌಕಟ್ಟಿನೊಳಗಿದ್ದಕೊಂಡು ಅಂತಹ ಸ್ವಾತಂತ್ರ್ಯವನ್ನು ಪಡೆದುಕೊಂಡವು. ಈ ರಾಜಮನೆತನಗಳೆಲ್ಲವು ಜೈನ ಧರ್ಮಾನುಸಾರಿಗಳೆಂಬುದು ಅಚ್ಚರಿಯ ಸಂಗತಿ. ಕರಾವಳಿಯ ದಕ್ಷಿಣ ಭಾಗದಲ್ಲಿ ತಲೆ ಎತ್ತಿದ ಮನೆತನಗಳೆಂದರೆ ಬಂಗವಾಡಿಯ ಬಂಗರು, ವೇಣೂರಿನ ಅಜಿಲರು, ಪುತ್ತಿಗೆಯ ಚೌಟರು, ಕಾರ್ಕಳ ಭೈರವರು ಸುರಾಲಿನ ತೋಳರು, ಹೊಸಗಡಿಯ ಹೊನ್ನೆಕಂಬಳಿಯವರು ಇವರಲ್ಲದೇ ವಿಟ್ಲದ ಅರಸರು, ಬೈಲಂಗಡಿಯ ಮೂಲರು, ಮೂಲ್ಕಿಯ ಸಾವಂತರು, ಕಾಪು, ಎರ್ಮಾಳು, ಮತ್ತು ಎಲ್ಲೂರುಗಳ ಹೆಗಡೆಗಳು ಹಾಗೂ ಅಧಿಕ ಸಂಖ್ಯೆಯ ಬಲ್ಲಾಳುಗಳು ಇದ್ದರು.

ಕೆಲ್ಲರು

ಆಳಪರ ಕಾಲದಲ್ಲಿ ಸಾಮಾಂತಾಧಿಕಾರಿಗಳಾಗಿ ಕೊನೆಗೆ ಸ್ವತಂತ್ರವಾಗಿ ರಾಜ್ಯವಾಳಿದ ಕೆಲ್ಲರು, ತೊಳಹರು, ಮತ್ತು ಸಾಂತರರು ಜೈನ ಅರಸರು ವಂಶಗಳೇ, ಕದಂಬರ ಸಮಕಾಲೀನರಾದ ಕೆಲ್ಲರು ಕರ್ನಾಟಕದ ಅತ್ಯಂತ ಪ್ರಾಚೀನ ಜೈನ ರಾಜವಂಶ. ಹಲ್ಮಿಡಿಯ ಶಾಸನದಲ್ಲಿ ಇವರ ಪ್ರಥಮ ಉಲ್ಲೇಖವಿದೆ. ಅಲ್ಲಿಂದ ಮುಂದೆ ೧೬ನೇ ಶತಮಾನದವರೆಗೆ ತಮ್ಮ ಸ್ವಾಮಿ ನಿಷ್ಠೆ ನಡೆಸಿದರು. ತಮ್ಮ ಸ್ವಾಮಿ ಆಳುಪರ ಆದೇಶದ ಮೇರೆಗೆ ಕದಂಬರಿಗಾಗಿ ಕೇತವು ಮತ್ತು ಪಲ್ಲವರ ವಿರುದ್ಧ ಹೋರಾಡಿ ಅವರ ಸೈನ್ಯವನ್ನು ದೂಳಿಪಟ ಮಾಡಿದರು. ಮುಂದೆ ಇದೇ ರೀತಿಯಲ್ಲಿ ಹೊಯ್ಸಳರಿಗಾಗಿ ಚೋಳ ಸೈನ್ಯದೊಡನೆ ಹೋರಾಡಿದರು. ಮಾರಣಾಂತಿಕ ಘಾಸಿಗೊಂಡು ಕೊನೆಯುಸಿರೆಳೆದರು. ಪಂಜಾಳಿಕೆ ಮತ್ತು ಚಾಲೂಳ್ಳೆ

೫. ಉದಯವಾಣಿ (ಸಂ): ಕರಾವಳಿ ಕರ್ನಾಟಕದ ಇತಿಹಾಸ, ಪುಟ-೮೮

ಎಂಬ ಎರಡು ರಾಜ್ಯಗಳನ್ನು ಇವರು ಆಳಿದರು. ಮುಂದೆ ಈ ರಾಜ್ಯಗಳಿಗೆ ಕ್ರಮವಾಗಿ ಅಜಿಲರು ಮತ್ತು ಚಾಟರು ಅಧಿಪತಿಗಳಾದರು.

ತೊಳಹರು

ಸುಕಾಲೀನ ತೊಳಹರು ರಾಜಧಾನಿ ಬಾರಕೂರಿನಲ್ಲಿ ಆಳುಪರ ಹೊಣೆ ಹೊತ್ತಿದ್ದರು. ವಿಜಯನಗರದ ಕಾಲದಲ್ಲಿ ಶಾಂತಿಯಿಂದ ಜನಾನುರಾಗಿ ಆಡಳಿತ ನಡಿಸಿ ಧರ್ಮಕಾರ್ಯ ನಿರತರಾದರು.

ಸಾಂತಾರರು

ಸಾಂತಾರರು ಪ್ರಪ್ರಥಮವಾಗಿ ಕಾಣಿಸಿಕೊಳ್ಳುವುದು ಉದಿಯಾವರದ ಶಾಸನದಲ್ಲಿ. ಕುಂದಾಪುರ ತಾಲೂಕಿನ ಹಲವೆಡೆ ಇವರ ಶಾಸಗಳು ದೊರೆತಿವೆ. ಹಟ್ಟಿಯಂಗಡಿ ಇವರ ಪ್ರಥಮ ರಾಜಧಾನಿ. ಅನಂತರ ಹೊಂಬುಜ ರಾಜಧಾನಿಯಾಯಿತು. ಇದರಿಂದಾಗಿ ಇವರಿಗೆ "ಪಟ್ಟಿ" ಪೊಂಬುತ್ವ "ಪುರವರಾಧೀಶ್ವರ" ಎಂಬ ಬಿರುದು ಬಂತು. ಆಳುಪರಿಗೆ ಸದಾ ಬೆನ್ನೆಲುಬಾಗಿದ್ದು, ಮುಂದೆ ಚೋಳರ ದಾಳಿಗೊಳಗಾದ ರಾಜ್ಯವನ್ನು ರಕ್ಷಿಸುವಲ್ಲಿ ವೀರಾವೇಶದಿಂದ ಹೋರಾಡಿ ಚೋಳರು ದಂಡನ್ನು ಹೊಡೆದೊಡಿಸಿ, ಕೈತಪ್ಪಿದ ಮಂಡಳಿಯನ್ನು ಪುನಾರಾವಶ ಮಾಡಿಕೊಂಡು "ನಿಜ ಸ್ವಾಮಿ ಬಂಕೀದೇವಾಳೇಂದ್ರ" ದೇವನ ರಾಜ್ಯವನ್ನು ಪುನರ್ ಸ್ಥಾಪನೆ ಮಾಡಿದರು. ಕೆಲಕಾಲದ ನಂತರ ಆಳುಪ ರಾಜ್ಯಕ್ಕೆ ಪೋಷಕ ರಾಜನ ಅವಶ್ಯಕತೆ ತಲೆದೋರಿದಾಗ ನಿಷ್ಠೆಯಿಂದ ಆ ಕಾರ್ಯ ನಿರ್ವಹಿಸಿದರು. ಈ ವಂಶದ ಒಂದು ಭಾಗ ಮುಂದೆ ಕಳಸಕ್ಕೆ ಹೋಗಿ ಅಲ್ಲಿಂದ ಕಾರ್ಕಳಕ್ಕೆ ಬಂದು ಬೈರರಸು ವಂಶವೆಂಬ ಹೆಸರಿನಿಂದ ರಾಜ್ಯಭಾರ ನಡೆಸಿತು. ಜೈನ ಸಂಸ್ಕೃತಿ ಮತ್ತು ಶಿಲ್ಪಕಲೆಗೆ ಈ ವಂಶದ ಕೊಡುಗೆ ಅಪಾರವಾದದ್ದು.

ಜೈನಧರ್ಮದ ಭದ್ರಕೋಟೆ

ಆಂತರಿಕ ಸ್ವಾತಂತ್ರ್ಯ ಪಡೆದ ಅಧಿಕ ಸಂಖ್ಯೆಯ ಜೈನ ಅರಸು ಬಲ್ಲಾಳರುಗಳು, ಸಾಮಂತರು ಮತ್ತು ಹೆಗ್ಗಡೆಗಳು ಕರ್ನಾಟಕದ ಕರಾವಳಿಯಲ್ಲಿ ಜೈನಧರ್ಮಕ್ಕೆ ಹೊಸದೊಂದು ಆಯಾಮವನ್ನು ಸೃಷ್ಟಿಸಿದರು. ಕರ್ನಾಟಕದ ಇತರೆ ಭಾಗಗಳಲ್ಲಿ ಘಾಸಿಗೊಂಡು ಅವನತಿಯ ಹಾದಿ ಹಿಡಿದಿದ್ದ ಈ ಧರ್ಮ ಕರಾವಳಿಯಲ್ಲಿ ಭದ್ರ ನೆಲೆಯೊಂದನ್ನು ಪಡೆಯಿತು. ಧರ್ಮರಕ್ಷಣೆಗಿದ್ದ ಕೊರತೆಗಳನ್ನು ನೀಗಿಸಿಕೊಂಡು ಸಹಬಾಳ್ವೆ ಮತ್ತು ಸಮನ್ವಯತೆ ಆಧಾರದಲ್ಲಿ ಇಲ್ಲಿನ ರಾಜರು ಜೈನಧರ್ಮ ಒಂದು ಸ್ವರ್ಣಯುಗವನ್ನೇ ಅನುಭವಿಸುವಂತೆ ಮಾಡಿದರು. ಜೈನ, ಜೈನೇತರ ಎಂಬ ಭೇದವೆನಿಸಿದ ಸಮಾಜ ಸೃಷ್ಟಿಯಾಯಿತು. ಬಸದಿ, ದೇವಾಲಯಗಳ

ರಚನೆ ಜೈನ ರಾಜರಿಂದಾಯಿತು. ಎರಡೂಕಡೆ ಎಲ್ಲಾಜನರು ಒಟ್ಟಿಗೆ ಕಲೆಯ ಪೂಜೆ, ಉತ್ಸವಗಳನ್ನು ನಡೆಸುವ ಪದ್ಧತಿ ಬೆಳೆಯಿತು. ಒಟ್ಟಾರೆಯಾಗಿ ಜೈನಧರ್ಮವು ಕಾಲಬದಲಾದಂತೆ ಕರಾವಳಿ ಭಾಗದಲ್ಲಿ ತಮ್ಮಧರ್ಮವನ್ನು ಗಟ್ಟಿಯಾಗಿ ನಿಲ್ಲಿಸುವಂತಹ ಶಕ್ತಿಯನ್ನು ಪ್ರದರ್ಶಿಸುವ ಜೊತೆಗೆ ಅನೇಕ ಕಡೆಗಳಲ್ಲಿ ಸಮನ್ವಯತೆ ಕೊಂಡಿ ಬೆಳೆಸಿದರು. ಈ ಎಲ್ಲಾರ ಆಶಯ ಮತ್ತು ಸಹಕಾರಗಳೊಂದಿಗೆ ರಾಜ್ಯ ಮತ್ತು ರಾಷ್ಟ್ರಕ್ಕೆ ಅಮೂಲ್ಯ ಕಾಣಿಕೆಗಳಾಗಬಲ್ಲಂತಹ ಕಲಾಪ್ರಕಾರಗಳನ್ನು ಜೈನ ರಾಜರುಗಳು ಸೃಷ್ಟಿಸಿದರು.

ವಿಜಯ ನಗರ ಕಾಲದಲ್ಲಿ ಇಡೀ ಕರಾವಳಿ ನವನೋತ್ಸಾಹದ ಚಿಲುಮೆಯಾಯಿತು. ಇದರ ಸುಮಧುರತ್ವ ಈ ಕಾಲದ ವಿದೇಸಿ ವರ್ತಕ ಯಾತ್ರಿಕರ ಬರೆಹಗಳಲ್ಲಿ ಪ್ರಕಟಗೊಂಡಿತು.[೬]

ಕರಾವಳಿಯಲ್ಲಿ ವಿವಿಧ ಧರ್ಮಗಳು

ಮಾನವ ತನ್ನ ದೈನಂದಿನ ಜೀವನವನ್ನು ಸಾಗಿಸಲು ಹಾಗೂ ದೈಹಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಆರ್ಥಿಕ, ಸಾಮಾಜಿಕ, ವೈವಾಹಿಕ ಮತ್ತು ಕೌಟುಂಬಿಕ ವ್ಯವಸ್ಥೆಗಳನ್ನು ರೂಪಿಸಿಕೊಂಡಂತೆಯೇ ಮಾನಸಿಕ ಸ್ವಾಸ್ಥ್ಯ ಹಾಗೂ ನೆಮ್ಮದಿಯನ್ನು ಹೊಂದಲು ಧಾರ್ಮಿಕ ವ್ಯವಸ್ಥೆಯನ್ನು ರೂಢಿಸಿಕೊಂಡಂತೆ ತೋರುತ್ತದೆ. ಧರ್ಮದ ಪರಮೋದ್ದೇಶ ಜೀವನಕ್ಕೆ ಸಾರ್ಥಕತೆಯನ್ನು ಒದಗಿಸುವುದು ಅದು ಮನುಷ್ಯನ ಬದುಕಿನ ನೀತಿ-ನಿಯಮಗಳಿಗೆ ಹಲವು ಇಂದು ಪ್ರಚಲಿತ ವಿರುವ ವ್ಯವಸ್ಥಿತ ಧರ್ಮಗಳಿಗಿಂತಲೂ ಪ್ರಾಚೀನವಾದವು.

ಧರ್ಮವೆಂದರೆ ಮತೀಯು ಆಚಾರ -ವಿಚಾರಗಳ ಹಿಂದಿರುವ ಸಮಾನ ಮನೋವೃತ್ತಿಯೆಂದು "ರಿಲಿಜನ್" ಎಂಬರ್ಥದಲ್ಲಿ ವಾಡಿಕೆಯ ಮತೀಯ ಅನುಷ್ಠಾನ ಎಂದೂ ಅರ್ಥೈಸಲಾಗುತ್ತದೆ. ಹಾಗೆಯೇ ಧರ್ಮ ಎಂದರೆ ದೈವಗಳು ಹಾಗೂ ಭಕ್ತರು, ಧರ್ಮಸ್ಥಾಪಕರು ಹಾಗೂ ಅವರ ಭೋದನೆಗಳು ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ವಾಸ್ತವದಲ್ಲಿ ಧರ್ಮವು ಆಯಾ ನಾಡಿನ ಜನರ ಸಾಮಾಜಿಕ ಆರ್ಥಿಕ ಜೀವನದ ಕಥನವೇ ಆಗಿದೆ. ಅದು ಜನರ ದಿನನಿತ್ಯದ ಬದುಕಿನ ಭಾಗವಾಗಿ ರೂಪುಗೊಂಡ ಲೋಕ ಕೂಡ ಆಗಿದೆ. ಈ ಗ್ರಹಿಕೆಯ ಹಿನ್ನಲೆಯಲ್ಲಿಯೇ ಕರಾವಳಿ ಕರ್ನಾಟಕದ ವಿವಿಧ ಧರ್ಮಗಳನ್ನಿಲ್ಲಿ ನೋಡಲಾಗಿದೆ.

ಭಾರತವು ಅನೇಕ ಧರ್ಮಗಳಿಂದ ಕೂಡಿದ ದೇಶವಾಗಿದ್ದಲ್ಲಿ, ಇಲ್ಲಿ ಹಿಂದೂ, ಬೌದ್ಧ, ಜೈನ, ಸಿಕ್, ಮುಸ್ಲಿಂ, ಕ್ರೈಸ್ತ, ಮುಂತಾದವುಗಳು ಸ್ಥಾಪನೆಗೊಂಡು ಬೆಳವಣಿಗೆಯಾಗುತ್ತಾ ಬಂದಿವೆ. ಭಾರತೀಯರು ಅನಾದಿಕಾಲದಿಂದಲೂ ಬೆಳೆಸಿಕೊಂಡು ಬಂದ ಧಾರ್ಮಿಕ ಸಹಿಷ್ಣುತೆಯ ಪ್ರಭಾವದಿಂದಾಗಿ ಅನ್ಯ ದೇಶಗಳಿಂದ ಬಂದ ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳಿಗೆ

೬ ಡಾ. ಆನಂದ ಪೂಜಾರ್ : ಕರಾವಳಿ ಕರ್ನಾಟಕದ ಕಾವಿಚಿತ್ರಕಲೆ. ಡಿ.ಲಿಟ್ ಮಹಾಪ್ರಬಂಧ. ಪುಟ-೧೬

ವಿಶೇಷವಾದ ಸ್ಥಾನವನ್ನು ನೀಡಲಾಗಿದೆ. ಪ್ರಸ್ತುತ ದಿನಗಳಲ್ಲಿ ವಿವಿಧ ಧರ್ಮಿಯರು ತಾವೆಲ್ಲಾ ಭಾರತೀಯರು ಎಂಬ ಮನೋಭಾವ ಬೆಳೆಯುವಂತೆ ಮಾಡುವಲ್ಲಿ ನಮ್ಮಸಂಸ್ಕೃತಿಯ ಸಹಿಷ್ಣತೆಯ ಅಂಶನೂ ಪ್ರಧಾನವಾಗಿದೆ.[೨]

ಶತ ಶತಮಾನಗಳಿಂದ ಕರ್ನಾಟಕವನ್ನು ಆಳಿದ ಅರಸರು ವಿವಿಧ ಧರ್ಮಗಳಿಗೆ ಆಶ್ರಯಧಾತರಾಗಿ ಎಲ್ಲಾಧರ್ಮಗಳೂ ಇಲ್ಲಿ ಬಾಳಿ ಬೆಳಗುವಂತೆ ಮಾಡಿದರೆ, ಕನ್ನಡ ನಾಡಿನ ಇಹಾಸದ ಆರಂಭಕಾಲದಲ್ಲಿಯೇ ಜೈನಧರ್ಮ ಇಲ್ಲಿಗೆ ಬಂದು ವಿಶಿಷ್ಟ ಸ್ಥಾನಮಾನವನ್ನು ಪಡೆದು ಭದ್ರವಾಗಿ ನೆಲೆಯೂರಿತು. ಅಶೋಕನು ಬೌದ್ಧ ಧರ್ಮವನ್ನು ಪ್ರಚಾರಮಾಡಲು ಇದು ಕೇಂದ್ರವಾಯಿತು. ಸಮಾನತೆಯ ತಳಹದಿಯ ಬಸವಣ್ಣನವರ ವೀರಶೈವ ಧರ್ಮ ಹಾಗೂ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳ ನೆಲೆ ವೀಡಾಯಿತು. ಇಲ್ಲಿ ಇಸ್ಲಾಂ, ಕ್ರೈಸ್ತ ಧರ್ಮಗಳೂ ನೆಲೆಗೊಂಡು ವಿಶಿಷ್ಟವಾದ ಸ್ಥಾನ ಪಡೆದವು. ಅದೇ ರೀತಿಯಾಗಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ಕರಾವಳಿ ಕರ್ನಾಟಕದಲ್ಲೂ ಅವರವರ ಧರ್ಮಗಳನ್ನು ಉಳಿಸಿ ಬೆಳೆಸುವಲ್ಲಿ ನಿಷ್ಠರಾಗಿರುವ ಧರ್ಮಪ್ರವಾಚರು, ವಿಶೇಷವಾಗಿ ಕರಾವಳಿ ಭಾಗದಲ್ಲಿ ಸರಿಸಮನಾವೆಂಬಂತೆ ಎಲ್ಲಾ ಧರ್ಮದ ಮತ ಬಾಂದವರಿದ್ದಂತಹ ಸರ್ವಧರ್ಮಗಳ ನೆಲೆಯಾಗಿದೆ.

ಜೈನ ಧರ್ಮ

ಜೈನಧರ್ಮ ಕರ್ನಾಟಕದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಉತ್ತರಭಾರತದಲ್ಲಿ ಸ್ಥಾಪನೆಯಾದ ಜೈನಧರ್ಮ, ಬೌದ್ಧಧರ್ಮಕ್ಕಿಂತಲೂ ಪ್ರಾಚೀನವಾದದ್ದು "ಅಂಹಿಂಸಾ ಪರಮೋಧರ್ಮಃ"ವನ್ನು ಸಾರಿದ ಪಾರ್ಶ್ವನಾ ಹಾಗೂ ಅವನ ತರುವಾಯ ಮಹಾವೀರರಿಂದ ಪುರಸ್ಕರಿಸಲ್ಪಟ್ಟು ನಂತರದ ಕಾಲದಲ್ಲಿ ಶ್ವೇತಾಂಬರ, ದಿಗಂಬರ, ಯಾಪನೀಯ ಶಾಖೆಗಳಾಗಿ ಬೆಳೆಯಿತು. ಕ್ರಿಪೂ, ೫ನೇ ಶತಮಾನದಲ್ಲಿ ಮೌರ್ಯವಂಶದ ಚಂದ್ರಗುಪ್ತ ಹಾಗೂ ಭದ್ರಬಾಹುಗಳು ಉತ್ತರದಿಂದ ಬಂದು ಶ್ರವಣ ಬೆಳಗೋಳದಲ್ಲಿ ನೆಲೆಸಿ, ಅದನ್ನೊಂದು ರಾಷ್ಟ್ರೀಯ ಮಹತ್ವದ ಜೈನ ಕೇಂದ್ರವನ್ನಾಗಿಸಿದರು. ಭದ್ರಬಾಹು ಮುನಿಗಳು ನಂತರದ ಕಾಲದಲ್ಲಿ ಅವರ ಶಿಷ್ಯರು ಚೋಳ ಪಾಂಡ್ಯ ರಾಜ್ಯಗಳಲ್ಲೂ ಮತ ಪ್ರಚಾರವನ್ನು ಕೈಗೊಂಡರು.

ಕನ್ನಡನಾಡಿನ ಕದಂಬ, ರಾಷ್ಟ್ರಕೂಟ, ಗಂಗ, ಚಾಳುಕ್ಯ, ಹೊಯ್ಸಳ ಮುಂತಾದ ಅರಸು ಮನೆತನಗಳು ನೀಡಿದ ಪ್ರೋತ್ಸಾಹದಿಂದ ಜೈನ ಧರ್ಮವು ದಕ್ಷಿಣದಲ್ಲಿ ಪ್ರಬಲವಾದ ನೆಲೆಯನ್ನು ಕಂಡಿತು. ವಿವಿಧ ಅರಸರು ಜೈನಕವಿಗಳಿಗೆ ಆಶ್ರಯವನ್ನು ನೀಡಿದುದಲ್ಲದೆ, ಹಲವು ಚೈತ್ಯಾಲಯಗಳನ್ನು ಬಸದಿಗಳನ್ನು ನಿರ್ಮಿಸಿದರು. ಅದರಲ್ಲೂ ರಾಷ್ಟ್ರಕೂಟರು, ಗಂಗರು ಜೈನ ಧರ್ಮಕ್ಕೆ ರಾಜಮನ್ನಣೆಯನ್ನು ನೀಡಿದರು.

೨. ವೆಂಕಟರೆಡ್ಡಿ ರಾಮರೆಡ್ಡಿ : ಕರ್ನಾಟಕ ಸಂಗಾತಿ (ಕರ್ನಾಟಕದ ಧರ್ಮಗಳು), ಪುಟ-೪೮೬

ಕರ್ನಾಟಕದಲ್ಲಿ ಜೈನಧರ್ಮವನ್ನು ರೂಪಿಸುವಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದ್ದು ಶ್ರವಣ ಬೆಳಗೋಳ. ಇದು ಜೈನ ಸಮುದಾಯದ ಪುಣ್ಯಕ್ಷೇತ್ರವಾಗಿದ್ದು. ಭದ್ರಬಾಹು ಮುನಿಗಳ ಕಾಲದಿಂದ ಇಂದಿನ ಪ್ರಮುಖ ಜೈನಧರ್ಮದ ಜಾಗೃತ ಸ್ಥಳವಾಗಿ ಕಾಣಿಸಿಕೊಂಡಿದೆ. ಸಾವಿರಾರು ಭಕ್ತ ಆಶ್ರಯ ದಾಮದಂತಿರುವ ಈ ಸ್ಥಳವು ಪ್ರೇಕ್ಷಣಿಯವು, ದೇವ ಆರಾಧಕರ ಸ್ಥಳವು ಆಗಿದೆ. ಹಾಗೆಯೇ ಕರಾವಳಿ ಕರ್ನಾಟಕದಲ್ಲಿ ಮಂಗಳೂರು, ಉಡುಪಿ, ಉತ್ತರಕನ್ನಡದ ಗೇರುಸೊಪ್ಪೆ, ಧರ್ಮಸ್ಥಳ, ಕಾರ್ಕಳ, ಮುಳಗುಂದ, ಮೂಡಬಿದರೆ, ಮುಂತಾದ ಊರುಗಳಲ್ಲಿ ತಮ್ಮ ಧರ್ಮಿಯ ಗೋಮ್ಮಟೇಶ್ವರ ಮೂರ್ತಿ ಹಾಗೂ ಬಸದಿಗಳನ್ನು ನಿರ್ಮಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಬೌದ್ಧಧರ್ಮ

ಕ್ರಿ. ಪೂ. ಆರನೇ ಶತಮಾನದಲ್ಲಿ ಭಗವಾನ್ ಬುದ್ಧನಿಂದ ಸ್ಥಾಪಿತವಾದ ಬೌದ್ಧ ಧರ್ಮ, ಜೈನ ಧರ್ಮದ ತರುವಾಯ ಕಾಣಿಸಿಕೊಂಡ ಭಾರತದ ಪ್ರಮುಖ ಧರ್ಮವಾಗಿದೆ. ಮಧ್ಯಭಾರತವು ಬೌದ್ದ ಧರ್ಮದ ಪ್ರಮುಖ ಕೇಂದ್ರವಾಗಿತ್ತು. ಅಶೋಕ ಚಕ್ರವರ್ತಿ (ಕ್ರಿ.ಪೂ. ೨೪೦) ಯ ಕಾಲದಲ್ಲಿ ಬೌದ್ಧ ಧರ್ಮವು ರಾಜ್ಯದ ಅಧಿಕೃತ ಧರ್ಮವಾಗಿ ಬೆಳೆಯಿತು. ಇದೇ ಕಾಲಕ್ಕೆ ಕರ್ನಾಟಕಕ್ಕೂ ಬೌದ್ದ ಧರ್ಮ ಪಾದಾರ್ಪಣೆ ಮಾಡಿತು.

ಬೌದ್ಧ ಧರ್ಮವು ಕರಾವಳಿ ಭಾಗದಲ್ಲಿ ಕಡಿಮೆ ಎನಿಸಿದರೂ, ಮಂಗಳೂರು, ಕಾರವಾರ, ಉಡುಪಿ, ನಗರಗಳಲ್ಲಿ ವಿಹಾರಗಳು, ಚೈತ್ಯಾಲಯಗಳು ಇರುವುದನ್ನು ಕಾಣಬಹುದು. ಒಟ್ಟಾರೆಯಾಗಿ ಬೌದ್ಧ ಧರ್ಮ ಕರ್ನಾಟಕದಲ್ಲಿ ಕ್ಷೀಣವಾದರೂ ಬುದ್ದ ಬೋದಿಸಿದ ಪರಮತ ಸಂಹಿಷ್ಣುತೆಯ ಸಂದೇಶಮಾತ್ರ ಕರ್ನಾಟಕದಲ್ಲಿ ಇಂದಿಗೂ ನೆಲೆಯೂರಿದೆ. ಒಂದು ಕಾಲಕ್ಕೆ ಕರ್ನಾಟಕದಲ್ಲಿ ಹರಡಿದ್ದ ಬೌದ್ದ ಧರ್ಮ ಈಗ ಬೇರೆ ರೂಪಾಂತರದಲ್ಲಿದೆ. ಕರ್ನಾಟಕದಲ್ಲಿ ಅನೇಕ ದಲಿತರು ಬೌದ್ಧ ಧರ್ಮ ಸ್ವೀಕರಿಸಿದ್ದಾರೆ.

ಹಿಂದೂಧರ್ಮ

ವೈದಿಕ ಧರ್ಮ ಭಾರತೀಯ ಧರ್ಮಗಳಲ್ಲಿ ಪ್ರಾಚೀನ ವಾದದ್ದು. ಇದರ ಮೂಲವನ್ನು ಸಹ ಸಿಂದೂ ನಾಗರೀಕತೆಯ ಕಾಲದಿಂದಲೇ ಹೇಳುತ್ತಾರೆ. ಆರ್ಯರು ಭಾರತಕ್ಕೆ ಬಂದು ನೆಲೆಸಿದ ನಂತರ ಬೌದ್ದ, ಜೈನ, ಮತಗಳ ಉದಯಿಸಿರುವವರೆಗಿನ ಕಾಲವನ್ನು ವೈದಿಕಯುಗ ಅಥವಾ ವೇದಗಳಕಾಲವೆಂದು ಕರೆಯಲಾಗಿದೆ. ವೈದಿಕ ಧರ್ಮವೆಂದರೆ ವೇದಾನುಸಾರಿಯಾದ ಧರ್ಮವೆಂದರ್ಥ. ಭಾರತೀಯ ವೇದಗಳನ್ನು ಅನಾದಿ ನಿತ್ಯನೆಂದು ನಂಬಿರುವುದರಿಂದ ತಮ್ಮ ಧರ್ಮವನ್ನು ಸನಾತನ ಧರ್ಮವೆಂದು ಕರೆದಿರುತ್ತಾರೆ. ಭಾರತವನ್ನು ''ಹಿಂದೂ ದೇಶ'' ವೆಂದು ಕರೆಯುವುದು ವಾಡಿಕೆಯಾದ ಮೇಲೆ ಇಲ್ಲಿ ಬಹುಸಂಖ್ಯಾತರ ಧರ್ಮವನ್ನು

ಹಿಂದೂಧರ್ಮವೆಂದು ಕರೆಯಲಾಗುತ್ತದೆ. ಇದಲ್ಲದೇ ಬ್ರಾಹ್ಮಣ ಧರ್ಮವೆಂತಲೂ ಕರೆಯುತ್ತಾರೆ. ಹಿಂದೂ ಆರಂಭದಲ್ಲಿ ಭೌಗೋಳಿಕತೆಯನ್ನು ಗುರುತಿಸುವ ಪದವಾಗಿ ಬಳಕೆಯಾದರೂ ನಂತರದ ಕಾಲದಲ್ಲಿ ವಿಶಿಷ್ಟ ಧರ್ಮವಾಗಿ ಆಚರಣೆಯಲ್ಲಿ ಬಂದಿರಬೇಕು, ಹಾಗೆಯೇ ಕರಾವಳಿ ಕರ್ನಾಟಕದಲ್ಲಿ ಹಿಂದೂ ಧರ್ಮದ ಅನೇಕ ಮಠಗಳು ಮಂದಿರಗಳನ್ನು ಕಾಣಬಹುದಾಗಿದೆ. ವಿಶೇಷವಾಗಿ ಹಿಂದೂಧರ್ಮವು ಈ ಭಾಗದಲ್ಲಿ ತಮ್ಮದೇ ಆದ ವೈಶಿಷ್ಟ್ಯಪೂರ್ಣ ಹಿನ್ನೆಲೆಯ ಇತಿಹಾಸವನ್ನು ಸೃಷ್ಟಿಸಿರುವುದು ಹಾಗೂ ಧರ್ಮವು ಬೆಳೆಯುವ ಉದ್ದೇಶವನ್ನು ತಮ್ಮದೇ ಆದ ಪ್ರವರ್ತಕರ ನಡುವಿನ ಸ್ನೇಹ ಪ್ರೀತಿಗೆ ಸಮ್ಮತಿಸಿ ಅವರದೇ ಆದ ಆದ್ಯ ಪ್ರವೃತ್ತಿಗೆ ತಮ್ಮನ್ನು ತಾವು ತೊಡಗಿಸಿಕೊಂಡು ಹಿಂದೂ ಧರ್ಮ ಬೆಳೆಸಲು ಮುಂದಾಗಿರುವುದು ಧರ್ಮದ ಪ್ರತಿಷ್ಠೆ ಹಾಗೂ ಪ್ರಬಲ ವೆಂಬುದನ್ನೂ ತೋರಿಸುವಂತಹದ್ದಾಗಿದೆ.

ಇಸ್ಲಾಂ ಧರ್ಮ

ಹೊರನಾಡಿನಿಂದ ಬಂದ ಧರ್ಮಗಳಲ್ಲಿ ಇಸ್ಲಾಂ ಧರ್ಮ ಪ್ರಮುಖವಾದದ್ದು. ಏಕದೇವತಾ ಧರ್ಮವನ್ನು ಬೋಧಿಸಿ ಜನರಲ್ಲಿ ಜಾಗೃತಿ ಹಾಗೂ ಅಮಿತೋತ್ಸಾಹವನ್ನು ತಂದವರು ಪ್ರವಾದಿ ಮಹಮ್ಮದ್ ಪೈಗಂಬರರು ಕ್ರಿ.ಶ.೫೭೦ ೬೩೨ ಇಸ್ಲಾಂ ಧರ್ಮವನ್ನು ಮೊದಲು ಅರಬ್ಬರು ಅಂಗೀಕರಿಸಿ, ಅದನ್ನು ಹರಡಲು ಪ್ರಮುಖ ಕಾರಣಕರ್ತರಾದರು. ಅರಬ್ಬ ಪತನದೊಂದಿದೆ ಪರ್ಶಿಯನ್ನರ ನಂತರ ಟರ್ಕರು ಈ ಧರ್ಮವನ್ನು ಏಷ್ಯಾದ ಧರ್ಮಗಳಲ್ಲಿ ಪ್ರಮುಖ ಧರ್ಮವಾಗಲೂ ದುಡಿದರು.

ಕರ್ನಾಟಕದಲ್ಲಿ ಬಹುಮನಿಗಳಿಂದ ಹಿಡಿಗು ಟಿಪ್ಪುಸುಲ್ತಾನರ ತನಕ ಆಳಿದ ಹಲವಾರು ದೊರೆಗಳ ಕಾಲದಲ್ಲಿ ಅನೇಕ ಚಾರಿತ್ರಿಕ ಒತ್ತಡಗಳು ಜನರ ಮತಾಂತರಕ್ಕೆ ಕಾರಣವಾಗಿಬಹುದು. ಆದರೆ ಮುಖ್ಯವಾಗಿ ಕೆಳಜಾತಿಗೆ ಸೇರಿದ ಜನ ಅಪಮಾನರಹಿತ ಬದುಕಿಗಾಗಿ ಸಾಮಾಜಿಕ ಸಮಾನತೆಗಾಗಿ ಇಸ್ಲಾಂ, ಕ್ರೈಸ್ತಧರ್ಮಗಳತ್ತ ಹೋದರು.

ಶತಮಾನಗಳಿಂದ ನಾಡಿನಲ್ಲಿ ನೆಲೆಗೊಂಡಿರುವ ಇಸ್ಲಾಂ ಧರ್ಮ ಇಂದು ಕರ್ನಾಟಕ ಹಾಗೂ ಕರಾವಳಿ ಕರ್ನಾಟಕದ ಪ್ರಮುಖ ಧರ್ಮವಾಗಿದ್ದು, ಪೂಜ್ಯವಾದ ಸ್ಥಳಗಳು, ಮಸೀದಿಗಳು ಹಾಗೂ ದರ್ಗಾಗಳನ್ನು ನಿರ್ಮಿಸಿಕೊಂಡು ತಮ್ಮದೇ ಆದ ಸಂಸ್ಕೃತಿಯಲ್ಲಿ ನಡೆದಾಡುತ್ತಿರುವುದನ್ನು ಕಾಣಬಹುದು.

ಕ್ರೈಸ್ತ ಧರ್ಮ

ಪ್ರಪಂಚದ ಧರ್ಮಗಳಲ್ಲಿ ಹಿರಿದಾದ ಧರ್ಮ ಕ್ರೈಸ್ತ ಧರ್ಮ, ಇದು ವಿಶಿಷ್ಟವಾದ ಹಾಗೂ ವಿನೂತನವಾದ ಧರ್ಮ. ಮಾನವ ಈ ಧರ್ಮದ ಕೇಂದ್ರ ವ್ಯಕ್ತಿ ಮಾನವೀಯ

ಮೌಲ್ಯಗಳು ಈ ಧರ್ಮದ ದೀಪ ಸ್ತಂಭಗಳು ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವುದು ಇದರ ಧ್ಯೇಯೋದ್ದೇಶ, ಯೇಸು ಕ್ರಿಸ್ತ ಕ್ರೈಸ್ತ ಧರ್ಮದ ಸ್ಥಾಪಕನೆಂಬುದು ಬಹುಜನ ವಿದ್ವಾಂಸರ ಅಭಿಪ್ರಾಯವಾಗಿದೆ.

ಕರ್ನಾಟಕಕ್ಕೆ ಕ್ರೈಸ್ತಮತ, ಹಿಂದಿನಿಂದಲೂ ಯೂರೋಪಿನೊಂದಿಗೆ ವ್ಯಾಪಾರ ಸಂಬಂಧಗಳಿದ್ದ ಕಾರಣ, ಕೊಂಕಣಿ ಕರಾವಳಿಗೆ ಬಂದಿತ್ತು. ಕ್ರಿ.ಶ. ೧೩೨೪ ರಲ್ಲಿ ಡೊಮಿನಿಕನ್ ಪಂಥಕ್ಕೆ ಸೇರಿದ ಪಾದ್ರಿಗಳು ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರೇ ಕರ್ನಾಟಕಕ್ಕೆ ಬಂದ ಮೊದಲ ಮಿಷನರಿಗಳು ಇವರು ಕೆನರಾ, ಮೈಸೂರು, ಮಲಬಾರ್ ಮತ್ತು ಟ್ರಾವಂಕೂರುಗಳಲ್ಲಿ ಮತ ಪ್ರಚಾರವನ್ನು ಪ್ರವೇಶಿಸಿದ ವಿವಿಧ ಸಂಘಗಳು, ಕೆನರಾ ಮಿಷನ್ (೧೫೩೪) ಮೈಸೂರು ಮಿಷನ್ (೧೬೪೮), ಕರ್ನಾಟಕ ಮಿಷನ್ (೧೭೦೦) ರಾಜ್ಯಾದ್ಯಂತ ಧರ್ಮ ಪ್ರಸಾರ ಕಾರ್ಯವನ್ನು ಮುಂದುವರೆಸಿದವು. ಕರ್ನಾಟಕದ ಭವ್ಯ ಪರಂಪರೆಯ ಪ್ರಕಾಶಕ್ಕೆ ಕಾರಣವಾಗಿ ಸಾವಿರಾರು ಚರ್ಚುಗಳು ಇಂದು ಮುಗಿಲೆತ್ತರಕ್ಕೆ ಮೂಡಿ ನಿಂತಿವೆ. ನಾನಾ ಬಗೆಯ ಭವ್ಯಬಂದದಿಂದ ಬಗೆ ಬಗೆಯ ಭಂಗಿಗಳಲ್ಲಿ ಕ್ರೈಸ್ತ ಸಂತರ ಹೆಸರನ್ನು ಹೊತ್ತು ಇವು ಕನ್ನಡ ಸಂಸ್ಕೃತಿಯ ಭಾಗವಾಗಿವೆ. ಕರಾವಳಿ ಕನ್ನಡದ ಕ್ರೈಸ್ತರು ನಾಡು ನುಡಿಗೆ ಸಲ್ಲಿಸುತ್ತಿರುವ ಸೇವೆ ಅಪಾರ. ಪರಸೇವೆಯೇ ಪರಮಾತ್ಮನ ಸೇವೆಯೆಂಬ ಧರ್ಮನಿಷ್ಠೆಯ ಜೊತೆಗೆ ಸೇವೆಯನ್ನು ಮೈಗೂಡಿಸಿಕೊಂಡು ತಾಳ್ಮೆ, ಸಹನೆ, ಸಹಕಾರಕ್ಕೆ ಹೆಸರಾಗಿದ್ದಾರೆ, ಕಾರವಾರ, ಮಂಗಳೂರು, ಉಡುಪಿಜಿಲ್ಲೆ ಹಾಗೂ ತಾಲೂಕುಗಳಲ್ಲಿ ಶಾಲಾ, ಕಾಲೇಜುಗಳು ಸೇವಾಶ್ರಮಗಳು, ಆಸ್ಪತ್ರೆಗಳು ಅನ್ನ ಛತ್ರಗಳು ಇಂದು ಬಹುಮಂದಿಯ ಮೆಚ್ಚುಗೆಗೆ ಪಾತ್ರವಾಗಿದೆ. ಎಲ್ಲಾ ಧರ್ಮಗಳಿಗೂ ಸರಿಸಮಾನ ವೆಂಬಂತೆ ಬಿಂಬಿತವಿರುವ ಕ್ರೈಸ್ತ ಧರ್ಮವು ಕರಾವಳಿ ಕರ್ನಾಟಕದಲ್ಲಿ ತನ್ನದೇ ಆದ ಅಸ್ತಿತ್ವವನ್ನು ಪಡೆದುಕೊಂಡಿದ್ದು ಈ ಭಾಗದಲ್ಲಿ ಸಮಾರು ಇನ್ನೂರ ಐವತ್ತ ರಿಂದ ಮೂರು ನೂರು ದೇವಾಲಯಗಳನ್ನು ನಿರ್ಮಿಸಿರುವುದು ಅವರ ನಿಷ್ಠೆಯ ಸಂಕೇತವೆಂಬಂತೆ ದೇವರ ಪ್ರೀತಿಗೆ ಪಾತ್ರರಾಗಿದ್ದಾರೆ.

ಜನಪದ ಕಲೆ ಮತ್ತು ಲಲಿತ ಕಲೆಗಳು

"ಜನಪದ ಕಲೆ" ಹೆಸರೇ ಸೂಚಿಸುವಂತೆ ಜನರಿಂದ ಹುಟ್ಟಿದ ಕಲೆ. ಈ ಕಲೆಯ ಎಲ್ಲಾ ಪ್ರಕಾರಗಳು ಚಿತ್ರಕಲೆಯಿರಲಿ, ನಾಟ್ಯಸಂಗೀತವಿರಲಿ ಕೆತ್ತನೆ ಕುಸುರಿಯಲ್ಲಿ ಒಂದು ತಲೆಮಾರಿನಿಂದ ಇನ್ನೊಂದು ತಲೆ ಮಾರಿಗೆ ಸಂಸ್ಕೃತಿ ಶಿಷ್ಟಾಚಾರವನ್ನು ಬದುಕಿನ ಮೌಲ್ಯಗಳನ್ನು ಹೊತ್ತು ತಂದಿರುವುದರಿಂದ ಈ ಕಲೆಗಳು ಜನಜೀವನಕ್ಕೆ ಹತ್ತಿರವಾಗಿವೆ. ಮತ್ತು ಬದುಕಿನ ಅವಿಭಾಜ್ಯ ಅಂಗವಾಗಿವೆ.

ಈ ಎಲ್ಲಾ ಕಲೆಗಳಿಗೂ ಮೂಲಭೂತವಾದ ಕಲೆ ಚಿತ್ರಕಲೆ. ಇದು ಒಂದು ಜನಾಂಗದ ಪ್ರದೇಶದ ಸಂಸ್ಕೃತಿಯ ಪ್ರತೀಕ. ಕ್ರಿ. ಪೂ. ೩೦೦೦ ವರ್ಷಗಳಲ್ಲಿ ಕೆತ್ತಿದ ಬರೆದ ಚಿತ್ರಗಳೇ ಸಾಕ್ಷಿ ನೀಡುತ್ತದೆ. ಚಿತ್ರಕಲೆಯಲ್ಲಿ ಬಹಳಷ್ಟು ಶೀರ್ಘಗತಿಯಿಂದ ಪರಿವರ್ತನೆಗಳು ನಡೆದಿದುದರಿಂದಾಗಿ ನಾವಿಂದು ಅಪರೂಪವಾಗಿ ಜನಪದ ಚಿತ್ತಾರಗಳನ್ನು ದೇವಸ್ಥಾನದ ಭಿತ್ತಿಗಳಲ್ಲಿ ಪ್ರಾಚೀನ ಸ್ಮಾರಕಗಳಲ್ಲಿ ಮಾತ್ರ ಕಾಣಬಹುದಾಗಿದೆ. ಆದರೆ ಕರಾವಳಿಯ ಹಳ್ಳಿಯ ಮಹಿಳೆಯರು ಅದನ್ನು ರಂಗೋಲಿಯ ಹಸೆ ಚಿತ್ರಗಳ ರೂಪದಲ್ಲಿ ಅದನ್ನು ಇಂದಿಗೂ ಜೀವಂತವಾಗಿರಿಸಿದ್ದಾರೆ.

ಈ ಪ್ರದೇಶದ ಜನಪದ ಚಿತ್ರಕಲೆ ಪ್ರತ್ಯೇಕವಾಗಿ ಇಂದು ಉಳಿದಿಲ್ಲವಾದರೂ ಅದರ ಪ್ರಭಾವದಿಂದ ಕಬ್ಬಿಣ, ಕಂಚು, ಚಿನ್ನ, ಮತ್ತು ಕರಕುಶಲ ಕೆಲಸಗಳಲ್ಲಿ ಕಾಣಬಹುದಾಗಿದೆ. ಕಂಚಿನ ಕೆಲಸದಲ್ಲಿ ಕರಾವಳಿ ಕನ್ನಡಿಗಳದ್ದು ಎತ್ತಿದ ಕೈ, ಭೂತಗಳ ಮುಖವಾಡಗಳು, ದೇವರ ಮೂರ್ತಿಗಳು ಪಂಚಪಾತ್ರೆ, ಘಂಟೆ, ಪಂಟಾಮಣಿ, ಜಾಗಟೆ, ಆರತಿ ಮುಂತಾದ ಪೂಜಾ ಪರಿಕರಗಳು, ಅಡುಗೆಯ ಪಾತ್ರೆಗಳು, ತಾಂಬೂಲ ಪುಡಿಮಾಡುವ ಉಪಕರಣಳು ಈ ಕಾಷ್ಠ ಶಿಲ್ಪಿಗಳಿಂದ ಸಂಶೋಧಿಸಲ್ಪಟ್ಟ ಜನಪದ ಕಲಾಕೃತಿಗಳು, ಕಬ್ಬಿಣವನ್ನು ಮೊದಲಿಗೆ ಕತ್ತಿ, ಹಾರೆ, ಕುಳ, ಉಳಿ, ಕೊಡಲಿ ಕುಡುಗೋಲು, ಚಾಣಗಲ ತಯಾರಿಗಾಗಿ ನಮ್ಮಲ್ಲಿ ಬಳಸಲಾಗಿದೆ. ಈ ಕೆಲಸಗಳಲ್ಲಿ ಕೌಶಲ್ಯವನ್ನು ಪಡೆದು ಕರ್ಮಿಕಾರರು ಕತ್ತರಿ, ಬೀಗ, ಖಡ್ಗ, ಕೋವಿ, ಪಿರಂಗಿ ಮುಂತಾದ ಉಪಯುಕ್ತ ವಸ್ತುಗಳನ್ನು ತಯಾರಿಸಿ ತಮ್ಮ ಜಾಣ್ಮೆಯನ್ನು ತೋರಿದರು. ಚಕ್ರದ ಸಂಶೋಧನೆಯ ಪರಿಣಾಮವಾಗಿ ರಥ, ಬಂಡಿ, ಪಲ್ಲಕ್ಕಿಗಳ ನಿರ್ಮಾಣವಾಯಿತು. ಈ ಪ್ರದೇಶದ ಬಹುಪಾಲು ಜಿಲ್ಲೆಗಳಲ್ಲಿ ರಥಕಾರರು ಸಾಕಷ್ಟು ಸಂಖ್ಯೆಯಲ್ಲಿದ್ದರು. ರಾಜರುಗಳ ಆಳ್ವಿಕೆಯ ಪತನದ ನಂತರ ರಥಶಿಲ್ಪಿಗಳು ದೇವರ ರಥವನ್ನು ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕರಾವಳಿ ಪ್ರದೇಶದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ದೇವಾಲಯಗಳಲ್ಲಿ ರಥಗಳಿರುವುದನ್ನು ಕಾಣಬಹುದು.

ಇನ್ನು ಪೂರ್ವವಾಗಿ ಯಂತ್ರೋದ್ಯಮಕ್ಕೆ ಒಳಪಡದೆ, ಜನಪದ ತಲೆಯಾಗಿಯೇ ಉಳಿದಿರುವ ಒಂದು ಉದ್ಯೋಗವೆಂದರೆ ಚಿನ್ನದ ಕೆಲಸ ಚಿನ್ನ ಬೆಳ್ಳಿ ಆಭರಣ ತಯಾರಿ ಮತ್ತು ಕುಸುರಿ ಕೆಲಸ ಬಹಳ ಸೂಕ್ಷ್ಮವಾದ ಕೌಶಲ್ಯಪೂರ್ಣವಾದ ಕೆಲಸ. ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸ್ವರ್ಣಕಾರರು ತಮ್ಮ ಕೌಶಲ್ಯಕ್ಕೆ ಲೋಕ ಪ್ರಸಿದ್ಧಿಯನ್ನು ಪಡೆದಿದ್ದಾರೆ.

ಪ್ರದರ್ಶನ ಕಲೆಗಳಲ್ಲಿ ಪ್ರಮುಖವಾದದ್ದು ಜನಪದ ಕುಣಿತ, ಕುಣಿತ. ಜೀವನದ ಅವಿಬಾಜ್ಯ ಅಂಗ. ಮಾನವನ ಭಾವನೆಗಳ ಸುಂದರ ಅಭಿವ್ಯಕ್ತಿ. ಪ್ರಾಚೀನ ಕಾಲದಿಂದಲೂ ಮಾನವನು ಕುಣಿತವನ್ನು ಆರಾಧನೆಯ ಒಂದು ಭಾಗವೆಂದು ಪರಿಗಣಿಸಿಕೊಂಡು ಬಂದಿದ್ದಾನೆ.

ಭೂತನೇಮ, ನಾಗಮಂಡಲ, ಕಾಡ್ಯನಾಟ, ಗೊಂದೂಳಿ, ಹೋಳಿಕುಣಿತ, ಬೈಸರ್ಕಳ ನೇಮ ಮುಂತಾದ ಹಲವಾರು ಆರಾಧನೆ ಪದ್ಧತಿಗಳಲ್ಲಿ ಕುಣಿತ ಈ ಪ್ರದೇಶಗಳ ಒಂದು ಪ್ರಧಾನ ಭಾಗವಾಗಿದೆ. ವೈದಿಕ ವಿಧಾನದಲ್ಲಿ ದೇವಸ್ಥಾನಗಳಲ್ಲಿ ನಡೆಯುವ ಪೂಜೆಗಳಲ್ಲಿಯೂ ಕೂಡ ಕುಣಿತ ಹಾಸು ಹೊಕ್ಕಾಗಿದೆ. ಉತ್ಸವ ಮೂರ್ತಿಯನ್ನು ಹೊತ್ತು ಅರ್ಚಕರು ದೇವಾಲಯದ ಸುತ್ತ ಬರುವ ಬಲಿಸೇವೆಯಲ್ಲಿ ಕುಣಿಯುವ ಕುಣಿತ, ಜನಪದ ಇನ್ನುಳಿದ ಕುಣಿತಗಳಲ್ಲಿ ಆರಾಧನೆಯ ಅಂಶ ಬೆರೆತಿದ್ದರೂ ಮನೋರಂಜನೆಗಾಗಿ ಕುಣಿಯುವ ಕುಣಿತಗಳು.

ಲಲಿತ ಕಲೆಗಳಲ್ಲಿ ಕುಣಿತ ಒಂದಾಗಿದ್ದು, ಪ್ರದರ್ಶಿತ ಕಲೆಯಾಗಿದೆ. ಕುಣಿತವು ಯಾವುದೇ ಜಾತಿಗೆ ಮಿಸಲಾಗಿಲ್ಲದಿರುವುದು ವಿಶೇಷ. ಪ್ರಾಚೀನ ಕಾಲದಲ್ಲಿ ಅದು ಸಾಮೂಹಿಕ ಜಾತಿಬೇದದ ಪರಿಗಣನೆ ಇಲ್ಲದೆ ನಡೆಸಲ್ಪಡುತ್ತಿತ್ತು. ಕಾಲಕ್ರಮೇಣ ಊಳಿಗಮಾನ್ಯ ಪದ್ಧತಿಯ ಪರಿಣಾಮವಾಗಿ ಕೆಲವೊಂದು ಜಾತ್ರೆಯಲ್ಲಿ ಮಾತ್ರ ಸ್ಥಿರವಾಗಿ ನೆಲೆಗೊಂಡಿತು.

ಯಕ್ಷಗಾನ ಬಯಲಾಟ ಅತ್ಯಂತ ಶ್ರೀಮಂತವಾದ ಕಲೆ ಪ್ರದರ್ಶನಕಲೆ. ಇತರ ಜನಪದ ಕಲೆಗಳಂತೆ ಮತ ಧರ್ಮಗಳಿಂದ ಪ್ರೇರಣೆಗೊಂಡು ವಿಕಾಸಗೊಂಡ ಕಲೆ. ಇದು ನೃತ್ಯ, ನಾಟಕ, ಗೀತ, ಚಿತ್ರಗಳ ಒಂದು ಸಮ್ಮಿಶ್ರಕಲೆ. ಈ ನಾಡಿನ ರಸಿಕ ಜೀವನಕ್ಕೆ ಯಕ್ಷಗಾನ ಹಿರಿಯ ಸಾಧನವಾಗಿದೆ. ಕರ್ನಾಟಕದಾದ್ಯಂತ ಬೇರೆ ಬೇರೆ ರೂಪಗಳಲ್ಲಿ ಕಂಡುಬರುವ ಪ್ರಾಚೀನ ಕಲೆಯಾದ ಯಕ್ಷಗಾನ ಬಯಲಾಟವನ್ನು ಮುಖ್ಯವಾಗಿ ಮೂಡಲಪಾಯ, ಪಡುವಲಪಾಯವೆಂಬ ಎರಡು ವಿಭಾಗ ಮಾಡುತ್ತಾರೆ. ಬಯಲು ಸೀಮೆಯ ಯಕ್ಷಗಾನವನ್ನು ಮೂಡಲಪಾಯವೆಂದೂ ಕರೆಯುತ್ತಾರೆ. ಪಡುವಲಪಾಯದಲ್ಲಿ ತೆಂಕುತಿಟ್ಟು ಬಡುಗತಿಟ್ಟು ಎಂಬ ಪ್ರಭೇದಗಳಿವೆ, ಉಡುಪಿಯಿಂದ ದಕ್ಷಿಣಕ್ಕೆ ತೆಂಕುತಿಟ್ಟು, ಮತ್ತು ಉತ್ತರಕ್ಕೆ ಬಡಗುತಿಟ್ಟು ಹೆಚ್ಚು ಪ್ರಚಾರದಲ್ಲಿದೆ. ಯಕ್ಷಗಾನ ಜನಪದ ಕಲೆಗಾಗಿ ಹುಟ್ಟಿಕೊಂಡಿದ್ದಾದರೂ ಕೆಲವೊಂದು ವಿಷಯಗಳಲ್ಲಿ ಶಿಷ್ಟಕಲೆಯಾಗಿ ಮಾರ್ಪಾಡು ಗೊಂಡಿದೆ. ಈ ಎರಡು ಪ್ರಬೇದಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಕಾಣಬಹುದು. ತೆಂಕುತಿಟ್ಟಿನ ಭಾಗವತರು ಜಾಗಟೆ ಹಿಡಿದು ಪದ ಹೇಳಿದರೆ ಬಡಗು ತಿಟ್ಟಿನ ಭಾಗವತರು ತಾಳ ಬಡಿದು ಪದ ಹೇಳುತ್ತಾನೆ. ಮುಕ್ತಾಯ ಹಂತದಲ್ಲಿ ದೀರ್ಘಸ್ವರ ಎಳೆಯುತ್ತಾರೆ. ಕರಾವಳಿಯ ಪ್ರದೇಶದಲ್ಲಿ ಯಕ್ಷಗಾನ ಪ್ರದರ್ಶನಗಳನ್ನು ನೀಡುವ ವೃತ್ತಿ ಕಲಾವಿದನ ಹಲವಾರು ಮೇಳಗಳಿವೆ. ಮಂದರ್ತಿ, ಮಾರುಕಟ್ಟೆ, ಕೂಟ ಹಿರಿಯಡ್ಕ, ಪೆರ್ಡೂರು, ನೌಕೂರು, ಕಟೀಲು, ಧರ್ಮಸ್ಥಳ, ಇರಾ, ಸುರತ್ಕಲಂ ಮುಲ್ಕಿ, ಕದ್ರಿ, ಪುತ್ತೂರು, ಸಾಲಿಗ್ರಾಮ, ಅಳದಂಗಡಿ, ಸುಂಕದ ಕಟ್ಟೆ ಉಡುಪಿ, ಅಡ್ಯಾರು, ಕೂಡ್ಲು, ಕುಂಬಳೆ, ಉಪ್ಪಳ, ಮೇಲಗಳು ದಿನಂಪ್ರತಿ ಪ್ರದೇಶದ ಹಲವಾರು ಕಡೆಗಳಲ್ಲಿ ಪ್ರದರ್ಶನಗಳನ್ನು ನಡೆಸುತ್ತಲೆ ಇರುತ್ತಾರೆ.

ಕರ್ನಾಟಕದ ಕರಾವಳಿಯಲ್ಲಿ ಕ್ರೈಸ್ತರು ಮತ್ತು ದೇವಾಲಯಗಳು

ಕರಾವಳಿ ಕರ್ನಾಟಕದ ಕ್ರಸ್ತೇತರ ಪರಿಸರದಲ್ಲಿ ಕ್ರೈಸ್ತ ಧರ್ಮವು ಹುಟ್ಟಿಬೆಳೆದದ್ದಕ್ಕೆ ಕಾರಣ ವಿಜಯನಗರ ಮತ್ತು ಕೆಳದಿಯ ಅರಸರು, ದೇವ ಪ್ರಭುತ್ವವಾಗದೆಯೂ ಧರ್ಮ ಸಂರಕ್ಷಣ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದದ್ದು, ಕರ್ನಾಟಕದ ಕರಾವಳಿ ಪ್ರದೇಶಕ್ಕೆ ಕ್ರೈಸ್ತ ಧರ್ಮವು ಆಗಮಿಸಿದುದರಿಂದ ರಾಜಕೀಯ, ಆರ್ಥಿಕ ಧಾರ್ಮಿಕ ಹಾಗೂ ಬೌದ್ಧಿಕ ಪರಿಣಾಮಗಳು ಕಾಣಿಸಿಕೊಂಡವು. ಕ್ರೈಸ್ತ ಧರ್ಮವು ಕರ್ನಾಟಕಕ್ಕೆ ಒಂದು ಭಾರೀ ಬಂಡೆಯೆಂತೆ ಬಂದೆರಗಲಿಲ್ಲ. ಏಕೆಂದರೆ ಕರಾವಳಿ ಕರ್ನಾಟಕಕ್ಕೆ ಬಂದ ಯುರೋಪಿಯನ್ ಕ್ರೈಸ್ತರಿಗೆ ಈ ಪ್ರದೇಶದ ಆಸಕ್ತಿಗಳಲ್ಲಿ ಘರ್ಷಣೆಗಳು ಎದುರಾದವು ಅದು ಪೋರ್ಚ್‌ಗೀಸ್‌ರಿಗೂ ಡಚ್ಚರಿಗೂ, ಪೋರ್ಚ್‌ಗೀಸರಿಗೂ ಫೆಂಚ್‌ರಿಗೂ, ಮತ್ತು ಪೋರ್ಚಗೀಸ್‌ರಿಗೂ ಮತ್ತು ಬ್ರಿಟೀಷರಿಗೂ ಹೀಗೆ ದೇಶಿಯ ಶಕ್ತಿಗಳು ಎಲ್ಲೆಲ್ಲಿ ಯಾವಾಗ ಸಾಧ್ಯವೋ ಅಲ್ಲೆಲ್ಲಾ ಆ ಕಾಲಾವಧಿಯಲ್ಲೆಲ್ಲಾ ಕ್ರೈಸ್ತ ಶಕ್ತಿಗಳ ನಡುವೆ ಬೇದ, ಭಿನ್ನಾಭಿಪ್ರಾಯಗಳನ್ನು ಮೂಡಿಸಿ, ಒಡಕು ತರಲು ಪ್ರಯತ್ನಿಸಿದುದನ್ನು ಇಂದು ನಾವು ಕಾಣಬಹುದು.

ಮುಖ್ಯವಾಗಿ ಈ ಅಧ್ಯಯನದ ಉದ್ದೇಶ ಕ್ರೈಸ್ತರ ಚಿತ್ರಗಳ ಕುರಿತು ಶೋಧಿಸುವಂತಹದ್ದಾಗಿದ್ದು, ಜೊತೆಗೆ ಕರಾವಳಿಯಲ್ಲಿನ ಕ್ರೈಸ್ತರ ಇತಿಹಾಸವನ್ನು ತಿಳಿಸುವ ಉದ್ದೇಶವು ಸ್ವಲ್ಪ ಮಟ್ಟಿಗೆ ಇದ್ದು, ವಿಜಯನಗರದ ಹಿಂದೂ ಸಾಮ್ರಾಜ್ಯದ ಅರಸರು ಮತ್ತು ಕೆಳದಿಯ ನಾಯಕರೊಂದಿಗೆ ಕ್ರೈಸ್ತರು ಹೊಂದಿದ್ದ ಸಂಬಂಧ ಇವುಗಳನ್ನು ಗುರುತಿಸುವುದು ಮತ್ತು ಆ ಪ್ರದೇಶದಲ್ಲಿ ವಿದೇಶಿಯ ಹಾಗೂ ದೇಶಿಯ ಕ್ರೈಸ್ತರ ಚಟುವಟಿಕೆಗಳನ್ನು ದಾಖಲಿಸುವುದು ಧಾರ್ಮಿಕ ದೃಷ್ಟಿಯಿಂದ ಪರಿಶೀಲಿಸಿದರೆ, ಕ್ರೈಸ್ತ ಧರ್ಮವು ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಲೌಕಿಕ ಮತ್ತು ಆಧ್ಯಾತ್ಮಿಕ ಹಂತಗಳೆರಡರಲ್ಲೂ ಹಲವು ಬಗೆಯಾಗಿ ಒಡೆದಿದ್ದನ್ನು ಇತಿಹಾಸದಲ್ಲಿ ನೋಡುತ್ತೇವೆ. ಉದಾಹರಣೆಗೆ ಯುರೋಪಿಯನ್ ದೇಶಗಳ ಲೌಕಿಕ ಸ್ತರದಲ್ಲಿ ಅಂತರ್ವಾಹಿನಿಯಾಗಿ ರಾಷ್ಟ್ರಿಯತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳು ಹರಿಯುತ್ತಿದ್ದವು. ಹಾಗೆಯೇ ಆಧ್ಯಾತ್ಮಿಕ ಸ್ತರದಲ್ಲಿ ಕ್ರೈಸ್ತ ಧರ್ಮವು ಕ್ಯಾಥೋಲಿಕರು, ಪ್ರಾಟೆಸ್ಟೆಂಟರು, ಆಂಗ್ಲಿಕನ್ನರು ಮತ್ತು ಕಾಲ್ವಿನಿಷ್ಠರು ಎಂದು ಹಲವು ಪಂಗಡಗಳಾಗಿ ಒಡೆದಿತ್ತು. ಹಂಗಾಗಿ ಆಧ್ಯಾತ್ಮಿಕ ಸ್ತರದಲ್ಲಾಗಲಿ ಲೌಕಿಕ ಸ್ತರದಲ್ಲಾಗಲಿ ಕ್ರೈಸ್ತ ಧರ್ಮವು. ಒಂದು ಅಖಂಡ ಶಕ್ತಿಯಾಗಿರಲಿಲ್ಲ. ಈ ಅವಧಿಯಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಕ್ರೈಸ್ತ ಧರ್ಮವು ಕಾಲಿರಿಸಿದ್ದನ್ನು ಅಧ್ಯಯನ ಮಾಡುವ ಮೊದಲು ತಿಳಿಯಲು ಅವಶ್ಯವಾದ ಅಂಶವಾಗಿದೆ.

ಕ್ರಿ.ಶ. ೧೫೦೦ ಕ್ಕಿಂತ ಮೊದಲೇ ಇಲ್ಲಿ ಕ್ರೈಸ್ತಧರ್ಮವಿದ್ದಿತು. ಆದರೆ ಪಶ್ಚಿಮ ಕರಾವಳಿಯ ಸಣ್ಣ ಸಣ್ಣ ಪ್ರದೇಶಗಳಿಗೆ ಅದು ಸೀಮಿತವಾಗಿದ್ದಿತು. ಅದರ ಪ್ರಭಾವ ಅಷ್ಟಾಗಿ ಗಮನಾರ್ಹವಾಗಿರಲಿಲ್ಲ. ಕ್ರಿ.ಶ. ೧೫೦೦ರ ನಂತರ ಅದು ಹೊಸ ರಭಸದಿಂದ ದಕ್ಷಿಣ ಭಾರತವನ್ನು ಪ್ರೇಶಿಸಿತು. ಈ ಕಾಲಾವಧಿಯಲ್ಲಿ ಕ್ರೈಸ್ತ ಧರ್ಮವು ರಾಜಕೀಯ, ಆರ್ಥಿಕ, ಧಾರ್ಮಿಕ ಹೀಗೆ ಹಲವು ಆಯಾಮಗಳನ್ನು ಹೊಂದಿದ್ದಿತು. ಅವೆಲ್ಲಾ ಪರಸ್ಪರ ಸಂಬಂಧಿಸಿದವು. ಹಾಗಾಗಿ ಈ ಅವಧಿಯ ಕ್ರೈಸ್ತ ಧರ್ಮವು ವಿದ್ವಾಂಸರ ವಿಶೇಷ ಗಮನವನ್ನು ಆಕರ್ಷಿಸುತ್ತದೆ. ಕ್ರೈಸ್ತಧರ್ಮದ ಎರಡನೇ ಅಲೆಖೀಸಿದ ಕಾಲವು ಪೋರ್ಚ್‌ಗೀಸ್ ವಿಸ್ತರಣೆ, ವಿಜಯನಗರದ ಪ್ರಬಲ ಸಾಮ್ರಾಜ್ಯದ ಬೆಳವಣಿಗೆ, ೧೫೬೫ರ ಅನಂತರ ಕೆಳದಿನಾಯಕರ ಪ್ರಾಬಲ್ಯ ಇವುಗಳಿಗೆ ಹೊಂದಿಕೆಯಾಗುತ್ತದೆ. ಕೆಳದಿ ಅರಸರ ಕಾಲದಲ್ಲಿ ಕ್ರೈಸ್ತರ ಚಟುವಟಿಕೆ ಚುರುಕಾಗಿತ್ತು.೧ ಈ ರೀತಿಯಲ್ಲಿ ಕ್ರೈಸ್ತರ ಇತಿಹಾಸ ತುಂಬ ಪ್ರಮುಖವಾದದ್ದು, ಜೊತೆಗೆ ವಿಜಯನಗರ ಮತ್ತು ಕೆಳದಿ ಕಾಲದಲ್ಲಿ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಕಂಡುಬಂದಿದ್ದ ಕ್ರೈಸ್ತರ ಅನೇಕ ಚಟುವಟಿಕೆಗಳ ವಿವಿಧ ಆಯಾಮಗಳನ್ನು ಒಟ್ಟಿಗೆ ತರಲು ಈ ಅಧ್ಯಯನವು ಪ್ರಯತ್ನಿಸಲ್ಪಟ್ಟಿದೆ. ಇದು ಕೇವಲ ಧಾರ್ಮಿಕ ಅರ್ಥದಲ್ಲಿ ಅಥವಾ ಚರ್ಚೆಗಳ ಇತಿಹಾಸವೆಂಬ ಅರ್ಥದಲ್ಲಿ ಕ್ರೈಸ್ತ ಧರ್ಮದ ಅಧ್ಯಯನವಷ್ಟೇ ಅಲ್ಲ, ಅದಕ್ಕಿಂತ ಭಿನ್ನವಾದದ್ದು, ನಮ್ಮ ಭಾರತಕ್ಕೆ ಪೋರ್ಚ್‌ಗೀಸ್ ಕ್ರೈಸ್ತರು, ಡಚ್‌ಕ್ರೈಸ್ತರು, ಇಂಗ್ಲೀಷ್ ಕ್ರೈಸ್ತರು ಹಾಗೂ ಫ್ರೆಂಚ್ ಕ್ರೈಸ್ತರು ಎಂಬ ಹೆಸರಿನ ವಿದೇಶಿ ಕ್ರೈಸ್ತರು, ಕೆಲವು ವಿದ್ವಾಂಸರಿಗೆ ಇಲ್ಲಿ ಸಾಂಸ್ಕೃತಿಕವಾದ ವಾತಾವರಣದಲ್ಲಿ ಧರ್ಮವನ್ನು ನೆಲೆ ನಿಲ್ಲಿಸುವ ಕಾರಣಕ್ಕೆ, ಹಾಗೂ ತಮ್ಮಲ್ಲೆ ಭಿನ್ನ ರೀತಿಯ ಕ್ರೈಸ್ತರನ್ನು ತೋರಿಸುವ ಹುನ್ನಾರದ ಪ್ರತೀಕವಾಗಿ ಒಳಜಗಳಗಳು ನಡೆದು, ಸಮಕಾಲೀನ ಜಗತ್ತಿನಲ್ಲಿ ಕ್ರೈಸ್ತರನ್ನು ಅವರ ರಾಷ್ಟ್ರೀಯತೆ, ಕುಲ ಮತ್ತು ನೀತಿ, ನಿಯಮಗಳ ಬಗೆಗಳಿಂದ ವಿಭಾಗಿಸಿ ಗುರುತಿಸಲಾಗಿತ್ತು. ಪ್ರಸ್ತುತ ಅಧ್ಯಯನವು ಈ ಕ್ಷೇತ್ರದಲ್ಲಿನ ಇತರ ಕೃತಿಗಳಿಗಿಂತ ಒಂದು ರೀತಿಯಲ್ಲಿ ಭಿನ್ನವರಿದೇಳಬಹುದು. ಕಾರಣ ಲಲಿತಕಲೆಗಳಲ್ಲಿ ಪ್ರಮುಖವಾದ ಅಂಗಗಳಾದ ಚಿತ್ರಕಲೆ ಮತ್ತು ಶಿಲ್ಪಕಲೆಗಳ ಕುಶಲೋಪರಿಗಳನ್ನು ಮುಖ್ಯವಾಗಿಟ್ಟುಕೊಂಡು, ಕರಾವಳಿ ಕರ್ನಾಟಕದಲ್ಲಿನ ಕ್ರೈಸ್ತರ ಕುರಿತು ಹಾಗೂ ದೇವಾಲಯಗಳು, ಅದರೊಳಗಡಗಿರುವ ಚಿತ್ರ, ಬಿತ್ತಿಚಿತ್ರ, ಶಿಲ್ಪ ಮತ್ತು ಗಾಜಿನ ಮೇಲೆ ರಚಿಸಿರುವ ಕಲಾಕೃತಿಗಳ ಕುರಿತು ಚರ್ಚಿಸಿ ಒಂದೆಡೆ ಕ್ರೋಡೀಕರಿಸುವ, ಸಂಶೋದಿಸುವ ಕೆಲಸ ಪ್ರಮುಖವಾಗಿ ಈ ಅಧ್ಯಯನದ್ದಾಗಿದೆ.

ಕರಾವಳಿಯಲ್ಲಿ ಕಂಡುಬರುವ ಮುಖ್ಯ ಚರ್ಚುಗಳು

ಯುರೋಪಿಯನ್ನರು ಭಾರತಕ್ಕೆ ಪ್ರವೇಶ ಮಾಡಿದರಾದರೂ ತಮ್ಮ ವೃತ್ತಿಯನ್ನ ಪ್ರಾರಂಭಿಸಿದ್ದು, ಕರ್ನಾಟಕದ ಕರಾವಳಿಯ ಭಾಗದಲ್ಲಿ ಕಾರಣ ಬಂದು ಹೋಗುವ ದಾರಿ

ಸುಗಮನಾಗಿದ್ದರಿಂದ ಸಮುದ್ರದ ಮೂಲಕ ಆಯ್ದ ದಾರಿಯಲ್ಲಿ ಬರುತ್ತಿದ್ದರಿಂದ ವಿಶಾಲವಾದ ಸಾಂಸ್ಕೃತಿಕ ಪರಿಸರವನ್ನು ನೋಡಿದ ಇಂಗ್ಲೀಷರು ತಮ್ಮ ಬದುಕನ್ನು ನಿರ್ಮಿಸಿಕೊಳ್ಳಲು ಸೂಕ್ತ ಆಯ್ಕೆ ಮಾಡಿಕೊಂಡರು. ೧೬-೧೭ನೇ ಶತಮಾನದಲ್ಲಿಯೇ ಭಿನ್ನ ರೂಪತೆಯನ್ನು ತಾಳಿದ ಇವರು ಸ್ವಲ್ಪ ಮಟ್ಟಿಗೆ ತಮ್ಮ ಧರ್ಮದ ಪ್ರವರ್ತಕರ ಜೊತೆ ಚರ್ಚಿಸಿ, ಇಲ್ಲಿ ಕ್ರೈಸ್ತ ಮಿಷನರಿಗಳನ್ನು ಹಾಗೂ ದೇವಾಲಯಗಳನ್ನು ಪ್ರಾರಂಭಿಸಿದರೂ ಹೈದರಾಲಿ ಮತ್ತು ಟಿಪ್ಪು ಸುಲ್ತಾನನ ಆಡಳಿತದ ಸಮಯದಲ್ಲಿ ಪ್ರಾರಂಭವಾದ ಗೊಂದಲದಲ್ಲಿ ಕೆಲವೇ ಕೆಲವು ಚರ್ಚುಗಳನ್ನು ಬಿಟ್ಟು ಎಲ್ಲವನ್ನು ಧ್ವಂಸ ಮಾಡಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಅಂದರೆ ಟಿಪ್ಪುವಿನ ಮರಣದ ನಂತರ ಬಂದಂತಹ ಬ್ರಿಟಿಷರ ಆಳ್ವಿಕೆಯಲ್ಲಿ ಅನೇಕ ದೇವಾಲಯ (ಚರ್ಚು)ಗಳು ಎಲ್ಲಾ ಕಡೆ ತಲೆ ಎತ್ತಿ ನಿಂತವು ಅವು ಹೆಚ್ಚು ಕರ್ನಾಟಕದ ಕರಾವಳಿ ಭಾಗದಲ್ಲಿ ಇಲ್ಲಿ ಸುಮಾರು ಅಂದರೆ ೨೫೦ ರಿಂದ ೩೦೦ ಚರ್ಚ್‌ಗಳಿಂದ ಕೂಡಿರಬಹುದು.

ಕ್ಯಾಥೆಡ್ರಲ್

ಈ ಚರ್ಚ್ ಕೂಡ ರೊಸಾರಿಯೋ ಕಾಥೆಡ್ರಲ್ ಎಂದು ಕರೆಯಲಾಗುತ್ತದೆ. ಇದು ಡಯೋಸಿಸ್ ಮತ್ತು ಡೆಲ್ಲಾ ವಲ್ಲೆ, ೧೬೨೩ರಲ್ಲಿ ಮಂಗಳೂರಿಗೆ ಬೇಟಿ ನೀಡಿದ ಸಮಯದಲ್ಲಿ ಇಟಾಲಿಯನ್ ಮಾಂತ್ರಿಕ ಮೂರು ಅತ್ಯಂತ ಪ್ರಾಚೀನ ಚರ್ಚುಗಳು ನಿರ್ಮಿಸಿದ್ದು ಅದರಲ್ಲಿ ಇದು ಒಂದಾಗಿದೆ. ಮಂಗಳೂರಿನಿಂದ ೧.೫ ಕಿ.ಮಿ. ದೂರದಲ್ಲಿದ್ದು ಈ ಚರ್ಚ್ ಬಿಷಪ್ ತಂದೆಯ ಹೌಸ್, ಮಿಲಾಗ್ರಿಸ್ ಕಾಸ್ಕಿಯೋ ಮತ್ತು ಊರ್ವ ಪ್ಯಾರಿಸ್ಗಳನ್ನು ಸುತ್ತುವರಿದಿದೆ.

ರೊಸಾರಿಯೋ ಚರ್ಚ್

೧೭೮೪ ರಲ್ಲಿ ಟಿಪ್ಪು ಸುಲ್ತಾನ್ ತಂದೆಯ ಪಡೆಗಳು Desecrated ಮತ್ತು ನಾಶವಾಯಿತು. ಕ್ಯಾಥೋಲಿಕ್ ಅವರ ಸೆರೆಯಲ್ಲಿ ಶ್ರೀರಂಗಪಟ್ಟಣಕ್ಕೆ ಹಿಂದಿರುಗಿದ ಟಿಪ್ಪುವಿನ ನಂತರ ಚರ್ಚ್ ನಿರ್ಮಿಸಲು ಬಯಸಿದರು. ಏಪ್ರಿಲ್, ೧೬, ೧೮೫೦ ರಂದು ಚರ್ಚ್‌ನ್ನು ಒಂದು ಕ್ಯಾಥೆಡ್ರಲ್ ಆಗಿ ಪರಿವರ್ತಿಸಿ ಈ ಚರ್ಚ್‌ನ ಮೊದಲ ಪ್ಯಾರಿಷ್ ಪಾದ್ರಿ ರೆವರೆಂಡ್ ನಗರ ಸ್ಟಿನ್ ಎಸ್.ಜೆ. ಜರ್ಮನ್‌ರವರು (೧೮೮೫-೧೮೮೮) ವಹಿಸಿಕೊಂಡರು. ಇದು ಹಳೆಯ ಚರ್ಚ್‌ನಲ್ಲಿ ಅಕ್ಟೋಬರ್ ೨೫, ೧೮೮೫ ರಂದು ಮಂಗಳೂರು ಬಿಷಪ್ ಎಂದು ಪವಿತ್ರ ಮಾಡಲಾಯಿತು.

ಅಧ್ಯಾಪಡೆ

ಕ್ರಿಶ್ಚಿಯನ್ ಮೇರಿ ಸಹಾಯ ಚರ್ಚ್ ಬಾಜ್ಪೆ ಭಾಗವಾಗಿ ಒಮ್ಮೆ ಅಧ್ಯಾಪಡೆ ಪ್ಯಾರಿಷ್ ಸಹ ಮಡಿಯಪುರ ಎಂದು ಕರೆಯಲಾಗುತ್ತದೆ. ಬಾಜ್ಪೆ ಆಫ್. ಎಫ್. ಆರ್ ಅವೆಲ್ಯನ್

ಫ್ರೆಂಚ್ ಸಿಲ್ವಾ ಸೆಪ್ಟೆಂಬರ್ ೯, ೧೯೬೯ರಂದು ಶ್ರೀಮತ್ತು ಶ್ರೀಮಲೆ ಚಾರ್ಲ್ಸ್ ಮತ್ತು ಮುರಿಯಲ್ ಪಿಂಟೋ ದಾನವಾಗಿ ಭೂಮಿಕೊಟ್ಟಿದ್ದರಿಂದ ಈ ಚಾಪಲ್ ನಿರ್ಮಾಣವಾಯಿತು.

ಅಗ್ರಾರ್

ಬಂಟ್ವಾಳ ತಾಲೂಕಿನಲ್ಲಿರುವ ಪವಿತ್ರ ಸೇವಿಯರ್ ಚರ್ಚ್ ಇದಾಗಿದ್ದು, ಮಂಗಳೂರು ಪೂರ್ವಕ್ಕೆ ೩೫ ಕಿ.ಮೀ. ದೂರದಲ್ಲಿದೆ. ಅಗ್ರಾರ್ ಬ್ರಾಹ್ಮಣರು ಹಳ್ಳಿಯ ಅರ್ಥ ಮತ್ತು ಕನ್ನಡ ಪದ ಅಗ್ರಹಾರ ಇದಾಗಿದ್ದು, ಬಂಟ್ವಾಳ ಮತ್ತು ನೇತ್ರಾವತಿ ನದಿಯ ಗುರುಪುರ ನದಿಯ ವಿಸ್ತರಿಸುವ ಡಯಾಸಿಸ್ ವ್ಯಾಪಕವಾದ ಪ್ಯಾರಿಸ್ ಆಗಿದೆ. ೧೭೫೧ರಲ್ಲಿ ಈ ಚರ್ಚ್‌ರೂಪತಾಳಿದರೂ ಹೆಚ್ಚು ದಿನ ಉಳಿಯಲಿಲ್ಲ ಕಾರಣ ಟಿಪ್ಪು ಸುಲ್ತಾನ್ ನೆಲಸಮ ಮಾಡಿದ್ದ ಚರ್ಚೆಗಳಲ್ಲಿ ಇದು ಒಂದು ಹಾಗೆಯೇ ೧೮೦೧ರಲ್ಲಿ ಪುನರ್ ನಿರ್ಮಾಣವಾಗಿದ್ದು, ಗರ್ಭಗುಡಿಯು ತುಂಬಾ ಸುಂದರತೆ ಕಾರಣ ಮಾಶ್ಚಿನಿ ಅವರ ಮೋಡಿಯ ಪ್ರತೀಕತೆ ಎಂದೆ ಹೇಳಬಹುದು. ಇಲ್ಲಿ ಅನೇಕ ಕಾರ್ಯಗಳನ್ನು ನಡೆಸಲಾಗುತ್ತಿತ್ತು. ಸುಮಾರು ಎರಡು ಶತಮಾನಗಳನ್ನ ಕಳೆದಿರುವ ಈ ಚರ್ಚ್‌ನಲ್ಲಿ ಅದ್ದೂರಿಯಾಗಿ ಶತಮಾನಗಳ ಸಂಭ್ರಮವನ್ನು ಆಚರಿಸುವ ಸಲುವಾಗಿ ಈ ಕಟ್ಟಡವನ್ನು ಪದೇ ಪದೇ ನವೀಕರಿಸಿ ವಿಜೃಂಭಿಸಲಾಗಿದೆ.

ಅಜೆಕರ್: ಸೇಕ್ರೆಡ್ ಹಾರ್ಟ್ ಆಫ್ ಜೀಸಸ್ ಚರ್ಚ್

ಈ ಚಚ್ ಪಶ್ಚಿಮ ಘಟ್ಟಗಳ ಅಡಿ ನೆಲೆಗೊಂಡಿರುವ ಮಂಗಳೂರು ಆಗುಂಬೆಯ ಮಧ್ಯೆ ಕಾರ್ಕಳದಿಂದ ಸುಮಾರು ೧೫ ಕಿ.ಮಿ. ನಲ್ಲಿದೆ. ಅಜೇಕರ್ ಹಿಂದೂ ಪಾದ್ರಿಗಳ ಒಂದು ಕಾಡು ವಸಾಹತು ಅರ್ಥ. ೧೯೩೫ರಲ್ಲಿ ಭೂಮಿ ಪೂಜೆ ನೆರವೇರಿಸಿದ ಇವರು ೧೯೬೦ರಲ್ಲಿ ಚರ್ಚಿನ ವಿದ್ಯುದೀಕರಣ ಮಾಡಲಾಯಿತು.

ಅಮ್ಮೆಂಬಲ್: ಸೆಂಟ್ ಥಾಮಸ್ ಏಸು ದೂತನ ಚರ್ಚ್

ಬಟ್ವಾಳ ತಾಲೂಕಿನಲ್ಲಿದೆ. ೧೯೩೨ರಲ್ಲಿ ಇಗರ್ಜಿಗಳು ನಿರ್ಮಿಸಿದ ಮೊದಲ ಪ್ಯಾರಿಷ್ ಪಾದ್ರಿ ಎಂದು ಪ್ರ ಸಿಗರೇಟು ಎಸ್ ಲೆವಿಸ್ನೊಂದಿಗೆ ಪ್ಯಾರಿಷ್ ಸ್ಥಾಪಿಸಲಾಯಿತು. ನತರದಲ್ಲಿ ಎಫ್.ಆರ್. ಜೋಸೆಫ್ ಫ್ರೆಂಚ್ ನೌಜಾ ೧೯೪೬ರಲ್ಲಿ ಹೊಸ ಚರ್ಚ್ ಮತ್ತು ಹೊಸ ಇರ್ಜಿಗಳನ್ನು ನಿರ್ಮಿಸಲಾಯಿತು. ಹಂತ ಹಂತವಾಗಿ ಈ ಚರ್ಚ್‌ನ್ನು ಪೂರ್ಣಗೊಳಿಸಲಾಗೆದೆ.

ಅಲ್ಲಿಪಡೆ : ಪಡುವ ಸೆಂಟ್ ಆಂಟನಿ ಚರ್ಚ್

ಇದು ಬಂಟ್ವಾಳ ತಾಲೂಕಿನ Sampady ಗ್ರಾಮದಲ್ಲಿದ್ದು, ನೇತ್ರಾವತಿ ನದಿಯ ಪಶ್ಚಿಮ ತೀರದಲ್ಲಿ ಮಂಗಳೂರು ನಗರದಿಂದ ೩೫ ಕಿ.ಮೀ. ಪೂರ್ವದೂರದಲ್ಲಿದೆ. ಅಗ್ರಾರ್ ಭಾಗವಾಗಿ ಒಮ್ಮೆ Allipade ಬಿಷಪ್ ವಿಕ್ಟರ್ ಆರ್ ಪೆರ್ನಾಂಡಿಸ್ ಮೇ-೨೨, ೧೯೩೮ರಂದು ಸ್ವತಂತ್ರ

ಪ್ಯಾರಿಷ್ ಸ್ಥಾಪಿಸಿತು. ಇದಕ್ಕೂ ಮುಂಚೆ ಇದು Agrar ಮತ್ತು ಚರ್ಚಿನ ಸೇವೆ ಸಲ್ಲಿಸಿದರು. ಅಲ್ಲಿ ಕಟ್ಟಲ್ಪಟ್ಟಿತ್ತು. ಸಣ್ಣ ಶಾಲೆಯಿಂದ ಸೇವೆ ಸಲ್ಲಿಸಿದರು. ಈ ಚರ್ಚು ಕೂಡ ೧೯೫೫ ಮಾರ್ಚ್ ೧೬ರಂದು ಸ್ಥಾಪಿತವಾದರೂ ಬದಲಾವಣೆಗಳಾಗುತ್ತಾ ಬಂದು ಕೊನೆಗೆ ಚರ್ಚಿನ ಗಂಟೆಗೋಪುರ (೧೯೮೬-೧೯೯೩)ವನ್ನು ನಿರ್ಮಿಸಲಾಯಿತು.

ಅಂಗಲೋರೆ

ಗಾರ್ಡಿಯನ್ ದೇವತೆಗಳ ಚರ್ಜ್ ಇದಾಗಿದ್ದು, ಡಯೋಸಿಸನ್ ಕಛೇರಿ ಮಂಗಳೂರಿನಿಂದ ೬. ಕಿ.ಮಿ. ದೂರದಲ್ಲಿದೆ. ಬೆಂದೂರು, ಕಾರ್ಡೆಲ್, ಬಜಳ ಮತ್ತು ವೇಲೆನ್ಸಿಯಾದಲ್ಲಿನ ಪ್ಯಾರಿಷ್ಗಳು ಸುತ್ತುವರಿದಿದ್ದು, ತಾತ್ಕಾಲಿಕವಾಗಿ ೧೯೩೦ರಲ್ಲಿ ಕಟ್ಟಡ ನಿರ್ಮಿಸಿದ Gaulbert ನೂರೂನ್ಹಾ ನಂತರದಲ್ಲಿ ಸಿಸ್ಟರ್ಸ್ ಆಫ್ ಚಾರಿಟಿ ಆಫ್ ಪ್ರಾಂತಿಯ ಹೊಸ ಚರ್ಚ್ ಕಟ್ಟಲು ೬ ಎಕರೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದರಿಂದ ಬೃಹದಾಕಾರವಾಗಿ ನೂರೂನ್ಹಾ ಅಕ್ಟೋಬರ್ ೨, ೧೯೫೫ರಂದು ಅಧಿಕೃತವಾಗಿ ಉದ್ಘಾಟಿಸಿದರು. ಬದಲಾವಣೆಯ ವ್ಯತ್ಯಾಸಕ್ಕೆ ಸಮ್ಮತಿಸಿದ ಭಕ್ತರು, ೧೯೫೫ರಲ್ಲಿ ಹಳೆಯ ಕಟ್ಟಡಕ್ಕೆ ಮುಕ್ತಿ ಕೊಟ್ಟು ಗಂಟೆಗೋಪುರದೊಂದಿಗೆ ೧೯೮೮ರಲ್ಲಿ ನವೀಕರಿಸಲಾಗಿದೆ.

ಆರ್ವ: ಸೆಂಟ್ ಪೀಟರ್ಸ್ Clavet ಚರ್ಚ್

ಇದು ಬೆಳ್ತಂಗಡಿ ತಾಲೂಕಿನ ಆಳದಂಗಡಿಯಲ್ಲಿದ್ದು, ಬೆಳ್ತಂಗಡಿಗೆ ೧೦ ಕಿ.ಮೀ. ಮಂಗಳೂರಿಗೆ ಸುಮಾರು ೬೯ ಕಿ.ಮೀ. ಅಂತರದಲ್ಲಿದೆ. ಇದು ಮೊದಲು ಆರ್ವ ಬೆಳ್ತಂಗಡಿನ ಪ್ಯಾರಿಷ್ ಭಾಗವಾಗಿತ್ತು. ಬಿಷಪ್ ಪೆರಿನಿ ಮಾರ್ಚ್ ೧, ೧೯೨೭ ಹಾಗೂ ಪ್ರಾಲಿಯೋ ಕಾರ್ವಾಲ್ಹೊ ಹೋಗಳಿಯಾಗಿ ಆರ್ವವನ್ನು ಸ್ಥಾಪಿಸಲಾಯಿತು. ಇದು ಕೂಡ ಹಳೆಯ ಕಟ್ಟಡವಾಗಿದ್ದು, ಇತ್ತೀಚೆಗೆ ಹೊಡೆದು ೧೯೭೨ ಫೆಬ್ರವರಿ ೨೭ ರಂದು ಮರುನಿರ್ಮಾಣಮಾಡಲಾಗಿದೆ.

ಆನೆಗುಡ್ಡೆ: ಸೆಂಟ್ ಪ್ರಾನ್ಸಿಸ್ ಕ್ಸೇವಿಯರ್ ಆಫ್ ಚಾಪೆಲ್

ಇದು ಒಂದು ಛಾಪಲೆ ಆಗಿದ್ದು, ಆನೆಗುಡ್ಡೆಯಲ್ಲಿ ಸ್ಕೂಲ್ ಪ್ರಾರಂಭಿಸಿ ನಂತರ ಶ್ರೀಪಾಲ್ ಫ್ರೆಂಚ್ ನೌಜಾ ಭೂಮಿಯ ಕಥಾವಸ್ತುವಿನ ದಾನ ಮತ್ತು ಭೂಮಿ ಪ್ರ್ ಅಲೆಕ್ಸ್ ಈ ವಿಷಯದ ಮೇಲೆ ಡಿಸೆಂಬರ್ ೧೪, ೧೮೭೭ರಂದು ಹೊಸ ಚಾಪೆಲ್ ನಿರ್ಮಿಸಿದರು.

ಅಶೋಕ ನಗರ: ಎನ್ವಿ ಡೊಮಿನಿಕ್ ಚರ್ಚ್

ಇದು ಮಂಗಳೂರಿಗೆ ಸಮೀಪದಲ್ಲಿದೆ. ಇದು ಸುಮಾರು ಮೂರುವರೆ ಎಕರೆಯಲ್ಲಿ ೧೯೭೧ರಲ್ಲಿ ನಿರ್ಮಾಣವಾಗಿದ್ದು, ಇದರಲ್ಲಿ ಒಂದು ಪ್ಯಾರಿಷ್ ಚರ್ಚಿನ ಗಂಟೆಗೋಪುರ ಮತ್ತು ಗಂಟೆ ರೆಕಾರ್ಡ್‌ರನ್ನು ಹೊಂದಲಾಗಿದೆ.

ಬಾಜ್ಪೆ: ಸೆಂಟ್ ಜೋಸೆಫ್ ಚರ್ಚ್

ಇದು ಮಂಗಳೂರು ತಾಲ್ಲೂಕಿನಲ್ಲಿದ್ದು, ಪರ್ಮುಡೆ, ಅಧ್ಯಾಪಡೆ, ಗುರುಪುರ ಮತ್ತು ಪೆಜಾರ್ ಪ್ಯಾರಿಷ್ಗಳನ್ನು ಸುತ್ತುವರಿದಿದ್ದು, ಗೋವಾ ಮತ್ತು ವೇರಾಪೋಲಿ ಚರ್ಚ್‌ನಿಂದ ಬೇರ್ಪಟ್ಟಿದ್ದರಿಂದ ಬಾಜ್ಪೆಯ ಪೂರ್ವಜರ ಮನೆಯಲ್ಲಿ ಬಾನುವಾರದಂದು ಮಾಸ್ ಆಚರಿಸಲಾಗುತ್ತಿತ್ತು. ತದನಂತರ ೧೮೬೭ರಲ್ಲಿ ಹೊಸದಾಗಿ ಛಾಪಲ್ ನಿರ್ಮಿಸಿದರು ಜೊತೆಗೆ ಪ್ರಾಂತಿಯ ಮನೆ ೧೮೭೩ರಲ್ಲಿ ನಿರ್ಮಿಸಿದರು. ಹಂತ ಹಂತವಾಗಿ ಇದು ಕೂಡ ಬದಲಾವಣೆಗೊಳಪಟ್ಟಿದ್ದು, (೧೯೪೧-೧೯೬೪)ರ ನಡುವೆ ಎರಡು ವಿಶಾಲವಾದ ರೇಖೆಗಳನ್ನು ಈ ಚರ್ಚ್‌ನಲ್ಲಿ ಸೇರಿಸಲಾಗಿದೆ. ಅಂತಿಮವಾಗಿ ಚರ್ಚಿನ ಗಂಟೆಗೋಪುರ ನಿರ್ಮಿಸುವುದರ ಜೊತೆಗೆ ಹೊಸ ಚರ್ಚ್‌ನ್ನು ಮೇ ೪, ೧೯೮೮ರಲ್ಲಿ ಸ್ಥಾಪಿಸಿದರು.

ಬನ್ನೂರು: ಸೆಂಟ್ ಅಂಥೋನಿಯ ಚರ್ಚ್

ಬನ್ನೂರು, ಪುತ್ತೂರು ತಾಲ್ಲೂಕಿನಲ್ಲಿದ್ದು, ಮಂಗಳೂರಿಗೆ ಸುಮಾರು ೫೧ ಕಿ.ಮೀ. ಅಂತರದಲ್ಲಿದೆ. ಈ ಚರ್ಚ್ ಇತ್ತಿಚೀನ ದಿನಗಳಲ್ಲಿ ಪ್ರಾರಂಭವಾಗಿದ್ದರಿಂದ ನೈಜ ಶೈಲಿಯಲ್ಲಿ ರೂಪಿತಗೊಂಡಿದ್ದು, ಜೂನ್ ೧೩, ೨೦೦೨ರಂದು ಪ್ರಾರಂಭವಾಗಿದೆ.

ಇನ್ಫ್ಯಾಂಟ್ ಜೀಸಸ್ ಚರ್ಚ್

ಇದು ಮಂಗಳೂರು ಜಿಲ್ಲೆಯ ಬಂಟ್ವಾಳ ತಾಲೂಕಿನ ಮೊಡನ್ ಕೊಪ್ಪದಲ್ಲಿದ್ದು, ಮಂಗಳೂರಿನ ಹಳೆಯ ಪಾದ್ರಿಗಳಾದ ಡಿಯೋಸೆಸೆಯು ೧೮೮೮ರಿಂದ ವಿಕಾರ್‌ರವರ ಆಸ್ಥಾನವಾಗಿತ್ತು. ೧೭೦೨ರಲ್ಲಿ ಮೊದಲು ಈ ಚರ್ಚ್‌ನಿರ್ಮಿಸಿದರು. ಅದು ಟಿಪ್ಪು ಬಂದನದಿಂದ ಬಿಡುಗಡೆ ಹೊಂದಿದ ನಂತರ ಈ ಚರ್ಚ್‌ನ ಮೇಲ್ಛಾವಣಿಯನ್ನು ನವೀಕರಿಸಲಾಯಿತು. ೧೮೫೭ರಲ್ಲಿ ಮತ್ತು ೧೯೧೦ರಲ್ಲಿ ನವೀಕರಣಗೊಳಪಟ್ಟಿತು. ಈ ಚರ್ಚ್‌ನ್ನು ಎಫ್.ಆರ್. ಬಾಲ್ತಜಾರ್ Aranha ಎಂಬುವವನು ನಿರ್ಮಿಸಿದ.

ಸೆಂಟ್‌ಜಾನ್ ಮೇರಿ

ಇದು ಬಟ್ವಾಳ ತಾಲ್ಲೂಕಿನಲ್ಲಿದ್ದು ಮೂಲತಃ ಈ ಪ್ಯಾರಿಷ್ ಬಂಟ್ವಾಳ ಮಾಡನ್ ಕೊಪ್ಪಕ್ಕೆ ಸೇರಿದ್ದಾಗಿದೆ. ೧೯೭೦ರಲ್ಲಿ ಇಲ್ಲಿನ ಧರ್ಮಕ್ಕೆ ಸಂಬಂಧಿಸಿದ ಮತ ಬಾಂಧವರು ಪಕ್ಕದ ಊರಿಗೆ ಬಾನುವಾರ ಪೂಜೆಗಾಗಿ ಹೋಗುವಂತಹ ದಿನವಾಗಿತ್ತು. ಅಂತಹ ಸಂದರ್ಭದಲ್ಲಿ ಬೇಟಿನೀಡಿದ್ದ ಚಾಪೆಲ್ ಪ್ರಾ ಬೇಸಿಲ್ ಎ ಫ್ರೆಂಚ್ ನೌಜಾ ಇಲ್ಲಿನ ಕಷ್ಟಗಳನ್ನು ಅರಿತು ಈ ದೇವಾಲಯದ ಅಡಿಪಾಯವನ್ನು ೧೯೭೭ರಲ್ಲಿ ಹಾಕಿಸಿ, ಬಂಟ್ವಾಳ ಆಫ್ ಪ್ರಾಪೀಟರ್ ನೂರೂನ್ಹಾ ಮೂಲಕ ಗೋಥಿಕ್ ಶೈಲಿಯಲ್ಲಿ ನಿರ್ಮಿಸಿದ ಹೊಸ ಚರ್ಚ್ ಜನವರಿ ೩೧, ೧೯೯೯ರಂದು ಬೆಳಕಿಗೆ ತರಲಾಗಿದೆ.

ಸೆಂಟ್ ಪೀಟರ್ಸ್ ಯೇಸುದೂತನ ಚರ್ಚ್

ಈ ಚರ್ಚ್ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬರ್ಕೂರಲ್ಲಿದ್ದು, ಟಿಪ್ಪು ಸುಲ್ತಾನನ ಆಡಳಿತದ ಸಮಯದಲ್ಲಿ ನೆಲಸಮಗೊಂಡಂತಹ ಚರ್ಚುಗಳಲ್ಲಿ ಇದು ಒಂದು ೧೮೩೪ರ ಹಿಂದೆಯೇ ಈ ಚರ್ಚು ಕಟ್ಟಲಾಗಿತ್ತು. ಚರ್ಚು ಉರುಳಿಸುವ ಜೋತೆಗೆ ಇಲ್ಲಿನ ಪಾದ್ರಿಗಳನ್ನು ಸೆರೆಮನೆಗೆ ಕರೆದೊಯ್ದಿದ್ದರು. ಸುಮಾರು ೨೦ ವರ್ಷಗಳ ಕಾಲ ಬರ್ಕೂರು ಕ್ಯಾಥಲಿಕರು ತುಂಬಾ ಕಷ್ಟಪಟ್ಟರು ಬಿಡುಗಡೆಯಾಗಿ ಬಂದಂತಹ ಸಮುದಾಯಸ್ತರು ಭಾನುವಾರ ಪೂಜೆಯ ಧ್ಯಾನಕ್ಕಾಗಿ ಪಕ್ಕದ ಊರಿಗೆ ಹೋಗಬೇಕಾಗಿತ್ತು. ಆ ಸಮಯದಲ್ಲಿ ಈ ಚರ್ಚಿನ ಪ್ರತಿಮೆಯೊಂದು ೧೮೫೪ರಲ್ಲಿ ಸಿಕ್ಕಿತು. ಅದನ್ನು ತೆಗೆದುಕೊಂಡು ಬಂದು ಅದೇ ವರ್ಷದಲ್ಲಿಯೇ ಹೊಸ ಛಾಪೆಲ್‌ವೊಂದನ್ನು ನಿರ್ಮಿಸಲಾಗಿದೆ.

ಸೆಂಟ್ ಫಿಲಿಪ್ ನೇರಿ ಚರ್ಚ್

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬಸರೂರ್‌ನ ಗ್ರಾಮದಲ್ಲಿರುವ ಈ ಚರ್ಚು ಪೋಚ್‌ಗೀಸರ ಆಡಳಿತಾವಧಿಯಲ್ಲಿ ಪ್ರಾರಂಭವಾಗಿದ್ದು, ೧೫೭೦ರಲ್ಲಿ ನಾಷ್ಟ್ರಾಸೆನೊರಾ ಡಿ. ರೋಸಾರಿಯೋ ಚರ್ಚ್‌ನ ಜೊತೆಗೆ ಒಂದು ಆಸ್ಪತ್ರೆಯನ್ನು ಇಲ್ಲಿ ನಿರ್ಮಿಸಿದ. ಇದರ ಉಸ್ತುವಾರಿಯನ್ನು ಪೋರ್ಚ್‌ಗೀಸರೆ ಮಾಡುತ್ತಿದ್ದಿದು ವಿಶೇಷ. ಅದು ೧೬೪೩ರಲ್ಲಿ ಕೊನೆಗೊಂಡಿತು. ನಂತರದಲ್ಲಿ ೧೬೮೨ರಲ್ಲಿ ರೊಮನ್ ಕ್ಯಾಥಲಿಕ್ ಬಿಷಪ್‌ನಿಂದ ಈ ಚರ್ಚ್‌ಗೆ ಹೊಸರೂಪಕೊಡಲಾಯಿತಾದರೂ, ೧೭೮೪ರಲ್ಲಿ ಟಿಪ್ಪು ಸುಲ್ತಾನ್ ನಾಶಮಾಡುತ್ತಾನೆ. ತದನಂತರ ಸುಮಾರು ಮೂವತ್ತು ವರ್ಷಗಳ ಕಾಲ ಸೆಂಟ್ ಫಿಲಿಪ್ ನೇರಿ ಚರ್ಚ್ ಮೌನ ಆವರಿಸಿದಂತೆ, ರೀಮಿಜೀಯಸ್ ಫ್ರೆಂಚ್ ನೌಜಾ ನವೆಂಬರ್ ೧೮, ೧೯೨೪ರಂದು ಹೊಸ ಚರ್ಚ್ ನಿರ್ಮಾಣವನ್ನು ಮಾಡಿದರು. ಇದು ಕೂಡ ಹಂತಹಂತವಾಗಿ ಬದಲಾವಣೆಗೊಳ್ಳುತ್ತಾ ಹೊಸ ವಿನ್ಯಾಸವನ್ನು ೧೯೬೩ರಲ್ಲಿ ಕೊಡಲಾಗಿದೆ.

ಸೆಂಟ್ ಫ್ರಾನ್ಸಿಸ್ ಕ್ಸೇವಿಯರ್ ಚರ್ಚ್

ಮಂಗಳೂರಿನಿಂದ ೨ ಕಿ.ಮೀ. ದೂರದಲ್ಲಿರುವ ಬೆಜ್ಜಾ ಎಂಬಲ್ಲಿರುವ ಈ ಚರ್ಚ್ ಒಮ್ಮೆ ಕ್ಯಾಥಡ್ರಲ್ ಪ್ಯಾರಿಷ್ ಭಾಗವಾಗಿತ್ತು. ಏಕೆಂದರೆ ಚರ್ಚ್ ಮತ್ತು ಇಲ್ಲಿನ ಜನರ ಭವಣೆಗಳನ್ನು ಅರಿತ ಸರ್ಕಾರ ಜಮೀನನ್ನು ನೀಡಿ ೧೬೭೦ರಲ್ಲಿ ಸಮಾಧಿ ಮಂದಿರದ ನೆಲೆಯಿಂದ ಬೆಳೆಸಿದರು. ಪ್ರಸ್ತುತ ಈ ಚರ್ಚ್‌ನ್ನು ಪ್ರ್ ಫೆರ್ನಾಂಡಿಸ್ ೧೯೨೪ರಲ್ಲಿ ನಿರ್ಮಿಸಿ ಯಶಸ್ವಿಯಾದರು.

ಸೆಂಟ್ ಲಾರೆನ್ಸ್ ಚರ್ಚ್

ಉಡುಪಿ ತಾಲ್ಲೂಕಿನ ಮೂಡುಬೆಲ್ಲೆ ಎಂಬಲ್ಲಿ ಸ್ಥಾಪಿತವಾಗಿರುವ ಚರ್ಚು ಇದಾಗಿದ್ದು, ಈ ಚರ್ಚ್ ಒಮ್ಮೆ ಶಿರ್ವ ಪ್ಯಾರಿಸ್ ಭಾಗವಾಗಿತ್ತು. ಮತ್ತು ಇದನ್ನು ಬೋಲಿಯೇ ಪ್ಯಾರಿಷ್ ಎಂದು ಕರೆಯಲಾಗುತ್ತದೆ. ಮೊದಲಿಗೆ ೧೮೮೮ರಲ್ಲಿ ಪ್ರಾರ್ಥನ ಮಂದಿರ ನಿರ್ಮಿಸಲಾಯಿತು. ನಂತರದಲ್ಲಿ ಹಂತ ಹಂತವಾಗಿ ನವೀಕರಿಸಲಾಗಿದೆ. ಕೊನೆಗೆ ಡಿಸೆಂಬರ್ ೩೧, ೧೯೧೮ ಹೊಸ ಚರ್ಚ್ ನಿರ್ಮಾಣವಾಯಿತು.

ಸೆಂಟ್ ಮೈಕಲ್ ದೇವದೂತ ಚರ್ಚ್

ಇದು ಬಂಟ್ವಾಳ ತಾಲೂಕಿನ ಬೆಲ್ಲೂರುನಲ್ಲಿದ್ದು, ಈ ಚರ್ಚು ಹಿಂದೆ Omzoor ಮತ್ತು Bantwal ಪಾದ್ರಿಗಳ ನೆಚ್ಚಿನ ಭಾಗವಾಗಿತ್ತು. ಪ್ರಾರಂಭದಲ್ಲಿ ಪ್ರಾರ್ಥನ ಮಂದಿರ ಹೊಂದಿದ್ದು, ಹಂತಹಂತವಾಗಿ ಪ್ರ್ ಮೇರಿಯನ್ ಎಸ್ ಫೆರ್ನಾಂಡಿಸ್‌ನು ೧೯೨೦ರಲ್ಲಿ ನಿರ್ಮಿಸಿದನು. ಎಲ್ಲಾ ಚರ್ಚುಗಳಂತೆ ಇದು ಕೂಡ ಬದಲಾವಣೆಯ ಹಂತಕ್ಕೆ ತಲುಪಿ ಚರ್ಚಿನ ಬಲಿಪೀಠ, ಗಂಟೆಗೋಪುರಗಳು ನಿರ್ಮಾಣವಾಗಿರುವುದನ್ನು ಕಾಣಬಹುದು.

ಸೆಂಟ್ ಜೋಸೆಪ್ ಚರ್ಚ್

ಇದು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಬೆಲ್‌ಮಣ್ಣು ಎಂಬಲ್ಲಿದ್ದು, ಕನ್ನಡದಲ್ಲಿ ಇದನ್ನು ಬಿಳಿ ಮಣ್ಣು ಎಂದು ಕರೆಯುತ್ತಾರೆ. Belmannu ಒಮ್ಮೆ Shirva ಪ್ಯಾರಿಷ್ ಭಾಗವಾಗಿತ್ತು ಬಿಷಪ್ ನಿಕೋಲಸ್ ಎಂ. ಪಗನಿ ಎಸ್.ಜೆ. ರವರ ಆದೇಶದಂತೆ ಸೆಪ್ಟೆಂಬರ್ ೧೦, ೧೯೪೮ರಂದು ಈ ಚರ್ಚನ್ನು ಸ್ಥಾಪಿಸಲಾಯಿತು. ಈ ಚರ್ಚ್ ಕೂಡ ಹಂತ ಹಂತವಾಗಿ ಬದಲಾವಣೆ ಮಾಡಿಕೊಂಡಿತು. ಕೊನೆಯಲ್ಲಿ ೧೯೫೭ರಲ್ಲಿ ಅಂದವಾದ ಚಿತ್ರಕಲೆ ಹಾಗೂ ಗಂಟೆಗೋಪುರಗಳನ್ನು ನಿರ್ಮಿಸಲಾಗಿದೆ.

ಹೆಚ್ಚು ಪವಿತ್ರ ಉದ್ದಾರಕ ಚರ್ಚ್

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿರುವ ಈ ಚರ್ಚ್ ೧೬೮೨ರಲ್ಲಿ ಮರಾಠಿ ಕಿಂಗ್ ಸಾಂಬಾಜಿ ಗೋವಾದಾಳಿಮಾಡಿದಾಗ ಅನೇಕ ಕುಟುಂಬಗಳು ಚದುರಿದವು ಆ ಸಂದರ್ಭದಲ್ಲಿ ಉಳಿದ ನಿವಾಸಿಗಳು ಸುಮಾರು ೧೮೭೦ರಲ್ಲಿ ಪ್ರ್ವಾಜ್‌ರ ನೇತೃತ್ವದಲ್ಲಿ ಪ್ರಾರ್ಥನಾ ಮಂದಿರ ನಿರ್ಮಿಸಿದರು. ಇಲ್ಲಿಯು ಕೂಡ ಹಂತ ಹಂತವಾಗಿ ಚರ್ಚ್ ಬದಲಾವಣೆಗೊಳ್ಳುತ್ತಾ ಸಾಗಿ ಕೊನೆಗೆ ೧೯೪೯ರಲ್ಲಿ ಹೊಸ ಶಾಲಾ ಕಟ್ಟಡ ನಿರ್ಮಿಸುವ ಜೊತೆಗೆ ಚರ್ಚ್‌ಗೆ ಹೊಸ ವಿನ್ಯಾಸ ಕೊಡಲಾಗಿದೆ.

ಸೆಂಟ್ ಜೋಸೆಪ್ ಚರ್ಚ್

ಉಡುಪಿ ಜಿಲ್ಲೆಯ ಕುಂದಾಪುರದ ಗುಮ್ಮಾಹೊಳದಲ್ಲಿರುವ ಈ ಚರ್ಚ್. ಕೃಷಿ ಕಾಲೋನಿಯಲ್ಲಿರುವ ಈ ಚರ್ಚ್ ಸುಮಾರು ೩೫ ಎಕರೆ ಆಸ್ತಿಯನ್ನು ಹೊಂದಿದೆ. ಪ್ರ ಆಂಬ್ರೋಸ್ ಫ್ರೆಂಚ್ ಮೆಲ್ಲೊ ನಿರ್ಮಿಸಿದ. ಹಳೆಯ ಇಗರ್ಜಿಗಳ ಜೊತೆಗೆ ೧೯೫೮ರಲ್ಲಿ ಈ ಚರ್ಚ್‌ನ್ನು ಉದ್ಘಾಟಿಸಿದ್ದಾರೆ. ಈ ಕೃಷಿ ಕಾಲೋನಿಯಲ್ಲಿ ಉಪಯುಕ್ತ ಕಾರ್ಯಕ್ರಮಗಳು ನಡೆಯುತ್ತಿದ್ದು, ಶಾಲೆ ಹಾಗೂ ಅನಾಥಾಲಯದಂತಹ ಸಂಸ್ಥೆಗಳು ಕಡುಬಡವರಿಗೆ ಆಶ್ರಯ ಕೊಟ್ಟಿವೆ.

ಸೆಂಟ್ ಪಾಲ್ಸ್ ಚರ್ಚ್

ದಕ್ಷಿಣ ಕನ್ನಡ ಜಿಲ್ಲೆಯ ಬೆಳಕುಂಜೆಯಲ್ಲಿರುವ ಈ ಚರ್ಚ್ ಇಲ್ಲಿನ ಜನರು ಹೆಚ್ಚಿನ ಭಕ್ತಿಯ ಪ್ರೀತಿಗೆ ಪಾತ್ರರಾಗಲು ೧೯೧೫ ರಂದು ಈ ಪ್ರಾರ್ಥನಾ ಮಂದಿರವನ್ನು ನಿರ್ಮಿಸಲಾಯಿತು. ಇದಕ್ಕೂ ಮೊದಲು ಎರಡು ವರ್ಷಗಳು ಖಾಸಗಿಯವರ ಮನೆಯಲ್ಲಿ ಬಾನುವಾರ ಪ್ರಾರ್ಥನೆಯನ್ನು ಮಾಡುತ್ತಿದ್ದರು. ಎಫ್.ಆರ್ ಫಾಲ್. ಪ್ಯಾರಿಸ್ (೧೯೩೬-೧೯೪೭)ರ ಅವಧಿಯ ಆಡಳಿತದಲ್ಲಿನ ಸಮಯದಲ್ಲಿ ಹೊಸ ಚರ್ಚ್ ಮತ್ತು ಇಗರ್ಜಿಗಳನ್ನು ನಿರ್ಮಿಸಲಾಯಿತು.

ಎಸ್ಟಿ ಸೆಬಾಸ್ಟಿಯನ್ ಚರ್ಚ್ ದಕ್ಷಿಣ ಕನ್ನಡ ಜಿಲ್ಲೆಯ ಸಮೀಪವಿರುವ ಬೆಂದೂರು ಗ್ರಾಮದಲ್ಲಿದ್ದು, ಈ ಬೆಂದೂರು ಒಮ್ಮೆ ಕ್ಯಾಥೆಡ್ರಲ್ ಮತ್ತು ಮೀಲಾಗ್ರಿಸ್ ಚರ್ಚ್‌ಗಳ ಭಾಗವಾಗಿತ್ತು. ಬಿಷಪ್ ಪಾಲ್ ಪೆರಿನಿ ಎಸ್.ಜೆ. ಆಗಸ್ಟ್ ೨೩, ೧೯೧೪ರಂದು ಚರ್ಚ್ ನಿರ್ಮಿಸುವ ಸಲುವಾಗಿ ಬಂದು, ಅಪೋಸ್ಟೋಲಿಕ್ ಕಾರ್‌ಮಲ್ ಆಫ್ ಸನ್ಯಾಸಿನಿಯರಿಂದ ೧೯೧೮ರಲ್ಲಿ ಖರೀದಿಸಿತು. ೧೯೧೯ರಲ್ಲಿ ಚರ್ಚ್ ಸ್ಥಾಪನೆಗೆ ಅಡಿಪಾಯ ಹಾಕಿ, ಎಫ್ ಆರ್. ಎಫ್.ಎಸ್. ಫ್ರೆಂಚ್ ನೌಜಾ (೧೯೩೩-೧೯೩೬)ರ ಅವಧಿಯಲ್ಲಿ ಇಗರ್ಜಿಗಳನ್ನು ನಿರ್ಮಿಸಿದನು. ಮುಂದುವರೆದಂತೆ ಮುಖ ಮಂಟಪ, ಗಂಟೆ ಗೋಪುರಗಳನ್ನು ನಿರ್ಮಿಸಲಾಯಿತು.

ಎಸ್ಟಿಲಾರೆನ್ಸ್ ಹುತಾತ್ಮರ ಚರ್ಚ್

ಈ ಚರ್ಚ್ ಮಂಗಳೂರಿನ ಸಮೀಪದಲ್ಲಿದ್ದು, ೧೮೭೩ರಲ್ಲಿ ಈ ಸ್ಥಳಕ್ಕೆ ಬೇಟಿನೀಡಿದ್ದ ಫ್ರೆಂಚ್ ಮಿಷನರಿ ಪಾದ್ರಿ ಇದು ಚರ್ಚ್ ನಿರ್ಮಾಣಕ್ಕೆ ಸೂಕ್ತ ಸ್ಥಳವೆಂದೂ, ''ಬಾನ್‌ವಾಲೆ ಉತ್ತಮ ಕಣಿವೆ'' ಎಂಬ ಫ್ರೆಂಚ್ ಪದ ಹಾಗೆಯೇ ಹಿಂದೊಮ್ಮೆ ಮಿಲಾಗ್ರಿಸ್ ಚರ್ಚ್‌ನ ಭಾಗವಾಗಿತ್ತು, ೧೯೨೨ರಲ್ಲಿ ಇಗರ್ಜಿಗಳ ನಿರ್ಮಾಣವಾಗಿ ಪ್ರಸ್ತುತವಿರುವ ಈ ಚರ್ಚ್‌ನ್ನು ಪ್ರಾಡೆನಿಸ್ ಫ್ರೆಂಚ್ ನೌಜಾ (೧೯೭೭-೧೯೮೭) ನಿರ್ಮಿಸಿದನು.

ಹೋಲಿ ಫ್ಯಾಮಿಲಿ ಚರ್ಚ್

ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿರುವ ಈ ಚರ್ಚ್ ೧೮೮೬ರಲ್ಲಿನ ದಕ್ಷಿಣ ಕೆನರಾ ಆಡಳಿತ ಕೊನೆಗೊಂಡ ಪೋರ್ಚ್‌ಗೀಸ್‌ರಲ್ಲೊಬ್ಬನಾದ Padroado ತಮ್ಮ ಮತಬಾಂಧವರನ್ನು ರಕ್ಷಿಸುವ ಸಲುವಾಗಿ ಗೋವಾದ ಪಾದ್ರಿಗಳಿಗೆ ಈ ಚರ್ಚ್ ಬಳಿ ಬರಲು ಸೂಚಿಸಿದನು. ಗೋವಾದವರ ಪಾದ್ರಿ ಪ್ರ Zephryn ನೂರೂನ್ಹಾ, ಇವರಲ್ಲಿ ಮಾರ್ಗದರ್ಶನದಲ್ಲಿ ಮಾತ್ರ ಚರ್ಚ್ ಪ್ರತ್ಯೇಕಿಸಿ, Alavares ಈಗ ಸೆಂಟ್ ಮೇರಿಯ ತಂದೆ ಕ್ಯಾಥಪ್ರಲ್ ಎಂದು ಬ್ರಹ್ಮಾವರನಲ್ಲಿ ಪವಾಡಗಳು ಆಫ್ ಅವರ ಲೇಡಿ (ಸೆಂಟ್ ಮೇರಿಯ ತಂದೆಯ Serian ಚರ್ಚ್) ಮೀಸಲಾಗಿರುವ ತಮ್ಮ ಚರ್ಚ್‌ನ್ನು ನಿರ್ಮಿಸಿದನು.

ಸೆಂಟ್ ಜೋಸೆಪ್ ಚರ್ಚ್

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬೋರಿಮರ್‌ನಲ್ಲಿ ಕಂಡು ಬರುವ ಈ ಚರ್ಚ್ ಪ್ಯಾರಿಷನ ಒಂದು ಭಾಗವಾಗಿ, ಒಮ್ಮೆ Borimar ಬಿಷಪ್ ನಿಕೋಲಸ್ ಮಾರಿಯೊ Pagani ಸೆಪ್ಟೆಂಬರ್ ೪, ೧೮೯೩ರಂದು ಒಂದು ಚಾಪಲ್ ಮಾಡಲಾಯಿತು. ೧೯೦೪ರಲ್ಲಿ Borimar ಮೊದಲ ಪ್ಯಾರಿಸಂ ಪಾದ್ರಿಯ ಪ್ರ್ಗ್ರೆಗೊರಿ ಐ ಫ್ರೆಂಚ್ ನೌಜಾ ಒಂದು ಸ್ವತಂತ್ರ ಪ್ಯಾರಿಷ್ ಆಯಿತು. ಹಾಗೆ ಮುಂದಿನ ದಿನಗಳಲ್ಲಿ ಇಗರ್ಜಿಗಳು ನಿರ್ಮಾಣವಾದವು. ಪ್ರಲಿಯೋ ಕ್ಯಾರ್ವಾಲೋ (೧೯೩೧-೧೯೩೮) ನಿರ್ಮಿಸಿದ ಹೊಸ ಸೆಂಟ್ ಜೋಸೆಫ್ ಚರ್ಚ್ ಕಟ್ಟಡ ೧೯೩೪ರಂದು ವಿಕ್ಟರಿ ಪೆರ್ನಾಂಡಿಸ್ ಆಶೀರ್ವದಿಸಿದನೆಂಬ ಅಭಿಪ್ರಾಯವಿದೆ.

ಹೋಲಿ ಕ್ರಾಸ್ ಚರ್ಚ್

ಮಂಗಳೂರು ಪಟ್ಟಣದ ಕಾರ್ಡೆಲ್, ಕುಲಶೇಖರ ನಗರದಲ್ಲಿ ನೆಲೆಸಿರುವ ಹೋಲಿಕ್ರಾಸ್ ಚರ್ಚ್‌ನ್ನು Angelore, Vamajoor, Kelarai, Neermarga, Bondel ಮತ್ತು Derebail ಪ್ಯಾರಿಷ್ಗಳು ಸುತ್ತುವರಿದಿದೆ. Cordel Milagres ಚರ್ಚ್‌ನ ಪ್ಯಾರಿಸ್ ಪ್ರಾದ್ರಿ, ರೆವರೆಂಡ್ ಪ್ರ ಅಲೆಗ್ಸಾಂಡರ್ ಡ್ಯೂಬಿಯೋಸ್, ಸೆಪ್ಟೆಂಬರ್ ೧೪, ೧೮೭೩ರಲ್ಲಿ ಈ ಚರ್ಚ್‌ನ್ನು ಸ್ಥಾಪಿಸಿದನು. ಫ್ರೆಂಚ್ ಭಾಷೆಯಲ್ಲಿ Cordel ಎಂದರೆ ಹೃದಯ ಭಾಗವಂತೆ ಅದರಂತೆ ಅಂತಹ ಸ್ಥಳ ಪರಿಶೀಲನೆ ಮಾಡಿ ಮಂಗಳೂರಿನ ಹೃದಯ ಭಾಗದಲ್ಲಿ ಬೃಹದಾಕಾರದಲ್ಲಿ ನಿರ್ಮಾಣಗೊಂಡಿದೆ. ನಂತರ ಬದಲಾವಣೆಗೊಳ್ಳುತ್ತಾ ಬಂದು ಆ ಸಮಯದಲ್ಲಿ ಪ್ರಸ್ತುತ ಚರ್ಚ್‌ನ ಪ್ರ ಎಂ Lunazzi SJ ಮೇಲ್ವಿಚಾರಣೆಯಲ್ಲಿ ನಿರ್ಮಿಸಲಾಯಿತು. ಹೊಸ ಚರ್ಚ್ ೧೯೧೨ ರಂದು ಬಿಷಪ್ ಪಾಲ್ ಪೆರಿನಿ ಆಶಿರ್ವಾದದೊಂದಿಗೆ ನಾಮಕರಣ ಹೊಂದಿತು.

ಕರುಣೆಯ ಅವರ್ ಲೇಡಿ ಆಫ್ ಚರ್ಚ್

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪಜಿರ ಗ್ರಾಮದಲ್ಲಿ ನೆಲೆಸಿರುವ ಈ ಚರ್ಚ್ ಹಿಂದೆ ಬಲ್ಲಾಳ (ಪನಿರ್) ಪ್ಯಾರಿಷ್ ಭಾಗವಾಗಿತ್ತು. ಪಜಿರ್ ಚರ್ಚ್ ವಿವಾದದ

ನಡುವೆ ೧೮೩೮ರಲ್ಲಿ ನಿರ್ಮಿಸಲಾಯಿತು. ಪಜಿರ್ ಗೋವಾ ಆಚ್ ಬಿಷಪ್ ಅಡಿಯಲ್ಲಿ ಸ್ವತಂತ್ರ ಪ್ಯಾರಿಷ್ ಆಯಿತು. ಮರು ನಿರ್ಮಾಣ ೧೮೬೭ರಲ್ಲಿ ಪ್ರಾರಂಭವಾಗಿ ೧೮೮೨ರಲ್ಲಿ ಪೂರ್ಣಗೊಂಡಿತು.

ಸೇಕ್ರೆಡ್ ಆಟ್ ಆಫ್ ಜೇಸಸ್ ಚರ್ಚ್

ಉಡುಪಿ ಜಿಲ್ಲೆಯ ಕೊಳಲ್‌ಗಿರಿಯಲ್ಲಿರುವ ಈ ಚರ್ಚ್‌ಗೆ ಇತಿಹಾಸವಿದ್ದು, ಮೂಲತಃ ಗಿರಿ ಮಿಲಾಗ್ರಿಸ್ ಚರ್ಚ್ ಕಲ್ಲಿನಾಪುರದ ಭಾಗವಾಗಿತ್ತು. ೧೮೮೭ರಲ್ಲಿ ಕ್ಯಾಥೊಲಿಕ್ ಬಹುತೇಕ ಬ್ರಹ್ಮಾವರ ಆಫ್ ಟಿದ್ರಿಕಾರಕ ಚರ್ಚ್ ಪ್ರಾರಂಭಿಸಿದರು. ೧೯೨೫ರಲ್ಲಿ ಸೇಕ್ರೆಡ್ ಆರ್ಟ್ ಚರ್ಚ್ ಕಟ್ಟಡ ನಿರ್ಮಾಣ ಆಗುವುದರ ಜೊತೆಗೆ ಛಿದ್ರೀಕರಣ ಕುಟುಂಬಗಳಿಗೆ ದೊಡ್ಡದಾದ ಭೋಧನಾ ಸಭೆಯನ್ನು ನಡೆಸಿ ಪರಿವರ್ತಿಸಿ, ೧೯೩೫ರಲ್ಲಿ ಬ್ರಹ್ಮಾವರಕ್ಕೆ ವರ್ಗಾಯಿಸಲಾಯಿತು. ಮುಂದುವರೆದಂತೆ ಹಂತಹಂತವಾಗಿ ವಿವಿಧ ಶೈಲಿಗಳನ್ನು ರಚಿಸುತ್ತಾ ಮುಂದಾದ ಪಾದ್ರಿಗಳು ಗಂಟೆಗೋಪುರ, ಛಾವಣಿಯಲಂಕಾರವನ್ನು ಮಾಡಿದರು.

ವರ್ಜಿನ್ ಮೇರಿ ಇಮ್ಯಾಕ್ಯುಲೇಟ್ ಕಾನ್ಸೆಪ್ಸನ್ ಚರ್ಚ್

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿರುವ ಈ ಚರ್ಚ್ ೧೬೨೯ರಲ್ಲಿ ಪೋರ್ಚ್‌ಗೀಸ್ ಕಮ್ಯಾಂಡರ್, ಡೂಮ್ ವಿಗುಯಲ್ ನೂರೂನ್ಹಾ ಗಂಗೊಳ್ಳಿ ವಶಪಡಿಸಿಕೊಂಡು ಸೆಂಟ್ ಮೈಕಲ್ ಮತ್ತು ಇಮ್ಯಾಕ್ಯುಲೇಟ್ ಕಾನ್ಸೆಪ್ಟನ್ ಮೀಸಲಾಗಿರುವ ಚರ್ಚ್ ಮತ್ತು ಮೀಸಲಾಗಿರುವ ಕೋಟೆಯನ್ನು ನಿರ್ಮಿಸಲಾಗಿದೆ. ೧೬೩೦ರಲ್ಲಿ ಇಮ್ಯಾಕ್ಯುಲೇಟ್ ಕಾನ್ಸೆಪ್ಟ್‌ನ ಅವರ್ ಲೇಡಿ ಪುನಃ ಸ್ಥಾಪಿಸಲಾಯಿತು. ೧೯೫೬ರಲ್ಲಿ ಪೂರ್ಚ್‌ಗೀಸ್ ಗಂಗೊಳ್ಳಿ ತೊರೆಯುವುದರಿಂದ ಚರ್ಚ್‌ನಾಶಪಡಿಸಿದ್ದರು. ನಂತರ ೧೯೫೭ರಲ್ಲಿ ಫ್ರ ಜೋಸೆಪ್ ಫ್ರೆಂಚ್ ನೌಜಾ (೧೯೫೬-೬೨) ಬಲಿಪೀಠದ ಮತ್ತು ಮುಂಬಾಗ ಹೊರತು ಪಡಿಸಿ, ಇಲ್ಲಿನ ಚರ್ಚ್ ಕಟ್ಟಡವನ್ನು ನವೀಕರಿಸಲಾಯಿತು. Gongolli ಯಲ್ಲಿರುವ ಚರ್ಚ್‌ನ ಪ್ರಮುಖವಾದ ಅಂಗ ಪ್ರಾರ್ಥನಾ ಮಂದಿರ ನಿರ್ಮಾಣವಾಯಿತು.

ಹೋಲಿ ಕ್ರಾಸ್ ಚರ್ಚ್

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಹೊಸಬೆಟ್ಟುವಿನಲ್ಲಿರುವ ಈ ಚರ್ಚ್ Bidrem ಚರ್ಚ್ ಎನ್ನುವರು ಮೊದಲು ಈ ದೇವಾಲಯ ಗೋವಾದ ಬಿಷಪ್ಪರ ವಿಕಾರ್ ಜನರಲ್‌ನ ನಿವಾಸದಲ್ಲಿತ್ತು. ಟಿಪ್ಪು ಸುಲ್ತಾನನ ದರ್ಬಾರಿನಿಂದ ನಾಶವಾದ ಚರ್ಚ್‌ಗಳಲ್ಲಿ ಇದು ಇರಲಿಲ್ಲ. ಆದರೂ ಇದು ೧೭೮೮ರಲ್ಲಿಯೇ ಸ್ಥಾಪನೆಗೊಂಡಿದ್ದು, ಹಳೆಯ ಚರ್ಚ್‌ನ್ನು ೧೮೬೫ರಲ್ಲಿ ಫ್ರ ಜೆರೋಮ್ ಪಾಲ್ ಕ್ಯಾವಾರ್ಲೋ ಸರಿಪಡಿಸಿದ್ದರು. ಈ ಚರ್ಚ್‌ನ್ನು ಶಿಲುಬೆಯಾಕಾರ ಹಾಗೂ ಗೋಥಿಕ್ ಶೈಲಿಯಲ್ಲಿ ನಿರ್ಮಿಸಿರುವುದು ಈ ಭಾಗದ ವಿಶೇಷ.

ಎಸ್ಟಿ ಅಂತೋನಿ ಚಾಪೆಲ್

ಉಡುಪಿ ಜಿಲ್ಲೆಯ ಕುಂದಾಪುರ ಪಟ್ಟಣದಲ್ಲಿರುವ ಈ ಚರ್ಚ್ ಕುಂಟಾಲ್ ನಾಗರ್ ಬೆಲ್ ಪ್ಯಾರಿಷ್ ಒಂದು ಉಪನಿಲ್ದಾಣ, ಫ್ರ ಹೆರಾಲ್ಡ್ ಮನೆಜಸ್ ನಿರ್ಮಿಸಿದ ಚಾಪೆಲ್ ಪ್ರಸ್ತುತ ದೊಡ್ಡ ಪಂಗಡವೊಂದು ತುಂಬಾ ಸಣ್ಣ ದಿರಲಿಲ್ಲ. ಆದ್ದರಿಂದ ಫ್ರ ಚಾರ್ಲ್ಸ್ ಲೆವಿಸ್ ಸುಖಿ ಮತ್ತು ಮೇ ೧೭, ೨೦೦೩ರಂದು ಪ್ಯಾರಿಷ್ ಒಳಗೆ ಸ್ಥಾಪಿಸಲಾಗುತ್ತದೆ ಎಂದು ಸೆಂಟ್ ಆಂಟನಿ, ಮೀಸಲಾಗಿರುವ ಹೊಸ ಕಟ್ಟಡ ನಿರ್ಮಿಸಿದೆ.

ಪವಾಡಗಳು ಅವರ್ ಲೇಡಿ ಆಫ್ ಚರ್ಚ್

ಉಡುಪಿಯ ಕಲ್ಲೇನಪುರದಲ್ಲಿರುವ ಈ ಚರ್ಚ್ ಮಂಗಳೂರಿನಿಂದ ೭೦ ಉಡುಪಿಯಿಂದ ೯ ಕಿ.ಮೀ.ದಿಂದ ದೂರವಿದ್ದು, ಕೆಮ್ಮಣ್ಣು, ಮೌಂಟ್ ರೋಸರಿ, ಬ್ರಹ್ಮಾವರ ಮತ್ತು ಗಿರಿ ಪ್ಯಾರಿಷ್‌ಗಳು ಸುತ್ತುವರಿದಿದೆ. ಕಲ್ಲೇನಪುರ ಆನಂದ ಭೂಮಿಯ ಅರ್ಥ ಮಿಲಾಗ್ರಿಸ್ ಚರ್ಚ್ ಕಟ್ಟಿದ ಸಮಯದಲ್ಲೆ ಕಟ್ಟಲಾಗಿರುವ ಈ ಚರ್ಚ್, ೧೬೭೮ ರಿಂದ ೧೯೯೭ರ ಸಮಯದಲ್ಲಿ ಕೆನರಾವನ್ನು ಆಳಿದ Bednore ಪೋರ್ಚ್‌ಗೀಸ್ ಮತ್ತು ರಾಣಿ ಚೆನ್ನಮ್ಮ ನಡುವಿನ ಒಪ್ಪಂದದ ಪ್ರಕಾರ ಸ್ಥಾಪಿಸಲಾಯಿತು. ೧೬೭೮ರಲ್ಲಿ ಗೋವಾ ಪೋರ್ಚ್‌ಗ್ರಿಸ್ ಕ್ರಮಾನುಗತ ಜನಪ್ರಿಯವಾಗಿ ಮಿಲಾಗ್ರಿಸ್ ಚರ್ಚ್ ಎಂದು ನಾಸ್ಸಾ Senhora D Milagres (ಪವಾಡಗಳು ಆಫ್ ಅವರ್ ಲೇಡಿ) ಚರ್ಚ್ ಸ್ಥಾಪಿಸಿದರು. ಟಿಪ್ಪು ೧೭೮೪ರಲ್ಲಿ ಈ ಚರ್ಚ್‌ನ ಜೊತೆ ಮತ್ತು ಪೆಟ್ರಿಯ ಚರ್ಚ್‌ಗಳನ್ನು ನಾಶಪಡಿಸಿ, ಈ ಧರ್ಮದ ಸಂಬಂಧಿಕರನ್ನು ಶ್ರೀರಂಗಪಟ್ಟಣದಲ್ಲಿ ಬಂದಿಸಿ, ನಂತರ ಬಿಡುಗಡೆಗೊಳಿಸಿದ ಮೇಲ ೧೮೦೬ರಲ್ಲಿ ಮರು ನಿರ್ಮಾಣ ಮಾಡಿಕೊಳ್ಳುವರು. ಅದು ೧೮೦೮ರಲ್ಲಿ ಸಂಪೂರ್ಣವಾಗಿ ಹೊಸ ವಿನ್ಯಾಸವನ್ನು ಕೊಟ್ಟು ಕೆಲವು ಶಿಲ್ಪ ಮತ್ತು ಚಿತ್ರಗಳನ್ನು ರಚನೆ ಮಾಡಿಸಿರುವುದನ್ನು ಕಾಣಬಹುದಾಗಿದೆ.

ಎಸ್ಪಿ ಜೋಕಿಮ್ ಚರ್ಚ್

ಪುತ್ತೂರು ತಾಲ್ಲೂಕಿನ ಕಡಬದಲ್ಲಿರುವ ಈ ಚರ್ಚ್‌ನನ್ನು ಪಂಜ, ಕೊಕ್ಕಡ ಮತ್ತು ಉಪ್ಪಿನಂಗಡಿ ಪ್ಯಾರಿಷ್ಯಳು ಸುತ್ತುವರಿದಿದೆ ಮೂಲಥಃ ಈ ಕೊಕ್ಕಡ ಪ್ಯಾರಿಷ್ ಭಾಗವಾಗಿತ್ತು. ಇದನ್ನು ೧೯೨೩ ರಲ್ಲಿ ಬೇರ್ಪಡಿಸಲಾಯಿತು. ಕೊಕ್ಕಡ ಆಫ್ ಎಫ್‌ಆರ್.ಆರ್‌ಡಿ. - Sequeira ನಲ್ಲಿ ಪ್ರಾರ್ಥನಾ ಮಂದಿರವನ್ನು ನಿರ್ಮಿಸಲಾಯಿತು. ಕಡಬ ಮುಂಚೆ ಗ್ರಾಮವಾಗಿದ್ದು ನಂತರ ೧೯೨೪ ರಂದು ಹೊಬಳಿಯಾಯಿತು. ಬಾಲಕರ ಅನಾಥಾಶ್ರಮ ನಿರ್ಮಿಸುವುದು ಜೋತೆಗೆ ಚರ್ಚ್‌ನ್ನು ೧೯೩೭ ರಲ್ಲಿ ನಿರ್ಮಿಸಲಾಗಿದೆ.

ಅವರ್ ಲೇಡಿ ಚರ್ಚ್

ಈ ಚರ್ಚ್ ೮ ಕಿ.ಮೀ. ಕಾರ್ಕಳ ಮತ್ತು ಉಡುಪಿ ೩೩ ಕಿ.ಮೀ ಮಂಗಳೂರು ಉತ್ತರಕ್ಕೆ ೭೮ ಕಿ.ಮೀ. ಇದ್ದು ಮೂಡುಬೆಲ್ಲೆ ನಕ್ರೆ, ಇರ್ಗನ್ ಮತ್ತು ಕಾರ್ಕಳ ಪ್ಯಾರಿಷ್ಗಳು ಸುತ್ತುವರಿದಿದೆ. ಕನರ್ಜಾನ ಗ್ರಾಮವು ಮೇ ೨೮, ೧೯೩೮ ರಂದು ಹೋಬಳಿಯಾಗಿ ಪರಿವರ್ತನೆಗೊಂಡಿತು. ಎಫ್.ಆರ್. ವಿಲಿಯಂ ಎ.ಲೆವಿಸ್ ಮೊದಲ ಪ್ಯಾರಿಷ್ ಪ್ರೀಸ್ಟ್, ಈ ಚರ್ಚ್ ಕಟ್ಟಲು ಶ್ರೀಮತಿ ಅಮ್ಮಾಣಿ ಶೆಟ್ಟಿ ದಾನವಾಗಿ ಕೊಟ್ಟಿದ್ದರು ಎಂದು ನಂಬಲಾಗಿದೆ. ೧೯೪೨ರಲ್ಲಿ ಅಡಿಪಾಯದ ಕಲ್ಲು ಸ್ಥಾಪಿಸಿದರೂ ಪೂರ್ಣಗೊಂಡಿದ್ದು ಎಪ್ರಿಲ್, ೨೮, ೧೯೪೮ ರಂದು ಗಂಟೆಗೋಪುರವು ಸಹ ಇದೇ ಸಮಯದಲ್ಲಿ ನಿರ್ಮಾಣಗೊಂಡಿದೆ.

ಎಸ್ಪಿ ಲಾರೆನ್ಸ್ ಚರ್ಚ್

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿರುವ ಅತ್ತೂರು ಉತ್ತರದ ಚರ್ಚ್ ೧೮ ನೇ ಶತಮಾನದಲ್ಲಿ ಸ್ಥಾಪನೆಯಾಗಿದ್ದು ಕಾರ್ಕಳ ಪಟ್ಟಣದಲ್ಲೆ ನೆಲೆಸಿದೆ ಕಾರ್ಕಳ ಎಂದರೆ ಕನ್ನಡದಲ್ಲಿ "ಕಾರಿಕಲ್ಲು" (ಕಪ್ಪುಕಲ್ಲು)ಗಳೆಂದು ಕರೆಯಬಹುದು. ಬಹುಶಃ ಕಾರ್ಕಳವು ಹಳೇಯ ಪಾದ್ರಿಗಳ ಪುರಾತನ ಕಾಲದ ನೆಚ್ಚಿನ ತಾಣವಾಗಿದೆ. ಆರಂಭಿಕ ಪ್ಯಾರಿಷ್ ಚಾಪೆಲ್ ಒಂದು thatched ಪಾವಣಿಯ ಹೊಂದಿತ್ತು ೧೭೫೯ ರಲ್ಲಿ ಮೊದಲು ನಿರ್ಮಿಸಲಾಯಿತು. ಆನಂತರ ಟಿಪ್ಪುಸುಲ್ತಾನನಿಂದ ನೆಲಸಮಗೊಂಡು ಕ್ರೈಸ್ತಬಾಂಧವರನ್ನೆಲ್ಲಾ ಬಂಧಿಸಿ ಶ್ರೀರಂಗ ಪಟ್ಟಣಕ್ಕೆ ಕರೆದೊಯ್ದುದ್ದು, ಸುಮಾರು ೩೦ ವರ್ಷಗಳ ನಂತರ ಮರು ನಿರ್ಮಾಣ ಮಾಡಿದ ಇಲ್ಲಿನ ಹಿರಿಯರು ಕ್ರಾಸ್ಎಫ್ಆರ್ ಜಾನ್ (೧೮೬೮ - ೧೮೭೦) ೧೮೭೦ರಲ್ಲಿ Naroi (ಈಗ Naravi) ಪ್ರಾರ್ಥನಾ ಮಂದಿರ ನಿರ್ಮಿಸಲಾಯಿತು. ಹೀಗೆ ಹಂತ ಹಂತವಾಗಿ ಬದಲಾವಣೆಗೊಳ್ಳುತ್ತಾ ೧೯೯೯ ರಲ್ಲಿ ಎರಡು ಬಾಗಿಲುಗಳುಳ್ಳ, ಶಿಖರವನ್ನೊಲಿದ ಚರ್ಚ್‌ನ್ನು ಸುಂದರವಾಗಿ ನಿರ್ಮಿಸಲಾಗಿದೆ.

ಕ್ರೈಸ್ಟದ ಕಿಂಗ್ ಚರ್ಚ್

ಉಡುಪಿ ಜಿಲ್ಲೆಯ ಕಾರ್ಕಲ ಪಟ್ಟಣದಲ್ಲಿರುವ ಈ ಚರ್ಚು ಪ್ರಮುಖ ಆಕರ್ಷಯನ್ನು ಹೊಂದಿದೆ. ಪ್ರಾರಂಭದಲ್ಲಿ ೧೯೨೮ ರ ಸಮಯದಲ್ಲಿ ಖಾಲಿ ಮನೆಯಲ್ಲಿ ಧಾರ್ಮಿಕ ನೇಮಗಳು ನಡೆಯುತ್ತಿದ್ದವು. ಕಾರ್ಕಳ ಟೌನ್ ಪಾದ್ರಿ ಮೊದರ ಪ್ಯಾರಿಷ್ ಪಾದ್ರಿ ಅವರು ಅತ್ತೂರು ಆಫ್ ಎಫ್ ಆರ್ Salvadore ಪ್ರೆಂಚ್ ಸೌಜಾ ಪ್ರಸ್ತುತ ಚರ್ಚ್‌ನ ನಿರ್ಮಿಸಿದ ಮತ್ತು ಕ್ರೈಸ್ಟಕಿಂಗ್ ಅದನ್ನು ಸಮರ್ಪಿಸಿದನು.

ಶಿಶು ಮೇರಿ ಚರ್ಚ್

ಮಂಗಳೂರು ಪಟ್ಟಣದ ೩ ನೇ ಬ್ಲಾಕ್‌ನಲ್ಲಿರುವ ಕಟಿಪಲ್ಲದಲ್ಲಿರುವ ಈ ಚರ್ಚ್ Katipalla ಇನ್ಫ್ಯಾಂಟ್ ಮೇರಿ ಮೀಸಲಾಗಿರುವ ಮಂಗಳೂರು ಡೊಯೋಸಿಸ್ ಮಾಕ್ರ ಪ್ಯಾರಿಷ್ ಆಗಿದೆ. ಪ್ರಾನೋರೊನ್ಹಾ ನಿರ್ಮಿಸಿದ ಹೊಸ ಚರ್ಚ್ ಕಟ್ಟಡ ಸೆಪ್ಟೆಂಬರ್ ೮, ೧೯೬೮ ರಂದು ಉದ್ಘಾಟಿಸಿದ. ಮುಂದೆ ಗಂಟೆಗೋಪುರ ನಿರ್ಮಿಸಿ, ಪ್ರಾರ್ಥನಾ ಮಂದಿರವನ್ನು ಸ್ಥಾಪಿಸಿದರು.

ಸೆಂಟ್ ವಿನ್ಸೆಂಟ್ ಡೆ ಪೌಲ್ ಚರ್ಚ್

ಉಡುಪಿಯ ಕಟಪಡಿಯಲ್ಲಿರುವ ಈ ಚರ್ಚ್ ಕರಾವಳಿ ಮಂಗಳೂರಿಗೆ ೫೫ ಕಿ.ಮೀ. ಹಾಗೂ ಉಡುಪಿಗೆ ೭ ಕಿ.ಮೀ. ಅಂತರದಲ್ಲಿದೆ. ಕಟಪಡಿ ಒಮ್ಮೆ ಉದಯವರ ಪ್ರಾರಿಷ್ ಭಾಗವಾಗಿತ್ತು ಸ್ವಾತಂತ್ರ್ಯ ನಂತರದಲ್ಲಿ ನಿರ್ಮಾಣವಾಗಿರುವ ಈ ಚರ್ಚ್ ಯೇಸು ಸ್ವಾಮಿಗೆ ಅರ್ಪಿಸಲಾಗಿದ್ದು, ಅದು ೧೯೬೦ ರಲ್ಲಿ ಡಬ್ಲೂಎಲಿವಿಸ್ ರವರ ಮಾರ್ಗದರ್ಶನದಲ್ಲಿ ಸ್ಥಾಪಿಸಲಾಗಿದೆ. ಇದರಲ್ಲಿಯೂಕೂಡ ಬಲಿಪೀಠ, ಚರ್ಚ್‌ನ ಗಂಟೇಗೋಪುರವನ್ನು ಕಾಣಬಹುದಾಗಿದೆ.

ಮಕ್ಕಳ ಯೇಸುವಿನ ಲಿಟಲ್ ಫ್ಲವರ್ ಚರ್ಚ್

ಉಡುಪಿ ಜಿಲ್ಲೆಯ ಕೆಮ್ಮಣ್ಣು ಗುಂಡಿಯಲ್ಲಿರುವ ಈ ಚರ್ಚ್ ಸುಂದರವಾಗಿದೆ, ಕೆಮ್ಮಣ್ಣು ಹೆಸರಿನ ಊರು ಹೊಂದಿರುವಂತೆ ಇಲ್ಲಿ ಹೆಚ್ಚು ಕೆಂಪು ಮಣ್ಣು ಸಿಗುವ ಕಾರಣದಿಂದ ಇದು ಕಲ್ಲೇನಪುರ ಮಿಲಾಗ್ರಿಸ್ ಮತ್ತು ಕಲ್ಲೆನಪುರ - ಮೌಂಟ್‌ರೋಸರಿ ಚರ್ಚ್‌ಗಳ ಭಾಗವಾಗಿತ್ತು. ಮಾರ್ಚ೦ ೩೦, ೧೯೩೮ ರಲ್ಲಿ ಬ್ರಿಟಿಷ್ ವಿಕ್ಟರಿ ಪರ್ನಾಂಡೀಸ್‌ನವರು ಕೆಮ್ಮಣ್ಣು ಪ್ರಾರಿಷ್ ರೂಪಿಸಲು ಅನುಮತಿ ಪಡೆದು ತದನಂತರ ಆಗಸ್ಟಂ ತಿಂಗಳಿನಲ್ಲಿ ಸ್ಥಾಪಿಸಿದರು.

ಪವಾಡಗಳು ಅವರಂ ಲೇಡಿ ಚರ್ಚ್

ಮಂಗಳೂರು ಪಟ್ಟಣದಲ್ಲಿರುವ ಮಿಲಾಗ್ರಿಸ್ ಚರ್ಚ್ ಎಂದು ಬಂಬಿತವಾಗಿರುವ ಇದು ಪಟ್ಟಣದ ಹೃದಯಭಾಗದಲ್ಲಿದೆ. ಜನಪ್ರಿಯವಾದ ಚರ್ಚ್‌ಗಳಲ್ಲಿ ಒಂದಾಗಿದ್ದು, ಮಂಗಳೂರು ಆಫ್ ಡಯಾಸಿಸ್ ಪ್ರಾಚೀನ ಚರ್ಚುಗಳಲ್ಲಿ ಒಂದಾಗಿದೆ. ಇದನ್ನು ಅನೇಕ ಬಾರಿ ಪುನರ್ ನಿರ್ಮಾಣಮಾಡಲಾಗಿದೆ. ರಾಣಿ ಚೆನ್ನಮ್ಮ ಹಾಗೂ ಬೆಡ್‌ನೊರೆ ಕಿಂಗ್ ಕೊಟ್ಟಕೊಡುಗೆಯನ್ನು ಬಳಸಿಕೊಂಡು ೧೬೮೦ ರಲ್ಲಿ ರೆವರೆಂಡ್ ಥಾಮಸ್ ಡಿಕ್ಯಾಸ್ಟ್ರೊ ನಿರ್ಮಿಸಿದನು. ಟಿಪ್ಪುಸುಲ್ತಾನರ ಸೈನಿಕರು ಈ ಚರ್ಚ್‌ನ ಮೇಲೆಯು ದಾಳಿಮಾಡಿ

ನಷ್ಟವುಂಟುಮಾಡಿದರು. ಹಾಗೆ ಈ ಧರ್ಮದ ಮತ ಬಾಂಧವರನ್ನು ಶ್ರೀರಂಗಪಟ್ಟಣದಲ್ಲಿ ಬಂದಿಸಲಾಯಿತು. ಸುಮಾರು ೩೦ ವರ್ಷಗಳನಂತರ ಬಿಡಿಗಡೆಯಾಗಿ ಬಂದ ಪ್ರವರ್ತಕರು ಭಕ್ತಾದಿಗಳು ಚರ್ಚ್‌ನ್ನು ಬದಲಾವಣೆಯ ಹಂತಕ್ಕೆ ಕೊಂಡೊಯ್ದರು. ಆದರೂ ೧೦೦ ವರ್ಷಗಳ ನಂತರ ಅಂದರೆ ೧೯೧೧ ರಲ್ಲಿ ಚರ್ಚ್‌ನ ಮುಂಭಾಗ ಕುಸಿಯುತ್ತದೆ ನಂತರ ಎಲ್ಲಾಕಟ್ಟಡವನ್ನು ನೆಲಸಮ ಮಾಡಿ ಹೊಸ ಚರ್ಚ್ ಸಂಗ್ರಹಕ್ಕೆ ನಿರ್ದರಿಸಲಾಯಿತು. ಇದೇ ವರ್ಷದಲ್ಲಿ ಭವ್ಯವಾದ ನೂತನ ಚರ್ಚ್ ಸ್ಥಾಪಿಸಿಲಾಯಿತು. ಈ ಚರ್ಚ್‌ನಲ್ಲೂ ಕೂಡ ವ್ಯವಸ್ಥಿತವಾದ ಪೂಜಾಧಿವಿದಿಗಳಿಗೆ ಸಂಬಂಧಿಸಿದಂತಹ ಕೊಠಡಿಗಳನ್ನು, ಗಂಟೇಗೋಪುರವನ್ನು ಯೇಸು ಸ್ವಾಮಿ ಹಾಗೂ ಪಾದ್ರಿ ಪ್ರವರ್ತಕರ ಚಿತ್ರ-ಶಿಲ್ಪಗಳನ್ನು ರಚಿಸಲಾಗಿದೆ.

ಗಾಡ್ ತಾಯಿಯ ಚರ್ಚ್

ಬಂಟ್ವಾಳ ತಾಲ್ಲೂಕಿನ ನಲ್ಲಿರುವ ಈ ಚರ್ಚ್ ಕೂಡ ಟಿಪ್ಪುಸುಲ್ತಾನರ ಹಾನಿಯಲ್ಲಿ ತೊಯ್ದದ್ದು. ಹಾಗೂ ಬಂದಿತರಾದದ್ದು ತದನಂತರ ಹಳೆಯ ಚರ್ಚ್‌ಗೆ ವಿನ್ಯಾಸಕೊಟ್ಟಿದ್ದು ಆಗಿದೆ. ೧೭೭೫ ರಲ್ಲಿ ಪ್ರಾರಂಭಿಸಿದ ಈ ಚರ್ಚ್ ೧೮೮೬ ರ ವರೆಗೆ ಗೋವಾ ವ್ಯಾಪ್ತಿಯಲ್ಲಿತ್ತು. ಹೊಸ ಚರ್ಚ್ ಚರ್ಚಿನ ಗಂಟೇಗೋಪುರ ಮತ್ತು ಇಗರ್ಜಿಗಳ ಪ್ರೆಸಿರಿಲ್ ಪ್ರೆಂಚ್ ಸೌಜಾ, ೧೮೦೦ ರಿಂದ ೨೬ ಪ್ರಾರಿಷ್ ಪಾದ್ರಿಗಳು ನಿರ್ಮಿಸಿದರು. ಬಿಷಪ್ ಬೇಸಿಲ್ ಪ್ರೆಂಚ್ ಸೌಜಾ ಎಂಬುವವನು ಜನವರಿ ೨೧, ೧೯೮೮ ರಂದು ಮರುನಿರ್ಮಾರ್ಣಗೊಂಡ ಚರ್ಚ್‌ನ್ನು ಉದ್ಘಾಟಿಸಿದರು.

ಬಾಲಯೇಸು ಸೆಂಟ್ ಥೆರೆಸಾ ಚರ್ಚ್

ಉಡುಪಿ ಜಿಲ್ಲಾ ಪಡುಬಿದ್ರದಲ್ಲಿ ನೆಲೆಗೊಂಡಿರುವ ಈ ಚರ್ಚ್ ಮುಕುಮಾರ ಬೆಲ್‌ಮನ್ ಪ್ಯಾರಿಷ್ ಭಾಗವಾಗಿತ್ತು ಈ ದೇವಾಲಯವನ್ನು ೧೯೭೧ ರಂದು ಉದ್ಘಾಟಿಸಿ ಇಗರ್ಜಿಗಳನ್ನು ೧೯೭೬ರಲ್ಲಿ ನಿರ್ಮಿಸಿದರು. ಹಂತ ಹಂತವಾಗಿ ರಚನೆಯಾದ ಈ ದೇವಾಲಯ ಒಂದೊಂದೆ ಬಿಡಿ ಬಿಡಿಯಾಗಿ ರಚಿಸಲಾಗಿದೆ. ಹೊಸ ಚರ್ಚ್‌ರೂಪತಾಳಿದ್ದು ಮೇ ೪, ೧೯೯೨ ರಂದು ಉದ್ಘಾಟಿಸಲಾಗಿದೆ.

ಸೆಂಟ್ ಪ್ರಾನ್ಸಿಸ್ ಕ್ಸೇವಿಯರ್ ಆಫ್ ಚಾಪೆಲ್

ಈ ಚರ್ಚ್ ಮಂಗಳೂರಿನ ಸವೆರಪುರದಲ್ಲಿದ್ದು ಎಪ್‌ಆರ್ ಮಥಿಯಾಸ್ ಫಿರೇರಾ ಸವೆರಾಪುರನಲ್ಲಿ ಪ್ರಾನ್ಸಿಸ್ ಕ್ಸೇವಿಯರ್ ಮೀಸಲಾಗಿರುವ ಚಾಪೆಲ್ ನಿರ್ಮಿಸಲಾಯಿತು.

ಸೆಂಟ್ ಅಲೋಷಿಯಸ್ ಆಫ್ ಚಾಪೆಲ್

ಈ ಚಾಪೆಲ್ ಮಂಗಳೂರಿನ ಪಟ್ಟಣದಲ್ಲಿದೆ. ಬೆಸ್ಯೂಟ್ ಡಿಸೆಂಬರ್ ೩೧ ೧೮೭೮ ರಂದು ಮಂಗಳೂರಿಗೆ ೧೯೨೩ ರವರೆಗೆ ಡಯೋಸಿಸ್ ಆಡಳಿತ ಮಾಡಿದ. ಜೊತೆಗೆ

೧೮೮೦ ರಲ್ಲಿ ಸುಮಾರು ೭.೫ ಎಕರೆ ಭೂಮಿಯನ್ನು ದಾನ ಮಾಡಿದ್ದರಿಂದ ಎಫ್.ಆರ್. ಎಲ್ಲಿಯು ೧೮೯೦ ರಲ್ಲಿ ಸೇಂಟ್ ಅಲೋಯ್ಸಿಯಸ್ ಚಾಪೆಲ್ ನಿರ್ಮಿಸಲಾಯಿತು. ಇಟಲಿಯ ಪ್ರಸಿದ್ಧ ಚಿತ್ರಕಲಾವಿದ ಮೋಶ್ವಿನಿ ಆಂಟೊನಿ (೧೮೫೪-೧೯೦೫) ಈ ಚಾಪೆಲ್‌ಗೆ ೧೮೯೯ ರಲ್ಲಿ ಬಂದು ದೇವಾಲಯಕ್ಕೆ ಸಂಬಂಧಿಸಿದಂತೆ ವರ್ಣ ಚಿತ್ರಗಳನ್ನು ರಚಿಸುತ್ತಾನೆ. ಅದು ಸ್ಥಳಿಯ ಕಲಾವಿದರನ್ನು ಸಹಾಯಕ್ಕಿಟ್ಟಕೊಂಡು ಬರೀ ಎರಜು ವರ್ಷಗಳಲ್ಲಿಯೇ ಬಣ್ಣಗಳಿಂದ ಈ ಚಾಪಲ್‌ನ್ನು ತುಂಬಿಸಿದ್ದಾರೆ. ಅದರಲ್ಲಿ ಬರೀ ಬಣ್ಣಬಳಲ್ಲಿ ಜೊತೆಗೆ ರೇಖೆಗಳು ಸಂಬಂಧಗಳು, ಜೀವಂತಿಕೆಗಳು ಪಾದ್ರಿಗಳು. ಭಾವಚಿತ್ರಗಳ ಸಮಯ ಸಂದರ್ಭದ ಯೋಜಿತ ಚಿತ್ರಕಥೆಗಳು, ಯೇಸುವಿನ ಹುಟ್ಟು ಸಾವು, ಭೋದನೆ, ಪ್ರವರ್ತಕರು, ವಿನ್ಯಾಸಗಳು ಕಂಬದ ಮೇಲೆ ಛಾವಣಿಯಮೇಲೆ ಅಕ್ಕ-ಪಕ್ಕ ಗೋಡೆಯಲ್ಲಿ ತೈಲವರ್ಣದಿಂದ ಭಿತ್ತಿ ರೂಪದಲ್ಲಿ ಹಾಗೂ ಕ್ಯಾನ್ವಾಸ್‌ನ ರೂಪದಲ್ಲಿ ಚಿತ್ರಿಸುವ ಕಲಾಕೃತಿಗಳು ಇಂದಿಗೂ ರಾರಾಜಿಸುತ್ತವೆ. ವರ್ಣಚಿತ್ರ ೬೦೦sq.mtrs ಮತ್ತು ತೈಲ ಕ್ಯಾನ್ವಸ್, ವರ್ಣ ಚಿತ್ರಗಳು Celing ೪೦೦ ಚದರ mtrs ಇರುತ್ತವೆ. ಈ ಚರ್ಚ್ ರೋಮ್‌ನ ಹೆಸರಾಂತ ಸಿಸ್ಟನ್ ಛಾಪೆಲ್ ಹೋಲುತ್ತದೆ.

ಈ ಚಿತ್ರಗಳು ಅಲ್ಪ-ಸ್ವಲ್ಪ ಅಳಿಸಿ ಹೋದಕಾರಣ ಮರುಸ್ಥಾಪನೆಯನ್ನು ೧, ನವೆಂಬರ್ ೧೯೯೦ ರಂದು ಪ್ರಾರಂಭಿಸಿ ೨೬ ನವೆಂಬರ್ ೧೯೯೦ ರಂದು ಕೊನೆಗೊಳಿಸಿದರು. ಪ್ರತಿದಿನ ಬರುವ ಭಕ್ತರಿಗೆ ಪ್ರವಾಸಿಗರಿಗೆ ನೆಚ್ಚಿನ ತಾಣವಾಗಿರುವುದಂತೂ ಸತ್ಯ.

ದಿ ಅವರ್ ಲೇಡಿ ಆಫ್ ಚಾಪೆಲ್ಲ

ದ.ಕ. ಹೃದಯ ಭಾಗದಲ್ಲಿರುವ ತಂದೆಯ ಬಿಷಪ್ ಹೌಸ್‌ನ್ನು ಪ್ರಭಾವಿ ಕ್ಯಾಥೋಲಿಕ್‌ನು ೧೮೪೦ ರಲ್ಲಿ ತಮ್ಮ ಅನುಕೂಲಕ್ಕಾಗಿ ಒಂದು ಸಣ್ಣ ಚಾಪೆಲ್‌ನ್ನು ನಿರ್ಮಿಸಿದನು. ೧೮೫೭ ರಲ್ಲಿ ಜೋಸೆಫ್. ಜೆ. Coetho ಮೂಲಕ ಪುನರ್‌ನಿರ್ಮಾಣವಾಯಿತು. ಮುಖ್ಯ ಬಲಿಪೀಠದ ಮತ್ತು ಮೇಲ್ಛಾವಣಿಯ ಬಣ್ಣ ಆಶತಮಾನದ ಉತ್ಸವ ಆಚರಣೆಗಳು ನಡೆಸಲಾಗುತ್ತದೆ.

ಅವರ್ ಲೇಡಿ ರಿಸಂಪ್ಷನ್ ಕ್ಯಾಥೆಡ್ರಲ್

ಕಾರವಾರದ ಮುಖ್ಯ ಭಾಗದಲ್ಲಿರುವ ಈ ದೇವಾಲಯ ೧೮೬೭ರಲ್ಲಿ ಪ್ರಾರಂಭಿಸಿದರು ಇದು ಹಿಂದೂ ಧರ್ಮದ ಪ್ರತೀಕಾರವೆಂಬಂತೆ ಗಂಟೆಗೋಪುರ ಪ್ರಾರ್ಥನಾ ಮಂದಿರವನ್ನು ವಿಶೇಷವಾಗಿ ರಚಿಸಲಾಗಿದೆ.

ಚರ್ಚ್ ಆಫ್ ಲೇಡಿ

ಇದು ಹೊನ್ನಾವರದಲ್ಲಿ ನಿರ್ಮಿಸಲಾಗಿದ್ದು, ೧೭೮೯ರಲ್ಲಿ ಟಿಪ್ಪುವಿನ ಧ್ವಂಸದ ಪ್ರಕರಣದಲ್ಲಿ ಇದು ಸೇರುತ್ತದೆ. ಹಾಗೆ ಬಂದಿತರು ಮುಕ್ತವಾದ ಸಂದರ್ಭದಲ್ಲಿ ಇದನ್ನು ಪುನರ್‌ನಿರ್ಮಾಣ ಮಾಡಿದರು.

ಚರ್ಚ್ ಆಫ್ ಅವರ್ ಲೇಡಿ

ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಕೇಂದ್ರದಲ್ಲಿ ನಿರ್ಮಾಣ ಗೊಂಡಿರುವ ಈ ದೇವಾಲಯವು ೧೮ನೇ ಶತಮಾನದ ಕೊನೆಯಲ್ಲಿ ತನ್ನ ಅಸ್ಥಿತ್ವವನ್ನು ಪಡೆದುಕೊಂಡಿತು.

ಸ್ಯಾನ್ ಸಾಲ್ವಡರ್ ಚರ್ಚ್

ಕಾರವಾರ ಜಿಲ್ಲೆಯ ಹೊನ್ನಾವರದಲ್ಲಿ ನೆಲೆಸಿರುವ ಈ ಚರ್ಚ್ ಸುಮಾರು ೧೭ ನೇ ಶತಮಾನದಲ್ಲಿ ಕಟ್ಟಿಸಲಾಗಿದೆ.ಗೋವಾ ಪ್ರಾಂತಕ್ಕೆ ಸೇರಿದ್ದು, ಈ ಕಟ್ಟಡವು ನೆಲಸಮ ಹೋಂದಿ ಪ್ರತಿರೂಪದಂತೆ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಮರುನಿರ್ಮಾಣವಾಗಿ ಪ್ರಸ್ತುತ ಕಾರವಾರ ಜಿಲ್ಲೆಯಲ್ಲಿರುವ ಹಳೆಯ ದೇವಾಲಯಗಳಲ್ಲಿ ಇದು ಪ್ರಮುಖ.

ಧರ್ಮ ನಿಷ್ಠ ಚರ್ಚ್ ಆಫ್ ಅವರ್ ಲೇಡಿ

ಇದು ಕಾರವಾರದ ಕೋನ್‌ನಲ್ಲಿದ್ದು, ೧೮೪೩ ರಲ್ಲಿ ನಿರ್ಮಾಣಗೊಂಡಿರುವುದನ್ನು ಇತಿಹಾಸದಿಂದ ತಿಳಿದುಕೊಳ್ಳಬಹುದಾಗಿದೆ.

ಸೆಂಟ್ ಆಂಟನಿ ತಂದೆಯ ಚರ್ಚ್

ಕಾರವಾರ ಜಿಲ್ಲೆಯ ಶಿರಸಿ ತಾಲೂಕಿನ ಅದೆ ಪಟ್ಟಣದಲ್ಲಿ ನಿರ್ಮಿಸಿರುವ ಚರ್ಚ್‌ಗೆ ನೂರನಲ್ವತ್ತು ವರ್ಷಗಳ ಇತಿಹಾಸ ಇದೆ. ಹಾಗೆಯೇ ಹಳೆಯ ಗೋಡೆಗೆ ಮುಕ್ತಿಯನ್ನು ಕೊಟ್ಟು ಅಲ್ಪ ಬದಲಾವಣೆಮಾಡಿರುವುದನ್ನು ಕಾಣಬಹುದು. ಇದು ಸುಮಾರು ೧೮೬೬ರಲ್ಲಿ ನಿರ್ಮಾಣವಾಗಿದೆ.

ಇಮ್ಯಾಕ್ಯುಲೇಟ್ ಕಾನ್ಸೆಪ್ಷನ್ ಚರ್ಚ್ ಆಫ್ ಅವರ್ ಲೇಡಿ

ಕಾರವಾರ ಜಿಲ್ಲೆ ಸುಂಕೇರಿ ಗ್ರಾಮದಲ್ಲಿರುವ ಈ ಚರ್ಚ್‌ಗೆ ತುಂಬಾ ಹಿರಿದಾದ ಗೌರವಗಳು ಸಲ್ಲುತ್ತವೆ. ಕಾರಣ ಇದು ೧೭ ನೇ ಶತಮಾನದಲ್ಲಿ ರಚನೆಯಾಗಿದೆ. ಅಂದರೆ ೧೭೧೭ ರಲ್ಲಿ, ಇದು ಕೂಡ ಹಂತ ಹಂತವಾಗಿ ನಿರ್ಮಾಣವಾಗುತ್ತಾ ಬಂದಿದೆ. ಕರಾವಳಿ ಭಾಗಕ್ಕೆ ರಭಸದ ಅಲೆಯಂತೆ ಬಂದ ಟಿಪ್ಪುಸುಲ್ತಾನ್ ಎಲ್ಲಾ ಚರ್ಚ್‌ಗಳನ್ನು ನೆಲಸಮಮಾಡಿದ್ದು, ಅದರಲ್ಲಿ ಇದು ಒಂದು. ಮುಂದುವರೆದಂತೆ ಪ್ರತಿರೂಪವನ್ನು ಕಣ್ಣಿಗೊತ್ತಿಕೊಂಡಿದ್ದ ಪಾದ್ರಿಗಳು ಅದೇ ಶೈಲಿಯನ್ನು ರಚನೆಮಾಡಿರುವದನ್ನು ಪ್ರಸ್ತುತ ದಿನಗಳಲ್ಲಿ ಕಾಣಬಹುದಾಗಿದೆ.

ರೋಸರಿ ಚರ್ಚ್ ಆಫ್ ಅವರ್ ಲೇಡಿ

ತಾಲ್ಲೂಕು ಕೇಂದ್ರವಾದ ಯಲ್ಲಾಪುರದಲ್ಲಿ ಕಾಣಸಿಗುವ ಈ ದೇವಾಲಯವನ್ನು ೧೮೮೯ ರಲ್ಲಿ ಸ್ಥಾಪಿಸಲಾಗಿದೆ.

ಕರಾವಳಿಯ ಕ್ರೈಸ್ತರ ಇತಿಹಾಸವನ್ನು ನೋಡಿದಾಗ, ಸುಮಾರು ೧೪೧೫ನೇ ಶತವಮಾನಗಳಲ್ಲಿಯೆ ಪ್ರಚಲಿತದಲ್ಲಿದ್ದರು ಎಂಬ ಹಿರಿಯರ ಅಭಿಪ್ರಾಯವನ್ನು ಪರಿಣಗಣಿಸಬಹುದಾಗಿದೆ. ಕರಾವಳಿಯ ಕೇಂದ್ರವಾಗಿದ್ದ ಗೋವಾದಲ್ಲಿ ನೆಲೆಸಿದ್ದ ಅನೇಕ ಧರ್ಮ ಪ್ರಚಾರಕರು, ಪ್ರವರ್ತಕರು, ಪಾದ್ರಿಗಳು, ಪ್ಯಾರಿಷ್ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿ ಯಶಸ್ವಿಯಾಗಿದ್ದುಂಟು ಆದರೆ ಟಿಪ್ಪು ಸುಲ್ತಾನ ದರ್ಬಾರಿನಿಂದ ೧೭ನೇ ಶತಮಾನದಲ್ಲಿ ಕರಾವಳಿ ಭಾಗದಲ್ಲಿರುವ ಸುಮಾರು ಚರ್ಚ್‌ಗಳನ್ನು ನಾಶಪಡಿಸಿದ್ದಲ್ಲದೇ ಸಮುದಾಯದ ಅನೇಕರನ್ನು ಬಂಧಿಸಿಡಲಾಗಿತ್ತು (ಶ್ರೀರಂಗಪಟ್ಟಣ), ಸುಮಾರು ೨೦ ವರ್ಷಗಳ ಸೇರೆವಾಸ ಅನುಭವಿಸಿ ಬಿಡುಗಡೆಯಾದ ನಂತರ ಬಂದು ಹಾಳುಬಿದ್ದಿರುವ ಚರ್ಚ್, ಚಾಪೆಲ್‌ಗಳನ್ನು ಮರುನಿರ್ಮಾಣ ಮಾಡಿದರು ಎಂಬುದನ್ನು ಕಾಣಬಹುದು.

ಕರ್ನಾಟಕದ ಕರಾವಳಿ ಎಂದಾದ ಮೂರು ಪ್ರಮುಖ ಜಿಲ್ಲೆಗಳನ್ನು ಕಾಣಬಹುದು ಉತ್ತರ ಕನ್ನಡ, ದಕ್ಷಿಣ ಮತ್ತು ಉಡುಪಿ, ಈ ಮೂರು ಪ್ರೇಕ್ಷಣಿಯ ಸ್ಥಳವು ಹೌದು. ಇಲ್ಲಿ ಒಟ್ಟಾರೆ ಸುಮಾರು ಮೂನ್ನೂರಕ್ಕೂ ಹೆಚ್ಚು ಚರ್ಚುಗಳನ್ನೂ ಕಾಣಬಹುದಾಗಿದೆ. ಆದರೆ ಚಿತ್ರಕಲಾಕೃತಿಗಳನ್ನು ಹೊಂದಿರುವುದು ಕೆಲವೇ ಕೆಲವು ಚರ್ಚ್‌ಗಳು ಮಾತ್ರ. ಅಂತಹ ವಿಶೇಷವುಳ್ಳ ಚರ್ಚ್‌ಗಳನ್ನು ರಕ್ಷಿಸುವಲ್ಲಿ ಸಂಬಂಧಪಟ್ಟವರ ಪರಿಶ್ರಮ ಹಿರಿದಾದದ್ದಾಗಿದೆ.

* * *



ಭಕ್ತಿಯ ದ್ಯಾನದಲ್ಲಿರುವುದು



ಕ್ಯಾಥೊಡ್ರಲ್ ಚರ್ಚ್ ಮಂಗಳೂರು



ಮಿಲಾಗ್ರಿಸ್ ಚರ್ಚ್ ಮಂಗಳೂರು



ಅತ್ತೂರು ಚರ್ಚ್, ಕಾರ್ಕಳ



ಕ್ರೈಸ್ತ ದೇವಾಲಯ, ಕೆಮ್ಮಣ್ಣುಗುಂಡಿ



ಬೆಳ್ತಂಗಡಿ ಕ್ರೈಸ್ತ ದೇವಾಲಯ



ಸೆಂಟ್ ಅಲೋಶಿಯಸ್ ಚರ್ಚ್ ಮಂಗಳೂರು



ಕೊರ್ಡೆಲ್ ಕುಲಶೇಖರ ಮಂಗಳೂರು

ಅಧ್ಯಾಯ : ಮೂರು

ಕರಾವಳಿ ಕರ್ನಾಟಕದ ಕ್ರೈಸ್ತ ಭಿತ್ತಿ ಮಾಧ್ಯಮದ ಚಿತ್ರಗಳು

ಅಭಿವ್ಯಕ್ತಿ ಪ್ರಧಾನವಾದ ಚಿತ್ರಕಲೆಯನ್ನು ಎರಡು ರೀತಿಗಳಿಂದ ಪರಿಗಣಿಸಬೇಕಾಗುತ್ತದೆ. ಈಗಾಗಲೇ ರಚಿತವಾಗಿರುವ ಚಿತ್ರಕಲಾಕೃತಿಗಳನ್ನು ಇರಿಸಿ, ಅವುಗಳ ಮೂಲಕ ಅಲ್ಲಿಯ ಸಂಸ್ಕೃತಿಯನ್ನು ನೋಡುವುದು ಒಂದಾದರೆ ಒಂದು ಜನಾಂಗದ ಆಚರಣೆಯ ಸಂದರ್ಭದಲ್ಲಿ ರಚಿತವಾಗುವ ಕಲಾಕೃತಿಗಳಿಂದ ಅಲ್ಲಿಯ ಸಂಸ್ಕೃತಿಯನ್ನು ಪರಿಶೀಲಿಸುವುದು ಇನ್ನೊಂದು[೧] ಎಂಬಂತೆ ಸಾಮಾಜಿಕ ಜೀವನದಲ್ಲಿ ಆ ಸಂದರ್ಭದಲ್ಲಿ ಪರಿಸರದಲ್ಲಿ ನಡೆದಿರುವ ಘಟನೆಗಳನ್ನು ಚಿತ್ರಗಳ ಮೂಲಕ ತೋರಿಸುವುದು ಪ್ರಸ್ತುತ ಇಂದಿನ ಸಮಾಜಕ್ಕೆ ಅನಿವಾರ್ಯವಾಗಿದೆ.

ಸಂಸ್ಕೃತಿಯ ಮೂಲಕ ಪ್ರಕಟಗೊಳ್ಳುವ ಉತ್ಪಾದಿಸಲ್ಪಡುವ ಕಲೆಯ ಕುರಿತಾದ ಲೇಖನಗಳು, ವ್ಯಾಖ್ಯಾನಗಳು, ಚಿತ್ರಗಳು ವಿವಿಧ ರೀತಿಯಲ್ಲಿವೆ. ಮುಖ್ಯವಾಗಿ ಕಲೆ ಎಂದರೇನು? ಎಂಬ ಪ್ರಶ್ನೆ ಜೀವನಕ್ಕೆ ಸರಿಸಮಾನವಾಗಿದ್ದು, ಈ ನಿಟ್ಟಿನಲ್ಲಿ ಪಾಶ್ಚಾತ್ಯ ಮತ್ತು ಪೌರಾತ್ಯ ಕಲಾ ವಿದ್ವಾಂಸರು ಕಲೆಯ ಕುರಿತು ಅನೇಕ ವ್ಯಾಖ್ಯಾನಗಳನ್ನು ಕೊಡುತ್ತಾ ಬಂದಿದ್ದಾರೆ. ಆದರೆ ಅದೆಷ್ಟರಮಟ್ಟಿಗೆ ಸರಿ ಎಂಬ ಊಹಾ ಪ್ರಶ್ನೆಗೆ ಪ್ರತಿಯಾಗಿ ಉತ್ತರವನ್ನು ಹುಡುಕಬೇಕಾಗಿದೆ.

ಭಿತ್ತಿ ಚಿತ್ರವನ್ನು ಒಂದು ದೇಶ ಬದ್ಧ ಕಲೆ ಎಂದು ಗುರುತಿಸಲಾಗುತ್ತದೆ. ಅದರಂತೆಯೇ ಸಂಗೀತ ನಾಟಕಗಳನ್ನು ಕಾಲಬದ್ಧ ಎಂದೂ ಗುರುತಿಸುತ್ತೇವೆ.[೨] ಚಲನರಹಿತವಾದ ಕಾಲಬದ್ಧವಾದ ಕಲೆಗಿಂತ ಪ್ರಭಾವಿ ಎಂಬುದನ್ನು ಪ್ರಪಂಚದಲ್ಲಿ ಪ್ರಮುಖ ಚಿತ್ರನೆಲೆಗಳನ್ನು ಆಧರಿಸಿ ಹೇಳಬಹುದಾಗಿದೆ. ಗ್ರೀಕ್ ಕವಿ ಪ್ಲೋಟಾರ್ಕ್ ಅದಕ್ಕೆಂದೆ ಚಿತ್ರವನ್ನು ನಿಶ್ಶಬ್ಧವಾದ ಕವಿತೆ ಎಂದು ವರ್ಣಿಸುತ್ತಾನೆ. ಒಂದು ಚಿತ್ರ ಒಬ್ಬೊಬ್ಬ ನೋಡುಗನಿಗೆ ವೈವಿಧ್ಯಮಯ ಅನುಭವವನ್ನು ನೀಡಬಹುದಾದ ಸಾಧ್ಯತೆಗಳೇ ಹೆಚ್ಚು. ಅದರಲ್ಲೂ ಇತ್ತೀಚೆಗೆ ಆಧುನಿಕ ಚಿತ್ರಗಳ ಒಲವು ವಿಭಿನ್ನ ಅನುಭವಗಳನ್ನು ನೀಡುವಲ್ಲಿ ಮುಂಚೂಣಿಯಲ್ಲಿದ್ದು ನಮ್ಮ

೧. ಡಾ. ಅ.ಲ.ನರಸಿಂಹನ್ : ಅಲೇಖ್ಯ, ಪುಟ-೬
೨. ಚಿ.ಸು.ಕೃಷ್ಣಶೆಟ್ಟಿ : ಚಿತ್ರ: ಚಿತ್ತ, ಪುಟ-೫೩

ಪ್ರಾಚೀನ ಚಿತ್ರಕಲೆಯ ಸ್ವರೂಪ ಇಂದು ಇಲ್ಲದಿದ್ದರೂ ಸಾಂಪ್ರದಾಯಿಕ ಸಂದರ್ಭದಲ್ಲಿ ಪ್ರಾಚೀನ ಕಲಾ ಶೈಲಿಯನ್ನು ಇಂದಿನ ಆಧುನಿಕ ಸಂದರ್ಭದಲ್ಲಿಯೂ ಆಗಾಗ ಪುನರಾವರ್ತಿಸಿಕೊಳ್ಳುತ್ತವೆ. ಅದು ಹೇಗೆಂದರೆ ನಮ್ಮ ನಡುವಿನ ಆಧುನಿಕೊತ್ತರ ಕಲಾ ಚಳುವಳಿಯಲ್ಲಿ ಪ್ರಕಟಗೊಳ್ಳುತ್ತಿರುವ ಚಿತ್ರಗಳಲ್ಲಿ ಪ್ರಾಚೀನ ಎನ್ನುವಂತಹ ಸಾಂಪ್ರದಾಯಿಕ ರೂಪಾಂಶಗಳು ವಿಕೃತತೆಯ ರೂಪದಲ್ಲಿ ಆಧುನಿಕ ಸಂವೇದನೆಗಳನ್ನು ಹೊತ್ತು ಬರುತ್ತಿರುವುದನ್ನು[೩] ಪ್ರಸ್ತುತ ಸಂದರ್ಭದಲ್ಲಿ ಕಾಣಬಹುದಾಗಿದೆ.

ಭಾರತೀಯ ಚಿತ್ರಕಲೆಯಲ್ಲಿ ಪ್ರಧಾನವಾದ ಎರಡು ಭಾಗಗಳನ್ನು ಮಾಡಬಹುದು. ಭಿತ್ತಿಚಿತ್ರಗಳು ಮತ್ತು ಚಿಕ್ಕ ಪ್ರತಿಯ ಚಿತ್ರಗಳು ಅಥವಾ ಪ್ರತಿ ಚಿತ್ರಗಳು ಎಂದು ಇವನ್ನು ಕರೆಯಬಹುದು. ನಮಗೆ ದೊರೆತಿರುವ ಪ್ರಾಚೀನ ಚಿತ್ರಗಳೆಲ್ಲಾ ಮುಖ್ಯವಾಗಿ ಭಿತ್ತಿಚಿತ್ರಗಳೇ ಅಜಂತಾ, ಎಲ್ಲೋರಾ, ಬದಾಮಿ ಗುಹೆಗಳ ಚಿತ್ರಗಳು, ವಿಜಯ ನಗರ, ಲೇಪಾಕ್ಷಿ ಮೊದಲಾದ ಕಡೆಗಳಲ್ಲಿ ಭಿತ್ತಿಚಿತ್ರಗಳನ್ನು ಕಾಣಬಹುದು. ಇವೆಲ್ಲವು ಇತಿಹಾಸದಿಂದ ಕಂಡಂತಹ ಪ್ರಾಚೀನ ಚಿತ್ರಗಳೆಂದೇ ಕರೆಯಬಹುದು. ಹಾಗೆಯೇ ಮುಂದುವರೆ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಕ್ರೈಸ್ತ ಧರ್ಮದ ಚರ್ಚ್‌ಗಳಲ್ಲಿ ವಿವಿಧ ರೀತಿಯ ಚಿತ್ರಕಲೆಗಳನ್ನು ರಚಿಸಲು ಪ್ರಾರಂಭಿಸಿದರು. ಮುಖ್ಯವಾದ ಕೆಲವು ಹಿರಿಯ ಚರ್ಚ್‌ಗಳಲ್ಲಿ ಇಟಾಲಿಯನ್ ಶೈಲಿಯ ಗೋಡೆವರ್ಣ ಚಿತ್ರವನ್ನು ರಚಿಸಲಾಗಿದ್ದು, ಅವು ೧೯೪೦ರ ನಂತರ ಜೊತೆಗೆ ಸಂಯೋಜನಾ ಚಿತ್ರಗಳು, ಬಟ್ಟೆಮಾಧ್ಯಮದ ಚಿತ್ರಗಳನ್ನು ರಚನೆಮಾಡಿದ್ದಾರೆ. ಪ್ರಮುಖವಾಗಿ ಭಿತ್ತಿ ಚಿತ್ರಗಳಲ್ಲಿ ಎರಡು ರೀತಿಯದ್ದಾಗಿ ಪರಿಗಣಿಸಿದೆ. ಅದು ಹದಿನೈದನೇಯ ಶತಮಾನದ ಹಿಂದಿನ ದಿನಮಾನಗಳಲ್ಲಿ ಭಿತ್ತಿ ಚಿತ್ರಗಳನ್ನು ಗೋಡೆಯ ಮೇಲೆ ರಚಿಸುತ್ತಿದ್ದರು. ಆದರೆ ಸಿಮೆಂಟ್ ಮಾಡಿದ ಹಸಿಗೋಡೆಯ ಮೇಲೆ ರೇಖೆಗಳನ್ನು ಗುರುತಿಸಿ, ನಂತರದಲ್ಲಿ ಬಣ್ಣವನ್ನು ತುಂಬುತ್ತಿದ್ದರು. ಹಾಗೆಯೇ ಒಣಗಿದ ಗಾರೆಯ ಗೋಡೆಯ ಮೇಲೆ ರೇಖೆಗಳನ್ನು ಮೊದಲು ಚಿತ್ರಿಸಿ ನಂತರ ಪೌಡರನ್ನು ಹಾಕಿ ಬಣ್ಣಗಳಿಂದ ಪೂರ್ಣಗೊಳಿಸುತ್ತಿದ್ದರು.

೧೯ನೇ ಶತಮಾನದ ಕೊನೆಯ ಭಾಗದಲ್ಲಿ ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಅನೇಕ ಕ್ರೈಸ್ತ ಧರ್ಮದ ದೇವಾಲಯಗಳಲ್ಲಿ ಭಿತ್ತಿ (ಗೋಡೆ)ಯ ಮೇಲೆ ತೈಲವರ್ಣದಿಂದ ಚಿತ್ರವನ್ನು ರಚನೆಮಾಡಲಾಗಿದೆ. ಇಂದಿಗೂ ಸೆಂಟ್ ಅಲೋಷಿಯಸ್ ಚರ್ಚ್, ಕುಲಶೇಖರ ಚರ್ಚ್, ಕೇಥಡ್ರಲ್, ಸೆಂಟ್ ಥಾಮಸ್ ಚರ್ಚ್ ಹೋಲಿಕ್ರಾಸ್ ಚರ್ಚ್, ದಿ ಅವರ್ ಲೇಡಿ ಆಫ್ ಚರ್ಚ್, ಸೆಂಟ್ ಪೀಟರ್ಸ್ ಚರ್ಚ್, ರೋಸರಿ ದಿ. ಅವರ್ ಲೇಡಿ ಆಫ್ ಚರ್ಚ್ ಮಂಗಳೂರು, ಹಾಗೂ ಕಾರವಾರ ಜಿಲ್ಲೆಯ

೩. ಡಾ. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೭೬

ಸುತ್ತಮುತ್ತ ಅನೇಕ ಚರ್ಚ್‌ಗಳಿದ್ದರೂ ಕೆಲವೇ ಕೆಲವು ಕ್ರೈಸ್ತ ದೇವಾಲಯಗಳಲ್ಲಿ ಮಾತ್ರ ಭಿತ್ತಿ (ಗೋಡೆ)ಯ ಮೇಲೆ ರಚಿಸಿರುವ ಚಿತ್ರ ಕೃತಿಗಳನ್ನು ಕಾಣಬಹುದಾಗಿದೆ.

ಕ್ರೈಸ್ತ ಧರ್ಮದ ಆದ್ಯಪ್ರವರ್ತಕನಿಂದ ಯೇಸುವಿನ ಕುರಿತು ಅನೇಕ ಚಿತ್ರ ಕೃತಿಗಳನ್ನು ರಚನೆಮಾಡಲಾಗಿದೆ. ಹಾಗೆಯೇ ದೇವಮಾನವರು, ಪಾದ್ರಿಗಳು, ಹನ್ನೆರಡು ಮಂದಿ ಶಿಷ್ಯಂದಿರರು, ದೇವಾಲಯಕ್ಕೆ ಸಹಾಯ ನೀಡಿದವುರು, ಕಂಬಗಳಲ್ಲಿ ಭಿತ್ತಿಚಿತ್ರ, ಚಿತ್ರವಿನ್ಯಾಸಗಳು ಹೀಗೆ ವಿವಿಧ ಆಯಾಮಗಳಲ್ಲಿ ಭಿತ್ತಿ ಚಿತ್ರಗಳನ್ನು ರಚನೆ ಮಾಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಕರಾವಳಿ ಭಾಗಕ್ಕೆ ಇಟಲಿಯ ಪ್ರಸಿದ್ಧ ಕಲಾವಿದ ಆಂಟೋನಿಯಾ ಮಾಶ್ಚಿನಿಯು ೧೮೯೯ರಲ್ಲಿ ಬಂದು ಭಿತ್ತಿಚಿತ್ರ, ತೈಲಚಿತ್ರ ಹೀಗೆ ವಿವಿಧ ಆಯಾಮಗಳಲ್ಲಿ ಕಾಲಿಗೋಡೆಗೆ ಧರ್ಮದ ಪ್ರಚಾರಮಾಡುವ ಉದ್ದೇಶದಿಂದ ಕಲಾ ಕೃತಿಗಳನ್ನು ರಚನೆಮಾಡಿದನು. ಅವು ಇಂದಿಗೂ ಅಚ್ಚಳಿಯದೆ ಉಳಿದಿವೆ.

ಗೋಡೆಯ ಮೇಲೆ ಸುಣ್ಣವನ್ನು ಲೇಪಿಸಿ, ಸುಣ್ಣವು ಇನ್ನೂ ಹಸಿಯಾಗಿರುವಾಗಲೇ ಚಿತ್ರವನ್ನು ಸಂಪೂರ್ಣವಾಗಿ ಚಿತ್ರಿತವಾಗಿರುವಂತೆ ಪ್ರೇಸ್ಕೋ ಪದ್ಧತಿಯ ವೈಶಿಷ್ಟವಾಗಿದೆ. ಸುಣ್ಣವು ಒಣಗಿದ ನಂತರ ಅದರೊಂದಿಗೆ ಚಿತ್ರವು ಗಟ್ಟಿಗೊಂಡು ಶಾಶ್ವತವಾಗಿ ಉಳಿಯುತ್ತದೆ. ಪುನರುತ್ಥಾನ ಕಾಲದಲ್ಲಿ ಗೋಡೆಗಳ ಮೇಲೆ ಚಿತ್ರಿಸಲ್ಪಟ್ಟ ಅನೇಕ ಪ್ರೇಸ್ಕೊ ಚಿತ್ರಗಳು ಉತ್ಕೃಷ್ಟ ಕಲಾಕೃತಿಗಳಾಗಿರುತ್ತವೆ. ಇದರ ಜೊತೆಗೆ ಗೋಡೆಗಳಿಗೆ ಬಣ್ಣ ಹಚ್ಚುವ ವಿಧಾನಗಳು ಅನೇಕ ತೈಲವರ್ಣ ಮತ್ತು ಮೇಣದ ವರ್ಣಗಳನ್ನು ಸಹ ಬಳಸಬಹುದೆಂಬುದಕ್ಕೆ ಸಾಕ್ಷಿ ವೆನಿಸ್ ಮತ್ತು ಇತರೆ ಅನೇಕ ಕಡೆಗಳಲ್ಲಿ ಬಟ್ಟೆಯ ಮೇಲೆ ಚಿತ್ರಿಸಿ ನಂತರ ಗೋಡೆ ಇಲ್ಲವೆ ಒಳಮಾಳಿಗೆಯಲ್ಲಿ ಅಂಟಿಸಿರುವುದು ಕಂಡುಬರುತ್ತದೆ. ಸುಣ್ಣವು ಹಸಿಯಾಗಿರುವಾಗಲೇ ಚಿತ್ರಿಕರಣ ಕಾರ್ಯವು ಮುಗಿಯಲೇ ಬೇಕಾಗಿರುವುದರಿಂದ ಈ ಪದ್ದತಿಯು ತುಂಬಾ ಕಠಿಣವಾಗಿದ್ದು, ಚಿತ್ರಣ ಕಾರ್ಯವು ಸಾಧ್ಯವಾಗುವ ಮಟ್ಟಿಗೆ ಗೋಡೆಯ ಮೇಲೆ ಸುಣ್ಣವನ್ನು ಲೇಪಿಸಿ ಅದರ ಮೇಲೆ ತೈಲವರ್ಣದಿಂದ ಚಿತ್ರರಚನೆ ಮಾಡಬಹುದಾಗಿದೆ.

ಸುಣ್ಣದ ಲೇಪನವು ಹಸಿಯಾಗಿರಬೇಕಾದುದು ಅಗತ್ಯವಾಗಿದೆ. ಒಂದು ಬಾರಿ ಲೇಪಿಸಿದ ಬಣ್ಣವನ್ನು ತಿದ್ದುಪಡಿ ಮಾಡಲು ಸಾಧ್ಯವಿಲ್ಲ, ಅಲ್ಲದೇ ಬಣ್ಣವು ಒಣಗಿದ ಬಳಿಕ ಬಣ್ಣದ ರೂಪು ಬದಲಾವಣೆಗೊಳ್ಳುವುದರಿಂದ ಸರಿಯಾದ ಬಣ್ಣವನ್ನು ತಯಾರಿಸಿಕೊಳ್ಳುವಲ್ಲಿ ಕಲಾವಿದನಿಗೆ ಅಸಾಮಾನ್ಯ ಜ್ಞಾನದ ಜೊತೆಗೆ ಜಾಣ್ಮೆ ಇರಬೇಕಾಗಿರುವುದು ಅತ್ಯವಶ್ಯಕ.

ನೇರವಾದ ಗೋಡೆಯ ಮೇಲೆ ಚಿತ್ರದ ಬಾಹ್ಯ ರೇಖೆಗಳನ್ನು ಎಳೆಯಲು ಸಾಧ್ಯವಿಲ್ಲದಿರುವುದರಿಂದ ಇಟಾಲಿಯನ್ ಪ್ರೇಸ್ಕೋ ಕಲಾವಿದರು ಇಡೀ ಗೋಡೆಯ ಮೇಲೆ ಚಿತ್ರಿಸಲಿರುವ ಸಂಪೂರ್ಣ ಚಿತ್ರದ ಬಾಹ್ಯ ರೇಖೆಗಳನ್ನು ದೊಡ್ಡದಾದ ಗೋಡೆಯನ್ನಾವರಿಸುವಷ್ಟು

ಕಾಗದದ ಮೇಲೆ ಚಿತ್ರಿಸಿ ನಂತರ ಬಾಹ್ಯ ರೇಖೆಯನ್ನು ಗುಂಡುಪಿನ್ ಇಲ್ಲವೇ ಮೊಣಚಾದ ಮೊಲೆಯಿಂದ ಸಣ್ಣ ಸಣ್ಣ ರಂದ್ರಗಳನ್ನು ಮಾಡಿಕೊಂಡು ಇಲ್ಲವೇ ಗೆರೆಗಳನ್ನು ಎಳೆದುಕೊಂಡು ಕಾಗದವನ್ನು ಗೋಡೆಗೆ ಅಂಟಿಸಿ ಚಿತ್ರದ ಬಾಹ್ಯ ರೇಖೆಗಳನ್ನು ಹಸಿ ಸುಣ್ಣದ ಲೇಪನದ ಮೇಲೆ ಮೂಡಿಸಿಕೊಂಡು ಚಿತ್ರಣಕಾರ್ಯವನ್ನು ಮುಂದುವರಿಸುತ್ತಿದ್ದರು. ಹೀಗೆ ಕಾಗದದ ಮೇಲೆ ಚಿತ್ರಿಸಿಕೊಳ್ಳುವುದಕ್ಕೆ ಕಾರ್ಟೂನ್ ಎಂದು ಕರೆಯಲಾಗುತ್ತಿತ್ತು. ಸುಣ್ಣವು ಒಣಗಿದ ನಂತರ ಟೆಂಪರಾ ವಿಧಾನದಿಂದ ಚಿತ್ರಕ್ಕೆ ಮುಕ್ತಿಕೊಡಲಾಗುತ್ತಿತ್ತು.

ದೈತ್ಯ ಫ್ರೆಸ್ಕೊ ಕಲಾವಿದರು ಟೆಂಪರಾ ವಿಧಾನದಿಂದ ಚಿತ್ರವನ್ನು ಮುಕ್ತಾಯಗೊಳಿಸಿದ್ದಲ್ಲಿ ನೈಜ ಫ್ರೆಸ್ಕೋ ವಿಧಾನದಂತೆ ಚಿತ್ರವು ಶಾಶ್ವತವಾಗಲಾರದೆಂದು ಸಾಧ್ಯವಾದ ಮಟ್ಟಿಗೆ ಫ್ರೇಸ್ಕೋ ವಿಧಾನದಲ್ಲಿಯೇ ಚಿತ್ರಗಳಿಗೆ ಮುಕ್ತಾಯ ಸ್ಪರ್ಶಗಳನ್ನು ಕೊಡುತ್ತಿದ್ದರು. ಟೆಂಪರಾ ಮತ್ತು ಫ್ರೇಸ್ಕೋ ವಿಧಾನಗಳೆರಡರಲ್ಲೂ ಸರಿ ಮತ್ತು ತಪ್ಪುಗಳು ಸರಿಸಮವಾಗಿವೆ. ಈ ಎರಡು ವಿಧಾನಗಳಲ್ಲಿಯೂ ತೈಲವರ್ಣಛಾಯೇ ದಟ್ಟ ಮುಸುಕಿನ ಪರಿಣಾಮಗಳು ಚಿತ್ರಣ ಕಷ್ಟ ಸಾಧ್ಯವಾಗಿದೆ. ಫ್ಲೋರಂಟಾಯಿಸ್ ಪಂಥವು ಟೆಂಪರಾ ವಿಧಾನದಲ್ಲಿ ಅದ್ಭುತ ಬೆಳವಣಿಗೆಯನ್ನು ತೋರಿಸಿದಂತೆ ಫ್ರೇಸ್ಕೊ ವಿಧಾನದಲ್ಲಿ ಅದ್ಭುತವಾದ ಸಾಧನೆಯನ್ನು ತೋರಿಸಿದೆ. ವೇನಿಷಿಯನ್ ಪಂಥವು ತೈಲವರ್ಣ ವಿಧಾನವನ್ನು ಧಾರಾಳವಾಗಿ ಬಳಸಿದಂತೆ ಟೆಂಪರಾ ಇಲ್ಲವೇ ಫ್ರೇಸ್ಕೊ ಪದ್ಧತಿಯನ್ನು ಬಳಸಲು ಉತ್ಸುಕವಾಗಿರಲಿಲ್ಲ. ಉತ್ತರ ಯುರೋಪಿ ನಂತಹ ತಂಪು ವಾತವಾರಣವಿರುವ ದೇಶಗಳಲ್ಲಿ ಫ್ರೇಸ್ಕೊ ಪದ್ಧತಿಯನ್ನು ಹೆಚ್ಚಾಗಿ ಬಲಸಿಲ್ಲ.

೧೫ ಮತ್ತು ೧೬ನೇಯ ಶತಮಾನಗಳಲ್ಲಿ ಟೆಂಪರಾ ಮತ್ತು ಫ್ರೇಸ್ಕೊ ವಿಧಾಗಳು ಇಟಲಿಯಲ್ಲಿ ಪರಿಶುದ್ಧ ರೂಪಕ್ಕೆ ತಲುಪಿದವು. ಅದರಲ್ಲೂ ಫ್ಲೋರಂಟಾಯಿಸ್ ವರ್ಣಚಿತ್ರ ಕಲಾಕೃತಿಗಳು ಈ ವಿಧಾನಗಳನ್ನು ಚಿತ್ರಿಸಿದ ಅಸಾಮಾನ್ಯ ಕೃತಿಗಳೆಂದು ಪರಿಗಣಿಸಲ್ಪಟ್ಟಿವೆ. ಭಾರತದಲ್ಲಿ ಫ್ರೇಸ್ಕೊ ವಿಧಾನವು ಕ್ರಿ.ಪೂ. ೧ನೇಯ ಶತಮಾನದಿಂದಲೂ ಬಳಕೆಯಲ್ಲಿತ್ತು ಎಂಬುದಕ್ಕೆ ಅಜಂತಾ, ಎಲ್ಲೋರಾ, ನಾಸಿಕ್‌ಬಾಗ್, ಸಿಗೇರಿಯ ಮುಂತಾದ ಕಡೆಗಳಲ್ಲಿಯೂ ಭಿತ್ತಿ ಚಿತ್ರಗಳು ಕಂಡುಬರುತ್ತವೆ.

ಕರಾವಳಿ ಕರ್ನಾಟಕದ ಮುಖ್ಯ ಚರ್ಚ್‌ಗಳಲ್ಲಿ ಮಾತ್ರ ಭಿತ್ತಿಚಿತ್ರಗಳನ್ನು ಕಾಣಬಹುದಾಗಿದ್ದು, ಎರಡು ಬಗೆಯಿಂದ ಕಾಣಬಹುದು. ಒಂದು ಪತ್ರಲೇಖನ ಇನ್ನೊಂದು ಬಟ್ಟೆಯ ಮೇಲೆ ಇಲ್ಲಿ ರಚನೆಮಾಡಿದ ಭಿತ್ತಿಚಿತ್ರವನ್ನು ಹಸಿಯಾದ ಸುಣ್ಣವನ್ನು ಬಳಸಿ ಗೋಡೆಯ ಮೇಲೆ ಬರೆಯಲಾಗಿದೆ. ಅವು ಒಣಗಿದ ನಂತರ ಚಿತ್ರಕೃತಿಯು ಹೊಳಪಾಗಿ ಕಾಣುವುದು, ಮಂಗಳೂರಿನ ಸೆಂಟ್ ಅಲಾಯಿಸಿಸ್ ಚರ್ಚ್ ಒಂದರಲ್ಲಿಯೇ ೬೦೦ ಸ್ಕೇರ್ ಮೀಟರ್‌ನಷ್ಟು ಭಿತ್ತಿ ಚಿತ್ರವಿರುವುದನ್ನು ಕಾಣಬಹುದು. ಇವನ್ನು ತೈಲವರ್ಣದಲ್ಲಿ ವರ್ಣದ್ರವ್ಯ ಮತ್ತು ಅಗಸೆ ಬೀಜದಿಂದ ಬಂದಂತಹ ಎಣ್ಣೆಯನ್ನು ಕೂಡಿಸಿ ಬರೆಯಲಾಗಿದೆ.

ಭಿತ್ತಿ ತಯಾರಿಕೆ ಮತ್ತು ರಚನಾ ಕ್ರಮ

ಭಿತ್ತಿ ಇದು ಚಿತ್ರ ರಚಿಸುವ ಆಧಾರದ ಮೇಲೆ ಲೆಪಿಸುವ ಮಿಶ್ರಣದ ಪದರವಾಗಿದೆ. ಭಾರತೀಯ ಶಿಲ್ಪಶಾಸ್ತ್ರಗಳು ಭಿತ್ತಿ, ಭೂಮಿ, ಕುಡ್ಯ ಎಂಬ ಹೆಸರುಗಳಿಂದ ಈ ಮಿಶ್ರಣ ಲೇಪನದ ಪದರನ್ನು ಹೆಸರಿಸಿವೆ. ವಿವಿಧ ವಸ್ತಗಳನ್ನು ಉಪಯೋಗಿ ಭಿತ್ತಿಯನ್ನು ನಿರ್ಮಿಸಲಾಗುತ್ತದೆ. ಬೇರೆ ಬೇರೆ ಪ್ರಕಾರದ ಭಿತ್ತಿಗಳನ್ನು ಸಿದ್ಧಗೊಳಿಸಲಾಗುತ್ತದೆ. ಎಂಬ ವಿವರಗಳು ದೊರೆಯುತ್ತವೆ. ಭಾರತೀಯ ಭಿತ್ತಿಚಿತ್ರ ಇತಿಹಾಸದಲ್ಲಿ ಪ್ರಮುಖವಾಗಿ ಎರಡು ಪ್ರಕಾರದ ಭಿತ್ತಿಚಿತ್ರಗಳನ್ನು ಗುರುತಿಸಬಹುದು.

೧. ಮಣ್ಣಿನ ಭಿತ್ತಿ

೨. ಗಾರೆಭಿತ್ತಿ

ಮಣ್ಣಿನ ಭಿತ್ತಿ :

ಮಣ್ಣಿನ ಭಿತ್ತಿ ರಚಿಸುವ ವಿಧಾನವು ಇಜಿಪ್ತನಲ್ಲಿ ಕ್ರಿ.ಪೂ. ೩೫೦೦ ಲರ್ಷಗಳಿಗೂ ಪೂರ್ವದಲ್ಲಿ ಬಳೆಯಲ್ಲಿತ್ತು. ಭಾರತದಲ್ಲಿ ಪ್ರಾಚೀನ ಮತ್ತು ಕೆಲವು ಮಧ್ಯಯುಗದ ಭಿತ್ತಿಚಿತ್ರಗಳಲ್ಲಿ ಈ ವಿಧಾನವು ಬಳಕೆಗೊಂಡಿದೆ. ಮಣ್ಣಿನ ಭಿತ್ತಿ ರಚಿಸುವ ವಿಧಾನವು ಕ್ರಿ.ಶ. ೬ನೆಯ ಶತಮಾನದವರೆಗೂ ಹೆಚ್ಚಾಗಿ ಬಳಕೆಯಲ್ಲಿತ್ತು. ಮಣ್ಣಿನ ಭಿತ್ತಿ ನಿರ್ಮಾಣ ಮೂರು ವಿಧದ ಮಣ್ಣು ಉಪಯೋಗಿಸಬಹುದೆಂದು ಕಾಶ್ಯಪ ಶಿಲ್ಪಶಾಸ್ತ್ರ ಹೇಳುತ್ತದೆ. ಮಣ್ಣಿನ ಭಿತ್ತಿಯು ಒಂದರಮೇಲೊಂದರಂತೆ ಹಲವಾರು ಪದರುಗಳನ್ನು ಹೊಂದಿರುತ್ತದೆ. ತೀರ ಮೇಲಿನ ಪದರು ಅತೀ ತೆಳುವಾಗಿ ನಿರ್ಮಿಸಲಾಗುತ್ತದೆ. ಗೋಡೆಗೆ ಮೆತ್ತಿದ ಮಣ್ಣಿನ ಭಿತ್ತಿಯು ಬಿರುಕು ಬೀಳದಂತೆ, ಕಳಚದಂತೆ ಮಣ್ಣಿನಲ್ಲಿ ಒಣಹುಲ್ಲು, ಹೊಟ್ಟು, ಕೂದಲುಗಳಂತಹ ನಾರು ಪದಾರ್ಥಗಳನ್ನು ಸೇರಿಸಲಾಗುತ್ತದೆ. ಆಕಳ ಸಗಣಿಯನ್ನು ಈ ಮಿಶ್ರಣಕ್ಕೆ ಸೇರಿಸಲಾಗುತ್ತದೆ. ಸಗಣಿ ಸೇರಿದಾಗ ಭಿತ್ತಿಯ ಮಿಶ್ರಣದ ಮೃದುತನ ಹೆಚ್ಚಾಗುತ್ತದೆ. ಇದರಿಂದ ಭಿತ್ತಿಯು ಕೀಟಗಳ ಹಾವಳಿಗೆ ಒಳಗಾಗುತ್ತವೆ. ಅಲ್ಲದೇ ಸಗಣಿಯು ಬಹುಬೇಗ ಶಕ್ತಿಹೀನವಾಗುತ್ತದೆ. ಎಂಬ ವಿವರಗಳು ಮಣ್ಣಿನ ಭಿತ್ತಿಯ ಅಲ್ಪಾಯುಷ್ಯವನ್ನು ತಿಳಿಸುತ್ತವೆ.

ಮಣ್ಣಿನ ಭಿತ್ತಿಯು ಅಜಂತಾ, ಬಾಗ್, ಸಿತ್‌ನಿವಾಸಲ್‌ಗಳಲ್ಲಿ ಕಂಡುಬರುತ್ತದೆ. ಉತ್ತರಕರ್ನಾಟಕದಲ್ಲಿ ಬೆಳಗಾವಿ ಜಿಲ್ಲೆಯ ರಾಜವಾಡೆ, ಅಥಣಿಯ ಗಚ್ಚಿನಮಠ, ಹಳೆಯವಾಡೆ, ಗುಲ್ಬರ್ಗಾ ಜಿಲ್ಲೆಯ ಸುರಪೂರದ ಅಣ್ಣಯ್ಯನಮಠ, ಬಾಗಲಕೋಟ ಜಿಲ್ಲೆಯ ಗುಳ್ಳೇದಗುಡ್ಡದ ಹೊಸಮನಿ ರಚನೆಗಳಲ್ಲಿ ಮಣ್ಣಿನ ಭಿತ್ತಿ ರಚಿಸಿದ್ದು ಕಂಡುಬರುತ್ತದೆ. ಜೊತೆಗೆ ಕರಾವಳಿ ಭಾಗದಲ್ಲಿ ಕೆಲವೇ ಕೆಲವು ಕಡೆ ಗೋಡೆ ಮೇಲೆ ರಚಿತವಾಗಿರುವ ಚಿತ್ರಗಳನ್ನು ಕಾಣಬಹುದು.

ಗಾರೆಭಿತ್ತಿ

ಗಾರೆಭಿತ್ತಿ ರಚನೆಯಲ್ಲಿ ಸುಣ್ಣವು ಪ್ರಮುಖವಾದ ವಸ್ತು. ಅದರ ಜೊತೆಗೆ ಉಸುಕು, ಕಲ್ಲಿನ ಪುಡಿ, ವಜ್ರಸರಿ, ಇವುಗಳನ್ನು ಉಪಯೋಗಿಸಲಾಗುತ್ತದೆ. ಹಾಗೆಯೆ ಇದರ ಜೊತೆಗೆ ಸೇರಿಸುವ ಪೂರಕ ವಸ್ತಗಳಲ್ಲಿ ಲೋಳೆರಸ ಎಂಬ ಸಸ್ಯದ ರಸ, ಬೆಲ್ಲ, ಬೇವಿನಕಾಯಿ ಅಂಟು ಹೀಗೆ ವಿವಿಧ ರೀತಿಯಲ್ಲಿ ಇರುತ್ತವೆ. ಮಧ್ಯಯುಗದ ಹೊತ್ತಿಗೆ ಭಾರತದಲ್ಲಿ ಮಣ್ಣಿನ ಭಿತ್ತಿರಚನೆಯು ಕಡಿಮೆಯಾಗಿ ಗಾರೆಯ ಭಿತ್ತಿ ರಚನೆಯು ಹೆಚ್ಚಾಯಿತು, ಎಂಬ ಅಭಿಪ್ರಾಯವಿದೆ. ಭಾರತದಲ್ಲಿ ಆಗ್ರಾದಲ್ಲಿನ ಮೊಗಲ್ ಕಟ್ಟಡಗಳಲ್ಲಿ ದೆಹಲಿಯ ಅರಬ್-ಕೀ-ಸರಾಯ್ ಕಟ್ಟಡದಲ್ಲಿನ ಭಿತ್ತಿಚಿತ್ರಗಳು ಗಾರೆಯ ಭಿತ್ತಿಯ ಮೇಲೆ ರಚನೆಯಾಗಿವೆ. ಎಂಬ ಅಭಿಪ್ರಾಯವಿತ್ತು. ಉತ್ತರ ಕರ್ನಾಟಕದಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯ, ಕನಕಗಿರಿಯ ಕನಕಾಚಲಪತಿ ದೇವಲಾಯ, ಬಿಜಾಪುದ ಅರಸ್ ಮಹಲ್, ಕುಮನಗಿರಿಯ ನೀರಿನಕೊಳ, ಗುಲಬರ್ಗಾದ ಬಂದೇ ನವಾಜ್ ದರ್ಗಾ, ಬೀದರನ ರಂಗಿನ ಮಹಲ್ ಅಸ್ತೂರಿ ಬಹಾಮಿ ಸಮಾಧಿಗಳ ಭಿತ್ತಿಚಿತ್ರಗಳು ಮತ್ತು ಪ್ರಸ್ತುತ ಅಧ್ಯಯನಕ್ಕೆ ಎತ್ತಿಕೊಂಡಿರುವ ಕರಾವಳಿ ಕರ್ನಾಟಕದ ಚರ್ಚ್‌ಗಳಲ್ಲಿನ ಚಿತ್ರಗಳು ಗಾರೆ ಭಿತ್ತಿಯ ಮೇಲೆ ತೈಲವರ್ಣದಿಂದ ರಚನೆಯಾಗಿವೆ.

ಮುಖ್ಯವಾಗಿ ಜಿಪ್‌ಸಮ್ ಇಲ್ಲವೇ ಮಾರ್ಬಲ್ ಕಲ್ಲಿನ ಪುಡಿಯನ್ನು ಭಿತ್ತಿಯ ರಚನೆಗಾಗಿ ಬಳಸಿದ್ದರೂ ಅದರು ಜೊತೆಗೆ ಸೂಕ್ಷಮವಾದ ಮರಳು, ಅಂಟುದ್ರಾವಕ, ಕಲ್ಲಿನ ಪುಡಿ ಹೀಗೆ ವಿವಿಧ ಪೂರಕ ವಸ್ತುಗಳನ್ನು ಸೇರಿಸಿರುವುದು ಕಂಡುಬರುತ್ತದೆ. ಮಾನಸೋಲ್ಲಾಸ ಗ್ರಂಥವು ಈ ರೀತಿಯ ಭಿತ್ತಿ ನಿರ್ಮಾಣವನ್ನು ಹೇಳಿದ್ದು, ಚಂದ್ರನ ಹಾಗೆ ಹೊಳೆಯುವ ನೀಲಗಿರಿ ಬೆಟ್ಟದಲ್ಲಿ ಮಾತ್ರ ದೊರೆಯುವ ಬಿಲಿದಾದ ಕಲ್ಲಿನ ಪುಡಿಯುನ್ನು ಉಪಯೋಗಿಸಬೇಕೆಂದು ತಿಳಿಸುತ್ತದೆ. ಗಾರೆಯ ಭಿತ್ತಿ ಮತ್ತು ಮಾರ್ಬಲ್ ಕಲ್ಲಿನ ಪುಡಿಯ ಭಿತ್ತಿ ತಯಾರಿಕೆಯ ವಿಧಾನಗಳ ಸಾಮಾನ್ಯವಾಗಿ ಒಂದೇ ರೀತಿಯಾಗಿ ಇರುತ್ತವೆ ಎನ್ನಲಾಗಿದೆ.

ಭಿತ್ತಿ ಸಿದ್ಧತಾ ಹಂತಗಳು :

ಭಿತ್ತಿ ಸಿದ್ಧತೆಗೊಳಿಸುವ ಕ್ರಿಯೆ ಒಂದೇ ಹಂತದಲ್ಲಿ ಪೂರ್ಣಗೊಳ್ಳದೆ ಆಧಾರ ಸಂಸ್ಕರಣೆಗೊಳಿಸುವುದರಿಂದ ತೊಡಗಿ ಚಿತ್ರರಚನೆಗಾಗಿ ಭಿತ್ತಿಯನ್ನು ಸಜ್ಜುಗೊಳಿಸುವವರೆಗೆ ಅನೇಕ ಹಂತಗಳಲ್ಲಿ ನಡೆಯುತ್ತದೆ. ಈ ಭಿತ್ತಿ ಸಿದ್ಧತಾ ಹಂತವನ್ನು ಮುಖ್ಯವಾಗಿ ನಾಲ್ಕು ಹಂತಗಳಲ್ಲಿ ವಿಂಗಡಿಸಿಕೊಳ್ಳಬಹುದು.

೧. ಆಧಾರ ಸಂಸ್ಕರಣ ಹಂತಗಳು

೨. ಮಿಶ್ರಣ ಲೇಪನ ಹಂತ

೩. ಭಿತ್ತಿ ನುಣುಪುಗೊಳಿಸುವ ಹಂತ

೪. ಹಿನ್ನಲೆ ಲೇಪನದ ಹಂತ

೧. ಆಧಾರ ಸಂಸ್ಕರಣ ಹಂತಗಳು

ಯಾವ ಮಾಧ್ಯಮದ ಮೇಲೆ ಚಿತ್ರರಚನೆ ಮಾಡಲಾಗುತ್ತದೆಯೋ ಇದನ್ನು ಆಧಾರವೆನ್ನುತ್ತಾರೆ. ಯಾವುದೇ ಮಾಧ್ಯಮದ ಮೇಲೆ ಭಿತ್ತಿರಚನೆ ಮಾಡಬೇಕಾದಾಗ ಮಿಶ್ರಣ ಲೇಪನಕ್ಕಿಂತ ಮೊದಲು ಆಧಾರವನ್ನು ಸಂಸ್ಕರಣಗೊಳಿಸಿಕೊಳ್ಳುವುದು ತಿಳಿದುಬರುತ್ತದೆಯೇ ಆದರೂ ಈ ಕುರಿತು ಹೆಚ್ಚಿನ ವಿವರಗಳು ದೊರಕುವುದಿಲ್ಲ. ವಿಷ್ಣುಧರ್ಮೋತ್ತರ ಪುರಾಣದಲ್ಲಿ ಮಿಶ್ರಣ ಲೇಪನಕ್ಕಿಂತ ಗೋಡೆಯನ್ನು ಸಮತಟ್ಟು ಮಾಡಲು ತಿಳಿಸಿ ಅದಕ್ಕಾಗಿ ಲಿಂಗಸೂತ್ರವನ್ನು ಉಪಯೋಗಿಸಲು ತಿಳಿಸುತ್ತದೆ. ಸಮರಾಂಗನ ಸೂತ್ರವು ಮಿಶ್ರಣ ಲೇಪಿಸುವ ಪೂರ್ವದಲ್ಲಿ ಗೋಡೆಯನ್ನು ಬಿಸಿನೀರು ಮತ್ತು ಸುರ್ಣದ ನೀರಿನಿಂದ ತೊಳೆದು ಸಂಸ್ಕರಿಸಲು ಹೇಳುತ್ತದೆ.

೨. ಮಿಶ್ರಣದ ಲೇಪನ ಹಂತ :

ಭಿತ್ತಿಸಿದ್ಧತಾ ಹಂತದಲ್ಲಿ ಮಹತ್ವದ ಇದಾಗಿದೆ. ಬೇರೆ ಬೇರೆ ವಿಧಾನಗಳಿಗನುಸಾರವಾಗಿ ಬೇರೆ ಬೇರೆ ವಸ್ತುಗಳನ್ನು ಕೂಡಿಸಿ ಮಿಶ್ರಣ ತಯಾರಿಸಿ ಲೇಪಿಸಲಾಗುತ್ತದೆ. ಶಿಲ್ಪಶಾಸ್ತ್ರಗಳು ಅನೇಕ ವಿಧದ ಮಿಶ್ರಣ ತಯಾರಿಸಿ ಲೇಪಿಸುವ ಕುರಿತು ಹೇಳಿದೆ. ವಿಷ್ಣುಧರ್ಮೋತ್ತರ ಗ್ರಂಥದಲ್ಲಿ ಭಿತ್ತಿ ತಯಾರಿಕೆಯ ವಿಶ್ರಣ ಲೇಪನದ ಈ ಹಂತವನ್ನು ಹೀಗೆ ಹೇಳಿದೆ. ಮೂರು ಪ್ರಕಾರದ ಇಟ್ಟಿಗೆ ಪುಡಿಯನ್ನು ತೆಗೆದುಕೊಂಡು ಅದಕ್ಕೆ ಅಷ್ಟೇ ಪ್ರಮಾಣವಾದ ಜೇಡಿಮೇಣ, ಅತಿಮಧುರ, ಜೇನುಬೆಲ್ಲ (ಕಾಕಂಬಿ), ಕುಸುಂಬಾ ಇವುಗಳನ್ನು ಕಾಯಿಸಬೇಕು. ನಂತರ ಇದಕ್ಕೆ ಬಿಲ್ವಪತ್ರೆಕಾಯಿಯ ಅಂಟನ್ನು ಸೇರಿಸುವುದು. ನಂತರ ಈ ಹದ ಮಾಡಿದ ಮಿಶ್ರಣವನ್ನು ನೀರಿನಲ್ಲಿ ಒಂದು ತಿಂಗಳ ವರೆಗೆ ನೆನೆಹಾಕಿ ಪಕ್ವವಾಗುವಂತೆ ಮಾಡಬೇಕು. ಈ ಮಿಶ್ರಣ ಚೆನ್ನಾಗಿ ನೆನೆದು ಹದವಾದಾಗ ಜಾಗ್ರತೆಯಾಗಿ ಹೊರತೆಗೆದು ಗೋಡೆಗೆ ಲೇಪಿಸಬೇಕು. ಮಿಶ್ರಣವನ್ನು ಒಂದೇ ಸಲ ಲೇಪಿಸಿ ಕೈಬಿಡದೆ ಅಸಮೀಚಿನ ಭಾಗಗಳು ಉಳಿಯದಂತೆ ಮೇಲ್ಮೈ ಸಮತಟ್ಟಾಗಿ ನುಣುಪಾಗುವಂತೆ ಹಲವು ಬಾರಿ ಲೇಪಿಸುತ್ತಿರಬೇಕು ಎಂದು ಹೇಳಿದೆ.

ಶಿಲ್ಪರತ್ನ ಮತ್ತು ಸಮರಾಂಗಣ ಸೂತ್ರಧಾರ ಗ್ರಂಥದಲ್ಲಿ ಮಿಶ್ರಣ ಲೇಪನದ ಹಂತವನ್ನು ಇದಕ್ಕಿಂತ ವಿಭಿನ್ನ ರೀತಿಯಲ್ಲಿ ಹೇಳಿದೆ. ಇಲ್ಲಿ ಮೊದಲಿಗೆ ಸುಣ್ಣ, ಉಸುಕು, ಜಿಗುಟಾದ ಬಿಳಿಮಣ್ಣು, ಕೆಂಪುಚಿರ್ರು ಮತ್ತು ಶೆಂಖದ ಪುಡಿಗಲನ್ನು ಕೂಡಿಸಿ ಅದಕ್ಕೆ ಸಸ್ಯ ಸಂಬಂಧಿ ಅಂಟು ಮತ್ತು ವಜ್ರಸರೆಯಯನ್ನು ಹಾಕಿ ಚೆನ್ನಾಗಿ ಅರೆದುಕೊಳ್ಳಬೇಕು. ಈ ಮಿಶ್ರಣ ಜಿಗುಟಾಗಿ ಹದವಾಗಿ ರೂಪಾಂತರಗೊಂಡ ಮೇಲೆ ಒಂದು ತಿಂಗಳವರೆಗೆ ನೆನೆಯಲು ಬಿಡಬೇಕು. ಈ ಅವಧಿಯಲ್ಲಿ ಮಿಶ್ರಣಕ್ಕೆ ಆಗಾಗ ಲೋಳೆರಸ, ಬಲ್ವಪತ್ರಿಕಾಯಿ, ಮಿಶ್ರಣವನ್ನು ಹಾಕಿ ಅರೆಯುತ್ತಿರಬೇಕು ಬೆಣ್ಣೆಯ ಹಾಗೆ ಮೃದುವಾದ ಈ ಮಿಶ್ರಣವನ್ನು ತೆಗೆದುಕೊಂಡು

ಚಿತ್ರರಚನೆ ಮಾಡುವ ಗೋಡೆ ಲೇಪಿಸಬೇಕು ಎನ್ನುತ್ತೇವೆ. ಕರಾವಳಿ ಭಾಗದ ಕೆಲವು ಚರ್ಚ್‌ನಲ್ಲಿರುವ ಭಿತ್ತಿಚಿತ್ರಗಳು ಇದೆ ರೀತಿ ಚಿತ್ರಿಸಲಾಗಿದೆ. (ಇದೇ ವಿಧಾನದಲ್ಲಿ ಚಿತ್ರಿಸಲಾಗಿದೆ.)

೩. ಭಿತ್ತಿ ನುಣುಪುಗೊಳಿಸುವ ಹಂತ :

ಮಿಶ್ರಣ ಲೇಪನಮಾಡಿ ಸಿದ್ಧಗೊಳಿಸುವ ಭಿತ್ತಿಯು ಒಮ್ಮೆಲೆ ಚಿತ್ರಣಕ್ಕೆ ಸಜ್ಜುಗೊಳ್ಳುವುದಿಲ್ಲ. ಮಿಶ್ರಣ ಲೇಪನಮಾಡಿ ಸಿದ್ಧಗೊಳಿಸಿದ ಭಿತ್ತಿಯನ್ನು ಮತ್ತೆ ಸಮತಟ್ಟುಗೊಳಿಸಿ ನುಣುಪುಗೊಳಿಸುವ ಕ್ರಿಯೆ ಹಂತದಲ್ಲಿ ನಡೆಯುತ್ತದೆ. ಜನಪದ ಭಿತ್ತಿಚಿತ್ರ ಕಲಾವಿದರು ಕೂಡ ಗೋಡೆಗೆ ಮಣ್ಣಿನ ಮಿಶ್ರಣ ಲೇಪಿಸಿ ಒಮ್ಮೆಲೆ ಅದರ ಮೇಲೆ ಸಗಣಿ, ಸುಣ್ಣ, ಜೇಡಿಮಣ್ಣುಗಳ ಇನ್ನೊಂದು ನಯವಾದ ಲೇಪನಕೊಟ್ಟು ಸಮತಟ್ಟಗೊಳಿಸುವುದನ್ನು ನೋಡಬಹುದಾಗಿದೆ. ಪ್ರಾಚೀನ ಗ್ರಂಥಗಳು ಭಿತ್ತಿ ನುಣುಪುಗೊಳಿಸಲು ಕುರಿತು ವಿವರಗಳನ್ನು ನೀಡಿವೆ. ವಿಷ್ಣುಧರ್ಮೋತ್ತರದಲ್ಲಿ ಭಿತ್ತಿಯನ್ನು ಸಮತಟ್ಟುಗೊಳಿಸಲು ಎರಡು ವಧಾನ ಹೇಳಿದೆ. ಮೊದಲ ಲೇಪಿಸಲಾದ ಭಿತ್ತಿಯ ಮಿಶ್ರಣವು ಆರುತ್ತಾ ಬಂದಂತೆ ಅದಕ್ಕೆ ನುಣುಪಾದ ಬಿಳಿ ಮಣ್ಣಿನ ಜೊತೆಗೆ ಸರ್ಜರಸ ನೀಲಿ ಮರದ ರಸದ ಜೊತೆ ಎಣ್ಣೆ ಬೆರಸಿ ಮಿಶ್ರಣ ಮಾಡಿಕೊಂಡು ಉಜ್ಜಲು ಬಳಸಬೇಕು ಎಂದು ಒಂದು ವಿಧದಲ್ಲಿ ಹೇಳಿದೆ. ಇನ್ನೊಂದರಲ್ಲಿ ಭಿತ್ತಿಯನ್ನು ಗೋಡೆಗೆ ನಂತರ ಅದನ್ನು ಸಮತಟ್ಟುಗೊಳಿಸಲು ಮಿಶ್ರಣ ಕಲ್ಲಿನ ಚುರುಗಳಿಂದ ಮುಕ್ತವಾದ ನಯವಾದ ಒಂದು ರೀತಿಯ ಮಣ್ಣು ತೆಗೆದುಕೊಂಡು ಅದಕ್ಕೆ ಎರಡು ಭಾಗ ಉಸುಕು ಸೇರಿಸಿ ನಂತರ ಕಾಕುವ ಮತ್ತು ಬಿನ್ ಭೀಜಗಳನ್ನು ಹತ್ತಿಯ ಗಿಡದ ರಸ, ಬಿಲ್ವಪತ್ರಿಕಾಯಿಯ ರಸವನ್ನು ಬೆರಸಿ ಆನೆಯ ಚರ್ಮದಷ್ಟು ಹಚ್ಚಿದ ಭಿತ್ತಿಯ ಮೇಲೆ ಬಳಿಯಬೇಕು. ಇದನ್ನು ಸಮತಟ್ಟುಗೊಳಿಸುವವರೆಗೂ ಲೇಪಿಸುತ್ತಿರಬೇಕು.

ಮಾನಸೋಲ್ಲಾಸವು ಭಿತ್ತಿಯನ್ನು ಸಮತಟ್ಟುಗೊಳ್ಳಿಸಲ ಮತ್ತು ನುಣುಪುಗೊಳಿಸುವುದು ಬಿಳಿ ಮಣ್ಣು ತೆಗೆದುಕೊಂಡು ವಜ್ರಸರಿಯಲ್ಲಿ ಬೆರಸಿ ಮೂರುಬಾರಿ ಬಿಟ್ಟು ಬಿಟ್ಟು ಭಿತ್ತಿಗೆ ಲೇಪಿಸಿರಬೇಕು. ನಂತರ ಶಂಖದ ಸುಣ್ಣದ ಪುಡಿಯನ್ನು ಮತ್ತು ಸುಣ್ಣವನ್ನು ವಜ್ರಸರಿಯಲ್ಲಿ ತೆಗೆದುಕೊಂಡು ವಜ್ರಲೇಪನದಲ್ಲಿ ಬೆರಸಿ ಚನ್ನಾಗಿ ಕಲಕಿ ಈ ಮಿಶ್ರಣವನ್ನು ಭಿತ್ತಿಗೆ ಬಳಿಯಬೇಕು. ಇದನ್ನು ಹಲವಾರುಬಾರಿ ಬಿಟ್ಟು ಬಿಟ್ಟು ಬಳಿದಾಗ ಭಿತ್ತಿಯ ಮೇಲ್ಮೈ ನುಣುಪಾಗಿ ಪ್ರಕಾಶಮಾನವಾಗುವುದು. ಮಂಗಳೂರಿನ ಸೇಂಟ್ ಅಲಾಯಿಸೆಸ್ ಚರ್ಚ್‌ನಲ್ಲಿ ಇದೇ ವಿಧಾನದಿಂದ ಭಿತ್ತಿಯನ್ನು ನುಣುಪುಗೊಳಿಸಲಾಗಿದೆ.

೪. ಹಿನ್ನಲೆ ಲೇಪನದ ಹಂತ :

ಭಿತೃತಿ ಸಿದ್ಧತೆಯ ಪೂರ್ಣವಾಗಬೇಕಾದರೆ ಹಿನ್ನಲೆ ಲೇಪನಕಾರ್ಯ ಮುಗಿದಾಗಲೇ ಎನ್ನಬಹುದು. ಭಿತ್ತಿ ಹಸಿಯಿರುವಾಗ ಚಿತ್ರರಚಿಸುವ ಫ್ರೇಸ್ಕೋಬ್ಯುನೋ ವಿಧಾನಕ್ಕಿಂತ ಒಣದಾದ

ಭಿತ್ತಿಯ ಮೇಲೆ ಚಿತ್ರರಚಿಸುವ ಫ್ರೇಸ್ಕೋ ಸೆಸ್ಕೋ ವಿಧಾನಗಳಲ್ಲಿ ಹಿನ್ನಲೆ ಲೇಪನಕ್ಕೆ ಹೆಚ್ಚು ಮಹತ್ವವಿದೆ. ಎಂದು ಹೇಳಲಾಗುತ್ತದೆ. ಸಮರಾಂಗಣ ಸೂತ್ರಧಾರವು ಭಿತ್ತಿ ತಯಾರಿಕೆಯ ಕೊನೆಯ ಹಂತವಾಗಿ ಹಿನ್ನಲೆ ಲೇಪನವನ್ನು ಹೇಳಿದ್ದು, ಇದಕ್ಕಾಗಿ ಒಂದು ಅಧ್ಯಾಯವನ್ನು ಮೀಸಲಿರಿಸಿದೆ. ಈ ಗ್ರಂಥದಲ್ಲಿ "ಲೇಪನಕಾರ್ಯ ಮೃತ್ತಿಕ ನಿರ್ಣಯ" ಎಂದು ಇದಕ್ಕೆ ಹೇಳಲಾಗಿಜೆ. ಇದಕ್ಕಾಗಿ ಬೇರೆ ಬೇರೆ ವಿಧಾನಗಳನ್ನು ಹೇಳಿದೆ. ಮಂಗಳೂರಿನ ಸೇಂಟ್ ಅಲಾಯಿಸೆಸ್ ಚರ್ಚ್‌ನಲ್ಲಿರುವ ಚಿತ್ರಗಳು ಸಮರಾಂಗಣ ಸೂತ್ರಧಾರ ಮತ್ತು ಮನಸೋಲ್ಲಾಸ ಗ್ರಂಥದ ಪ್ರಕಾರ ಕಪ್ಪೆಚಿಪ್ಪು, ಶಂಖಚೂರ್ಣಗಳನ್ನು ವಜ್ರಸರಿಯಲ್ಲಿ ಕಲಿಸಿ ಲೇಪಿಸಲಾಗಿದೆ.

ಚಿತ್ರರಚನಾ ಪರಿಕರಗಳು ಮತ್ತು ವಿಧಾನ :

ಪರಿಕರಗಳು :

ಭಿತ್ತಿಚಿತ್ರಕಲೆಯ ಅಧ್ಯಯನದಲ್ಲಿ ಅದರ ಪರಿಕರಗಳ ಕುರಿತಾದ ಅಧ್ಯಯನ ತುಂಬಾ ಮಹತ್ವದ್ದಾಗಿದೆ. ಚಿತ್ರರಚನೆ ಅನೇಕ ರೀತಿಯ ವಸ್ತುಗಳ ಬೇಕಾಗುತ್ತವೆ. ಇವುಗಳನ್ನು ಬಳಸಿಕೊಂಡೆ ಚಿತ್ರರಚಿಸಲಾಗುತ್ತದೆ. ಚಿತ್ರರಚನಾವಿಧಾನಕ್ಕೆ ಬಳಸುವ ಪರಿಕರಗಳನ್ನು ಇಲ್ಲಿ ಭಿತ್ತಿಚಿತ್ರ ರಚನಾ ಪರಿಕರಗಳೇಂದು ವಿಭಾಗಿಸಿಕೊಂಡು ಚರ್ಚಿಸಲಾಗಿದೆ. ಭಿತ್ತಿಚಿತ್ರ ರಚನಾ ಪರಿಕರದಲ್ಲಿ ೧. ವರ್ತಿಕಾ (ಸೀಸದ ಕಡ್ಡಿ) ೨. ಬಣ್ಣ ೩. ಅಂಟುದ್ರಾವಣ ೪. ಬಣ್ಣವನ್ನು ಮಿಶ್ರಣಗೊಳಿಸುವ ಪಾತ್ರರೆ ೫. ಕುಂಚ ಎಂಬುದಾಗಿ ವಿಂಗಡಿಸಿಕೊಂಡಿದ್ದು, ಇವುಗಳ ಕುರಿತು ಒಂದೊಂದಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

೧. ವರ್ತಿಕಾ (ಸೀಸದಕಡ್ಡಿ):

ಪ್ರಾಚೀನ ಭಿತ್ತಿಚಿತ್ರಕಾರರು ತಮ್ಮ ಚಿತ್ರರಚನೆಗೆ ಬೇಕಾಗುವ ಸೀಸದಕಡ್ಡಿಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಈ ಸೀಸದಕಡ್ಡಿ ತಯಾರಿಸುವ ಪ್ರಕ್ರಿಯೆಯು ಚಿತ್ರರಚನೆಯ ಒಂದು ಭಾಗವೇ ಆಗಿತ್ತು. ಪ್ರಾಗೈತಿಹಾಸಿ ಕಾಲದ ಬಂಡೆ ಚಿತ್ರಕಾರರು ವರ್ತಿಕಾ ಬಣ್ಣದಕಡ್ಡಿ ಹಾಗೆಯೇ ಬಣ್ಣದ ಕಲ್ಲುಗಳು, ಮಣ್ಣಿಣ ಗಟ್ಟಿಗಳನೇ ನೇರವಾಗಿ ಉಪಯೋಗಿಸಿದಂತೆಯೇ ಕಟ್ಟಿಗೆ ಸುಟ್ಟ ಇದ್ದಲಿಯಿಂದ ರೇಖಾಚಿತ್ರ ಬರೆದಿರುವ ವಿವರಗಳು ದೊರೆಯುತ್ತವೆ. ನಂತರದ ಕಾಲದ ಭಿತ್ತಿಚಿತ್ರ ಕಲಾವಿದರು ಮತ್ತು ಮಧ್ಯಯುಗಿನ ಚಿತ್ರಕಾರರು ತಮ್ಮ ಅವಶ್ಯಕತೆಗೆ ಬೇಕಾದಂತೆ ತಾವೆ ವರ್ತಿಕಾ ತಯಾರಿಸಿಕೊಳ್ಳುತ್ತಿದ್ದರು. ಭಿತ್ತಿಚಿತ್ರ ರಚನೆಯ ಪ್ರಾರಂಭಿಕ ಆಕೃತಿಗಳನ್ನು ಇಲ್ಲವೆ ವರ್ಣಕ್ಕೆ ತೊಡಗುವ ಮೊದಲಿನ ರೇಖಾಚಿತ್ರಗಳನ್ನು ಈ ಸೀಸದಕಡ್ಡಿಯಿಂದಲೆ ರಚಿಸುತ್ತಿದ್ದರು.

೨. ಬಣ್ಣ

ಭಿತ್ತಿಚಿತ್ರ ಕಲೆಗೆ ಬಣ್ಣಗಳ ಕುರಿತು ನಮಗೆ ಸಿಗುವ ಲಭ್ಯ ಆಕಾರಗಳಲ್ಲಿ ಮತ್ತಿ ಶಾಸ್ತ್ರಗ್ರಂಥಗಳಲ್ಲಿ ಮೊರೆಹೋಗಬೇಕಾಗಿದೆ. ಅವುಗಳ ಕೊಡುವ ವಿವರಗಳು ಗಮನಾರ್ಹವಾಗಿವೆ. ಜಲದಂದ ಬಿಳುಪು, ಅಗ್ನಿಯಿಂದ ಕೆಂಪು, ಭೂಮಿಯಿಂದ ಹಳದಿ, ವಾಯುನಿಂದ ಕಪ್ಪ ವರ್ಣಗಳು ಉತ್ಪನ್ನವಾಗಿವೆ. ಬಿಳುಪಿದೆ ವಿಷ್ಣು, ಕೆಂಪಿಗೆ ಮಹೇಶ್ವರ, ಹಳದಿಗೆ ಗೌರಿದೇವಿ, ಕಪ್ಪುವರ್ಣಕ್ಕೆ ರುದ್ರ ಅಧಿದೇವತೆಯಾಗಿದ್ದಾರೆ ಎಂದು ಕಾಶ್ಯಪ ಶಿಲ್ಪಶಾಸ್ತ್ರ ಹೇಳುತ್ತದೆ. ಇವು ಬಣ್ಣದ ಪೌರಾಣಿಕ ಹಿನ್ನೆಲೆಯ ವಿವರಗಳಾದರೆ, ವೈಜ್ಞಾನಿಕ ವರ್ಣಗಳ ಮಹತ್ವವನ್ನು ನೋಡುವುದಾದರೆ ಸೂರ್ಯನಿಂದ ಹೊರ ಹೊಮ್ಮುವ ಬೆಳಕು ಒಂದು ಶಕ್ತಿ, ಸೂರ್ಯನ ಬೆಳಕಿನಲ್ಲಿ ನೇರಳೆ, ನೀಲಿ, ಹಳದಿ, ಹಸಿರು, ಕಿತ್ತಳೆ, ಕೆಂಪು ವರ್ಣಗಳು ಅಡಕವಾಗಿವೆ. ಪ್ರಾಚೀನ ಭಿತ್ತಿಚಿತ್ರಕಾರರು ಖನಿಜಮೂಲ ಸಸ್ಯಮೂಲ ಮತ್ತು ಪ್ರಾಣಿಮೂಲ ಬಣ್ಣಗಳನ್ನು ಬಳಸುತ್ತಿದ್ದರು.

ಖನಿಜಮೂಲ ಬಣ್ಣಗಳು :

ಭೂಮಿಯಿಂದ ದೊರೆಯುವ ಅಂದರೆ ಕಲ್ಲು ಮಣ್ಣುದಳಿಂದ ಪಡೆಯುವ ಬಣ್ಣಗಳು ಖನಿಜಮೂಲ ಬಣ್ಣಗಳಾಗಿವೆ. ವಿವಿಧ ರೀತಿಯ ಬಣ್ಣದಕಲ್ಲು, ಮಣ್ಣಿನಗಟ್ಟಿ, ಕಬ್ಬಿಣದ ಬಳಸುವ ವಿವರಗಳು ತಿಳಿದುಬರುತ್ತದೆ. ಸುಣ್ಣವು ಭಿತ್ತಿಗಳಲ್ಲಿ ಬಳಸುವ ಬಹುಮುಖ್ಯವಾದ ಖನಿಜಮೂಲ ಬಣ್ಣವಾಗಿದೆ. ಕೆಲವು ಬಣ್ಣಗಳು ಸುಣ್ಣ ಪ್ರತಿರೋಧಕ ಗುಣ ಹೊಂದಿದ್ದು, ಹಿನ್ನಲೆಗೆ ಲೇಪಿಸಿದೆ ಸುಣ್ಣದ ಮಿಶ್ರಣದಲ್ಲಿ ಬೆರೆಯದೆ ಮೂಲಛಾಯೆಯನ್ನು ಉಳಿಕೊಳ್ಳುತ್ತದೆ. ಅಲ್ಲದೆ ಕೆಲವು ಖನಿಜಮೂಲ ಬಣ್ಣಗಳನ್ನು ಪರಸ್ಪರ ಮಿಶ್ರಣ ಮಾಡಿ ಬಣ್ಣಗಳ ಗಡಸುತನ ಕಡಿಮೆ ಮಾಡಲು ಬರುತ್ತದೆ. ಕೆಂಪು ಖನಿಜಮೂಲ ಬಣ್ಣಕ್ಕೆ ಬಿಳಿ ಖನಿಜಮೂಲ ಬಣ್ಣ ಸೇರಿದಾಗ ಕೆಂಪು ವರ್ಣ ತಿಳಿಯಾಗುತ್ತದೆ ಹಾಗೆಯೇ ಯಾವುದೇ ಖನಿಜಮೂಲ ಬಣ್ಣದಲ್ಲಿ ಖನಿಜಮೂಲ ಕಪ್ಪುಬಣ್ಣ ಸೇರಿದಾಗ ಆ ಬಣ್ಣಗಳು ದಟ್ಟವಾಗುತ್ತವೆ. ಇಂತಹ ಕೆಲವು ಗುಣಗಳಿಂದ ಖನಿಜಮೂಲ ಬಣ್ಣಗಳು ಭಿತ್ತಿಚಿತ್ರಗಳಿಗೆ ಹೆಚ್ಚು ಸೂಕ್ತವಾಗಿದ್ದು, ಭಿತ್ತಿಚಿತ್ರಗಳ ರಚನೆಯಲ್ಲಿ ಇವು ಹೆಚ್ಚಾಗಿ ಬಳಕೆಯಾಗಿದೆ ಎನ್ನಲಾಗಿದೆ.

ಪ್ರಾಚೀನ ಕಾಲದ ಭಿತ್ತಿಚಿತ್ರಗಳಲ್ಲಿ ಬಳಸುತ್ತಿದ್ದು ಖನಿಜಮೂಲದ ಆಕರ್ಸ್, ಸಿನ್ನಾಜ್ ಮತ್ತು ಅಂಬರ್ಸ್ ಎಂಬ ಬಗೆಗಳಲ್ಲಿ ಇದ್ದಂತಹುಗಳಾಗಿವೆ. ಕಬ್ಬಿಣದ ಭಸ್ಮಗಳೊಡನೆ ಬೆಣಚುಕಲ್ಲಿನ ಖನಿಜಗಳನ್ನು ಕೂಡಿಸಿ 'ಆಕರ್ಸ್' ರೀತಿಯ ಬಣ್ಣಗಳನ್ನು ತಯಾರಿಸುತ್ತಿದ್ದರು. ಮ್ಯಾಗ್ನಿಸ್ ಭಸ್ಮವನ್ನು ಬೆಣಚುಕಲ್ಲಿನ ಖನಿಜದೊಡನೆ ಸೇರಿಸಿ ಸಿನ್ನಜ್ ಹಾಗೂ ಕಬ್ಬಿಣ ಮತ್ತು ಮ್ಯಾಗ್ನಿಸ್ ಭಸ್ಮಗಳನ್ನು ಎರಡನ್ನು 'ಅಂಬರ್ಸ್' ಬಣ್ಣಗಳನ್ನು ತಯಾರಿಸುತ್ತಿದ್ದರೆಂಬ ವಿವರಗಳು ಸಿಗುತ್ತವೆ.

ಪ್ರಾಣಿಮೂಲ ಬಣ್ಣಗಳು :

ಪ್ರಾಣಿಗಳ ಮೂಲದಿಂದ ನಿರ್ಮಾಣವಾದ ಬಣ್ಣಗಳು ಈ ಗುಂಪಿನವುಗಳಾಗಿವೆ. ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಇರುವ ವರ್ಣದ್ರವ್ಯಗಳನ್ನು ಹಲವಾರು ಪರೀಕ್ಷೆಗಳಿಗೆ ಒಳಪಡಿಸಿದಾಗ ಅದರಲ್ಲಿ ಪ್ರಾಣಿಗಳ ರಕ್ತದ ಅಂಶವಿರುವುದು ಕಂಡುಬಂದಿದ್ದು ಎಂದು ನಂಬಲಾಗಿದೆ. ಈ ಆಧಾರದ ಮೇಲಿಂದ ಹೇಳುವುದಾದರೆ ಕೆಂಪು ವರ್ಣದ ಉಪಯೋಗದ ಸಂದರ್ಭದಲ್ಲಿ ಕೆಲವು ಸಲ ನೇರವಾಗಿ ಪ್ರಾಣಿಗಳ ರಕ್ತವನ್ನೇ ಉಪಯೋಗಿಸಿರುವ ಸಾಧ್ಯತೆಯು ಇದೆ.

ಈ ಕೆಂಪು ಬಣ್ಣಕ್ಕೆ ನಮ್ಮಲ್ಲಿ ಕಾವಿಕೆಂಪು ಎಂದು ಕರೆಯುತ್ತಾರೆ. ಕಾವಿಕಲ್ಲುಗಳನ್ನು ಹೆಚ್ಚಾಗಿ ಗುಡ್ಡಗಾಡು ಪ್ರದೇಶಗಳಲ್ಲಿ ಸಿಗುತ್ತವೆ. ಕಾವಿಕಲ್ಲುಗಳನ್ನು ನೀರು ಹಾಕಿ ಬಂಡೆಯ ಮೇಲೆ ತಿಕ್ಕಬೇಕು. ಹೀಗೆ ತಿಕ್ಕುವುದರಿಂದ ಬಣ್ಣವು ನೀರಿನಲ್ಲಿ ಬೆರೆದುಕೊಂಡು ಆ ಬಣ್ಣದ ನೀರನ್ನು ಹೊಸ ಮಣ್ಣಿನ ಮಡಿಕೆಯಲ್ಲಿ ಹಾಕುತ್ತಿದ್ದರು. ಪಾತ್ರಿಯ ಹೊಸದಾದುರಿಂದ ಬಣ್ಣವನ್ನು ತಿರ್ವವಾಗಿ ಎಳೆದುಕೊಳ್ಳುವುದು. ಮೂರನೆ ದಿನ ಮೇಲಿನ ನೀರನ್ನು ಬಣ್ಣ ಬೆರೆಯದಂತೆ ಹಗುರವಾಗಿ ಬಸಿಯುತ್ತಿದ್ದರು. ಬಸಿದ ಬಳಿಕ ಅದನ್ನು ಹಾಗೆಯೇ ಬಿಟ್ಟು ಬಣ್ಣವು ತಿಳಿಯಾದಾಗ ಕೆಳಭಾಗ ಮೇಲಿನ ಭಾಗವನ್ನು ಬೇರ್ಪಡಿಸುತ್ತಿದ್ದರು. ಈ ರೀತಿ ಕೆಂಪು ಬಣ್ಣವನ್ನು ತಯಾರಿಸುತ್ತಿದ್ದರು ಎಂದು ಹೇಳಲಾಗಿದೆ.

ಸಸ್ಯಮೂಲ ಬಣ್ಣಗಳು

ಪ್ರಾಚೀನ ಮಾನವರು ಕೆಲವು ಗಿಡಗಳ ಹೂವು, ಎಲೆ, ಹಣ್ಣು, ಬೀಜ, ಕಾಂಡ, ಬಿಗುರೆಲೆ ಮತ್ತು ಬೇರುಗಳಿಂದ ಬಣ್ಣವನ್ನು ತಯಾರಿಸುತ್ತಿದ್ದರೆಂಬ ವಿವರಗಳು ದೊರೆಯುತ್ತವೆ. ಇಂದಿಗೂ ಸಸ್ಯದಿಂದ ನೀಲಿಬಣ್ಣ, ಬರ್ಚ ಎಂಬ ಗಿಡದ ಎಲೆಗಳಿಂದ ಹಳದಿ ಬಣ್ಣ, ಮ್ಯೂಡರಂ ಎಂಬ ಹಬ್ಬವ ಬಳ್ಳಿ ಬೇರುಗಳಿಂದ ಹಳದಿ ಬಣ್ಣವನ್ನು ಬಹಳ ಪೂರ್ವದಲ್ಲಿಯೇ ಪಡೆಯುತ್ತಿದ್ದ ಬಗೆಗೆ ತಿಳಿದುಬರುತ್ತದೆ. ಸಸ್ಯಮೂಲಗಳಿಂದ ಪಡೆದ ಅನೇಕ ಬಣ್ಣಗಳನ್ನು ಭಿತ್ತಿರಚನಯೆಲ್ಲಿ ಬಳಸುತ್ತಿದ್ದರಲ್ಲದೆ ಖನಿಜಮೂಲದ ಬಣ್ಣಗಳಿಗೆ ಹೋಲಿಸಿದರೆ ಇವು ಭಿತ್ತಿಚಿತ್ರಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಬಳಕೆಯಾಗಿರಬಹುದು ಎಂಬ ಅಂಶಗಳು ತಿಳಿದುಬರುತ್ತವೆ.

ಲೋಹಮೂಲ ಬಣ್ಣಗಳು

ಪ್ರಾಚೀನ ಭಿತ್ತಿಚಿತ್ರ ಕಲಾವಿದರು ಖನಿಜಮೂಲದ ವರ್ಣಗಳು, ಸಸ್ಯಸಂಬಂಧಿ ವರ್ಣಗಳು, ಪ್ರಾಣಿಜನ್ಯ ವರ್ಣಗಳು ಹೀಗೆ ಪ್ರಕೃತಿಯಲ್ಲಿ ತಮಗೆ ದೊರಕುತ್ತಿದ್ದ ಸ್ವಾಭಾವಿಕ ವರ್ಣಗಳ ಜೊತೆಗೆ ಅವಶ್ಯಕತೆ ಉಂಟಾದಾಗ ಲೋಹಗಳಿಂದಲೂ ವರ್ಣಗಳನ್ನು

ಪಡೆಯುತ್ತಿದ್ದರು. ಲೋಹವನ್ನು ತೆಳುವಾದ ಹಾಳೆಯಾಗಿ ಮಾಡಿಕೊಂಡು ಅವಶ್ಯವಿದ್ದಲ್ಲಿ ಕತ್ತರಿಸಿ ದ್ರವರೂಪವಾಗಿ ಮಾಡಿಕೊಂಡು ಚಿತ್ರಕ್ಕೆ ಲೇಪಿಸಲು ಉಪಯೋಗಿಸುತ್ತಿದ್ದರು ಎಂಬ ವಿವರಗಳು ತಿಳಿದುಬರುತ್ತವೆ. ಪ್ರಾಚೀನ ವರ್ಣಚಿತ್ರಕ್ಕಾಗಿ ಬಂಗಾರ, ಬೆಳ್ಳಿ, ತಾಮ್ರ, ಅಬ್ರಕ, ಸೀಸಗಳಂತಹ ಲೋಗಳಿಂದ ಬಣ್ಣಗಳನ್ನು ಪಡೆಯುತ್ತಿದ್ದರೆಂದು ಹೇಳಲಾಗಿದೆ. ಈ ರೀತಿಯ ಬಣ್ಣಗಳ ತಯಾರಿಕೆಯ ಪ್ರಾಚೀನ ವಿಧಾನಗಳನ್ನು ಗಮನಿಸಿದಾಗ ಮಂಗಳೂರಿನ ಸೇಂಟ್ ಅಲಾಯಿಸೆಸ್ ಚರ್ಚ್‌ನಲ್ಲಿರುವ ಭಿತ್ತಿಚಿತ್ರಗಳು ಖನಿಜಮೂಲ ಮಸ್ತು ಸಸ್ಯಮೂಲ ವರ್ಣಗಳಿಂದ ರಚನೆಯಾಗಿವೆ ಎಂಬುದಾಗಿ ತಿಳಿದುಬರುತ್ತದೆ. ಇಲ್ಲಿನ ವರ್ಣ ತಯಾರಿಕೆ ವಜ್ರಸರಿಯಂತಹ ಅಂಟು ಮಾಧ್ಯಮ ಬಳಸಿಕೊಳ್ಳಲಾಗಿದ್ದು ಚಿತ್ರರಚನೆಯ ಪ್ರಾತಮಿಕ ಹಂತದಲ್ಲಿ ಇದ್ದಿಲನ್ನು ಪೆನ್ಸಿಲ್ ರೂಪದಲ್ಲಿ ಬಳಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಚಿತ್ರರಚನಾ ಕ್ರಮ

ಭಿತ್ತಿಚಿತ್ರ ರಚನಾ ಕ್ರಮವನ್ನು ಅಧ್ಯಯನದ ಅನುಕೂಲತೆಗಾಗಿ ಭಿತ್ತಿಚಿತ್ರ ರಚನಾ ಪೂರ್ವಾಂಗ, ಭಿತ್ತಿಚಿತ್ರ ರಚನಾ ಉತ್ತರಾಂಗ ಎಂದು ವಿಭಾಗವಾಗಿ ವಿಂಗಡಿಸಿಕೊಳ್ಳಲಾಗಿದೆ. ಪೂರ್ವಾಂಗದಲ್ಲಿ ಚಿತ್ರಗಳ ಪ್ರಮಾಣ, ವಿಧಾನ, ಸೂತ್ರಗಳು, ನವಸ್ಥಾನಗಳು, ಚಿತ್ರದ ಷಡಾಂಗಗಳು ಹೀಗೆ ಚಿತ್ರರಚನೆ ಪೂರ್ವದಲ್ಲಿ ಕಲಾವಿದನು ಗಮನಿಸತಕ್ಕ ಅಂಶಗಳು ಒಳಗೊಳ್ಳುತ್ತವೆ. ಕಲಾವಿದನ ಮಾನಸಿಕ ಸಿದ್ಧತೆ ಇದಾಗಿದ್ದು, ಮುಂದಿನ ಉತ್ತರಾಂಗ ಕ್ರಿಯೆಗೆ ಬುನಾದಿ ಹಾಕುವ ಹಂತವು ಈ ಪೂರ್ವಾಂಗದಲ್ಲಿ ನಡೆಯುತ್ತದೆ. ಉತ್ತರಾಂಗವು ಕ್ರಿಯಾ ರಂಗವಾಗಿದ್ದು, ಪೂರ್ವಾಂಗದಲ್ಲಿ ಗಮನಿಸಿದಂತಹ ಅಂಶಗಳಿಗೆ ಅನುಗುಣವಾಗಿ ಚಿತ್ರರಚನೆ ಮಾಡುವ ಕ್ರಿಯೆ ಇಲ್ಲಿ ನಡೆಯುತ್ತದೆ. ಭಿತ್ತಿ ಹಸಿಯಿರುವಾಗ ಚಿತ್ರರಚನೆ ಮಾಡುವುದು, ಭಿತ್ತಿ ಒಣಗಿದ ಮೇಲೆ ಚಿತ್ರರಚಿಸುವುದು ಟೆಂಪರಾ ವಿಧಾನದಲ್ಲಿ ಚಿತ್ರರಚಿಸುವುದು ಹೀಗೆ ಚಿತ್ರರಚನಾ ವಿಧಾನಗಳು ಮತ್ತು ಚಿತ್ರರಚನೆಯ ಆರು ಹಂತಗಳು ಈ ಉತ್ತರಾಂಗದಲ್ಲಿ ಒಳಗೊಳ್ಳುತ್ತವೆ. ಇವುಗಳನ್ನು ಒಂದೊಂದಾಗಿ ನೋಡಬಹುದು.

ಅ. ಭಿತ್ತಿಚಿತ್ರ ರಚನಾ ಪೂರ್ವಾಂಗ

ಚಿತ್ರವನ್ನು ಯಾವ ಮಾನಸಿಕ ಅಥವಾ ಪ್ರಮಾಣದಲ್ಲಿ ನಿರ್ಮಿಸಬೇಕು. ಮನುಷ್ಯ ಚಿತ್ರಗಳ ಪ್ರಮಾಣವೇನು, ದೇವತಾ ಚಿತ್ರಗಳ ಪ್ರಮಾಣವೇನು, ಸ್ತ್ರೀಯರು, ಮಕ್ಕಳು, ಪ್ರಾಣಿ-ಪಕ್ಷಿ, ವಸ್ತು ಮುಂತಾದ ಚಿತ್ರರಚನೆಯಲ್ಲಿ ಪ್ರಾಚೀನರು ಅನುಸರಿಸುತ್ತಿದ್ದ ಅಳತೆ, ವಿಧಾನ, ತಾಳಮಾನಗಳು ಪ್ರಮುಖವಾಗಿವೆ ಭಿತ್ತಿಚಿತ್ರಗಳ ತಾಳಮಾನ ಅಳತೆಗಳ ಬಗ್ಗೆ ಪ್ರಾಚೀನ ಭಿತ್ತಿಚಿತ್ರಗಳಿಂದ ನಮಗೆ ಅಲ್ಪ ಸ್ವಲ್ಪ ವಿವರ ಮಾತ್ರ ತಿಳಿದುಬರುತ್ತದೆ ವಿನಹ ಹೆಚ್ಚಿನ ವಿಷಯ ತಿಳಿದುಬರುವುದಿಲ್ಲ. ಈ ಕುರಿತು ಪ್ರಾಚೀನ ಗ್ರಂಥಗಳನ್ನು ಮತ್ತು ಅದಕ್ಕಿಂತ

ಹೆಚ್ಚಿನದಾಗಿ ಶಿಲ್ಪಶಾಸ್ತ್ರಗಳಿಂದ ತಿಳಿದುಬರುತ್ತದೆ. ಚಿತ್ರದ ಹಿನ್ನೆಲೆ ಸ್ಥಳವನ್ನು ಎಷ್ಟು ಬಿಡಬೇಕು, ಮುನ್ನೆಲೆಯ ಸ್ಥಳವನ್ನು ಎಷ್ಟು ಬಿಡಬೇಕು, ಯಾವ ಚಿತ್ರ ದೊಡ್ಡದು, ಯಾವ ಚಿತ್ರ ಸಣ್ಣದಾಗಿ ಚಿತ್ರಿಸಬೇಕು ಎಂಬ ಅಶಗಳು ಚಿತ್ರದ ವಿಷಯದ ಮೇಲೆ ಅವಲಂಭಿಸಿದಂತೆಯೆ ಕಲಾವಿದನ ಭಾವನಾತ್ಮಕ ಆಧಾರ ಆತನ ಅನುಭವ ಅವನ ಸಂಪತ್ತು ಮತ್ತು ಪ್ರಭುದ್ಧತೆಯನ್ನು
ಕಲಾವಿದನ ಭಾವನಾತ್ಮಕ ಆಧಾರ ಆತನ ಅನುಭವ ಅವನ ಸಂಪತ್ತು ಮತ್ತು ಪ್ರಭುದ್ಧತೆಯನ್ನು
ಅವಲಂಭಿಸಿರುತ್ತದೆ.

ಪ್ರಾಚೀನರ ಅಳತೆಯ ಪ್ರಕಾರ ಚಿತ್ರದ ಎತ್ತರ, ಅಗಲ ಮುಂತಾದ ಪ್ರಮಾಣಗಳನ್ನು ತಾಳದಿಂದ ಮತ್ತು ಅಂಗುಲದಿಂದ ಗುರುತಿಸುತ್ತಿದ್ದರು. ಅಂಗುಲವೆ ಒಂದು ನಿಶ್ಚಿತ ಮಾನವಾಗಿ ಬಳಕೆಯಲ್ಲಿತ್ತು. ಅಳತೆಗಳು ಅಂಗುಲವನ್ನು ಗುಣಿಸಿದ ಅಥವಾ ಭಾಗಿಸಿದದ ಮಾತ್ರದಲ್ಲಿ ಇರುತ್ತಿದ್ದವು. ಅಂಗುಲಗಳಲ್ಲಿ ಮೂರು ವಿಧಗಳು. ೧. ಮಾತ್ರಾಂಗುಳ, ೨. ಮಾನಾಂಗುಳ, ೩. ದೇಹಾಂಗುಲ.

ಮಾತ್ರಾಂಗುಳ

ಇದು ಎಂಟು ಬಾರ್ಲಿಕಾಳುಗಳ ಉದ್ದಕ್ಕೆ ಸಮವಾಗಿರುತ್ತದೆ.

ಮಾನಾಂಗುಳ

ಇದು ಕಲಾವಿದನ ಅಂದರೆ ಚಿತ್ರರಚನೆಕಾರನ ಬಲಗೈ ಮಧ್ಯದ ಬೆರಳಿನ ಮಧ್ಯದ ಪರ್ವದ ಉದ್ದವನ್ನು ಅಥವಾ ಅಗಲವನ್ನು ಒಂದು ಅಂಗುಲವಾಗಿ ಸ್ವೀಕರಿಸುವುದಾಗಿದೆ. ಕಾರಣ ಮಧ್ಯಬೆರಳಿನ ಮಧ್ಯ ಪರ್ವದ ಉದ್ದ ಮತ್ತು ಅಗಲಗಳು ಸಮನಾಗಿರುತ್ತವೆ.

ದೇಹಾಂಗುಳ

ಇದು ಚಿತ್ರದ ಎತ್ತರವನ್ನು ನಿಗದಿಯಾದ ಭಾಗಗಳಲ್ಲಿ ವಿಭಾಗಿಸಿ ಒಂದು ಭಾಗವನ್ನು ಅಂಗುಳವೆಂದು ಪರಿಗಣಿಸಲಾಗುತ್ತದೆ.

ಸೂತ್ರಗಳು

ಚಿತ್ರಗಳ ಎತ್ತರ ಅಗಲಗಳನ್ನು ತಾಳಮಾನ ಕ್ರಮದಲ್ಲಿ ಹೇಳುವಾಗ ಅಡ್ಡವಾಗಿರುವ ಮತ್ತು ಉದ್ದವಾಗಿರುವ ಕೆಲವು ಸಮನಾಂತರ ರೇಖೆಗಳನ್ನು ಕಲ್ಪಿಸಿಕೊಂಡು ಅಳತೆಗಳನ್ನು ಹೇಳಲಾಗುತ್ತದೆ. ಇವು ಸಾಧಾರಣವಾಗಿ ಕಾಲ್ಪನಿಕ ರೇಖೆಗಳೇ ಆಗಿದ್ದರೂ ಈ ರೇಖೆಗಳು ಚಿತ್ರದಲ್ಲಿ ನಿಶ್ಚಿತವಾದ ಅಂಗ ಅಥವಾ ಸ್ಥಾನದ ಮೂಲಕ ಹಾದು ಹೋಗುತ್ತವೆ. ಅಳತೆಗಳನ್ನು ಈ ಕಾಲ್ಪನಿಕ ರೇಖೆಗಳಿಗೆ ಅನ್ವಯಿಸಿ ಹೇಳಲಾಗುತ್ತದೆ. ಆದ್ದರಿಂದ ಈ ರೇಖೆಗಳನ್ನು ಸೂತ್ರಗಳೆಂದು ಕರೆಯಲಾಗುತ್ತದೆ. ಇವುಗಳಲ್ಲಿ ಅಗಲ, ಉದ್ಧ ಸೂತ್ರಗಳೆಂದು ಎರಡು ಪ್ರಕಾರಗಳಿವೆ. ಅವುಗಳಲ್ಲಿ ಮತ್ತೆ ಹಲವು ವಿಧಗಳಿವೆ.

ಅ. ಅಡ್ಡಸೂತ್ರಗಳು ಇದರಲ್ಲಿ ೧೬ ವಿವಿಧ ಬಗೆಗಳಿವೆ.

ಉಷ್ಣೀಷ

ಈ ರೇಖೆಯು ಚಿತ್ರದ ನಡು ನೆತ್ತಿಯ ಭಾಗದಲ್ಲಿ ಹಾಯುವುದು. ದೇವತಾ ಚಿತ್ರಗಳಲ್ಲಿ ಇದು ಮುಖಮಂಟಪದಿಂದ ಆವೃತ್ತವಾಗಿರುತ್ತದೆ. ಚಿತ್ರದ ಎತ್ತರವನ್ನು ಈ ರೇಖೆಯಿಂದಲೇ ಲೆಕ್ಕಿಸಲಾಗುತ್ತದೆ.

ಕೇಶಾಂತ

ಇಷ್ಣೀಷದಿಂದ ಕೆಳಕ್ಕೆ ಹರಿಡಿಕೊಂಡಿರುವ ತಲೆಯ ಕೂದಲು ಅಂಚು ಇದನ್ನು ಮುಂಗುರುಳು ಎಂದು ಕರೆಯುವರು. ಉಷ್ಣೀಷ ಮತ್ತು ಕೇಶಾಂತ ಎರಡು ಮುಖದ ಎತ್ತರಕ್ಕೆ ಸೇರುವುದಿಲ್ಲ. ಇದನ್ನೇ ಪ್ರತ್ಯೇಕವಾಗಿ ಲೆಕ್ಕಿಸಲಾಗುತ್ತದೆ.

ಭೂಸೂತ್ರ

ಈ ಸೂತ್ರವು ಎರಡು ಹುಬ್ಬುಗಳ ಮೇಲ್ಭಾಗದಿಂದ ಹಾದುಹೋಗುವ ರೇಖೆ. ಇದು ಕಿವಿಯ ಮೇಲ್ಭಾಗವನ್ನು ಸ್ಪರ್ಶಿಸುತ್ತದೆ.

ಅಕ್ಷಿಸೂತ್ರ

ಇದು ಕಣ್ಣಿನ ಕೆಳಭಾಗದಿಂದ ಹಾದುಹೋಗುವ ರೇಖೆ. ಇದನ್ನು ನೇತ್ರಾಂತಸೂತ್ರ ಎಂದು ಕರೆಯುತ್ತಾರೆ.

ನಾಸಾ ಮೂಲಸೂತ್ರ ಅಥವಾ ನೇತ್ರ ಮಧ್ಯಸೂತ್ರ

ಇದು ಕಣ್ಣಿನ ಮಧ್ಯಭಾಗದಿಂದ ಹಾದುಹೋಗುವ ರೇಖೆ. ಇದು ಮೂಗುನ ಪ್ರಾರಂಭದ ಕ್ಷೇತ್ರವು ಹೌದು. ಇದನ್ನು ಅಷ್ಯಂತ ಸೂತ್ರ ಎಂದು ಕರೆಯಲಾಗಿದೆ.

ನಾಸಾ ಪುಟಾಂತ ಸೂತ್ರ

ಇದನ್ನು ನಾಸಾಂತ ಸೂತ್ರ, ಪುಟ ಸೂತ್ರ, ಪುಟಾಂತ ಸೂತ್ರ ಎಂದುಕರೆಯಲಾಗಿದೆ. ಈ ರೇಖೆಯು ಮೂಗಿನ ಕೆನ್ನೆಯನ್ನು ಸ್ಪರ್ಶಿಸಿ ಇದರ ಇಕ್ಕೆಲೆಗಳಲ್ಲೂ ಇರುವ ಪುಟಗಳನ್ನು ಸ್ಪರ್ಶಿಸುತ್ತದೆ.

ಹನ್ವಂತ ಸೂತ್ರ

ಹನು ಎಂದರೆ ಗದ್ದ, ಗದ್ದದ ಕೊನೆಯನ್ನು ಸ್ಪರ್ಶಿಸುತ್ತ ಹಾದುಹೋಗುವ ರೇಖೆ,

ಗಳ

ಗದ್ದದ ಕೆಳಭಾಗದ ಕಲ್ಲಿರುವ ಮಾಂಸದಿಂದ ತುಂಬಿರುವ ಭಾಗ. ಇದಕ್ಕೆಂದೆ ಪ್ರತ್ಯೇಕ ಸೂತ್ರವಿಲ್ಲ

ಹಿಕ್ಕಾಸೂತ್ರ

ಎರಡುಕಡೆಯ ಬುಜಗಳನ್ನು ಸ್ಪರ್ಶಿಸುತ್ತ ಕೊರಳಿನ ಮುಂಭಾಗದ ತಳಭಾಗದ ಕೊನೆಯಲ್ಲಿರುವ ಸಣ್ಣತಗ್ಗನ್ನು ಛೇದಿಸುವ ಸೂತ್ರ.

ಸ್ಥನ ಸೂತ್ರ

ಇದನ್ನು ಹೃದಯ ಸೂತ್ರ ಎಂದು ಕರೆಯುತ್ತಾರೆ. ಸ್ಥನಗಳ ಮಣಿಗಳನ್ನು ಸೇರಿಸುವ ರೇಖೆ ಇದು. ಕೆಲವು ಶಿಲ್ಪಶಾಸ್ತ್ರಗಳು ಸ್ಥನಗಳ ತಳಭಾಗವನ್ನು ಸ್ಪರ್ಶಿಸುವ ರೇಖೆ ಇದೆಂದು ಹೇಳಿವೆ. ಹಾಗಾದಾಗ ಹೊಟ್ಟೆಯು ಪ್ರಾರಂಭ ಸ್ಥಾನವಾಗುತ್ತದೆ. ಇಲ್ಲಿ ಸ್ಥನ ಎಂಬ ಪದವನ್ನು ಉಬಯ ಲಿಂಗಕ್ಕೂ ಅನ್ವಯಿಸುವ ಪದವಾಗಿ ಬಳಸಲಾಗುತ್ತದೆ.

ನಾಭಿ ಸೂತ್ರ ಅಥವಾ ನಾಭ್ಯಂತ ಸೂತ್ರ

ಹೊಕ್ಕಳಿನ ಮಧ್ಯಭಾಗದಲ್ಲಿ ಹಾದುಹೋಗುವ ರೇಖೆ. ಇದನ್ನು ಶ್ರೇಣಿ ಎಂದು ಕರೆಯುತ್ತಾರೆ. ಇದರ ಕಳಭಾಗವನ್ನು ಕಿಬ್ಬೊಟ್ಟೆ ಎನ್ನಲಾಗುತ್ತದೆ.

ಮೇಡ್ರ ಅಥವಾ ಯೋನಿ ಸೂತ್ರ

ಇದು ಲಿಂಗ ಪ್ರದೇಶದಲ್ಲಿ ಹಾದುಹೋಗುವ ರೇಖೆ. ಇದನ್ನು ಮೇಡ್ರಮೂಲ ಅಥವಾ ಯೋನಿಮೂಲ ಸೂತ್ರ ಎಂದು ಹೇಳುತ್ತಾರೆ. ಅಂದರೆ ಈ ರೇಖೆಯ ನಂತರವೇ ಜನನೇಂದ್ರಿಯ ಹರಡುತ್ತದೆ. ಈ ಭಾಗದ ಮೇಲಿನ ಸ್ಥಳವನ್ನು ಯೋನಿ ಲಿಂಗ ಪೀಠವೆಂದು ಕರೆಯುತ್ತಾರೆ. ಈ ಅಳತೆಯು ಉಭಯ ಲಿಂಗಗಳಿಗೂ ಅನ್ವಯಿಸುತ್ತದೆ.

ಊರ್ವ್ವಂತ ಸೂತ್ರ

ತೊಡೆಯ ಭಾಗ ಕೊನೆಗೊಂಡು ಮೊನಕಾಲು ಪ್ರಾರಂಭವಾಗುವ ಸ್ಥಳದಲ್ಲಿ ಹಾದುಹೋಗುವ ರೇಖೆ.

ಜಾನುಸೂತ್ರ

ಮೊನಕಾಲಿನ ಅಡಿಭಾಗದಲ್ಲಿ ಹಾದುಹೋಗುವ ರೇಖೆ. ಇದನ್ನು ಜಾನ್ವಂತ ಸೂತ್ರ ಎಂದು ಕರೆಯುತ್ತಾರೆ.

ಅಕ್ಷಿಗುಲ್ಫಸೂತ್ರ

ಮುಂಗಾಲು ಪಾದದ ಕೀಲಿನೊಂದಿಗೆ ಸೇರುವ ಸ್ಥಳದಲ್ಲಿರುವ ಮುಂಗಾಲು ಮೂಳೆಯನ್ನು ನಳಕ ಎನ್ನುತ್ತಾರೆ. ಅದರ ಕೆಳಭಾಗದಲ್ಲಿ ಅಥವಾ ಪಾದದ ಕೀಲುಗಳ ಇಕ್ಕೆಲೆಗಳಲ್ಲಿರುವ ಮೂಳೆಯ ಮಣಿಗಳ ಮೂಲಕ ಹಾದುಹೋಗುವ ರೇಖೆ. ಈ ರೇಖೆಯ ಅಡಿಯಲ್ಲಿ ಪಾದ ಇರುತ್ತದೆ. ಮೂಳೆಯ ಮಣಿಗಳನ್ನು ಅಕ್ಷಿಗುಲ್ಫ ಎನ್ನುತ್ತಾರೆ.

ಭುಮಿಸೂತ್ರ

ಇದು ಚಿತ್ರದ ಪಾದದ ಅಡಿಭಾಗದಲ್ಲಿ ಹಾದುಹೋಗುತ್ತದೆ. ಚಿತ್ರದ ಎತ್ತರವನ್ನು ಲೆಕ್ಕಿಸುವುದು ಈ ಸೂತ್ರದಿಂದ ಪ್ರಾರಂಭಿಸಿ ಉಷ್ಣೀಷದ ಮೇಲ್ಭಾಗದ ತನಕ ಪಾದದ ಎತ್ತರವನ್ನು ಹೇಳುವಾಗಿ ಈ ಸೂತ್ರದಿಂದ ಅಕ್ಷಿಗುಲ್ಫ ಸೂತ್ರದ ವರೆಗೆ ಇರುವ ಎತ್ತರವನ್ನು ಪರಿಗಣಿಸಲಾಗುತ್ತದೆ. ಚಿತ್ರದ ಎತ್ತರವನ್ನು ತಿಳಿಯಲು ಅಡ್ಡವಾಗಿ ಹಾದುಹೋಗುವ ಹದಿನಾರು ಸೂತ್ರಗಳಿರುವಂತೆ ಚಿತ್ರದ ಅಗಲಳತೆಗಳನ್ನು ತಿಳಿಯಲು ಸಹಾಯಕವಾಗುವ ಲಂಭವಾದ ಅಥವಾ ಉದ್ದವಾದ ಕಾಲ್ಪನಿಕ ರೇಖಾಸೂತ್ರಗಳನ್ನು ನೋಡೋಣ.

ಬ. ಉದ್ದಸೂತ್ರಗಳು

ಇದರಲ್ಲಿ ಹತ್ತು ವಿಧಗಳಿರುವುದನ್ನು ಕಾಣುತ್ತೇವೆ.

ಪೂರ್ವಸೂತ್ರ ಅಥವಾ ಪುರಸೂತ್ರ

ಇದು ಸರಿಯಾಗಿ ಮನುಷ್ಯಾಕೃತಿಯ ಮಧ್ಯಭಾಗದಲ್ಲಿ ಲಂಬವಾಗಿ ತಲೆಯ ಕೊನೆಯಿಂದ ಭೂಮಿಯ ತನಕ ಎಳೆರುವ ರೇಖೆಗಳಿರುವ ರೇಖೆಯಾಗಿದೆ. ಹಣೆಯ ಮಧ್ಯಭಾಗದಿಂದ ಹುಬ್ಬುಗಳ ಮಧ್ಯೆ, ಮೂಗಿನ ತುದಿಯ ಮೂಲಕ ಕೊರಳಿನ ಮಧ್ಯ ವಕ್ಷಸ್ಥಳದ ಮಧ್ಯಭಾಗ, ಹಣೆಯ ಮೂಲಕ ಹೊಕ್ಕಳನ್ನು ಹಾದು ಮೇಢ್ರ ಮಧ್ಯದಿಂದ ತೊಡೆಗಳ ಮಧ್ಯೆ ಹಾದು ಸೂತ್ರವನ್ನು ತಲುಪುತ್ತದೆ. ಈ ರೇಖೆಯ ಎರಡು ಕಡೆಗಳಲ್ಲಿ ಬರುವ ಇತರ ಲಂಬ ಸೂತ್ರಗಳು ಸಮಾನಾಂತರವಾಗಿ ಪರಸ್ಪರ ಅನುರೂಪತೆಯನ್ನು ಹೊಂದಿರುತ್ತವೆ.

ಮಧ್ಯಸೂತ್ರ ಅಥವಾ ಕಾಯ ಮಧ್ಯಸೂತ್ರ

ಇಂದು ಪೂರ್ವಸೂತ್ರ ಹಿಂದೆ, ದೇಹದ ಮಧ್ಯಭಾಗದಲ್ಲಿ ಹಾದುಹೋಗುತ್ತದೆ. ಇದನ್ನು ಬ್ರಹ್ಮಸೂತ್ರ ಹಾಗೂ ಶಿವಸೂತ್ರವೆಂದೂ ಕರೆಯುತ್ತಾರೆ. ಇದು ಆಕ್ಮಲೆಯ ಮೇಢ್ರ ಮಧ್ಯೆದಲ್ಲಿ ಅಂತ್ಯಗೊಳ್ಳುತ್ತದೆ. ದೇಹದ ಮಧ್ಯಭಾಗದಲ್ಲಿ ಕೊನೆಗೊಳ್ಳುವುದರಿಂದ ಇದನ್ನು ಕಾಯಮಧ್ಯ ಸೂತ್ರ ಎಂದು ಹೇಳುತ್ತಾರೆ.

ಪುಟಪರ್ಯಂತ ಸೂತ್ರ

ಮಧ್ಯೆ ಸೂತ್ರದ ಎರಡು ಕಡೆಗಳಲ್ಲೂ (ಎಡ ಮತ್ತು ಬಲ) ಸಮಾನ ಲಂಬವಾಗಿರುವ ಈ ಸೂತ್ರವು ಮೂಗಿನ ಹೊಳ್ಳೆಗಳ ಪಾರ್ಶ್ವವನ್ನು ಸ್ಪರ್ಶಿಸುತ್ತದೆ. ಈ ಸೂತ್ರವು ಕಣ್ಣಿನ ಒಳಭಾಗದಲ್ಲಿ ಲಂಬವಾಗಿ ಹಾದುಹೋಗುವುದರಿಂದ ಇದನ್ನು 'ದ್ವಿಗಂತರಿ'ಸೂತ್ರ ಎಂದು ಕರೆಯುತ್ತಾರೆ.

ವಕ್ರ ಬಾಹ್ಯಸೂತ್ರ

ಬಾಯಿ ಅಂಚನ್ನು ಸ್ಪರ್ಶಿಸುತ್ತಾ ಲಂಬವಾಗಿರುವ ಸೂತ್ರವಿದೆ. ಮಧ್ಯೆ ಸೂತ್ರದ ಎಡ ಮತ್ತು ಬಲ ಎರಡು ಕಡೆಗಳಲ್ಲಿ ಹರಿಯುತ್ತವೆ.

ನೇತ್ರಾಪರ್ಯಂತ ಸೂತ್ರ

ಬಾಯಿಯ ಅಂಚನ್ನು ಸ್ಪರ್ಶಿಸುತ್ತಾ ಲಂಬವಾಗಿ ಹರಿಯುವ ಈ ಸೂತ್ರ ಎರಡು ಕಣ್ಣುಗಳ ಹೊರ ಅಂಚನ್ನು ಲಂಭಮಾನದಲ್ಲಿ ಸ್ಪರ್ಶಿಸುತ್ತದೆ.

ಮುಖಪರ್ಯಂತ ಸೂತ್ರ

ಮುಖದ ಎರಡು ಪಕ್ಕಗಳಲ್ಲಿ ಕಿವಿಗಳ ಮೂಲಗಳನ್ನು, ಕೆನ್ನೆಗಳನ್ನು ಸ್ಪರ್ಶಿಸುತ್ತಾ ಲಂಬಮಾನದಲ್ಲಿ ಹಾದುಹೋಗುವ ಸೂತ್ರವಿದು.

ಕರ್ಣಸೂತ್ರ

ಈ ಸೂತ್ರವು ಮಧ್ಯೆಸೂತ್ರದ ಎಡ ಮತ್ತು ಬಲಗಳಲ್ಲಿ ಸಮಾನಂತರವಾಗಿ ಕಿವಿಗಳ ಭಾಗವನ್ನು ಸ್ಪರ್ಶಿಸುತ್ತಾ ಲಂಬವಾಗಿ ಹಾದೂ ಹೋಗುತ್ತದೆ.

ರಕ್ಷಪರ್ಯಂತ ಸೂತ್ರ

ಮಧ್ಯೆ ಸೂತ್ರದಿಂದ ಸಮಾನ ದೂರದಲ್ಲಿ ಎರಡು ಕಡೆಗಳಲ್ಲಿ ಕುಳ ಮೂಲಕ ಹಾದುಹೋಗುವ ಸೂತ್ರ. ಈ ಸೂತ್ರಗಳು ಭುಜದ ಒಳಭಾಗವನ್ನು ಸ್ಪರ್ಶಿಸುತ್ತಾ ಲಂಬವಾಗಿ ಹಾದುಹೋಗುತ್ತದೆ. ಮೇಲಿನ ತೋಳಿನ ಒಳಸೀಮೆಯನ್ನು ಇದು ನಿರ್ದೇಶಿಸುವುದರಿಂದ ಇದನ್ನು ಅಂತರ್ ಭುಜಾವಧಿಸೂತ್ರ ಎಂದು ಕರೆಯುತ್ತಾರೆ.

ಬಾಹು ಪರ್ಯಂತ ಸೂತ್ರ ಅಥವಾ ಕಕ್ಷಭ್ಯಾಂತರ ಸೂತ್ರ

ಭುಜಗಳ ಹೊರಭಾಗಗಳನ್ನು ಮಧ್ಯೆಸೂತ್ರದಿಂದ ಎಡ ಮತ್ತು ಬಲ ಭಾಗಗಳಲ್ಲಿ ಸಮಾನಾಂತರ ದೂರದಲ್ಲಿ ಸ್ಪರ್ಶಿಸುವ ರೇಖೆಗಳಿವು. ಈ ಲಂಬರೇಖೆಗಳು ಕಂಕುಳದಿಂದ ಬಾಹುವಿನ ಹೊರಭಾಗವನ್ನು ನಿರ್ದೇಶಿಸುವುದರಿಂದ ಇದನ್ನು ಕಕ್ಷಾಭ್ಯಂತರ ಸೂತ್ರವೆನ್ನುತ್ತಾರೆ.

ಪರಭುಜಾವಧಿ ಸೂತ್ರ

ಈ ಸೂತ್ರವು ತೋಳಿನ ಹಿಂಭಾಗದ ಸೀಮೆಯನ್ನು ಸೂಚಿಸುತ್ತದೆ. ಈ ರೇಖೆಗಳು ಮಧ್ಯಸೂತ್ರದಿಂದ ಸಮಾನ ದೂರದಲ್ಲಿ ಅದರ ಎಡ ಬಲಗಳಲ್ಲಿ ಹರಡಿಕೊಂಡಿರುತ್ತದೆ. ಹೀಗೆ ಚಿತ್ರದ ಮೇಲೆ ಅಡ್ಡವಾಗಿ ಮತ್ತು ಉದ್ದುದ್ದವಾಗಿ ರೇಖೆಗಳನ್ನು ಕಲ್ಪಿಸಿಕೊಂಡು ಚಿತ್ರದ ಉದ್ದ-ಅಗಲಗಳನ್ನು ಕಲ್ಪಸಿಕೊಂಡು ಚಿತ್ರದ ಉದ್ದ-ಅಗಲಗಳನ್ನು ತಾಳಮಾನ ಕ್ರಮದಲ್ಲಿ ಗುರುತಿಸಲಾಗಿದೆ.

ಪ್ರಮಾಣಗಳು

ಇನ್ನು ಯಾವ ಯಾವ ಚಿತ್ರಗಳನ್ನು ಯಾವ ಯಾವ ಅಳತೆಯಲ್ಲಿ ಚಿತ್ರಿಸಬೇಕು ಎಂದು ಸಹ ಶಿಲ್ಪಶಾಸ್ತ್ರಗಳು ಹೇಳಿವೆ. ಕಾಶ್ಯಪ ಶಿಲ್ಪಶಾಸ್ತ್ರವು ಉತ್ತಮ ದಶತಾಲದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಚಿತ್ರಸಬೇಕು. ಮಧ್ಯಮ ದಶತಾಲದಲ್ಲಿ ಉಮಾ, ಸರಸ್ವತಿ, ಉಷಾ, ಭೂಮಿ, ದುರ್ಗಾ, ಲಕ್ಷ್ಮೀ ಸಪ್ತಮಾತೃಕೆಯರು ಜೇಷ್ಠಾದೇವಿ ಮುಂತಾದ ಸ್ತ್ರೀದೇವತೆಗಳನ್ನು ಚಿತ್ರಸಬೇಕು. ಅಥವಾ ದಶತಾಲದಲ್ಲಿ ಚಂದ್ರ, ಆದಿತ್ಯ, ಅಶ್ವಿನ, ದೇವತೆಗಳು, ಋಷಿಗಳು ಇತರೆ ಗ್ರಹ ದೇವತೆಗಳು ಅಯ್ಯಪ್ಪಸ್ವಾಮಿ, ಸುಬ್ರಹ್ಮಣ್ಯ, ಚಂದ್ರೇಶ್ವರ ಮುಂತಾದ ದೇವತೆಗಳನ್ನು ಚಿತ್ರಸಬೇಕು ಎನ್ನಲಾಗಿದೆ. ಈ ರೀತಿ ಪೂರ್ವಾಂಗದಲ್ಲಿ ಗಮನಿಸಿದ ಎಲ್ಲ ಅಂಶಗಳನ್ನು ಲಕ್ಷದಲ್ಲಿಟ್ಟುಕೊಂಡು ಉತ್ತರಾಂಗದಲ್ಲಿ ಅದಕ್ಕನುಸಾರವಾಗಿ ಚಿತ್ರರಚನೆಯನ್ನು ಪ್ರಾಚೀನರು ಮಾಡುತ್ತಿದ್ದರು. ಎಂಬ ಅಂಶಗಳು ತಿಳಿದುಬರುತ್ತವೆ. ಹಾಗೆನೇ ಕರಾವಳಿ ಭಾಗದಲ್ಲಿನ ಚರ್ಚ್‌ನಲ್ಲಿರುವ ಭಿತ್ತಿಚಿತ್ರಗಳಲ್ಲಿಯೂ ಕೂಡ ಅನೇಕ ಬಗೆಯ ಮಾನವಾಕೃತಿಯನ್ನು ನೋಡುವುದರ ಜೊತೆಗೆ ಗೋಡೆಯ ಮೇಲೆ ರಚಿಸಿದ ಕಲಾಕೃತಿಗಳು ಇತಿಹಾಸವನ್ನು ಸೃಷ್ಟಿಸುವತ್ತ ವಾಲಿದ್ದಾವೆ.[೪] ಈ ಚಿತ್ರಗಳ ಮೂಲಕ ಪ್ರಾಚೀನವಾದ ಚಿತ್ರರಚನಾ ಪರಂಪರೆಯೊಂದನ್ನು ತಿಳಿಸಿಕೊಡುವ ಪ್ರಯತ್ನ ಇಲ್ಲಿದೆ.

ಪ್ರಾರ್ಥನಾ ಮಂದಿರ

ಮಂಗಳೂರಿನ ಸೆಂಟ್ ಅಲೋಶಿಯಸ್ ಕ್ರೈಸ್ತ ಚರ್ಚಿನ ಮುಖ್ಯ ದ್ವಾರಬಾಗಿಲಿನಿಂದ ಹೋಗುವ ಮಧ್ಯದ ದಾರಿಯಲ್ಲಿ ಈ ಧರ್ಮದ ದೇವದೂತರಾದ ಯೇಸುವಿನ ಮೂರ್ತಿಯು ಕಂಡುಬರುತ್ತಿದ್ದು, ಜೊತೆಗೆ ಪ್ರಾರ್ಥನ ಮಂದಿರದಲ್ಲಿ ಸೆಂಟ್ ಅಲೊಷಿಯಸ್‌ನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಎಡ ಮತ್ತು ಬಲ ಭಾಗದಲ್ಲಿ ಭಿತ್ತಿಚಿತ್ರಗಳನ್ನು ಕಾಣಬಹುದಾಗಿದೆ. ಸಂತ ಎಲೋಷಿಯಸ್ ಇರುವ ಮೂರ್ತಿಯ ಕೆಳಗೆ ನಾಲ್ಕು ವ್ಯಕ್ತಿಗಳ ಶಿಲ್ಪಗಳಿರುವುದನ್ನು ಕಾಣಬಹುದು. ಭಿತ್ತಿ ಚಿತ್ರಗಳು ಶಿಲ್ಪಗಳಂತೆ ಕಂಡರೂ ಇಲ್ಲಿ ಶಿಲ್ಪಗಳು ತುಂಬಾ ಕಡಿಮೆ ಕಲಾಕೃತಿಗಳ ಆಗರದಂತಿರುವ ಈ ಚರ್ಚ್‌ನಲ್ಲಿ ಸೌಂದರ್ಯ ತುಂಬಿದೆ. ಅದಕ್ಕೆ ಕಾರಣ ಇಲ್ಲಿನ ಆಡಳಿತ ಪ್ರಮುಖವಾಗಿ ಗೋಡೆಗಳ ಮೇಲೆ ಭಿತ್ತಿ ಚಿತ್ರಗಳು ಅಲ್ಪ ಮಟ್ಟಕ್ಕೆ ಮಾಸಿರುವುದು. ಶತಮಾನಗಳು ಕಳೆದೆ ಹೋಗಿರುವುದರಿಂದ, ಆದರೆ ಕೆಲವೇ ದಿನಗಳ ಹಿಂದೆ ಎಲ್ಲಾ ಕಲಾಕೃತಿಗಳನ್ನು ಇಳಿಸಿ, ಮೈ ಒರೆಸುವುದರೊಂದಿಗೆ ಕಿತ್ತು ಹೋಗಿರುವಂತಹ ಕಲಾಕೃತಿಗಳಿಗೆ ಜೋಡಣೆಮಾಡಿರುವುದು ಹಾಗೆಯೇ ಶತಮಾನಗಳ ಕಲಾಕೃತಿಗಳೂ ದಶಕದ ರೀತಿ ಗೋಚರಿಸುತ್ತಿವೆ.

---

೪. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪಿಎಚ್.ಡಿ ಮಹಾಪ್ರಬಂಧ.

ಈ ಪ್ರಾರ್ಥನಾ ಮಂದಿರದ ಮುಂಭಾಗ, ಮೇಲ್ಛಾವಣಿ ಹಾಗೂ ಅಕ್ಕಪಕ್ಕಗಳಲ್ಲಿ ಭಿತ್ತಿಚಿತ್ರ ಹಾಗೂ ಬಟ್ಟೆ ಮೇಲೆ ರಚಿಸಿರುವ ಕ್ರೈಸ್ತ ಧರ್ಮದ ರೂವಾರಿಗಳು, ಪಾದ್ರಿಗಳು, ದೇವದೂತರು, ಯೇಸುವಿನ ಹನ್ನೆರಡು ಮಂದಿ ಶಿಷ್ಯಂದಿರರು ಹಾಗೂ ಯೇಸುವಿನ ಪವಾಡಗಳು, ಯೇಸುವಿಗೆ ಚಿತ್ರ ಹಿಂಸೆಕೊಡುತ್ತಿರುವ ವಿರೋಧಿಗಳು ತಾಯಿ ಮತ್ತು ತಂದೆಯ ಜೊತೆ, ಯೇಸು, ಮೇರಿ ಮತ್ತು ಯೇಸು, ಅಲೋಷಿಯಸ್ ಬೋಧನೆ ಮಾಡುತ್ತಿರುವುದು. ಜ್ಞಾನ ಸ್ನಾನ, ನೀರನ್ನು ದ್ರಾಕ್ಷಿರಸ ಮಾಡಿದ ಸನ್ನಿವೇಶ, ಯೇಸುವು ಜನರಿಗೆ ಮಕ್ಕಳ ಕುರಿತು ಅರಿವು ಮೂಡಿಸುವುದು. ಗಾಡ್ ಆಫ್ ದ ಫಾದರ್, ಕಪ್ಪು ಅಲೋಷಿಯಸ್‌ನು ಅಧಿಕಾರವನ್ನು ತ್ಯಾಗಮಾಡುತ್ತಿರುವುದು. ಹೀಗೆ ನೂರಾರು ಚಿತ್ರಗಳನ್ನು ಈ ಪ್ರಾರ್ಥನ ಮಂದಿರದ ಮುಂಭಾಗದಲ್ಲಿ ಕಾಣಬಹುದಾಗಿದೆ. ಇಲ್ಲಿನ ಕಂಬಗಳಲ್ಲಿಯು ಭಿತ್ತಿಯ ಚಿತ್ರಕಲೆ ಇರುವುದನ್ನು ಕಾಣಬಹುದಾಗಿದ್ದು, ಕಿಟಕಿಗಳಲ್ಲಿ ಸ್ಟೈನ್ಡ್ ಗ್ಲಾಸ್‌ಗಳನ್ನು ಹೊಂದಿಸಲಾಗಿದ್ದು, ಅವುಗಳಲ್ಲಿಯು ಚಿತ್ರರಚನೆಮಾಡಿರುವುದನ್ನು ಕಾಣಬಹುದಾಗಿದೆ.

ಈ ಚರ್ಚ್‌ನ ಒಳಬಾಗಿಲಿನಿಂದ ಫಾದರ್‌ಗಳು ಅಥವಾ ಗಾಯಕರು ಕೋರುವ ಸ್ಥಳದವರೆಗೂ ಒಂದು ಮಧ್ಯಂಕಣ ಎರಡು ಅಥವಾ ನಾಲ್ಕು ಇಕ್ಕೆಲದ ಹಜಾರಗಳು ಅರ್ಧವೃತ್ತಾಕಾರದ ಉಚ್ಛಸ್ಥಾನಗಳಲ್ಲದೇ ಕೆಲವೊಮ್ಮೆ ಶಿಲುಬೆಯಾಕಾರದ ಅಷ್ಟಭಾಗ ದೇವಾಲಯದ ಮುಖಮಂಟಪದ ತೊಟ್ಟಿಯ ಬಳಿ ಅಂತಸ್ತುಳ್ಳ ಅರ್ಧವೃತ್ತಾಕಾರದ ಉಚ್ಛಾಸಗಳ ಮೇಲೆ ಮಾತ್ರ ಗುಮ್ಮಟಾಕಾರದ ಛಾವಣಿ ಇದ್ದು, ಈ ಕಟ್ಟಡಗಳಲ್ಲಿ ಬೀದಿಯ ಕಡೆಗಿರುವ ಮುಂಭಾಗ ಮತ್ತು ಗೋಡೆಯ ಕಂಭಗಳ ಮುಖಮಂಟಪಗಳ ಮೇಲೆ ತ್ರಿಕೋನಾಕೃತಿಯ ರಚನೆಯು ಅಲಂಕಾರ ಇತ್ಯಾದಿಗಳನ್ನು ಈ ಸಂದರ್ಭಗಳಲ್ಲಿ ಹೆಚ್ಚು ಹೆಚ್ಚಾಗಿ ಅಳವಡಿಸಿಕೊಳ್ಳಲಾಗಿದೆ. ಮುಂದಿನ ಬಲಬದಿಯಲ್ಲಿ ಬಲಿಪೀಠವನ್ನು ಕತ್ತಲೆ ಇರುವುದರ ಕಾರಣ ಸಿಗುವುದಿಲ್ಲ. ಜೊತೆಗೆ ಈ ಕಟ್ಟಡಗಳು, ಮಧ್ಯಂಗಣ, ಮುಂಭಾಗದಲ್ಲಿ ಜೊಡಣೆ ಭೋದಿಕೆಗಳಿಂದ ಕೂಡಿದೆ. ಕಂಭ ಸಾಲುಗಳ ಸೇರ್ಪಡೆಗಳಿಂದ ಆಕಾರ ಹಾಗೂ ವಿಸ್ತರಣೆಗಳಲ್ಲಿ ಅಸಮರೂಪವನ್ನು ತಾಳಿದವು. ಕ್ರಮೇಣ ಅಸಮರೂಪ ರಚನೆ ಒಂದು ಶೈಲಿಯಾಗಿ ಉಳಿಯಿತು. ಹಾಗೆಯೇ ಮೇಲಿನ ಛಾವಣಿ, ಕಂಬಗಳು, ಗೋಡೆಗಳ ಎಲ್ಲಾ ಕಡೆಗಳಲ್ಲಿಯೂ ಕೂಡ ಚಿತ್ರವಿನ್ಯಾಸಗಳನ್ನು ಕಾಣಬಹುದು. ಕರಾವಳಿ ಕರ್ನಾಟಕದಲ್ಲಿರುವ ಅತಿ ದೊಡ್ಡ ಚರ್ಚ್ ಸೆಂಟ್ ಅಲೋಷಿಯಸ್ ಎಂದೇಳಬಹುದು. ವಿಶೇಷವಾಗಿ ಚಿತ್ರಕಲೆಯ ಆಗರವನ್ನೊತ್ತಿರುವುದು ಕ್ರೈಸ್ತಧರ್ಮದ ಬಲಿಷ್ಠ. ಇಲ್ಲಿರುವ ೮ ದಿಕ್ಕುಗಳಲ್ಲಿಯು ಭಿತ್ತ ಹಾಗೂ ಚಿತ್ರಕಲೆಯನ್ನು ಕಾಣಬಹುದಾಗಿದೆ.

ಯೇಸು ಮತ್ತು ಗರುಡ

ಈ ಕಲಾಕೃತಿಯು ಸುಮಾರು ೮ ಅಡಿ ಅಗಲ ೧೦ ಉದ್ದವಿರುವ ಅಡಿವುಳ್ಳದ್ದಾಗಿದ್ದು, ತೈಲವರ್ಣದಿಂದ ರಚನೆಮಾಡಲಾಗಿದ್ದು, ಪ್ರಮುಖವಾಗಿ ಈ ಕಲಾಕೃತಿಯಲ್ಲಿ ಯೇಸು ಮತ್ತು ಗರುಡ ಪಕ್ಷಿ ಇರುವುದನ್ನು ಚಿತ್ರಿಸಲಾಗಿದೆ. ಎಡಗೈಯಲ್ಲಿ ಪುಸ್ತಕವಿದ್ದು, ಬಲಗೈಯಲ್ಲಿ ಪೆನ್ನನ್ನು ಹಿಡಿದಿರುವುದು ಹಾಗೆಯೇ ಯೇಸುವು ಮೇಲೆ ಆಕಾಶ ನೋಡುತ್ತಿರುವಂತೆ ಕಾಣುತ್ತದೆ ರೆಕ್ಕೆ ಬಿಚ್ಚಿಹಾರುತ್ತಿರುವ ಗರುಡವನ್ನು ಸ್ಪಷ್ಟವಾಗಿ, ಬಲಿಷ್ಟವಾಗಿರುವಂತೆ ಚಿತ್ರಿಸಲಾಗಿದೆ. ದೇವಮಾನವನನ್ನೆ ವೀಕ್ಷಿಸುತ್ತಿದೆ. ಈ ಸ್ವಾಮಿ ಮಾತ್ರ ಏನೋ ಆಲೋಚನೆಯಲ್ಲಿ ಬರೆಯುವ ಮುನ್ನ ಯೋಚಿಸುವ ಪರಿ ಇದ್ದು, ಕಲಾವಿದನ ಸೃಜನಶೀಲತೆ ಮೆರೆದಾಡಿದೆ ಏಕೆಂದರೆ ಬಣ್ಣಗಳ ಲೋಕವೇ ಇಲ್ಲಿ ಸೃಷ್ಟಿಯಾಗಿದೆ. ಸೆಂಟ್ ಎಲೋಷಿಯಸ್ ಚರ್ಚ್‌ವೊಂದರ ಬಲಭಾಗದಲ್ಲಿರುವ ಈ ಕೃತಿಯಲ್ಲಿ ಹಳದಿ, ಕೆಂಪು, ನೀಲಿ, ಬಿಳಿ, ಕಂಪ್ಪು, ವರ್ಣಗಳಿಂದ ಚಿತ್ರಸಲಾಗಿದೆ. ಮೇಲ್ಮುಖಮಾಡಿರುವ ಯೇಸು ನೈಜವಾಗಿ ಮೂಡಿಬಂದು ಬಣ್ಣಗಳ ಸಂಯೋಜನೆಯಿಂದ ಈ ಕೃತಿಯು ಸಮತೋಲನವಾಗಿದೆ, ಗೋದಿ ಕೆಂಪು ಮೈಬಣ್ಣವನ್ನು ಹೊಂದಿದ ಯೇಸು, ಏನೋ ಬರೆಯಲು ಮುಂದಾಗಿರುವಂತೆ ಬ್ರಾಸವಾಗಿರುವುದಂತೂ ಸತ್ಯ. ಹಳದಿ ವರ್ಣದಿಂದ ಕೂಡಿದ ಶಾಲನ್ನು ಹೊದಿಕೆಯಾಗಿ ಬಳಸಿದ್ದಾನೆ. ನೀಲಿವರ್ಣದ ನಿಲುವಂಗಿ ಧರಿಸಿದ್ದು, ಈ ಚಿತ್ರದಲ್ಲಿ ನೋಡಬಹುದಾಗಿದೆ. ಜೊತೆಯಲ್ಲಿ ಗರುಡವು ಯೇಸುವಿನ ಮುಖವನ್ನು ನೋಡುತ್ತಾ ಹಾರುತ್ತಿರುವಂತೆ ಚಿತ್ರಿಸಲಾಗಿದೆ. ಮುಖ್ಯವಾಗಿ ಕಲಾಕೃತಿಯು “ಸೆಂಟ್ ಅಲೋಷಿಯಸ್ ಚರ್ಚ್”ನಲ್ಲಿ ಸಂಗ್ರಹಗೊಂಡಿದ್ದು, ನೆರಳು ಬೆಳಕಿನಿಂದ ಕೂಡಿದ್ದಾಗಿದ್ದು, ಪರಿಪಕ್ವತೆಯ ನರ್ತನೆಯಿಂದ ಕಂಗೋಳಿಸುತ್ತಿದೆ.

ಪಂಜರವನ್ನು ಹಿಡಿದಿರುವ ಬಾಲಕಿ

ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನಲ್ಲಿರುವ ಈ ಕಲಾಕೃತಿಯ ಉದ್ದ ೪ ಅಡಿ ಇದ್ದು, ಅಗಲ ೩ ಅಡಿ ಇರುತ್ತದೆ. ಇಲ್ಲಿ ಯೇಸು ಸ್ವಾಮಿಯು ಜನರಿಗೆ ಬೋಧಿಸುತ್ತಿರುವ ಸಂದರ್ಭದಲ್ಲಿ ಒಂದು ಮಗು ಶಾಂತಿ ಸಂಕೇತದ ಪ್ರತಿರೂಪ ಪಾರಿವಾಳವನ್ನು ಒಂದು ಗೂಡಿನಲ್ಲಿ ಹಾಕಿಟ್ಟುಕೊಂಡಿರುವುದು. ಇದನ್ನು ತೈಲವರ್ಣದಿಂದ ಚಿತ್ರಿಸಲಾಗಿದ್ದು, ಸನ್ನಿವೇಸದ ಒಂದು ಭಾಗವಾಗಿದೆ. ಮಗು ಗಂಭೀರತೆಯನ್ನು ಹೊಂದಿದ್ದು, ಎದುರಿಗೆ ನಿಂತಿರುವ ಜನರತ್ತ ತನ್ನ ನೇರ ನೋಟವನ್ನು ಪ್ರದರ್ಶಿಸಿದ್ದಾಳೆ. ಒಂದು ಪಂಜರದ ಮೇಲೆ ಕುಳಿತು ತನ್ನ ತೊಡೆಯ ಮೇಲೆ ಪಕ್ಷಿ ಇರುವ ಪಂಜರವನ್ನು ಹಿಡಿದುಕೊಂಡಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ವರ್ಣಗಳಲ್ಲಿ ಮುಖ್ಯವಾದ, ಶ್ವೇತವರ್ಣವೆಂದೆ ಕರೆಯುವ ಬಿಳಿ ಬಟ್ಟೆಯನ್ನು ಧರಿಸಿರುವ ಹುಡುಗಿಯು ಪಾರಿವಾಳದ ಬಣ್ಣವನ್ನೇ ಹೊಂದಿದ್ದಾಳೆ.

ಸೌಮ್ಯವರ್ಣಗಳಿಂದ ಸೃಜನಶೀಲತೆಯ ನೈಜತೆಯಿಂದ ಚಿತ್ರರಚನೆ ಮಾಡಲಾಗಿದೆ. ಕೆಂಪು, ಹಳದಿ, ಬೂದುಬಣ್ಣ ನೀಲಿ, ಆಕಾರ್ ಎಲ್ಲೊ ಕಪ್ಪು, ಆರೆಂಜ್ ಹೀಗೆ ವಿವಿಧ ಬಣ್ಣಗಳನ್ನು ಈ ಕಲಾಕೃತಿಗೆ ಬಳಸಿಕೊಳ್ಳಲಾಗಿದೆ. ಕೈಯಲ್ಲಿಡಿದಿರುವ ಪಂಜರವು ಸಣ್ಣ ಸಣ್ಣ ಪಟ್ಟಿಕೆಗಳು ಹಳದಿ ವರ್ಣದಿಂದ ಕೂಡಿದೆ. ಹುಡುಗಿಯ ಹಿಂಭಾಗದಲ್ಲಿ ಮತ್ತೊಬ್ಬ ವ್ಯಕ್ತಿಯು ಇದ್ದು, ಅದು ಅಪೂರ್ಣವೆನಿಸಿದೆ. ಬಟ್ಟೆಗೆ ನೀಲವರ್ಣವನ್ನು ಬಳಸಲಾಗಿದ್ದು, ಕೈಯಲ್ಲಿ ಬಿಳಿವರ್ಣದ ಸರವನ್ನು ಹಿಡಿದಂತೆ ಕಾಣುತ್ತಿದೆ. ಹಿಂಬಾಗದಲ್ಲಿ ತೆಳುವರ್ಣದ ಬಿಳಿ ಮತ್ತು ಕಪ್ಪು ವರ್ಣವನ್ನು ಬಳಸಲಾಗಿದೆ. ಒಟ್ಟಾರೆಯಾಗಿ ಈ ಕಲಾಕೃತಿಯಲ್ಲಿ ನೆರಳು-ಬೆಳಕಿನ ಪ್ರಭಾವ ತುಂಬಾ ಗಂಭೀರವಾಗಿದ್ದುದರಿಂದ ಕಲಾಕೃತಿಯು ತನ್ನ ತನವನ್ನು ತೋರ್ಪಡಿಸಲು ಇಚ್ಚಿಸುತ್ತದೆ. ೧೯೮೮ರಲ್ಲಿ ಈ ಚಿತ್ರವನ್ನು ರಚಿಸಲಾಗಿದೆ.

ಸೆಂಟ್ ಪ್ಯಾಟ್ರಿಕ್ ಪೆಟ್ರಾನ್ ಮತ್ತು ಸೆಂಟ್ ಹೆಡ್ಮಂಡ್

ಸೆಂಟ್ ಅಲೋಶಿಯಸ್‌ನ ಮಂಗಳೂರಿನಲ್ಲಿರುವ ಈ ಕಲಾಕೃತಿಯು ಭಿತ್ತಿ ಚಿತ್ರವಾಗಿದ್ದು, ಸುಮಾರು ೮ x ೧೦ ಅಡಿವುಳ್ಳದ್ದಾಗಿದೆ. ಐರ್ಲ್ಯಾಂಡ್‌ನ ಸೆಂಟ್ ಪ್ಯಾಟಿಕ್ ಪೆಟ್ರಾನ್ ಮತ್ತು ಈಸ್ಟ್ ಎಂಜಿಲಾದ ಸೆಂಟ್ ಹೆಡ್ಮಂಡ್‌ನ ರಾಜರ ಚಿತ್ರವಾಗಿದೆ. ಕಲಾಕೃತಿಯ ಎಡಭಾಗದಲ್ಲಿರುವ ಪೆಟ್ರಾನ್‌ನು ಕೈಯಲ್ಲಿ ಬೈಬಲ್ ಹಿಡಿದಿರುವುದನ್ನು ಕಾಣಬಹುದು. ಈತನು ಒಬ್ಬ ಪಂಡಿತನಾಗಿದ್ದು, ಕೆಂಪು ಬಟ್ಟೆಯನ್ನು ಧರಿಸಿದ್ದು, ಅದರಲ್ಲಿ ಬಿಳಿ ಬಟ್ಟೆ ಇದ್ದು, ಪಟ್ಟಿಯ ಮೇಲೆ ಶಿಲುಬೆಯಾಕಾರದ ಚಿಹ್ನೆಯನ್ನು ನೋಡಬಹುದಾಗಿದೆ. ಹಳದಿಯ ಟೋಪಿಯನ್ನು ಧರಿಸಿರುವ ಇವನು ಕೈಯಲ್ಲಿನ ಪುಸ್ತಕವು ನೀಲಿ ಬಣ್ಣದಿಂದ ಕೂಡಿದ್ದಾಗಿದೆ. ತಲೆಯನ್ನು ತಗ್ಗಿಸಿರುವ ಪೆಟ್ರಾನ್‌ನು ಕೆಂಪು ವಸ್ತ್ರವನ್ನು ಧರಿಸಿದ್ದು, ಅದರಲ್ಲಿ ಮಡಿಚಿಕೆಗಳು ನೆರಳು-ಬೆಳಕಿನ ನೈಜತೆಯನ್ನು ಕಲಾವಿದ ಸುಂದರವಾಗಿ ಲೇಪನ ಮಾಡಿದ್ದಾನೆ. ಇವನ ತಲೆಯ ಹಿಂದೆ ವೃತ್ತಾಕಾರದ ಕಿರೀಟದ ಹಾಗೆ ತೋರುವ ಒಂದು ವೃತ್ತ ಸುಂದರವಾಗಿದೆ. ಪಂಡಿರ ಪಕ್ಕದಲ್ಲಿ ಇನ್ನೊಬ್ಬ ಪಾದ್ರಿ ಹೆಡ್ಮಂಡ್‌ರ ಚಿತ್ರವಿದ್ದು ಇಬ್ಬರು ಜೊತೆಯಲ್ಲಿಯೇ ನಿಂತಿರುವಂತೆ ಕಂಡುಬರುತ್ತಿದೆ. ಹೆಡ್ಮಂಡ್‌ನ ಕೈಯಲ್ಲಿ ಖಡ್ಗವಿದ್ದು, ಇನ್ನೊಂದು ಕೈಯಲ್ಲಿ ಗಿಡದ ಟೊಂಗೆಯನ್ನು ಹಿಡಿದಿದ್ದಾನೆ. ಈ ಕಲಾಕೃತಿಯು ತುಂಬಾ ಸುಂದರವಾಗಿದ್ದು, ಹೆಡ್ಮಂಡ್‌ನು ಶಾಲು ಧರಿಸಿದ್ದು, ಅದು ಬಿಳಿವರ್ಣದಿಂದ ಕೂಡಿದೆ. ಬಟ್ಟೆ ಕಪ್ಪುವರ್ಣದ್ದಾಗಿದೆ. ಕಿರೀಟದಂತೆ ಕಾಣುವ ಟೊಪ್ಪಿಗೆಯನ್ನು ದರಿಸಿದ್ದಾನೆ. ಹಳದಿ ಬಣ್ಣದ ಸರವನ್ನು ಕೊರಳಲ್ಲಿರುವುದನ್ನು ಚಿತ್ರದಲ್ಲಿ ಕಾಣಬಹುದು. ಇವರಿಬ್ಬರು ಡಾಕ್ಟರ್ ಆಫ್ ಚರ್ಚ್‌ನ ಪಂಡಿತರು, ಇವರಿಬ್ಬರ ಹಿಂದೆ ದೊಡ್ಡ ಕಂಬಗಳಿದ್ದು, ಅವುಗಳಿಗೂ ವಿನ್ಯಾಸವನ್ನು ಚಿತ್ರಿಸಲಾಗಿದೆ. ಪಕ್ಕದಲ್ಲಿ ಬೂದಿ ಕೆಂಪು, ಬಿಳಿ, ಕಪ್ಪು, ಹಳದಿ ಚಾಂಬಳಿ ಮತ್ತು ಕಡುಗೆಂಪು ವರ್ಣಗಳನ್ನು

ಈ ಚಿತ್ರಗಳಿಗೆ ಬಳಸಲಾಗಿದೆ ಒಟ್ಟಾರೆಯಾಗಿ ಕೆಳಗಡೆ ನಿಂತು ವೀಕ್ಷಿಸಿದಾಗ ಆಕಾಶದಲ್ಲಿ ನಿಂತಿರುವಂತೆ ಬ್ರಾಸವಾಗುವುದಂತೂ ಸತ್ಯ ಈ ಕಲಾಕೃತಿಯನ್ನು ಭಿತ್ತಿ ಮಾಧ್ಯಮದಲ್ಲಿ ಗೋಡೆಯ ಮೇಲೆ ೧೯೬೯ರಲ್ಲಿ ರಚಿಸಿದ ಕಲಾಕೃತಿಯಾಗಿದೆ.

ಧನದ ಕೊಟ್ಟಿಗೆಯಲ್ಲಿ ಯೇಸುವಿನ ಜನನ

ಮಂಗಳೂರಿನ ಕೆಥೋಡ್ರಾಲ್‌ನಲ್ಲಿರುವ ಈ ಕಲಾಕೃತಿಯು ಸುಮಾರು ೧೦ x ೮ ಅಡಿ ಎತ್ತರವಿದ್ದು, ಭಿತ್ತಿ ಮಾಧ್ಯಮದ ಚಿತ್ರವಾದ್ದರಿಂದ ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಕ್ರಿಸ್ ಮಸ್ ದಿನದ ರಾತ್ರಿಯ ವೇಳೆಯಲ್ಲಿ ಧನದ ಕೊಟ್ಟಿಗೆಯಲ್ಲಿ ಯೇಸುವಿನ ಜನನವಾಯಿತು. ಈ ಕಲಾಕೃತಿಯಲ್ಲಿ ಸಂಯೋಜನೆ ಪ್ರಕಾಶಮಾನವಾದ ಬೆಳಕು ಹೊರಹೊಮ್ಮುತ್ತಿರುವುದು ಕಂಡುಬರುತ್ತದೆ. ಕೊಟ್ಟಿಗೆಯ ಒಳಗೆ ಮೇರಿಯು ತನ್ನ ಚೊಚ್ಚಲ ಮಗುವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡಿರುವ ದೃಶ್ಯವು ಸ್ಪಷ್ಟವಾಗಿದ್ದು, ರಾತ್ರಿವೇಳೆಯಲ್ಲಿ ಜನನವಾಗಿರುವಂತೆ ಸುತ್ತಲು ಕತ್ತಲು ಆವರಿಸಿರುವುದು ಸ್ಪಷ್ಟವಾಗಿ ರಾತ್ರಿಯಲ್ಲೆ ಜನನವಾಗಿದ್ದೆಂದೆಳಬಹುದು. ಸುತ್ತಲು ಕತ್ತಲಿದ್ದು, ಮೇರಿ ಮತ್ತು ಮಗು ಯೇಸುವಿಗೆ ಮಾತ್ರ ಪ್ರಕಾಶಮಾನದ ಅರಿವಿದ್ದಂತಿದೆ ಮೇರಿಯ ಹಿಂಬದಿಯಲ್ಲಿ ಒಬ್ಬ ಮುದುಕ ಕೈ ಜೋಡಿಸಿ ಮತ್ತು ಕೈಯಲ್ಲಿ ಕೋಲು ಹಿಡಿದು ನಿಂತಿರುವುದನ್ನು ಕಾಣಬಹುದು. ಎಲ್ಲರೂ ಆಸ್ಚರ್ಯವಾಗಿ ಯೇಸುವನ್ನು ನೋಡುತ್ತಿದ್ದು, ಮೇಲಿನ ಛಾವಣಿಯು ಕೆಂಪು ಮೋಡಗಳಂತೆ ಕಂಡು, ಬೆಂಕಿಯಂತೆ ಝುಳಪಿಸುತ್ತಿದೆ. ಅದಕ್ಕಾಗಿ ಕಲಾವಿದನು ಕೆಂಪು ಮಿಶ್ರಿತ, ಚಾಂಬಳಿ ಕಪ್ಪು ಬಣ್ಣವನ್ನು ಲೇಪಿಸಲಾಗಿದೆ. ಯೇಸುವಿನ ತಂದೆ ಜೋಸೆಫ್ ತುಂಬಾ ಗಂಭೀರವಾಗಿ ಮಗುವನ್ನು ವೀಕ್ಷಿಸುತ್ತಿದ್ದಾರೆ. ಬಿಳಿ, ನೀಲಿ, ಕಪ್ಪು, ಹಳದಿ, ಆಕಾರ್ ಎಲ್ಲೊ ಮುಂತಾದ ಬಣ್ಣಗಳ ಜೊತೆಗೆ ನೆರಳು ಬೆಳಕನ್ನು ಸೂಕ್ಷ್ಮವಾಗಿ ತೋರಿಸಿ ನೋಡುಗರ ಮನಗೆದ್ದಿರುವುದಂತೂ ನಿಜ. ಈ ಕಲಾಕೃತಿಯನನು ಆಂಟೋನಿ ಮೋಶ್ಚಿನಿಯು ೧೯೬೯ರಲ್ಲಿ ಕಲಾಕೃತಿಯನ್ನು ಚಿತ್ರಿಸಿದ್ದಾನೆ.

ಯೇಸುವಿನ ಜ್ಞಾನ-ಸ್ನಾನ

ಈ ಕಲಾಕೃತಿಯು ಹತ್ತು ಅಡಿ ಉದ್ದ, ಹನ್ನೆರಡು ಅಡಿ ಅಗಲ ಇದ್ದು, ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನ ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಸೆಂಟ್‌ಜಾನ್ ದಿ ಬ್ಯಾಕ್ಟೀಸನ್ ಮುಖಾಂತರ ಜೀಸಸ್‌ಗೆ ಜೋಡಾನ್ ನದಿಯದಡದಲ್ಲಿ ಜ್ಞಾನೋದಯವಾಗುತ್ತಿರುವ ದೃಶ್ಯ ಇದಾಗಿದ್ದು, ನದಿಯ ದಡದಲ್ಲಿ ಕುಳಿತಿರುವ ಯೇಸು ಇದರ ಆಳದಿಂದ ಬೆಳಕು ಮತ್ತು ದಿವ್ಯ ತೇಜಸ್ಸು ಹೊರಹೊಮ್ಮುವ ದೃಶ್ಯವನ್ನು ಈ ಕಲಾಕೃತಿಯು ಸೂಚಿಸುತ್ತದೆ. ಆತ್ಮದ ಸಂಕೇತವಾದ ಪಾರಿವಾಳವು ಆಕಾಶದಿಂದಿಳಿದು

ಬರುತ್ತಿರುವಂತೆ ಕಾಣುತ್ತಿದ್ದು, ಭಕ್ತರ ಸಮೂಹವೇ ಇಲ್ಲಿ ನೆರವೇರಿದೆ. ಸುಮಾರು ಭಕ್ತಾದಿಗಳು ಯೇಸುವಿನ ಭಕ್ತಿಗೆ ಶರಣಾದವರಂತೆ ಮುಂದೆನಾಗುವುದು ಎಂಬ ನಿರೀಕ್ಷೆಯಲ್ಲಿದ್ದಾರೆ. ಮೂರ್‍ನಾಲ್ಕು ಜನ ತಮ್ಮ ಮಕ್ಕಳನ್ನು ಎತ್ತಿಕೊಂಡಿದ್ದು, ಮೂವರು ಕೆಳಗಡೆ ಕುಳಿತುಕೊಂಡಿದ್ದಾರೆ. ಯೇಸುವು ಗಂಭೀರವಾಗಿ ತನ್ನ ಭಕ್ತಿಯಲ್ಲಿ ತೊಡಗಿದ್ದಾರೆ. ಎರಡು ಮೊಣಕಾಲೂರಿ ಎದೆಗೆ ತನ್ನ ಎರಡು ಕೈಗಳನ್ನಿತ್ತು ದ್ಯಾನಿಸುತ್ತಿರುವುದು ಕಾಣಬಹುದು. ಆಕಾಶವನ್ನು ನೀಲಿ ಬಣ್ಣದಿಂದ ತೋರಿಸಿ, ಮೋಡಗಳನ್ನು ಬೂದು ಬಣ್ಣಗಳಿಂದ ವರ್ಣಿಸಲಾಗಿದೆ. ಗಿಡಗಳನ್ನು ನೀಲಿ ಮತ್ತು ಹಸಿರು ಬಣ್ಣಗಳಿಂದ ಚಿತ್ರಿಸಿರುವುದು ವಿಶೇಷವಾಗಿದೆ. ಕೆಳಗಡೆ ಬರೀ ಮೈಯಲ್ಲಿ ಕುಳಿತಿರುವ ಮನುಷ್ಯನ ಮೈಯಲ್ಲಿರುವ ಗೆರೆಗಳು ಸಹಜವಾಗಿ ಕಾಣುವಂತೆ ಚಿತ್ರಿಸಿದ್ದಾರೆ. ದೇಹಕ್ಕೆ ಕೆಂಪು ಬಣ್ಣವನ್ನು ಲೇಪಿಸಿದ್ದಾರೆ. ಯೇಸು ಧರಿಸಿದ ಬಟ್ಟೆಯು ಕೆಂಪು ಮಿಶ್ರಿತ ಜಾಂಬಳಿ ಮತ್ತು ಸ್ವಲ್ಪ ಬೂದು ಬಣ್ಣದಲ್ಲಿರುವ ಶಾಲನ್ನು ಹೊದಿಸಲಾಗಿದೆ. ಪಕ್ಕದಲ್ಲಿರುವ ಒಬ್ಬ ಮುದುಕ ಟೋಪಿಯನ್ನು ಧರಿಸಿದ್ದಾನೆ. ಜೊತೆಗೆ ಹಳದಿ ಬಣ್ಣದ ಉಡುಪನ್ನು ಧರಿಸಿರುವುದು ಇನ್ನೊಬ್ಬ ಕಂದು ಕೆಂಪು ಬಣ್ಣದ ಉಡುಪನ್ನು ಧರಿಸಿ ಎರಡು ಕೈಯಿಂದ ನಮಸ್ಕರಿಸುವಂತೆ ಚಿತ್ರಿಸಲಾಗಿದೆ. ಆಕಾಶದಲ್ಲಿ ಮೋಡಗಳು ನೀಲಿ ಮತ್ತು ಬಿಳಿ ಇದ್ದು, ನೀರಿನಂತೆ ಹರಿಯುತ್ತಿದೆ. ಅದೇ ದೃಶ್ಯವು ನೀರಿನಲ್ಲಿ ಹಾಯ್ದುದರಿಂದ ನೀರಿನಲ್ಲಿ ಮೋಡಕಾಣುವಂತೆ, ಹೆಚ್ಚು ಬಿಳಿಯ ಬಣ್ಣದಿಂದ ಚಿತ್ರಿಸಲಾಗಿದೆ. ಕಪ್ಪು, ಬಿಳಿ, ನೀಲಿ ಕೆಂಪು, ಕಂದು, ಹಸಿರು, ಹಳದಿ ಕಂದು ಹೀಗೆ ಎಲ್ಲಾ ರೀತಿಯ ಬಣ್ಣಗಳಿಂದ ಈ ಕಲಾಕೃತಿಯನ್ನು ಸಂಯೋಜಿಸಿ ಯಶಸ್ವಿಯಾಗಿದ್ದಾರೆ. ಈ ಕಲಾಕೃತಿಯು ೧೯೦೦ಲ್ಲಿ ಆಂಟೋನಿ ಮೋಶ್ಚಿನಿಯವರು ರಚಿಸಿದ್ದಾರೆ.

ಸೆಂಟ್ ಕ್ಲೇರ್ (ಸಿಸ್ಟರ್) ಮತ್ತು ಮಕ್ಕಳು

ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನಲ್ಲಿರುವ ಈ ಕಲಾಕೃತಿಯು ೫ x ೭ ಅಡಿ ಎತ್ತರವಿದ್ದು, ದೊಡ್ಡ ಕಲಾಕೃತಿಯ ಒಂದು ಭಾಗವಾಗಿ ಮಾರ್ಪಟ್ಟಿದೆ. ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿಸಿರುವ ಈ ಕಲಾಕೃತಿಯು ಸೆಂಟ್ ಕ್ಲೇರ್ (ಸಿಸ್ಟರ್) ಮಕ್ಕಳಿಗೆ ಬೋಧನೆ ಮಾಡುತ್ತಿರುವ ದೃಶ್ಯ, ಇದರಲ್ಲಿ ೩ ವರ್ಷದ ಮಗುವೊಂದು ಸಿಸ್ಟರ್‌ನ ಮೊಣಕಾಲುಗಳ ಮೇಲೆ ಕೈ ಇಟ್ಟುನಿಂತಿದ್ದು, ಇದೇನು? ಎಂಬ ಪ್ರಶ್ನೆಯನ್ನು ಕೇಳುವಂತಿದೆ. ಹಾಗೆಯೇ ಪಕ್ಕದಲ್ಲಿ ಆರು ವರ್ಷದ ಹೆಣ್ಣು ಮಗುವಿದ್ದು, ಗಂಭೀರದಿಂದ ಮುಂದೆ ನೋಡುವಂತಿದೆ. ಈ ಇಬ್ಬರಿಗೂ ಸೆಂಟ್ ಕ್ಲೇರ್‌ಳು ಕ್ರೈಸ್ತಧರ್ಮದ ಅನುಯಾಯಿಗಳ, ಪಾದ್ರಿಗಳ ದೇವದೂತರ ಹಾಗೂ ಯೇಸು ಪವಾಡಗಳ ಕುರಿತು ಭೋದನೆ ನೀಡುತ್ತಿರುವಂತೆ ಕಂಡುಬರುತ್ತದೆ. ಸೆಂಟ್ ಕ್ಲೇರ್‌ಳ ತಲೆಯು ಸ್ವಲ್ಪಬಾಗಿದ್ದು, ಪುಸ್ತಕವನ್ನೇ ದಿಟ್ಟಿಸಿ ನೋಡುವಂತಿದೆ ಬಿಳಿಯ

ಬಟ್ಟೆಯನ್ನು ತಲೆಗೆ ಸುತ್ತಿಕೊಂಡಿದ್ದು, ಕುತ್ತಿಗೆಯಲ್ಲೂ ಅದೇ ವಸ್ತ್ರವನ್ನು ಸುತ್ತಿಕೊಂಡಿದ್ದಾರೆ. ಕಪ್ಪು ಬಟ್ಟೆಯನ್ನು ಧರಿಸಿರುವ ಇವರು ಕುಳಿತಿರುವುದು ಮೋಡದ ಮಧ್ಯದಲ್ಲಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಇವಳ ತಲೆಯ ಹಿಂದೆ ಒಂದು ಕೆಂಪು ಬಣ್ಣದ ರಿಂಗನ್ನು ತೋರಿಸಲಾಗಿದೆ. ಒಟ್ಟಾರೆಯಾಗಿ ಈ ಕಲಾಕೃತಿಯು ಕೆಂಪು ಕೆಂಡತಿದ್ದು, ಅಲ್ಲಲ್ಲಿ ಬಿಳಿ, ನೀಲಿ, ಹಳದಿ, ಕಪ್ಪು, ನೇರಳೆ ಬಣ್ಣವಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ. ೧೯೦೦ರಲ್ಲಿ ಕಲಾವಿದ ಆಂಟೋನಿ ಮೋಶ್ಚಿನಿಯು ರಚಿಸಿದ್ದಾನೆ.

ಜೀಸಸ್ ಚಿತ್ರ

ಮಂಗಳೂರಿನ ಹೋಲಿಕ್ರಾಸ್ ಚರ್ಚ್‌ನಲ್ಲಿರುವ ಈ ಕಲಾಕೃತಿಯನ್ನು ಗೋಡೆಯ ಮೇಲೆ ಚಿತ್ರಿಸಲಾಗಿದ್ದು, ವಿನ್ಯಾಸ ರಹಿತವಾಗಿರುವಂತೆ ತೋರುತ್ತದೆ. ಕಲಾಕೃತಿಯು ಯೇಸುವನ್ನು ಹೋಲುತ್ತದೆ. ಸುಮಾರು ೮ x ೧೦ ಅಡಿ ಇರುವ ಕಲಾಕೃತಿಯಲ್ಲಿನ ಮಧ್ಯದಲ್ಲಿ ಯೇಸುವು ಎರಡು ಕೈ ಅಗಲಿಸಿ ಭಕ್ತರನ್ನು ಕರೆಯುವಂತೆ ಗ್ರಾಸವಾಗಿದೆ. ಎಡಬದಿಯಲ್ಲಿ ಶಿಲುಬೆ ಇದ್ದು, ಕೆಳಗಡೆ ಪ್ರಾರ್ಥನೆಯನ್ನು ಮಾಡುವ ವಿಧಾನವನ್ನು ತೋರಿಸಲಾಗಿದೆ. ಬಲಬದಿಯಲ್ಲಿ ಮೇಲಿರುವ ಮೇಣದ ಬತ್ತಿ ಹಚ್ಚುವ ವಸ್ತುವಿದ್ದು, ಕೆಳಗಡೆ ಗೋರಿಯನ್ನು ನೋಡಬಹುದು ಆದರೆ ಕೆಳಗಡೆ ಕುರಿಮರಿಯು ಮಲಗಿದ ಹಾಗೆ ಚಿತ್ರರಚನೆಯನ್ನು ಮಾಡಲಾಗಿದ್ದು, ಏಕೆಂದರೆ ಕುರಿಯನ್ನು ಕಾಯುವ ಕುರುಬನಾಗಿ ಯೇಸುವು ಕಾಣಿಸಿಕೊಂಡಿದ್ದಾನೆ. ವಿವಿಧ ರೀತಿಯ ಹೂ ಬಳ್ಳಿಯ ಚಿತ್ರವಿನ್ಯಾಸವನ್ನು ನೋಡಬಹುದು. ಜೊತೆಗೆ ದ್ರಾಕ್ಷಿಯ ಬಳ್ಳಿ ಹಣ್ಣಿನ ಗೊಂಚಲು ಎಲ್ಲಾಕಡೆಗಳಲ್ಲಿ ಆವೃತಗೊಂಡಿವೆ. ಹೆಚ್ಚಾಗಿ ಸೇವಂತಿಯ ಜೊತೆಗೆ ಇತರೆ ಹೂಗಳನ್ನು ಕಾಣಬಹುದು. ಈ ಕಲಾಕೃತಿಯಲ್ಲಿ ಬಿಳಿ ಬಣ್ಣದ ವಸ್ತ್ರವನ್ನು ಮೈಯಲ್ಲಿ ಧರಿಸಿರುವ ಯೇಸುವು ಅಲ್ಪ ಮೈ ಕೈಕಾಣಿಸಿಕೊಂಡಿದೆ. ಆದರೂ ಈ ಕಲಾಕೃತಿಯಲ್ಲಿ ಆಕರ್ಷಕರಾಗಿ ತೋರಿಸಿದ್ದಾರೆ. ಬಿಳಿ, ಕೆಂಪು, ಹಸಿರು, ನೀಲಿ, ಹಸಿರು, ಹಳದಿ ಹೀಗೆ ವಿವಿಧ ವರ್ಣಗಳನ್ನು ಬಳಸಿ ಚಿತ್ರಕೃತಿಯನ್ನು ರಚಿಸಿದ್ದಾರೆ.

ಶಿಕ್ಷೆಗೊಳಗಾದ ಯೇಸು

ಈ ಕಲಾಕೃತಿಯು ೮ ಅಡಿ ಉದ್ದ, ೧೦ ಅಡಿ ಅಗಲವಿದ್ದು, ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿಸಲಾಗಿದೆ. ರೋಮನ್‌ರು ಯೇಸುವಿಗೆ ಚಿತ್ರ ಹಿಂಸೆ ಕೊಟ್ಟು ನಂತರ ಜನರ ಅಭಿಪ್ರಾಯವನ್ನು ಕೇಳಲು ತಂದು ನಿಲ್ಲಿಸಿದ ಪರಿ. ಸುಸ್ತಾಗಿ ನಿಂತಿರುವ ಯೇಸು ಅವರ ಮುಂದೆ ಆಡಳಿತಾಧಿಕಾರಿ ಹಾಗೂ ಅನೇಕ ಜನ ಸೈನಿಕರಿದ್ದು, ಇಲ್ಲಿನ ಜನರು ವಿವಿಧ ಸಂದೇಶಗಳನ್ನು ಹೇಳುತ್ತಿರುವಂತೆ ಚಿತ್ರ ರಚಿಸಲಾಗಿದೆ. ಹಾಗೆಯೇ ಯೇಸುವು ಬರಿ ಮೈಯಲ್ಲಿದ್ದು, ಕೆಂಪು ಬಟ್ಟೆಯು ಸ್ವಲ್ಪ ಸುತ್ತುವರೆದಿದೆ. ಬಿಳಿ ಬಟ್ಟೆಯ ಅಧಿಕಾರಿ

ಜನರಿಗೆ ವರದಿ ಒಪ್ಪಿಸುವಂತಿದೆ ಒಟ್ಟಾರೆ ಈ ಕಲಾಕೃತಿಯಲ್ಲಿರುವ ದೃಶ್ಯವು ಯೇಸುವಿಗೆ ಮರಣದಂಡನೆಯನ್ನು ನೀಡಿ ಎಂದು ಪ್ರಬಲ ಘೋಷಣೆಗಳು ಬರುವಂತಿದ್ದು, ಮಕ್ಕಳು ದೊಡ್ಡವರು ಭಾಗವಹಿಸಿದ್ದಾರೆ. ಹಿಂದೆ ಮೋಡಗಳನ್ನು ತೋರಿಸಲಾಗಿದ್ದು, ಸುಮಾರು ದೂರದಲ್ಲಿ ದೊಡ್ಡ ಕಟ್ಟಡವನ್ನು ಚಿತ್ರಿಸಲಾಗಿದೆ. ಸೈನಿಕರು ತಮ್ಮ ತಮ್ಮ ಉಡುಪನ್ನು ಧರಿಸಿದ್ದಾರೆ. ಕೈಯಲ್ಲಿ ಬಂದೂಕು ಹಿಡಿದಿರುವುದನ್ನು ಕಾಣಬಹುದು. ಮುಂದೆ ಕಾಣುವಂತಹವರಲ್ಲಿ ಸುಮಾರು ಜನರು ತಲೆಗೆ ಶಲ್ಲೆಯನ್ನು ಸುತ್ತುವರೆಸಿಕೊಂಡಿದ್ದಾರೆ. ಈ ಕಲಾಕೃತಿಯಲ್ಲಿ ಸಂಯೋಜನೆ ತುಂಬಾ ಸೂಕ್ಷ್ಮವಾಗಿದ್ದು, ಕಟ್ಟಡ ಮತ್ತು ಮಾನವರಿಗೆ ಸಂಬಂಧವನ್ನು ಕಲ್ಪಿಸಿದ್ದಾರೆ. ಯೇಸುವು ಮೇಲೆ ಇದ್ದು ಜನರನ್ನು ಕೆಳಗಡೆ ನಿಂತಿರುವಂತೆ ಚಿತ್ರಿಸಲಾಗಿದೆ. ಬಿಳಿ, ಕೆಂಪು, ಕಪ್ಪು, ಹಸಿರು, ನೀಲಿ, ಹಳದಿ ಹೀಗೆ ವಿವಿಧ ವರ್ಣಗಳಿಂದ ಈ ಕಲಾಕೃತಿಯನ್ನು ರಚಿಸಿದ್ದು, ೧೯೦೦ರಲ್ಲಿ ಆಂಟೋನಿ ಮೋಶ್ಚಿನಿಯು ಸೆಂಟ್ ಅಲೋಶಿಯಸ್ ಚರ್ಚ್ ಮಂಗಳೂರಿಗೆ ಬಂದ ಸಂದರ್ಭದಲ್ಲಿ ಚಿತ್ರಿಸಿದ್ದು, ಇಲ್ಲಿ ಸಂಗ್ರಹವಾಗಿದೆ.

ಹೂವಿನಲ್ಲಿ ತೇಲಾಡುತ್ತಿರುವ ದೇವದೂತರು

ಈ ಕಲಾಕೃತಿಯು ೮ ಅಡಿ ಉದ್ದ, ೧೦ ಅಡಿ ಅಗಲವಿದ್ದು, ತೈಲವರ್ಣದಿಂದ ರಚಿಸಿದ್ದು, ಆರಾಧನಾ ಮಂಟಪದ ಕಮಾನಿನ ಇಳಿಜಾರಿನಲ್ಲಿ ಕಾಣಬಹುದು. ಈ ಕಲಾಕೃತಿಯಲ್ಲಿ ಮುಖ್ಯವಾಗಿ ಇಬ್ಬರು ದೇವದೂತರು ತುಂಬಾ ಆನಂದದಿಂದ ಗಾಳಿಯಲ್ಲಿ ತೇಲಾಡುತ್ತಿರುವಂತೆ, ಒಬ್ಬ ಶಹಾನಾಯಿಯನ್ನು ಊದುತ್ತಾ ಹೂವಿನ ಸಾಲಿನಲ್ಲಿ ತೇಡಾತ್ತಿದ್ದು, ಇನ್ನೊಬ್ಬ ದೇವದೂತ ಹಾರಾಡಲು ಅವತರಣಿಸುವಂತಿದೆ. ಅವರಿಬ್ಬರ ಮದ್ಯೆ ದಾರಿಯಂತೆ ಸುಂದರವಾದ ಹೂವಿನ ಗೊಂಚಲು ಹರಿದು ಹೋಗಿದೆ. ಇವರಿಬ್ಬರ ಹಿಂದೆ ವಿನ್ಯಾಸವಿರುವ ಚಿತ್ರವನ್ನು ಕಾಣಬಹುದು. ಸಂತೋಷಕ್ಕೆ ಪಾರವೇ ಇಲ್ಲವೆಂಬಂತೆ ಚಿತ್ರಿಸಿರುವ ಕಲಾವಿದರು. ವರ್ಣಗಳ ಮನೋರಂಜನೆ ನಿಬ್ಬೆರಗಾಗುವಂತಹದ್ದು, ಹಾರುತ್ತಿರುವ ದೇವದೂತ ನೀಲಿ ಬಟ್ಟೆಯಲ್ಲಿರುವುದು, ಕೆಳಗಡೆ ಇರುವ ದೇವದೂತ ಬಿಳಿವರ್ಣದ ಬಟ್ಟೆಯನ್ನು ಧರಿಸಿದ್ದಾನೆ. ಒಟ್ಟಾರೆಯಾಗಿ ವಿರೋಧಿಗಳ ಸೆಲೆಯಿಂದ ಬಿಡುಗಡೆ ಹೊಂದಿರುವ ಯೇಸುವಿಗೆ ನೇಮಿಸುವುದು ಎಂಬುದಾಗಿದ್ದು, ಮುಖ್ಯ ಕಲಾಕೃತಿಯಲ್ಲಿ ಇಬ್ಬರು ದೇವದೂತರಿಗೆ ರೆಕ್ಕೆಗಳಿರುವುದನ್ನು ಗಮನಿಸಬಹುದು. ಅದು ಕೂಡ ಇಲ್ಲಿ ಬಹುಮುಖ್ಯವಾದದ್ದಾಗಿದೆ. ದೇವದೂತರೆಲ್ಲರೂ ಪಕ್ಷಿಗಳಂತೆ ಹಾರಾಡುತ್ತಿದ್ದು, ಸಂತೋಷದಲ್ಲಿ ತೇಲಾಡುತ್ತಿದ್ದಾರೆ. ಒಟ್ಟು ಕಲಾಕೃತಿಯು ವರ್ಣಗಳಿಂದ ಕೂಡಿರುವುದರಿಂದ ಕೆಂಪು, ಬಿಳಿ, ನೀಲಿ, ಹಳದಿ, ಕಪ್ಪು, ಹಸಿರು, ಬೂದಿ ಬಣ್ಣ, ಆಕಾಶ ಎಲ್ಲೋ, ಇದ್ದು, ತೈಲವರ್ಣದಿಂದ ರಚಿತವಾಗಿರುವ ಈ ಕೃತಿಯು ೧೮೯೯ರಲ್ಲಿ ಆಂಟೋನಿ ಮೋಶ್ಚಿನಿ ರಚಿಸಿದ್ದು, ಮಂಗಳೂರಿನ ಸೆಂಟ್ ಆಲೋಶಿಯಸ್ ಚರ್ಚ್‌ನಲ್ಲಿ ಸಂಗ್ರಹಿಸಿದೆ.

ಭಕ್ತನನ್ನು ಸಂತೈಸುತ್ತಿರುವ ಯೇಸು

೪ ಅಡಿ ಉದ್ದ, ೬ ಅಡಿ ಅಗಲವಿರುವ ಈ ಭಿತ್ತಿ ಚಿತ್ರದಲ್ಲಿ ಭಕ್ತನನ್ನು ಸಂತೈಸುತ್ತಿರುವ ಯೇಸು, ಕಲ್ಲು, ಮುಳ್ಳುಗಳ ಹತ್ತಿರ ಬಿದ್ದಿರುವ ಒಬ್ಬ ಪುರುಷನು ಬಿದ್ದಗಾಯಗಳಿಂದ ನರಳುತ್ತಿರುವುದನ್ನು ಕಂಡ ಯೇಸು ಅವನ ಗಾಯಗಳಿಗೆ ದ್ರವ್ಯವನ್ನು ಹಾಕುತ್ತಿದ್ದಾರೆ, ಯೇಸುವಿನ ಮುಖದಲ್ಲಿ ಸಂತೈಸುತ್ತಿರುವುದನ್ನು ಕಾಣಬಹುದು. ಅವರ ಇಬ್ಬರ ಮುಖಭಾವಗಳಿಗೆ ಕೇಸರಿ, ಕಂದು, ಕೆಂಪು, ಬಿಳಿ ವರ್ಣಗಳನ್ನು ಬಳಸಿ ಮೆದುವಾದ ತೇಪೆಗಳನ್ನು ಹಾಕಲಾಗಿದೆ. ಅವನ ವರ್ಣದಲ್ಲಿಯೂ ಸಹ ಇದೇ ರೀತಿ ತೇಪೆಗಳಿದ್ದು ಉತ್ತಮವಾದ ನೆರಳು ಬೆಳಕನ್ನು ಕಾಣಬಹುದು. ಕುದುರೆ ಹಾಗೂ ಗಾಯಗೊಂಡ ಪುರುಷ ಇಬ್ಬರಿಗೂ ಒಂದೇ ವರ್ಣದ ವಸ್ತ್ರ ಬಳಸಿ, ಯೇಸುವಿಗೆ ಬಿಳಿ ವರ್ಣದಲ್ಲಿ ಚಿತ್ರಿಸಿದ್ದಾರೆ. ಇದರಿಂದ ಉತ್ತಮವಾದ ವರ್ಣಗಳ ಹೊಂದಾಣಿಕೆಯನ್ನು ಕಾಣಬಹುದು. ಸುತ್ತಲಿನ ಪರಿಸರವನ್ನು ನೈಜತೆಗಿಂತಲೂ ಹೆಚ್ಚು ಸುಂದರವಾಗಿ ಚಿತ್ರಿಸಲಾಗಿದೆ. ತೈಲವರ್ಣದಿಂದ ರಚಿಸಿರುವ ಈ ಕಲಾಕೃತಿಯು ಸೆಂಟ್ ಆಲೋಶಿಯಸ್ ಚರ್ಚ್ ಮಂಗಳೂರಿನಲ್ಲಿ ಸಂಗ್ರಹಿಸಿದೆ.

ಭಾವಚಿತ್ರ

ಈ ಕಲಾಕೃತಿಯಲ್ಲಿರುವುದು ಸಂತನೆಂದು ಗುರುತಿಸಬಹುದು. ಇದು ತೈಲವರ್ಣದಿಂದ ರಚನೆಯಾಗಿದ್ದು, ತನ್ನ ಕೈಗಳಲ್ಲಿ ಅಭಯ ಹಸ್ತ ಹಾಗೂ ಗರಿಗಳಂತೆ ಕಾಣುವ ವಸ್ತುವನ್ನು ಕೈಯಲ್ಲಿ ಲೇಖನಿಯಂತೆ ಹಿಡಿದುಕೊಂಡಿದ್ದಾರೆ. ತಲೆಭಾಗದಿಂದ ಕೈಗಳವರೆಗೂ ಶಲ್ಯವನ್ನು ಹೊದ್ದುಕೊಂಡಿದ್ದು ಶಾಂತ ರೀತಿಯ ಮುಖಭಾವನೆಯನ್ನು ಕಾಣಬಹುದು. ಉತ್ತಮವಾದ ವರ್ಣಗಾರಿಕೆ ಇದ್ದು, ಮೆದು ಹಾಗೂ ಗಾಢ ವರ್ಣಗಳಿಂದ ಚಿತ್ರಿಸಲಾಗಿದೆ. ಭಾವಚಿತ್ರವಾಗಿರುವುದರಿಂದ ಮುಖದ ಮುಖ್ಯಭಾಗವನ್ನು ಅಚ್ಚುಕಟ್ಟಾಗಿ ಚಿತ್ರಿಸಲಾಗಿದೆ. ಮುಖದಲ್ಲಿನ ಗುಣಲಕ್ಷಣಗಳನ್ನು ತೋರಿಸಲಾಗಿದ್ದು, ಹಳದಿ, ಆರೆಂಜು, ಕೆಂಪು, ನೀಲಿ ವರ್ಣಗಳು ಮುಖ್ಯವಾಗಿವೆ. ಇದು ಅವರ್ ಲೇಡಿ ಕೇಥಡ್ರಲ್ ಚರ್ಚ್, ಕಾರವಾರದಲ್ಲಿ ಸಂಗ್ರಹಗೊಂಡಿದೆ.

ಕಂಬಗಳಲ್ಲಿನ ವಿನ್ಯಾಸಗಳು

ಈ ಕಲಾಕೃತಿಯು ೩ ಅಡಿ ಅಗಲ, ೧೦ ಉದ್ದವಿದ್ದು, ತೈಲವರ್ಣದಿಂದ ರಚಿಸಲಾಗಿದ್ದು, ಸೃಜನ ಶೀಲತೆಯ ರೂಪದಲ್ಲಿ ಒಂದೊಂದು ಕಂಬದಲ್ಲಿಯು ವಿವಿಧ ಬಗೆಯ ವಿನ್ಯಾಸಗಳನ್ನು ಕಾಣುವುದು ನವ್ಯ ಕಲೆಯೆಂದೇ ಹೇಳಬಹುದು. ಕೆಂಪು ಹಾಗೂ ಕಪ್ಪು ವರ್ಣಗಳ ಮಿಶ್ರಣದಿಂದ ನೀರಿನ ಸುರಳಿಯಂತಹ ಕಲ್ಪನೆಯು ಮೂಡಿಸುವಂತಹ ವಿನ್ಯಾಸ ಹಾಗೂ ಬಿಳಿವರ್ಣವನ್ನು ಉಳಿಸಿಕೊಂಡು ಹೊರ ರೇಖೆಗಳನ್ನು ಬಳಸಿ ಚಿತ್ರಿಸುವುದು, ಕಂಬಗಳ

ಮೇಲಿನ ವರ್ಣಗಳನ್ನು ನೋಡುತ್ತಿದ್ದರೆ, ಒಬ್ಬೊಬ್ಬರಿಗೆ ಒಂದೊಂದು ಕಲ್ಪನೆಗಳು ಮೂಡುವಂತೆ ಚಿತ್ರಿಸಲಾಗಿದೆ. ಸೆಂಟ್ ಅಲೋಶಿಯಸ್ ಚರ್ಚ್, ಮಂಗಳೂರಿನಲ್ಲಿದೆ.

ನೀರನ್ನು ಮಧ್ಯವನ್ನಾಗಿಸಿದ ಯೇಸು

ಈ ಕಲಾಕೃತಿಯು ತೈಲವರ್ಣದಿಂದ ೧೮೯೯ರಲ್ಲಿ ಗೋಡೆಯ ಮೇಲೆ ಚಿತ್ರಿಸಲಾಗಿದ್ದು, ಕರಾವಳಿ ಭಾಗದ ಚರ್ಚ್ಆದ ಸೆಂಟ್ ಆಲಾಯಿಸಿಸ್‌ನಲ್ಲಿ ಕಾಣಬಹುದಾಗಿದೆ. ಇದರಲ್ಲಿ ಸುಮಾರು ಜನರನ್ನು ಕಾಣಬಹುದು. ಇದು ಶುಭ ಸಮಾರಂಭವಾದುದ್ದರಿಂದ ಅನೇಕ ಜನರನ್ನು ಕಾಣಬಹುದು. ಹಾಗೆಯೇ ಮುಖ್ಯ ಭಾಗವಾಗಿರುವ ಯೇಸುವು ಇಲ್ಲಿ ಪ್ರಮುಖ, ಸಮಾರಂಭದ ಪ್ರಾರಂಭಕ್ಕೆ ಮಧ್ಯಖಾಲಿಯಾಗುವುದು ಜನರ ಉತ್ಸಾಹ ಕಡಿಮೆಯಾದಾಗ ಜನರ ಅಪೇಕ್ಷೆ ಹಾಗೂ ಆನಂದವನ್ನು ಕೊಡುವುದು ಯೇಸುವಿನ ಕರ್ತವ್ಯ ಅದರಂತೆ ದೇವಮಾನವನಾಗಿರುವಂತಹ ದಿನಗಳು ಆ ಸಂದರ್ಭ ಒದಗಿದಾಗ, ಪವಾಡಗಳು ನಡೆಯಬೇಕಾಗಿರುವು ಅನಿವಾರ್ಯವೆಂಬಂತೆ ಒಂದು ಮಗುವಿನಿಂದ ಖಾಲಿಕೊಡಗಳಿಗೆ ನೀರನ್ನು ತುಂಬಿಸುತ್ತಿರುವುದು ನಂತರದಲ್ಲಿ ಅವೆಲ್ಲಾದ್ರಾಕ್ಷಾರಸವಾಗಿ ಮಧ್ಯದ ರೂಪಕ್ಕೆ ಬಂದು ಎಲ್ಲಾರು ಆಶ್ಚರ್ಯಪಡುವಂತೆ ಪವಾಡ ನಡೆಸುವರು. ಈ ಕಲಾಕೃತಿಯು ಸಂಯೋಜನೆಯನ್ನು ಹೊಂದಿದ್ದು, ಎಲ್ಲಾರ ಕಣ್ಣು ಯೇಸುವಿನ ಕಡೆವಾಲಿದೆ, ಕೆಂಪು ಬಟ್ಟೆಯನ್ನು ತೊಟ್ಟಿರುವ ಯೇಸುವು ಸೊಂಟಕ್ಕೆ ನೀಲಿ ಪಟ್ಟಿಯನ್ನು ಕಟ್ಟಿಕೊಂಡಿದ್ದಾರೆ. ಬಿಳಿ ವರ್ಣದ ಬಟ್ಟೆಯನ್ನು ತೊಟ್ಟಿರುವ ಮಗುವು ಖಾಲಿಕೊಡಕ್ಕೆ ನೀರಾಕುತ್ತಿದ್ದಾನೆ. ಹಸಿರು, ನೀಲಿ, ಬಿಳಿ, ಹಳದಿ, ವರ್ಣದಿಂದನೇಕರು ಹಿಂದೆ ಇರುವುದು ವಿಶೇಷ. ಈ ಕಲಾಕೃತಿಯು ನೋಡುಗನನ್ನು ಬೆರಗಾಗಿಸುವಂತಿದೆ. ಸಂಯೋಜನೆಯಲ್ಲಿ ಉತ್ತಮ ಬಾಂಧವ್ಯಹೊಂದಿದ್ದಾರೆ ಎಂಬುದಕ್ಕೆ ಇದೊಂದೆ ಸಾಕ್ಷಿ ಸಾಕು. ಇದನ್ನು ಆಂಟೋನಿ, ಮೋಶ್ಚಿನಿಯು ರಚಿಸಿದ್ದಾನೆ.

ಏಸು ಮತ್ತು ಮಕ್ಕಳು

ಈ ಕಲಾಕೃತಿಯು ತೈಲವರ್ಣದ ಮೂಲಕ ಗೋಡೆಯ ಮೇಲೆ ರಚನೆಯಾಗಿದ್ದು, ಈ ಚಿತ್ರವು ಪ್ರಮುಖ ಬಲಿಪೀಠದ ಎದುರುಗಡೆ ಇರುವ ಚರ್ಚ್‌ನ ಅತ್ಯಂತ ಎತ್ತರದ ಚಿತ್ರ ಇದಾಗಿದೆ. ಇಲ್ಲಿ ಜೀಸಸ್‌ನು ಮಕ್ಕಳ ಮಿತ್ರನಾಗಿರುವುದು ತೋರಿಸುತ್ತದೆ. ಇದು ಮೋಶ್ಚನಿಯ ಅತ್ಯಂತ ಉತ್ತಮ ಕೃತಿಗಳಲ್ಲಿ ಒಂದು ಎಂದೇಳಬಹುದು. ಮಳೆಯ ನೀರಿನಿಂದ ನಶಿಸಿದ ಕೆಲಭಾಗವನನು ಪುನಃ ಸರಿಪಡಿಸಲಾಗಿದೆ. ಈ ಕಲಾಕೃತಿಯು ಒಂದು ಸಂದೇಶವನ್ನು ಕೊಡುತ್ತಿದ್ದು, ಅದು ಮಕ್ಕಳು ದೇವರ ಸಮಾನ ಅವರನ್ನ ನನಗೆ ಅರ್ಪಿಸಿ ಅವರೊಂದಿಗೆ ನಾನಿದ್ದೇನೆಂಬ ಅಂಶವನ್ನು ಮಕ್ಕಳ ತಂದೆ-ತಾಯಿಗೆ ಹೇಳುತ್ತಿದ್ದು, ಅದನ್ನು ಭಕ್ತರು

ಪ್ರೀತಿಯಿಂದ ಕೇಳುತ್ತಿದ್ದಾರೆ. ಒಟ್ಟು ಮೂರ್‍ನಾಲ್ಕು ಮಕ್ಕಳಿದ್ದು, ಯೇಸುವನ್ನು ಕರೆಯುವಂತಿದೆ. ಇಬ್ಬರನ್ನು ಅಪ್ಪಿಕೊಂಡಿರುವ ಯೇಸುವು ಕೆಂಪು ಬಟ್ಟೆಯನ್ನು ಧರಿಸಿದ್ದಾನೆ. ಬಿಳಿ ಮತ್ತು ನೀಲಿ ಬಟ್ಟೆಯನ್ನು ಮಕ್ಕಳು ತೊಟ್ಟಿದ್ದು, ಉಳಿದವರು ನೀಲಿ, ಕಂದುಗೆಂಪು, ಹಳದಿ, ಆರೆಂಜ್ ಹೀಗೆ ವಿವಿಧ ರೀತಿಯ ಬಟ್ಟೆಗಳನ್ನು ಹಾಕಿಕೊಂಡಿದ್ದಾರೆ. ಮುಂಭಾಗವು ಹಸಿರಿನಿಂದ ಕೂಡಿದ್ದು, ಮರದ ಕೆಳಗೆ ಕುಳಿತಿದ್ದಾರೆ. ಹಿಂದೆ ಮೋಡವು ಸಂಪೂರ್ಣವಾಗಿ ನೀಲಿವರ್ಣದಿಂದ ಕೂಡಿದ್ದಾಗಿದೆ. ಒಟ್ಟಾರೆಯಾಗಿ ಈ ಕಲಾಕೃತಿಯು ಒಂದು ಉತ್ತಮ ಸಂಯೋಜನಾ ಕಲಾ ಕೃತಿಯಾಗಿದ್ದು, ಸೆಂಟ್ ಅಲೋಶಿಯಸ್, ಮಂಗಳೂರಿನಲ್ಲಿ ನೆಲೆಗೊಂಡಿದೆ.

ಯೇಸುವನ್ನು ಶಿಲುಬೆಗೇರಿಸಿರುವುದು

ಈ ಕಲಾಕೃತಿಯು ೧೦ ಅಡಿ ಉದ್ದ, ೮ ಅಜಿ ಅಗಲವಿದ್ದು, ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿಸಿದ್ದು, ಕ್ಯಾಲ್ವರಿಯಾ ಮೇಲೆ ಇಬ್ಬರ ಕಳ್ಳರ ಮಧ್ಯದಲ್ಲಿ ಜೀಸಸ್‌ನನ್ನು ಶಿಲುಬೆಗೇರಿಸಿದ್ದು, ಮೇರಿಯು ಜೀಸಸ್ ಮತ್ತು ಮ್ಯೂಕ್‌ಡಲಾನ್ ತಾಯಿ ಇವಳ ಪಾದದಡಿ ಕುಳಿತಿರುವುದು ಕಂಡುಬರುತ್ತದೆ. ಜೀಸಸ್‌ನ ಬಳಿಯಲ್ಲಿ ಲ್ಯಾಂಜಿನಿಸ್ ಎಂಬ ಸೈನಿಕನಿದ್ದು, ಈಟಿ ಬರ್ಚಿ ಯಿಂದ ಚುಚ್ಚಿ ತೆಗೆದಂತೆ ಭಾಸವಾಗಿದೆ. ಚಿತ್ರಕಲಾವಿದನು. ಇಲ್ಲಿ ಅವನ ಸೌಜನ್ಯವನ್ನು ವಿವಿಧ ರೀತಿಯ ಆಯಾಮಗಳಲ್ಲಿ ಬಣ್ಣಿಸಿದ್ದಾನೆ. ಬೆಳಕಿನ ಪ್ರಾರಂಭದಿಂದ ಕತ್ತಲೆಯು ನಿಧಾನವಾಗಿ ಹೊರಟು ಹೋಗುವ ದೃಶ್ಯವನ್ನು ಚಿತ್ರಿಸಿದ್ದಾನೆ. ಇದರಲ್ಲಿ ಸೈನಿಕರು ಗಂಭೀರವಾಗಿ ಜೀಸಸ್‌ನ್ನು ನೋಡುತ್ತಿದ್ದಾನೆ. ಹಿರಿಯುರು ಕಿರಿಯುರು, ಸುಮ್ಮನೆ ನೋಡುತ್ತಿರುವಂತಿದೆ. ಒಂದು ರೀತಿಯಲ್ಲಿ ಮರಣ ಹೊಂದಿದವನಂತೆ ಜೀಸಸ್‌ನ ರೂಪವನ್ನು ತೋರಿಸಲಾಗಿದೆ. ಆ ಚಿತ್ರ ಹಿಂಸೆಗೆ ಸೊರಗಿರುವ ವ್ಯಕ್ತಿ ಹೇಗಿರುವನು ಎಂಬುದಕ್ಕೆ ಇದೆ ಸಾಕ್ಷಿ ಎಂಬಂತೆ ಚಿತ್ರಿಸಿರುವ ಕಲಾವಿದರು. ಸನ್ನಿವೇಶಕ್ಕೆ ಬೇಕಾಗುವಂತಹ ಎಲ್ಲಾ ವಸ್ತುಗಳನ್ನು ಆಯ್ಕೆಮಾಡಿಕೊಂಡು ಚಿತ್ರಿಸಿದ್ದಾರೆ. ಮೋಡವು ಹತ್ತಿರದಲ್ಲಿ ಕಪ್ಪಾಗಿದ್ದು, ದೂರದಲ್ಲಿ ಬೆಳಕಿನ ಪ್ರಭಾವ ವಿರುವುದನ್ನು ಕಾಣಬಹುದು. ಬಿಳಿ, ನೀಲಿ, ಕೆಂಪು, ಹಳದಿ, ಆಕಾಶ್, ಎಲ್ಲೋ, ಕಂದುಗೆಂಪು ಮುಂತಾದ ಬಣ್ಣಗಳನ್ನು ಬಳಸಿ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನಲ್ಲಿದೆ.

ಯೇಸುವನ್ನು ಶಿಲುಬೆಗೆ ಏರಿಸಿರುವುದು

ಮೇಲೆ ತಿಳಿಸಿರುವಂತೆ ಕಾರವಾರದ ಕೆಥೋಡ್ರಲ್ ಚರ್ಚ್‌ನಲ್ಲಿ ನಿರ್ಮಿಸಲಾದ ಈ ಚಿತ್ರದಲ್ಲಿ ಯೇಸುವನ್ನು ಶಿಲುಬೆಗೆ ಏರಿಸಿದ್ದಾರೆ. ಅವರ ಶಿಷ್ಯರಲ್ಲಿ ಇಬ್ಬರನ್ನು ಅವರೊಂದಿಗೆ ಶಿಲುಬೆಗೆ ಏರಿಸಿರುವುದನ್ನು ಕಾಣಬಹುದು. ಸುತ್ತಲೂ ಜನರು ದೇವರನ್ನು ಪ್ರಶ್ನಿಸುತ್ತಿದ್ದಾರೆ. ಈ ಸನ್ನಿವೇಶವನ್ನು ಭಿತ್ತಿಯಲ್ಲಿ ಬಳಸಿಕೊಂಡಿರುವುದು ಗಮನಾರ್ಹ. ಏಸುವನ್ನು ಹಾಗೂ

ಸೈನಿಕರನ್ನು ಪ್ರಧಾನವಾಗಿ ಚಿತ್ರಿಸಲಾಗಿದೆ. ಅವರಿಗೆ ಕೆಂಪು, ಕಂದು, ಕೇಸರಿ, ಹಳದಿ ವರ್ಣಗಳಿಂದ ಮೆದು ಹಾಗೂ ತೇಪೆ ಎರಡು ರೀತಿಯ ವರ್ಣಗಳನ್ನು ಮಿಶ್ರಣ ಮಾಡಲಾಗಿದೆ. ಉಳಿದವರಿಗೆಲ್ಲ ಕಂದು ಕೆಂಪು, ಕಪ್ಪು, ನೀಲಿ ವರ್ಣಗಳಿಂದ ಮೆದು ಹಾಗೂ ತೇಪೆ ಹಚ್ಚುವುದರ ಮೂಲಕ ವರ್ಣಗಳ ಮಿಶ್ರಣ ಕಾಣಬಹುದು. ಸುತ್ತಲೂ ಯೇಸುವನ್ನು ನೋಡಿ ದುಃಖಿಸುವುದು ನೈಜವಾಗಿ ಮೂಡಿಬಂದಿದ್ದು ಅದಕ್ಕೆ ಸ್ಪಂದಿಸುವಂತೆ ಆಕಾಶವನ್ನು ವರ್ಣಮಯವಾಗಿ ಕಾಣಬಹುದು. ವರ್ಣಗಳ ಹೊಂದಾಣಿಕೆಯನ್ನು ಕಾಣಬಹುದು. ನೈಜತೆಗೆ ಹತ್ತಿರವಾಗುವಂತೆ ಕಲಾವಿದನ ಕಲ್ಪನೆಯನ್ನು ಕಾಣಬಹುದು. ತೈಲವರ್ಣದಿಂದ ರಚಿಸಿರುವ ಕಲಾವಿದ ಆಂಟೋನಿ ಮೋಶ್ಚಿನಿಯು ೧೯೦೦ರಲ್ಲಿ ರಚಿಸಿದ್ದಾರೆ.

ಮಕ್ಕಳೊಂದಿಗೆ ಯೇಸು

೧೦ ಅಡಿ ಉದ್ದ, ೮ ಅಡಿ ಅಗಲವಿರುವ ಈ ಕಲಾಕೃತಿಯು ತೈಲವರ್ಣದಿಂದ ಚಿತ್ರಿಸಲಾಗಿದ್ದು, ಮುಖ್ಯ ಭೂಮಿಕೆಯಲ್ಲಿ ಯೇಸುವಿಗೆ ಮಕ್ಕಳೆಂದರೆ ತುಂಬ ಪ್ರೀತಿ. ಅವರೊಂದಿಗೆ ಯಾವಾಗಲೂ ಮಕ್ಕಳಿರುವುದು ಭಿತ್ತಿ ಹಾಗೂ ಕ್ಯಾನ್ವಾಸ್ ಕಲಾಕೃತಿಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಇಲ್ಲಿಯು ಅದರಲ್ಲಿ ಒಂದು ಭಿತ್ತಿ ಚಿತ್ರದಲ್ಲಿ ಯೇಸುವು ಕೆಂಪು ವಸ್ತ್ರದಲ್ಲಿ ಮಕ್ಕಳೊಂದಿಗೆ ಕುಳಿತುಕೊಂಡಿದ್ದಾನೆ. ಅವರ ಮುಖಭಾಗಕ್ಕೆ ಕೆಂಪು, ಕೇಸರಿ, ಬಿಳಿ, ವರ್ಣಗಳ ಮಿಶ್ರಣದಿಂದ ಮೆದುಗೊಳಿಸಲಾಗಿದೆ. ಅವರ ವರ್ಣದಲ್ಲಿ ಕೆಂಪು, ಕಂದು ವರ್ಣದಿಂದ ಮೆದುಗೊಳಿಸಿದೆ ನಂತರ ಗಾಢ ವರ್ಣಗಳಿಂದ ಗೆರೆಗಳನ್ನು ಹಾಕಲಾಗಿದೆ. ಸುತ್ತಲೂ ಮಕ್ಕಳಿಗೆ ಬೇರೆ ಬೇರೆ ವರ್ಣಗಳ ಬಳಕೆಯನ್ನು ಬಳಸಿಕೊಂಡು ಚಿತ್ರಿಸಲಾಗಿದೆ. ಯೇಸುವಿನ ಮನಸ್ಸು ಮಗುವಿನಂತಹದ್ದು ಎಂದು ಈ ಚಿತ್ರದ ಮೂಲಕ ತಿಳಿಯಬುದಾಗಿದೆ. ಕಾರವಾರದ ತಾಯಿ ಮೇರಿ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ಚರ್ಚೆಯಲ್ಲಿ ನಿರತರಾಗಿರುವುದು

ಈ ಕಲಾಕೃತಿಯು ಗೋಡೆಯ ಮೇಲೆ ತೈಲವರ್ಣದಿಂದ ರಚಿಸಲಾಗಿದ್ದು, ಮಂಗಳೂರಿನ ಸೆಂಟ್ ಅಲಾಯಿಸಿಸ್ ಚರ್ಚ್‌ನಲ್ಲಿರುವ ಈ ಚಿತ್ರವು ಸುಮಾರು ೬ x ೮ ಅಡಿ ಇದ್ದು, ಯೇಸುವು ಅವರ ಸ್ನೇಹಿತರೊಂದಿಗೆ ಚರ್ಚೆಯೊಂದಿಗೆ ನಿರತರಾಗಿದ್ದಾರೆ. ಯೇಸುವನ್ನು ಕೆಂಪು, ಕೇಸರಿ ಮಿಶ್ರಣದ ವಸ್ತ್ರದಲ್ಲಿ ಪ್ರಧಾನರಾಗಿ ಚಿತ್ರಿಸಲಾಗಿದೆ. ಉಳಿದವರೆಲ್ಲರನ್ನು ಬಿಳಿ, ಕಂದು, ನೀಲಿ ವಸ್ತ್ರದ ವರ್ಣಗಳಿಂದ ಚಿತ್ರಿಸಲಾಗಿದೆ. ಅವರು ಮಧ್ಯದಲ್ಲಿ ಟೇಬಲ್‌ನ್ನು ಬಿಳಿವರ್ಣದಿಂದ ಚಿತ್ರಿಸಿರುವ ಉದ್ದೇಶ ಶಾಂತ ರೀತಿಯ ವರ್ತನೆಯನ್ನು ಕಾಣಬಹುದು. ಇದು ಉತ್ತಮವಾದ ಸಂಯೋಜನೆಯಾಗಿದ್ದು, ಕಲಾಕೃತಿಗಳ ಮೂಲಕ ಯೇಸುವಿನ ಬೋಧನೆಯನ್ನು ಇಂದಿಗೂ ಕಾಣುವಂತೆ ಸಂರಕ್ಷಿಸಲಾಗಿದೆ. ಕಲಾವಿದ ಆಂಟೋನಿ ಮೋಶ್ಚಿನಿಯು ೧೯೦೦ರಲ್ಲಿ ಚಿತ್ರಿಸಿದ್ದಾರೆ.

ಸ್ವರ್ಗರೋಹಣ

ಈ ಕಲಾಕೃತಿಯು ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದ್ದು, ವಿಶೇಷವಾಗಿರುವ ಈ ಕೃತಿಯು ಸೆಂಟ್ ಅಲಾಯಿಸಿಸ್ ಚರ್ಚ್ ಮಂಗಳೂರಿನಲ್ಲಿದ್ದು, ತನ್ನ ಬಿಂಬತೆಯ ಪ್ರಗತಿಗಾಗಿ ಯೇಸುವು ಸ್ವರ್ಗಕ್ಕೆ ಹೋಗುತ್ತಿರುವ ದೃಶ್ಯ ಇದಾಗಿದೆ. ಈ ದೃಶ್ಯದಲ್ಲಿ ಯೇಸುವಿನ ಆತ್ಮ ಮೇಲಕ್ಕೆ ಹೋಗುತ್ತಿದ್ದು, ಸುತ್ತಲೂ ಅವರ ಭಕ್ತರು ಹಾಗೂ ಶಿಷ್ಯರನ್ನು ಕಾಣಬಹುದು. ಪ್ರಮುಖವಾಗಿ ಅವರ ತಾಯಿ ಮೇರಿಯನ್ನು ಕಾಣಬಹುದು. ಎಲ್ಲಾರು ಯೇಸುವನ್ನು ನೋಡುತ್ತ ಕೈ ಮುಗಿಯುತ್ತಿದ್ದು, ಅವರ ತಾಯಿಯು ಹಾರೈಸುತ್ತಿದ್ದಾರೆ. ಉತ್ತಮವಾದ ಸಂಯೋಜನೆಯಾಗಿದ್ದು, ಮುಖಭಾವಗಳಿಗಿಂತಲೂ ವಸ್ತ್ರಗಳಲ್ಲಿನ ವಿನ್ಯಾಸಗಳು ಗಮನಾರ್ಹ. ಯೇಸುವು ನಿಮ್ಮನ್ನೆಲ್ಲಾ ಬಿಟ್ಟು ನಾ ಹೊರಟಿರುವೆ ಧನ್ಯವಾದಗಳು ಎನ್ನುತ್ತಾ ಹಕ್ಕಿಯಂತೆ ಹಾರುತ್ತಾ ಸಾಗುತ್ತಿರುವುದು, ಅವನಿಗೆ ಬಿಳಿಯ ವಸ್ತ್ರವನ್ನುಡಿಸಿದ್ದು, ಅದರಲ್ಲಿ ವಿನ್ಯಾಸಗಳು ನೀರಿನಂತೆ ಝುಳಪಿಸುತ್ತಿದೆ. ಕೆಳಗಡೆ ತಾಯಿ ಹಾಗೂ ಭಕ್ತರು ಮೌನದಿಂದ ಅವರನ್ನು ಕಳುಹಿಸಿಕೊಡುತ್ತಿರುವ ದೃಶ್ಯ ಉತ್ತಮವಾಗಿದೆ. ಇಲ್ಲಿ ಆಕಾಶವನ್ನು ವಿಶಾಲವಾಗಿ ತೋರಿಸಲಾಗಿದೆ. ಅಯ್ಯೋ ಎನ್ನುವ ಮಹಿಳೆಯರಿಗೆ, ಬಿಳಿ ಮತ್ತು ನೀಲಿ ವಸ್ತ್ರವನ್ನು ತೊಡಿಸಿದ್ದು, ಇನ್ನುಳಿದಂತಹ ಜನರಿಗೆ ಗಿಳಿ ಹಸಿರು, ಬೂದು ಬಣ್ಣ, ಕಪ್ಪು, ಕೆಂಪು ವರ್ಣಗಳಿಂದ ತೋರಿಸಲಾಗಿದೆ. ಒಟ್ಟಾರೆಯಾಗಿ ಸಂಯೋಜನೆಯಲ್ಲಿ ಉತ್ತಮ ಕೃತಿಯಾಗಿದೆ.

ಸೆಂಟ್ ಮಾರ್ಕ್ (ಧರ್ಮ ಪ್ರಚಾರಕ)

ಈ ಚಿತ್ರವು ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದ್ದು, ಮಂಗಳೂರಿನ ಸೆಂಟ್ ಅಲಾಯಿಸಿಸ್ ಚರ್ಚ್‌ನಲ್ಲಿ ಕಾಣಬಹುದು. ಇದು ವ್ಯಕ್ತಿ ಚಿತ್ರವಾಗಿದೆ. ಚಿಂತಾಜನಕವಾಗಿ ಕುಳಿತಿರುವ ಈತನ ಮುಖದ ಭಾವನೆಗಳನ್ನು ನೈಜವಾಗಿ ಚಿತ್ರಿಸಲಾಗಿದೆ. ಈತನು ನೀಲಿಬಣ್ಣದ ಶಾಲು, ಕೆಂಪು ವರ್ಣದ ಉಡುಪನ್ನು ಧರಿಸಿದ್ದಾನೆ. ಇವನ ಹಿಂಭಾಗದಲ್ಲಿ ಕೆಂಪು, ನೀಲಿ, ಬೂದಿ ಮತ್ತು ಕಪ್ಪು ಬಣ್ಣವನ್ನು ಪ್ರಮುಖವಾಗಿ ತೋರಿಸಲಾಗಿದೆ ಎಡಕೈಯಲ್ಲಿ ಪುಸ್ತಕವಿದ್ದು, ಬಲಕೈಯಲ್ಲಿ ಲೇಖನಿ ಹಿಡಿದುಕೊಂಡು ಬರೆಯುವ ಮುನ್ನ ಯೋಚಿಸುವಂತಿದೆ. ತಲೆಯ ಸುತ್ತ ಒಂದು ವೃತ್ತಾಕಾರದ ಗೆರೆಯನ್ನು ಕಾಣಬಹುದು. ಒಟ್ಟಾರೆಯಾಗಿ ಚರ್ಚ್‌ನ ಹಿರಿಯರು ಧರ್ಮ ಪ್ರಚಾರಕರು ಆದ ಸೆಂಟ್ ಮಾರ್ಕ್‌ರವರ ವ್ಯಕ್ತಿ ಚಿತ್ರ ಉತ್ತಮವಾಗಿ ರಚಿಸಿದ್ದಾರೆ.

ಮರು ಕೃತಿಯ ನಿರ್ಮಾಣದಲ್ಲಿ ನಿರತರಾದ ಕಲಾವಿದ

ಭಿತ್ತಿ ಎಂದಾಗ ಗೋಡೆ ಎಂದು ತಿಳಿಯುತ್ತೇವೆ. ಬಟ್ಟೆ ಮಾಧ್ಯಮದಲ್ಲಿ ರಚಿಸಿದ ಕಲಾಕೃತಿಗಳು ಸಾಮಾನ್ಯವಾಗಿ ಸಾವಿರಾರು ವರ್ಷಗಳ ಕಾಲ ಉಳಿಯುತ್ತವೆ. ಆದರೆ ಗೋಡೆ ಮೇಲಿನ ಚಿತ್ರಗಳು ನೂರು ವರ್ಷನೂ ಬರುವುದಿಲ್ಲ. ಅಂತಹ ಪರಿಸ್ಥಿಯನ್ನು ಕರಾವಳಿ

ಭಾಗದ ಚರ್ಚ್‌ಗಳು ಅನುಭವಿಸಿವೆ. ಕಲಾಕೃತಿಗಳ ಆಗರವಾಗಿರುವ ಈ ಚರ್ಚ್‌ನ ಇತಿಹಾಸ ನೂರಾ ಹದಿಮೂರು ವರ್ಷಗಳು ಇತ್ತೀಚೆಗೆ ಸಂರಕ್ಷಿಸುವ ವಿಭಿನ್ನ ಪ್ರೀತಿಗೆ ಹುಡುಕಿದ ಸಂದರ್ಭಕ್ಕೆ ಸ್ವಚ್ಚಮಾಡುವ ಸಂದರ್ಭದಲ್ಲಿ ಕೆಲವೊಂದು ಹಾಳಾಗಿದ್ದ ಕಲಾಕೃತಿಗಳನ್ನು ರೀಪೇರಿ ಮಾಡಿಸಿರುವುದು ಬೆಳಕಿಗೆ ಬಂದಿದೆ. ಅದೇ ಈ ಕಲಾಕೃತಿಯ ಸುಮಾರು ಏಳುಮಂದಿ ಮೂರುವರೆ ವರ್ಷಗಳ ಕಾಲ ಮತ್ತೆ Repainting ಮಾಡಲಾಗಿದೆ. ಅದು ಸ್ವಲ್ಪ ಹಾಳಾಗಿರುವುದನ್ನು ಸುಂದರವಾಗಿಡುವ ಸಲುವಾಗಿ ಚಿತ್ರಿಸಲಾಗಿದೆ. ಅದರಲ್ಲಿ ಅಲೋಶಿಯಸ್‌ನು ಗುರುವಿನ ಬಗ್ಗೆ ಜನರಿಗೆ ಬೋಧನೆಮಾಡುತ್ತಿರುವ ಚಿತ್ರಕೃತಿ ಇದಾಗಿದೆ. ಕಲಾವಿದ ಆಂಟೋನಿ ಮೋಶ್ಚಿನಿ ರಚಿಸಿರುವ ಕಲಾಕೃತಿಗಳು ಹಾಳಾಗಿರುವುದರಿಂದ ಮತ್ತೆ ಮರುನಿರ್ಮಾಣದಲ್ಲಿರುವ ಚಿತ್ರಕೃತಿ.

ರೋಗಿಯನ್ನು ಸಂತೈಸುತ್ತಿರುವ ಯೇಸು

೪ ಅಡಿ ಅಗಲ ೧೦ ಅಡಿ ಉದ್ದವಿರುವ ಈ ಕಲಾಕೃತಿಯು ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಕೃತಿಯಲ್ಲಿ ಇಬ್ಬರು ವ್ಯಕ್ತಿಗಳಿದ್ದು, ಒಬ್ಬ ಯೇಸು ಮತ್ತೊಬ್ಬ ಭಕ್ತ, ನೆಲದ ಮೇಲೆ ಬಿದ್ದಂತಿರುವ ಭಕ್ತನನ್ನು ಯೇಸುವು ಪ್ರೀತಿಯಿಂದ ಆಗುತ್ತಿರುವ ನೋವನ್ನು ಆಲಿಸುತ್ತಿರುವುದು. ಭಕ್ತನ ಹೊಟ್ಟೆ ಸೊರಗಿದಂತೆ ಕಾಣುತ್ತಿದ್ದು, ಅದನ್ನು ಮುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಅರೆನಗ್ನದಲ್ಲಿರುವ ಭಕ್ತ ಬಿಳಿ ಮತ್ತು ನೀಲಿ ಉಡುಪನ್ನು ಧರಿಸಿರುವ ಯೋಸುವನ್ನು ಚಿತ್ರಿಸಿದ್ದಾರೆ. ಈ ಕಲಾಕೃತಿಯು ಮಂಗಳೂರಿನ 'ಕುಲಶೇಖರದ ಹೋಲಿಕ್ರಾಸ್' ಚರ್ಚಿನಲ್ಲಿರುವುದನ್ನು ಕಾಣಬಹುದು.

ವ್ಯಕ್ತಿಚಿತ್ರ

೩ ಅಡಿ ಉದ್ದ, ೨ ಅಡಿ ಅಗಲವಿರುವ ಮೋಡದಲ್ಲಿ ನಿಂತಿರುವಂತೆ ಬ್ರಾಸವಾಗಿರುವ ಈ ಕಲಾಕೃತಿಯು ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಒಬ್ಬ ಪಾದ್ರಿ ಬಿಳಿ ಉಡುಪನ್ನು ಹಾಕಿಕೊಂಡು ಎಡಗೈಯಲ್ಲಿ ಚರ್ಚನ ಮಾದರಿಯನ್ನಿಡಿದು ಕೊಂಡಿದ್ದು, ಬಲಗೈಯಲ್ಲಿ ನಕ್ಷೆಯನ್ನೋಲುವ ಬೆತ್ತವು ಇದೆ. ಪದ, ಪದರುಗಳಿಂದ ಉಡುಪನ್ನು ಚಿತ್ರಿಸಿರುವುದು ತುಂಬಾ ಆಕರ್ಷಣೆ. ಈ ಕೃತಿಯಲ್ಲಿ ಬಿಳಿ, ಕಪ್ಪು, ನೀಲಿ ಬಣ್ಣಗಳು ಮುಖ್ಯವಾಗಿವೆ. ಕುಲಶೇಖರದ ಹೋಲಿಕ್ರಾಸ್ ಚರ್ಚ್‌ನಲ್ಲಿ ಲಭ್ಯವಿದೆ. ಈ ಕಲಾಕೃತಿಯು ಕ್ಯಾಥಡ್ರಲ್ ಮಂಗಳೂರಿನಲ್ಲಿ ಸಂಗ್ರಹವಾಗಿದೆ.

ಶಿಲುಬೆಯಿಂದ ಇಳಿಸಿದಾಗ

ತೈಲವರ್ಣದಿಂದ ಚಿತ್ರಿಸಿರುವ ಈ ಸಂಯೋಜನಾ ಚಿತ್ರಕೃತಿಯಲ್ಲಿ ಮೂವರು ಭಕ್ತರು ಯೇಸುವನ್ನು ಸಂತೈಸುತ್ತಿರುವುದು ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಿರುವ ಈ

ಕೃತಿಯು ಕುಲಶೇಖರ ಚರ್ಚ್‌ನಲ್ಲಿದೆ. ಕಪ್ಪು ಬಟ್ಟೆ ಧರಿಸಿರುವ ವ್ಯಕ್ತಿಯ ಮಡಿಲಲ್ಲಿ ಮಲಗಿರುವ ಯೇಸುವು ಅರೆನಗ್ನದಲ್ಲಿದ್ದಾರೆ. ಸೊಂಟಕ್ಕೆ ಮಾತ್ರ ಬಿಳಿಯ ಉಡುಪನ್ನು ಧರಿಸಲಾಗಿದೆ. ಇನ್ನಿಬ್ಬರು ನೀಲಿ ಉಡುಪನ್ನು ಧರಿಸಿದ್ದು, ಕೈ ಮುಗಿದು ರೋದಿಸುತ್ತಿರುವಂತಿದೆ. ಆಗ ತಾನೇ ಶಿಲುಬೆಯಿಂದಿಳಿಸಿದಂತೆ ಭಾಸವಾಗುತ್ತಿದೆ. ತಾಯಿಯ ಮಡಿಲಲ್ಲಿ ಮಲಗಿರುವಂತೆ ಚಿತ್ರಿಸಲಾಗಿರುವುದು ಮುಖ್ಯ ಅಂಶವಾಗಿದೆ. ಈ ಕಲಾಕೃತಿಯು ಸಹ ಆಂಟೋನಿ ಮೋಶ್ಚಿನಿಯಿಂದ ೧೯೪೯ರಲ್ಲಿ ರೂಪುಗೊಂಡಿದೆ.

ಮೇರಿ ಮತ್ತು ಮಗು

ನಾಲ್ಕು ಅಡಿ ಉದ್ದ, ಎರಡು ಅಡಿ ಅಗಲ ಗೋಡೆಯ ಮೇಲೆ ಚಿತ್ರಿತವಾಗಿರುವ ಕಲಾಕೃತಿಯು ತೈಲವರ್ಣದಿಂದ ರಚಿತವಾಗಿದೆ. ಕಪ್ಪು ಬಟ್ಟೆಯನ್ನು ಧರಿಸಿರುವ ಮೇರಿಯು ಮಗನಿಗಾಗಿ ಎರಡು ಕೈ ಚಾಚಿ ಕರೆಯುವಂತಿದೆ. ಬಾಲಯೇಸುವು ಕೈ ಮುಂದೆ ಮಾಡಿ ಮೇಲಿಂದ ಹಾರಿ ಬರುತ್ತಿದ್ದಾನೆ. ಹೂಗಳ ಮಧ್ಯೆ ನಿಂತಿರುವಂತಿದ್ದು, ಮಲ್ಲಿಗೆಯ ಬಿಳಿ ಬಣ್ಣದ ಹಗಲಿರುವುದನ್ನು ಕಾಣಬಹುದಾಗಿದೆ. ಇದು ಮಂಗಳೂರಿನ ಕುಲಶೇಖರದ ಹೋಲಿಕ್ರಾಸ್ ಚರ್ಚ್‌ನಲ್ಲಿ ನೆಲೆಗೊಂಡಿದೆ.

ದೇವದೂತರು

ಗೋಡೆಯ ಮೇಲೆ ತೈಲವರ್ಣದಿಂದ ರಚಿತವಾಗಿರುವ ಈ ಕಲಾಕೃತಿಯಲ್ಲಿ ಒಬ್ಬರು ರೋದಿಸುತ್ತಿರುವುದು, ಇನ್ನೊಬ್ಬ ಕಪ್ಪು ಬಟ್ಟೆಧರಿಸಿರುವ ಫಾದ್ರಿಯು, ಮೂವರು ದೇವದೂತರತ್ತ ಕೈ ತೋರಿಸುತ್ತಿರುವುದು ಮೋಡದ ಮಧ್ಯೆ ರೆಕ್ಕೆಗಳಿರುವ ಪಕ್ಷಿಗಳಂತೆ ಹಾರಿ ಬರುತ್ತಿದ್ದಾರೆ. ಇಲ್ಲೊಬ್ಬನನ್ನು ಸಂತೈಸುತ್ತಿರುವಂತೆ ಭಾಸವಾಗಿದೆ. ಬಿಳಿ, ಕಪ್ಪು, ನೀಲಿ, ಹಸಿರು, ಬಣ್ಣಗಳಿಂದ ಆವೃತ್ತವಾಗಿರುವ ಈ ಕಲಾಕೃತಿಯು ಸಂಯೋಜನೆಯಿಂದ ಕೂಡಿದೆ. ಈ ಕಲಾಕೃತಿಯು ಸೇಂಟ್ ಅಲೋಶಿಯಸ್ ಚರ್ಚ್ ಮಂಗಳೂರಿನಲ್ಲಿ ನೆಲೆಗೊಂಡಿದೆ.

ಭಕ್ತರ ಮಡಿಲಲ್ಲಿ ಯೇಸು

೧೦ ಉದ್ದ ೧೨ ಅಡಿ ಅಗಲವಿರುವ ಈ ಕಲಾಕೃತಿಯು ಗೋಡೆಯ ಮೇಲೆ ತೈಲವರ್ಣದಿಂದ ರಚಿಸಲಾಗಿದ್ದು, ಶಿಲುಬೆಯಿಂದಿಳಿಸಿರುವ ದೃಶ್ಯ ಇದಾಗಿದೆ. ಭಕ್ತರು ಯೇಸುವನ್ನು ಹಿಡಿದುಕೊಂಡು ತಮ್ಮ ವಾಸಸ್ಥಳಕ್ಕೆ ಕೊಂಡೊಯ್ಯುತ್ತಿದ್ದಾರೆ. ಒಬ್ಬರು ಕೈ ಇನ್ನೊಬ್ಬ ಕಾಲು, ಹಿಡಿದುಕೊಂಡಿದ್ದು, ಇವರ ಮಧ್ಯೆ ಮೇರಿಯು ಬಿಳಿ, ನೀಲಿ ಉಡುಪನ್ನು ಧರಿಸಿ ನಿಂತಿರುವುದು, ಭಕ್ತರು ಹಿಂದೆ ನೋಡುವುದಕ್ಕಾಗಿ ಕಾದು ಕುಳಿತಿದ್ದಾರೆ. ಅರೆನಗ್ನದಲ್ಲಿರುವ ಯೇಸುವು ಸೊಂಟದಿಂದ ಕೆಳಗೆ ಬಿಳಿಯ ವಸ್ತ್ರವನ್ನು ಕಾಣಬಹುದು. ಕತ್ತಲೆಯ

ಕೋಣೆಯಲ್ಲಿರುವಂತೆ ಚಿತ್ರಿಸಲಾಗಿದ್ದು, ಅವರಿಗಷ್ಟೆ ಬೆಳಕನ್ನು ಬಿಂಬಿಸಿದ ರೀತಿ ಗೋಚರಿಸಿದೆ. ಬಿಳಿ, ನೀಲಿ, ಕೆಂಪು, ಹಸಿರು ಮತ್ತು ಕಪ್ಪು ವರ್ಣಗಳಿಂದ ಪೂರ್ಣವಾಗಿ ಚಿತ್ರಿಸಲಾಗಿದ್ದು, ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನಲ್ಲಿ ನೆಲೆಗೊಂಡಿದೆ.

ಭಕ್ತರ ಹಾರೈಕೆ

ಮೂರು ಅಡಿ ಉದ್ದ, ನಾಲ್ಕು ಅಡಿ ಅಗಲವಿದ್ದು, ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಿರುವ ಈ ಕಲಾ ಕೃತಿಯಲ್ಲಿ ಮೂರು ನಾಲ್ಕು ಜನರಿದ್ದು, ಯೇಸುವು ಮುಖ್ಯವಾಗಿರುತ್ತಾನೆ. ಇಬ್ಬರು ಸ್ತ್ರೀಯರು ಶಿಕ್ಷೆಗೊಳಗಾಗಿರುವ ಯೇಸುವನ್ನು ಸಂತೈಸುತ್ತಿರುವಂತೆ ಕಾಣುತ್ತಿದ್ದು, ಒಬ್ಬ ಶಿಲುಬೆಯನ್ನಿಡಿದುಕೊಂಡಿದ್ದಾನೆ. ಇಲ್ಲಿಯೂ ಕೂಡ ಬಿಳಿ, ಕೆಂಪು ವರ್ಣದ ಉಡುಪನ್ನು ಧರಿಸಿರುವ ಯೇಸುವ ಸೃಜತೆಗೆ ಹತ್ತಿರವಾದಂತಿದೆ. ತಲೆಗೆ ಬಟ್ಟೆಯನ್ನು ಕಟ್ಟಿಕೊಂಡಿರುವ ಇಬ್ಬರು ಸ್ತ್ರೀಯರು ಕಪ್ಪು ಮತ್ತು ಬಿಳಿ, ನೀಲಿ ಉಡುಪುಗಳನ್ನು ಧರಿಸಿದ್ದಾರೆ. ಇನ್ನೊಬ್ಬ ತಿಳಿ ನೀಲಿ ವರ್ಣವನ್ನು ಧರಿಸಿದ್ದಾನೆ. ಹಸಿರು ಹಾಸಿದ ಹುಲ್ಲಿನ ಮಧ್ಯ ಇವರು ನಿಂತಿದ್ದು, ಹಿಂದೆ ಕಲ್ಲು ಬಂಡೆಗಳಿರುವುದು ಹಿರಿದಾಗಿ ಶಿಲುಬೆಯನ್ನೆ ತೋರಿಸಲಾಗಿದೆ. ಗಿಡದ ಎಲೆಗಳನ್ನು ತೋರಿಸಿ ಆಕಾಶವನ್ನು ವಿಶಾಲವಾಗಿ ಚಿತ್ರಸಲಾಗಿದೆ. ಬಿಳಿ, ನೀಲಿ, ಕೆಂಪು, ಹಳದಿ ಮತ್ತು ವರ್ಣಗಳನ್ನು ಇಲ್ಲಿ ಬಿಂಬಿಸಲಾಗಿದೆ. ೧೯೦೦ರಲ್ಲಿ ಕಲಾವಿದ ಆಂಟೋನಿ ಮೋಶ್ಚಿನಿಯು ರಚನೆಮಾಡಿರುವುದನ್ನು ಗಮನಿಸಬಹುದು. ಕುಲಶೇಖರದ ಹೋಲಿಕ್ರಾಸ್ ಮಂಗಳೂರಿನಲ್ಲಿ ನೆಲೆಗೊಂಡಿದೆ.

ಯೇಸುವನ್ನು ನೋಡಿ ರೋಧಿಸುತ್ತಿರುವ ದೃಶ್ಯ

ಐದು ಅಡಿ ಉದ್ದ, ಆರು ಅಡಿ ಅಗಲವಿರುವ ಸಂಯೋಜನೆಯಿಂದ ಕೂಡಿರುವ ಈ ಕಲಾಕೃತಿಯು ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿಸಲಾಗಿದೆ. ನಿಂತಿರುವ ಯೋಸುವು, ರೋಧಿಸುತ್ತಿರುವ ಮಹಿಳೆ ಮತ್ತು ಚೈನನ್ನಿಡಿದಿರುವ ವಿರೋಧಿಯು ಒಂದು ಕಾಲನ್ನು ಮೇಲೆತ್ತಿರುವಂತೆ ರೂಪಿಸಿ ಎತ್ತರಕ್ಕೆ ಶಿಲುಬೆಯನ್ನೇರಿಸಲಾಗಿದೆ. ಕಪ್ಪು, ಹಸಿರುಗಳಿಂದ ಭೂಮಿಯನ್ನು ಚಿತ್ರಿಸಿದ್ದಾರೆ. ಹಿಂದೆ ಆಕಾಶವನ್ನು ನೀಲಿವರ್ಣದಿಂದ ಚಿತ್ರಸಲಾಗಿದ್ದು, ಬಿಳಿ, ಹಸಿರು, ಹಳದಿ, ನೀಲಿ, ಕೆಂಪು, ಕಪ್ಪು ಬಣ್ಣಗಳಿಂದ ಆವೃತ್ತವಾಗಿರುವ ಕೃತಿಯಾಗಿದೆ. ಇದು ಗೋಡೆಯ ಮೇಲೆ ಚಿತ್ರಿತವಾಗಿರುವ ಕಲಾಕೃತಿಯಾಗಿದೆ. ೧೯೪೯ರಲ್ಲಿ ರಚನೆಯಾಗಿದ್ದು, ಪಾಶ್ಚತ್ಯ ಕಲಾವಿದನ ಕೈಯಿಂದ ಮಂಗಳೂರಿನ ಹೋಲಿಕ್ರಾಸ್ ಚರ್ಚ್‌ನಲ್ಲಿ ನೆಲೆಗೊಂಡಿದೆ.

ಹಿಂಸಾಕೃತ್ಯದೊಳಗೆ ಯೇಸು

ಐದು ಅಡಿ ಉದ್ದ, ನಾಲ್ಕು ಅಡಿ ಅಗಲವಿರುವ ಈ ಕಲಾಕೃತಿಯಲ್ಲಿ ಯೇಸುವನ್ನು ಶಿಕ್ಷೆಗೊಳಪಡಿಸ ಲಾಗಿದ್ದು, ಕೈಗೆ ಮತ್ತು ಕಾಲಿಗೆ ಮೊಳೆಯನ್ನು ಹೊಡೆಯುತ್ತಿರುವುದು

ತುಂಬಾ ರೋಧಿಸುತ್ತಿರುವಂತಿದೆ. ಒಬ್ಬ ಕೈಗೆ ಮಳೆಯಿಟ್ಟು ಹೊಡೆಯುತ್ತಿರುವಂತೆ ಬ್ರಾಸವಾಗಿದ್ದು, ರಕ್ತ ಚಿಮ್ಮುತ್ತಿರುವಂತೆ ತೋರಿದೆ. ಇನ್ನೊಬ್ಬ ಕೈಯಲ್ಲಿ ಹುಳಿ ಹಿಡಿದುಕೊಂಡಿರುವುದು ಹಿಂದೆ ಕಲ್ಲುಬಂಡೆಗಳ ಸಾಲು ಬಣ್ಣ ಬಣ್ಣದ ಆಕಾಶ ಅಲ್ಲಲ್ಲಿ ಶಿಲುಬೆಗಳನ್ನು ತೋರಿಸಿದ್ದು ಸಂಯೋಜನೆಯಿಂದ ಕೂಡಿದೆ. ತೈಲವರ್ಣದಿಂದ ಕೂಡಿದ ಈ ಕೃತಿಯು ಗೋಡೆಯ ಮೇಲೆ ಚಿತ್ರಿತವಾಗಿದೆ. ಬಿಳಿ, ನೀಲಿ, ಆಕಾಶನೀಲಿ, ಕಪ್ಪು, ಹಳದಿ ಬಣ್ಣಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಮಂಗಳೂರಿನ ಕುಲಶೇಖರ ಚರ್ಚ್‌ನ ಹೊರಾಂಗಣದಲ್ಲಿ ನೆಲೆಗೊಂಡಿದೆ.

ಭಕ್ತ ಧೈರ್ಯ ತುಂಬುತ್ತಿರುವುದು

ಐದು ಅಡಿ ಉದ್ದ, ನಾಲ್ಕು ಅಡಿ ಅಗಲವಿರುವ ಈ ಕಲಾಕೃತಿಯು ಗೋಡೆಯ ಮೇಲೆ ತೈಲವರ್ಣದಿಂದ ರಚಿಸಲಾಗಿದ್ದು, ಯೇಸುವು ಶಿಲುಬೆಯನ್ನೇರುವ ಸಂದರ್ಭದಲ್ಲಿ ಭಕ್ತನೊಬ್ಬ ಧೈರ್ಯ ತುಂಬುತ್ತಿರುವಂತೆ ಬ್ರಾಸವಾಗುತ್ತಿದೆ. ನಿಂತಿರುವ ಯೇಸುವು ಬಿಳಿ ಮತ್ತು ಕೆಂಪು ಉಡುಪನ್ನು ಧರಿಸಿದ್ದು, ಆಕರ್ಷಣೆ, ಹಿಂದೆ ಶಿಲುಬೆಯನ್ನಿಡಿದುಕೊಂಡಿರುವ ವ್ಯಕ್ತಿ, ಮುಂದೆ ನೀಲಿ ಮತ್ತು ಕಪ್ಪು ಬಟ್ಟೆಯನ್ನ ಧರಿಸಿರುವ ವ್ಯಕ್ತಿಯನ್ನು ದೃಶ್ಯ ನಿರೂಪಿಸುವ ಸಲುವಾಗಿ ಚಿತ್ರಿಸಲಾಗಿದೆ. ಭೂಮಿಯ ಮೇಲೆ ನಿಂತಿರುವ ಇವರು ಗಿಡ-ಮರ ಹಾಗೂ ಆಕಾಶವನ್ನು ಸೌಂದರ್ಯಕ್ಕೆ ತಕ್ಕಂತೆ ಚಿತ್ರಿಸಲಾಗಿದೆ. ಈ ಮೂವರಿಗಿನ್ನ ಭಿನ್ನವಾಗಿ ಶಿಲುಬೆಯನ್ನು ಬೃಹದಾಕಾರದಲ್ಲಿ ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ಈ ಚಿತ್ರ ಕೃತಿ ಸಂಯೋಜನೆಯಿಂದ ಕೂಡಿದೆ. ಇತ್ತೀಚಿನ ದಿನಗಳಲ್ಲಿ ರಚಿಸಿರುವ ಈ ಕಲಾಕೃತಿಯು ಮಂಗಳೂರಿನ ಕುಲಶೇಖರದ ಹೋಲಿಕ್ರಾಸ್ ಚರ್ಚ್‌ನಲ್ಲಿ ನೆಲೆಗೊಂಡಿದೆ.

ಅರಮನೆಯಲ್ಲಿ ನಿಂತಿರುವ ಯೇಸು

ಐದು ಅಡಿ ಉದ್ದ, ನಾಲ್ಕು ಅಡಿ ಅಗಲವಿರುವ ಈ ಕಲಾಕೃತಿಯು ತೈಲವರ್ಣದಿಂದ ರಚಿಸಲಾಗಿದ್ದು, ಬೃಹದಾಕಾರದ ಅರಮನೆ ಅದರ ಮುಂದೆ ನೋವಿನಿಂದ ನಿಂತಿರುವ ಯೇಸುವು ಮತ್ತು ಸಹಚರರು, ಏನೋ ನಿಗೂಡ ವಿರುವಂತೆ ಪ್ರಭಾವಿಸುತ್ತದೆ. ಇರಾಕ್‌ನ ಸೈನಿಕನೊಬ್ಬ ಹುಳಿಯನ್ನಿಡಿದುಕೊಂಡು ಶಿಕ್ಷೆಗೆ ಬನ್ನಿ ಎಂಬಂತೆ ತೋರುತ್ತದೆ. ಒಂದು ಮಗು ಹಾಗೂ ಸ್ತ್ರೀ ಇರುವುದು ವಿಶೇಷ. ಬೃಹದಾಕಾರದ ಕಟ್ಟವು ಪಾಶ್ಚಾತ್ಯರ ಶೈಲಿಯಲ್ಲಿರುವುದು ಬಣ್ಣ ಬಣ್ಣದಿಂದ ಕೂಡಿದೆ ಹಸಿರು, ನೀಲಿ, ಹಳದಿ, ಕೆಂಪು, ಬಿಳಿ, ಎಲ್ಲೋ ಮುಂತಾದ ವರ್ಣಗಳನ್ನು ಬಳಸಿ ಕಲಾಕೃತಿಗಳನ್ನು ಚಿತ್ರಿಸಲಾಗಿದೆ. ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿಸಲಾಗಿರುವ ಈ ಕೃತಿಯು ಕುಲಶೇಖರ ಚರ್ಚ್‌ನ ಆವರಣದಲ್ಲಿದೆ.

ಶಿಲುಬೆಯನ್ನೊರುತ್ತಿರುವ ದೃಶ್ಯ

ಐದು ಅಡಿ ಉದ್ದ, ನಾಲ್ಕು ಅಡಿ ಅಗಲವಿರುವ ಈ ಕಲಾಕೃತಿಯು ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿಸಲಾಗಿದ್ದು, ದೊಡ್ಡ ಕಟ್ಟಡದಿಂದ ಶಿಕ್ಷೆಯ ಕೊಠಡಿಯವರೆಗೆ ಕೊಂಡೊಯ್ಯುವ ಸಂದರ್ಭ ವಿರೋಧಿಗಳ ಇಬ್ಬರ ಸೈನಿಕರು ಯೇಸುವಿನ ಬೆನ್ನಮೇಲೆ ಶಿಲುಬೆಯನ್ನಿಟ್ಟು ದಬ್ಬುತ್ತಿರುವುದು, ಬಿಳುತ್ತಿರುವುದನ್ನು ನಿಲ್ಲಿಸುತ್ತಿರುವ ಒಬ್ಬ ಕೆಂಪು ಟೋಪಿ, ಹಸಿರು ಮತ್ತು ನೀಲಿ ಉಡುಪನ್ನು ಧರಿಸಿದ್ದಾನೆ. ಬಿಳಿ ಮತ್ತು ಕೆಂಪು ವರ್ಣದ ಉಡುಪನ್ನು ಧರಿಸಿರುವ ಯೇಸುವು ಸ್ವಲ್ಪ ಬಾಗಿದ್ದು, ರೋಧಿಸುತ್ತಿದ್ದಾನೆ. ಅವನ ಹಿಂದೆ ಹಳದಿ, ಗಿಳಿಹಸಿರು ಬಣ್ಣದ ಉಡುಪನ್ನು ತೊಟ್ಟಿರುವ ವ್ಯಕ್ತಿಯು ಕೂಡ ಕೆಂಪು ಟೊಪ್ಪಿಗೆಯನ್ನುಟ್ಟಿದ್ದಾನೆ. ಕೆಳಗಡೆ ಟೈಲ್ಸ್‌ನ ದಾರಿ ಮುಂದೆ ದೊಡ್ಡದಾದ ಬಾಗಿಲುಗಳಿದ್ದು ಕೋಟೆಯ ಆವರಣವನ್ನು ನೋಡುವಂತಿದೆ ಈ ಕಲಾಕೃತಿಯು ಗೋಡೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದೆ. ಇದು ಮಂಗಳೂರಿನ ಕುಲಶೇಖರ ಚರ್ಚ್‌ನಲ್ಲಿ ನೆಲೆಗೊಂಡಿದೆ.

ತಾಯಿ ಮತ್ತು ಮಗು

ಐದು ಅಡಿ ಉದ್ದ, ನಾಲ್ಕು ಅಡಿ ಅಗಲವಿದ್ದು, ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿತವಾಗಿರುವ ಈ ಚಿತ್ರ ಕೃತಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ಮುಖ್ಯ ಭೂಮಿಕೆಯಲ್ಲಿ ಕಾಣಬಹುದು. ತಾಯಿ ಮೇರಿ ಮತ್ತು ಬಾಲ ಯೇಸುವನ್ನೊಲುತ್ತದೆ. ಕಪ್ಪು ಬಟ್ಟೆಯನ್ನು ಧರಿಸಿ, ಬಿಳಿಯ ಶಾಲನ್ನು ಹೊತ್ತಿರುವ ಮೇರಿಯ ತಲೆಗೆ ಕಿರೀಟವನ್ನು ಧರಿಸಿದ್ದಾರೆ. ಬಳಿಉಡುಪನ್ನು ಮಗುವಿಗೆ ಹಾಕಲಾಗಿದ್ದು, ಆಟ ವಾಡುವಂತಿದೆ. ಇದು ಮುಖ್ಯವಾಗಿ ವ್ಯಕ್ತಿಯ ಚಿತ್ರವಾಗಿರುವುದರಿಂದ ಸಂಯೋಜನೆಯ ದೃಶ್ಯದ ರೂಪದಲ್ಲಿಯೇ ರೂಪುಗೊಂಡಿದೆ. ಮೋಡದ ಮಧ್ಯೆ ನಿಂತಿರುವಂತಿರುವ ಈ ಕಲಾಕೃತಿಯಲ್ಲಿ ಕೆಂಪು, ಬಿಳಿ, ನೀಲಿ, ಹಳದಿ ವರ್ಣಗಳಿಂದ ರಚಿಸಲಾಗಿದೆ. ಈ ಕಲಾಕೃತಿಯು ಕುಲಶೇಖರದ ಹೋಲಿಕ್ರಾಸ್ ಚರ್ಚ್‌ನಲ್ಲಿ ನೆಲೆಗೊಂಡಿರುವುದನ್ನು ಕಾಣಬಹುದು. ಇದು ಇತ್ತೀಚೆಗೆ ರಚನೆಯಾಗಿದೆ.

ಹಿಂಸೆಗೊಳಗಾಗಿರುವ ಯೇಸು

ಐದು ಅಡಿ ಉದ್ದ, ನಾಲ್ಕು ಅಡಿ ಅಗಲವಿರುವ ಗೋಡೆಯ ಮೇಲೆ ಚಿತ್ರಿತವಾಗಿರುವ ಈ ಕಲಾ ಕೃತಿಯನ್ನು ತೈಲವರ್ಣದಿಂದ ಚಿತ್ರಿಸಲಾಗಿದೆ. ಮೂವರು ವಿರೊಧಿಗಳು ಬಿದ್ದಿರುವ ಯೇಸುವನ್ನು ಎತ್ತುತ್ತಿರುವುದು ಕೈಯಲ್ಲಿ ಉಳಿಯನ್ನಿಡಿದಿರುವ ಹಳದಿ, ಕೆಂಪು ಉಡುಪನ್ನು ಧರಿಸಿರುವ ವ್ಯಕ್ತಿ ನಿಂತಿದ್ದಾನೆ. ಬಿಳಿ, ನೀಲಿ, ಹಸಿರು ಉಡುಪನ್ನು ಧರಿಸಿರುವ ವ್ಯಕ್ತಿ ಯೇಸುವನ್ನು ಮೇಲಕ್ಕೆತ್ತುತ್ತಿರುವುದು. ನೀಲಿ ಉಡುಪನ್ನು ಧರಿಸಿರುವ ವ್ಯಕ್ತಿಯು

ಶಿಲುಬೆಯನ್ನಿಡಿದ್ದಾನೆ. ಹಿಂದೆ ಬೆಟ್ಟದ ಸಾಲುಗಳು, ಗಿಡ, ಮರದ ಜೊತೆಗೆ ನೀಲಿಯಿಂದ ಮೋಡವನ್ನು ಚಿತ್ರಿಸಲಾಗಿದೆ. ಬಿಳಿ, ನೀಲಿ, ಕೆಂಪು, ಹಳದಿ, ಕಪ್ಪು, ಹಸಿರು ವರ್ಣಗಳನ್ನು ಇಲ್ಲಿ ಹೆಚ್ಚು ಬಳಸಿಕೊಳ್ಳಲಾಗಿದೆ. ಮಂಗಳೂರಿನ ಕುಲಶೇಖರ ಚರ್ಚ್‌ನಲ್ಲಿ ನೆಲೆಗೊಂಡಿದೆ.

ಸ್ವರ್ಗಕ್ಕೆ ಹಾರುತ್ತಿರುವ ಯೇಸು

ಈ ಕಲಾಕೃತಿಯನ್ನು ತೈಲವರ್ಣದಿಂದ ಗೋಡೆಯ ಮೇಲೆ ಚಿತ್ರಿತವಾಗಿದ್ದು, ಭೂಮಿಯಿಂದ ಸ್ವರ್ಗಕ್ಕೆ ಹೋಗುತ್ತಿರುವಂತೆ ಚಿತ್ರಿಸಲಾಗಿದೆ. ವ್ಯಕ್ತಿ ಚಿತ್ರದಂತೆ ಭಾಸವಾಗಿರುವ ಈ ಕೃತಿಯು ಎರಡು ಕೈಯನ್ನು ಅಗಲಿಸಿ, ನಿಮ್ಮಿಂದ ದೂರ ಹೋಗುತ್ತಿರುವೆ ಎಂದು ಸಾರುವಂತಿದೆ. ಬಿಳಿ ಉಡುಪನ್ನು ಧರಿಸಿದ್ದು, ಅದರ ಮೇಲೆ ಕೆಂಪು ವಸ್ತ್ರವು ಜಾರಿದೆ. ಕೂದಲನ್ನು ಬಿಟ್ಟಿರುವ ಯೇಸುವು ದೇವದೂತರತ್ತ ಕೈ ಬಿಸಿ ಹೋಗುತ್ತಿರುವಂತೆ ಚಿತ್ರಿಸಿದ್ದು, ಹಿಂದೆ ಮೋಡವು ಘರ್ಜಿಸುತ್ತಿದೆ. ಒಟ್ಟಾರೆ ಕಲಾಕೃತಿಯು ಬಿಳಿ, ನೀಲಿ, ಕೆಂಪು ವರ್ಣಗಳಿಂದಾವೃತ್ತವಾಗಿರುವ ಕೃತಿಯು ರಂಜನೆಯಲ್ಲಿರುವುದಂತೂ ನಿಜ. ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನಲ್ಲಿ ನೆಲೆಗೊಂಡಿರುವ ಈ ಚಿತ್ರಕಲಾಕೃತಿಯನ್ನು ಆಂಟೋನಿ ಮೋಶ್ಚಿನಿ ರಚಿಸಿದ್ದಾನೆ.

ಭಿತ್ತಿ ಚಿತ್ರಗಳ ರಚನೆಯಲ್ಲಿ ತೊಡಗ ಬೇಕಾದರೆ ಮುಂಚಿತವಾಗಿ ಅರಿತುಕೊಂಡಿರಬೇಕು. ಹಾಗೆಯೇ ಬಿತ್ತಿ ಚಿತ್ರ ಪರಂಪರೆಯು ೧೯ ಮತ್ತು ೧೭ನೇ ಶತಮಾನದಲ್ಲಿ ವಿವಿಧ ಆಯಾಮಗಳಲ್ಲಿ ರಚನೆ ಮಾಡಲಾಗಿದೆ. ಆದರೆ ಪ್ರಸ್ತುತ ಅಧ್ಯಾಯದಲ್ಲಿ ಸ್ವಲ್ಪ ಭಿನ್ನವೆನಿಸುತ್ತದೆ. ಕರಾವಳಿ ಭಾಗದಲ್ಲಿರುವ ವಿಶೇಷ ಚರ್ಚ್‌ಗಳು, ಕಾಲೇಜುಗಳು ಮತ್ತು ಖಾಸಗಿ ಮನೆಗಳಲ್ಲಿ ಭಿತ್ತಿ ಚಿತ್ರವನ್ನು ಕಾಣಬಹುದು. ಅದು ಗೋಡೆಯ ಮೇಲೆ ತೈಲವರ್ಣದಿಂದ ನೇರವಾಗಿ ಚಿತ್ರಿಸಿರುವುದು ಅಂತಹ ಚಿತ್ರಕೃತಿಗಳ ಕುರಿತು ಚಿತ್ರ ವಿಮರ್ಶೆಯ ಜೊತೆಗೆ ಕಲಾಕೃತಿಗಳ ನೋಟವನ್ನು ಸ್ಪಷ್ಟವಾಗಿ ತೋರಿಸುವಲ್ಲಿ ಯಶಸ್ವಿಯಾಗಿದ್ದು, ಕರಾವಳಿ ಕರ್ನಾಟಕದ ಕೆಲಭಾಗಗಳಲ್ಲಿ ಮಾತ್ರ ಭಿತ್ತಿ ಚಿತ್ರಗಳು ಕಂಡುಬರುತ್ತವೆ. ವಿಶೇಷವಾಗಿ ಸೆಂಟ್ ಅಲೋಶಿಯಸ್ ಚರ್ಚ್, ಮಂಗಳೂರು, ಕೆಥೊಡ್ರಲ್ ಚರ್ಚ್ ಕಾರವಾರ, ಕುಲಶೇಖರ ಚರ್ಚ್ ಮಂಗಳೂರು, ಬಿಷಪ್‌ಗಳಲ್ಲಿ ಸೆಂಟ್ ಅಲೋಶಿಯಸ್ ಕಾಲೇಜೊಂದರಲ್ಲಿ ರಚಿಸಿರುವುದನ್ನು ಕಾಣಬಹುದಾಗಿದೆ.

* * *




ಜ್ಞಾನ ಸ್ನಾನದ ದೃಶ್ಯ



ಚರ್ಚದ ಅರಸರು



ಜಾನ್ ದಿ ಬ್ರೇಟ್



ಯೇಸು ಮತ್ತು ಗರುಡ



ಭಕ್ತರೊಂದಿಗೆ ಯೇಸು.



ಹೂವಿನೊಂದಿಗೆ ತೆಲಾಡುತ್ತಿರುವ ದೇವದೂತರು



ನೀರನ್ನು ದ್ರಾಕ್ಷೀರಸ ಮಾಡುತ್ತಿರುವ ಯೇಸು




ಭಕ್ತನನ್ನು ಸಂತೈಸುತ್ತಿರುವ ಯೇಸು



ಎಳನೆಯ ವಯಸ್ಸಿನಲ್ಲಿ ದೇವರ ಕುರಿತು ಜನರಿಗೆ ಬೋಧಿಸುತ್ತಿರುವುದು



ಸೈಂಟ್ ಅಲೋಶಿಯಸ್




ರಡಲ್ಫ್ ಅಕ್ರಿಮನ್



ಯೇಸುವನ್ನು ಶಿಲುಬೆಗೇರಿಸಿರುವುದು.




ತಂದೆ,ತಾಯಿಯೊಂದಿಗೆ ಯೇಸು



ಪಾದ್ರಿಗಳು ಮಗುವಿನೊಂದಿಗೆ



ಸೆಂಟ್ ಕ್ಲೇರ್ (ಸಿಸ್ಟರ್)



ಪರಿಜೋರು



ಮೇರಿ ಮತ್ತು ಯೇಸುವಿನೊಂದಿಗೆ ಮೂರು ಅರಸರು




ಕಪ್ಪು ಅಲೋಶಿಯಸ್‌ನು ಅಧಿಕಾರ ತ್ಯಾಗ ಮಾಡುತ್ತಿರುವುದು



ಸೆಂಟ್ ಮಾರ್ಕ್




ಯೇಸುವಿನ ಜನನಿ




ಯೇಸುವನ್ನು ಶಿಲುಬೆಗೇರಿಸಿರುವದು




ಸ್ವರ್ಗಾರೋಹಣ




ಯೇಸುವಿನ ಭಕ್ತೆ



ರೋಗಿಯನ್ನು ಸಂತೈಸುತ್ತಿರುವುದು



ವ್ಯಕ್ತಿ ಚಿತ್ರ



ದೇವದೂತರು



ತಾಯಿ ಮೇರಿ



ನೆಲಕ್ಕೆ ಬಿದ್ದಿರುವ ಯೇಸು



ಶಿಕ್ಷೆಗೊಳಗಾಗಿರುವುದು



ಹಿಂಸೆಗೊಳಗಾಗಿರುವ ಯೇಸು



ಯೇಸುವಿಗೆ ನಮಿಸುತ್ತಿರುವ ಭಕ್ತೆ



ಭಕ್ತರ ಮಡಿಲಲ್ಲಿ ಯೇಸು



ಶಿಲುಬೆಯಿಂದ ಇಳಿಸಿದಾಗ



ಅರಮನೆಯಲ್ಲಿ ನಿಂತಿರುವ ಯೇಸು



ಯೇಸುವಿನ ಬಟ್ಟೆ ಕಳಚುತ್ತಿರುವುದು



ಶಿಲುಬೆಯನ್ನೇರಿಸುತ್ತಿರುವ ದೃಶ್ಯ




ಭಕ್ತರ ಆರೈಕೆ



ಭಕ್ತ ಧೈರ್ಯ ತುಂಬುತ್ತಿರುವುದು



ಯೇಸುವನ್ನು ನೋಡಿ ರೋದಿಸುತ್ತಿರುವುದು





ಬೆಳಕು


ಮೇರಿ


ಸೈಂಟ್ ಅಲೋಶಿಯಸು


ಯೇಸು


ಆಧುನಿಕ ಭಿತ್ತಿ


ತಂದೆಯೊಂದಿಗೆ ಯೇಸು

ಅಧ್ಯಾಯ : ನಾಲ್ಕು

ಕರಾವಳಿ ಕರ್ನಾಟಕದ ಕ್ರೈಸ್ತ ಗಾಜಿನ ಚಿತ್ರಗಳು

ಗಾಜಿನ ಚಿತ್ರಕಲೆಯ ಹುಟ್ಟು ಬೆಳವಣಿಗೆಗಿಂತ ಗಾಜಿನ ಆವಿಷ್ಕಾರದ ವಿಧಾನಗಳು ಪುರಾತನವಾಗಿದ್ದು, ಕುತೂಹಲಕರವಾಗಿದೆ. ಗಾಜು ತಯಾರಿಸುವ ರೀತಿಯನ್ನು ಕಂಡುಕೊಂಡುದುದೇ ಆಕಸ್ಮಿಕ ಘಟನೆಯಿಂದ ಪಿನಿಷಿಯನ್ನರು ಈಜಿಪ್ತ್‌ನಿಂದ ವಾಷಿಂಗ್ ಸೋಡ ಕೊಂಡುಕೊಳ್ಳುತ್ತಿದ್ದರು. ಬೇಲೂಸ್‌ನದಿಯ ತೀರದಲ್ಲಿ ವಾಷಿಂಗ್ ಸೋಡವನ್ನು ಸಾಗಿಸುತ್ತಿರುವ ಹಡಗೊಂದು ಬಂದಿತ್ತು. ನಾವಿಕರು ನದಿಯ ದಂಡೆಯ ಮರಳಿನ ಮೇಲೆ ಅಡುಗೆ ಮಾಡಲು ತೊಡಗಿದರು. ಆ ಸಂದರ್ಭಕ್ಕೆ ಒಲೆ ಹೂಡಲು ಕಲ್ಲುದೊರೆಯದಿದ್ದಾಗ ವಾಷಿಂಗ್ ಸೋಡಾದ ಹಂಟೆಗಳನ್ನು ಕಲ್ಲುಗಳಂತೆ ಬಳಸಿದರು. ಒಲೆ ಹೊತ್ತಿಸಿದ ಸ್ವಲ್ಪ ಸಮಯದಲ್ಲಿಯೇ ಪಾರದರ್ಶಕ ದ್ರವ್ಯದ ಪ್ರವಾಹ ಹರಿಯುವುದು. ಅವರಿಗೆ ಕಾಣಿಸಿತು. ಸೋಡ ಮತ್ತು ಬೆಂಕಿಯ ಶಾಖ ತಗುಲಿದಾಗ ಈ ರೀತಿಯ ದ್ರವ್ಯ ಹರಿಯುವುದನ್ನು ಮನಗಂಡರು. ಈ ಹರಿಯುವ ಪ್ರವಾಹವೇ ದ್ರವರೂಪದ ಗಾಜು ಎಂದು ಗುರುತಿಸಲ್ಪಟ್ಟಿತು. ಹೀಗೆ ಆಕಸ್ಮಿಕವಾಗಿ ಕಂಡುಕೊಂಡ ಗಾಜಿನ ತಯಾರಿಕೆಯ ಈ ವಿಧಾನವನ್ನು ಪಿನಿಷಿಯನ್ನರು ಅಭಿವೃದ್ಧಿಪಡಿಸಿ ಗಾಜಿನ ಸಾಮಗ್ರಿಗಳನ್ನು ತಯಾರಿಸಲು ಪ್ರಾರಂಭಿಸಿದರು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕ್ರಿ.ಶ. ಆರಂಭದ ಹೊತ್ತಿಗೆ ಗಾಜಿನ ಕಲಾತ್ಮಕ ಬಳಕೆ ಹಾಗೂ ವಿವಿಧ ವಸ್ತುಗಳ ತಯಾರಿಕೆ ನಡೆಯುತ್ತಿದ್ದರೂ ಮಧ್ಯಕಾಲದಲ್ಲಿ ಬೆಳೆದ ವಾಸ್ತು ಕಲೆಗಳಲ್ಲಿ ಗಾಜಿನ ಕಲೆ ವಿಪುಲವಾಗಿ ಬೆಳೆದದ್ದನ್ನು ಕಾಣುತ್ತೇವೆ. ಆ ಕಾಲದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹುಟ್ಟಿಕೊಂಡ ರೋಮನೆಸ್ಕ್, ಗಾಂಥಿಕ್, ಬಾರೋಕ್ ಕಲೆ ಹಾಗೂ ನಂತರದ ಪುನರುಜ್ಜೀವನ ಕಾಲದ ಕಲೆಗಳಲ್ಲಿ ಗಾಜೀನ ಕಲಾತ್ಮಕ ಬಳಕೆ ಹಾಗೂ ಗಾಜಿನ ಚಿತ್ರಕಲೆಯನ್ನು ವೈವಿಧ್ಯಮಯವಾಗಿ ಬಳಸಿಕೊಳ್ಳಲಾಗಿದೆ.

ರೋಮನೆಸ್ಕ ಕಲೆಯು ೧೧ನೇ ಶತಮಾನದಿಂದ ೧೩ನೇ ಶತಮಾನದವರೆಗೆ ಸುಸ್ಥಿತಿಯಲ್ಲಿತ್ತು, ಈ ಕಾಲವಧಿಯಲ್ಲಿ ನಿರ್ಮಾಣಗೊಂಡ ಕೆಥೀಡ್ರಿಲ್‌ಗಳಲ್ಲಿ ಭಿತ್ತಿಚಿತ್ರಗಳು, ಉಬ್ಬುಶಿಲ್ಪಗಳು ಜೊತೆಗೆ ಗಾಜಿನ ಚಿತ್ರಗಳು ಹೇರಳವಾಗಿ ರಚನೆಗೊಂಡಿದ್ದನ್ನು ನೋಡುತ್ತೇವೆ.

೧೧ನೇ ಶತಮಾನದಲ್ಲಿ ಆಗಸ್ತ ಬರ್ಗ್ ಕೆಥೀಡ್ರಲ್ Chalons-SurMarne ಕೆಥೀಡ್ರಲ್ ಕ್ರಿ.ಶ. ೧೧೪೫ರಲ್ಲಿ ನಿರ್ಮಾಣಗೊಂಡ "Cathedral" ಕೆಥೀಡ್ರಲ್, ೧೦೫೫-೧೧೩೦ ರ ಕಾಲವಧಿಯಲ್ಲಿ ನಿರ್ಮಿಸಲಾದ Durnum Cathedral ಜರ್ಮನಿಯಲ್ಲಿ ರೋಮನೆಸ್ಕ್ ಶೈಲಿಯ ಚರ್ಚ್‌ಗಳಲ್ಲಿ ಗಾಜಿನ ಚಿತ್ರಗಳಿವೆ. ಮುಖ್ಯವಾಗಿ ಇಲ್ಲಿ ಧರ್ಮಗುರುಗಳ ಕ್ರಿ.ಶ. ಕಥೆಗಳ ಅಲಂಕಾರಿಕ ನಕ್ಷೆಗಳು ಹಾಗೂ ಕಟ್ಟಡಗಳಿಗೆ ಧನಸಹಾಯ ನೀಡಿದವರ ಚಿತ್ರಗಳನ್ನು ಗಾಜಿನ ಮೇಲೆ ಬರೆಯಲಾಗಿದೆ.

ಐತಿಹಾಸಿಕವಾಗಿ ಭಾರತದಲ್ಲಿ ಗಾಜಿನ ಕಲಾಕೃತಿಗಳು ಅಧಿಕೃತವಾಗಿ ಲಭ್ಯವಾಗಿದ್ದು, ತಕ್ಷಶಿಲೆ ಎಂಬ ಪ್ರದೇಶದಲ್ಲಿ ಇಲ್ಲಿನ ದಿಬ್ಬಗಳ ಉತ್ಖನನದಲ್ಲಿ ಗಾಜಿನ ಕಲಾತ್ಮಕ ವಸ್ತುಗಳು ದೊರಕಿದ್ದು, ಇವು ಕ್ರಿ.ಪೂ. ೫ನೇ ಶತಮಾನಕ್ಕೆ ಸಂಬಂಧಪಟ್ಟಿವೆ. ಭಾರತದಲ್ಲಿ ಕ್ರಿ.ಪೂ. ಶತಮಾನಗಳಲ್ಲಿ ಆಳ್ವಿಕೆ ಮಾಡಿದ ಮೌರ್ಯರು ನಂತರದ ಶಾತವಾಹನರು, ಗುಪ್ತರು, ಕುಶಾನರು ಮುಂತಾದ ಅರಸು ಮನೆತನಗಳ ಕಾಲದಲ್ಲಿ ಗಾಜಿನ ಚಿತ್ರಕಲೆಯ ಬಗ್ಗೆ ಪ್ರತ್ಯೇಕ ಉಲ್ಲೇಖಗಳು ದೊರಕದೆ ಹೋದರೂ ಅವರ ಜನ ಜೀವನದ ಭಾಗವಾಗಿ ಗಾಜಿನ ಕಲಾತ್ಮಕ ವಸ್ತುಗಳು ಬಳಸಲ್ಪಡುತ್ತಿದ್ದ ಬಗ್ಗೆ ಪರೋಕ್ಷವಾಗಿ ತಿಳಿದುಬರುತ್ತದೆ. ಆ ಕಾಲದ ಶಿಲ್ಪ, ಚಿತ್ರಗಳಲ್ಲಿ ರಚನೆಗೊಂಡಿರುವ ಆಭರಣ ಹಾಗೂ ವಸ್ತುಗಳಲ್ಲಿ ಕೆಲವು ಗಾಜಿನಿಂದ ರಚನೆಮಾಡಿರುವುದು ಕಂಡುಬರುತ್ತದೆ.

ಕರ್ನಾಟಕದ ಗಾಜಿನ ಚಿತ್ರಕಲೆಯ ಪ್ರಾಚೀನತೆಯ ಬಗ್ಗೆ ನಿಖರವಾದ ದಾಖಲೆಗಳು ದೊರಕುವುದು ಪಾಶ್ಚಾತ್ಯರ ಆಗಮನದ ನಂತರವೇ ಆದರೂ ಅದಕ್ಕಿಂತ ಪೂರ್ವದಲ್ಲಿ ಈ ಪ್ರದೇಶದಲ್ಲಿ ಗಾಜಿನ ತಯಾರಿಕೆ ಹಾಗೂ ಗಾಜಿನ ಕಲಾತ್ಮಕತೆ ಬಳಕೆಯಲ್ಲಿದ್ದ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ. ಯಾದಗಿರಿ ತಾಲೂಕಿನ ಹಲವು ಪ್ರದೇಶಗಳು, ಸುರಪುರ ತಾಲೂಕಿನ ಜಮಾಲಪುರಗಳಲ್ಲಿ ಗಾಜುತಯಾರಿಸುವ ಕೇಂದ್ರಗಳಿದ್ದ ಬಗ್ಗೆ ಕುರುಹುಗಳು ಲಭ್ಯವಾಗಿವೆ. ಅಲ್ಲಿ ಗಾಜು ತಯಾರಿಸುತ್ತಿದ್ದ ಕುಲುಮೆಯ ಅವಶೇಷ ಹಾಗೂ ಯಥೇಚ್ಚ ಪ್ರಮಾಣದ ಗಾಜಿನ ತುಂಡುಗಳು ಕಂಡುಬಂದಿವೆ. ಇವು ಕ್ರಿ.ಪೂ. ಇಲ್ಲಿವೆ. ಕ್ರಿ.ಶ. ಆರಂಭದ ಕಾಲದವುಗಳಾಗಿರಬೇಕೆಂದು[೧] ಊಹಿಸಲಾಗಿದೆ.

ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹನ್ನೆರಡನೇ ಶತಮಾನದ ಸುಮಾರಿಗೆ ಚರ್ಚುಗಳಿದ್ದವೆಂದು ತಿಳಿದುಬರುತ್ತದೆ. ಪ್ರ ಬೋರ್ಡೆನ್ ಕಟಲನಸ್ ದಿ ಸೆವೆರೋ ಎಂಬ ಪಾದ್ರಿಯ ನೇತೃತ್ವದಲ್ಲಿ ಡಾಯಿನಿಕನ್ ಕ್ರೈಸ್ತರು ೧೩೨೫ರಲ್ಲಿ ಮೈಸೂರು ರಾಜ್ಯದಲ್ಲಿ ತಮ್ಮ ಮತಪ್ರಸಾರದ ಪ್ರಯತ್ನವನ್ನು ಮೊಟ್ಟಮೊದಲಿಗೆ ಮಾಡಿದರು. ೧೪೪೫ರಲ್ಲಿ ವಿಜಯನಗರದ

೧. ಪರ್ವಿನ್ ಸುಲ್ತಾನ್ (ಸಂ.) : ಕಲಾಚರಿತ್ರೆ, ಪುಟ-೧೭೭

ಕ್ರೈಸ್ತನೊಬ್ಬ ದಿವಾನನಾಗಿದ್ದಾನೆಂಬ ಉಲ್ಲೇಖವಿದೆ. ೧೩೩೫ರಷ್ಟು ಹಿಂದೆಯೇ ಬೈಬಲನ್ನು ಕನ್ನಡದಲ್ಲಿ ತರುವ ಪ್ರಯತ್ನ ನಡೆಯಿತು. ೧೫೪೨ರಲ್ಲಿ ಲೋಯೋಲಾದ ಸಂತ ಇನ್ನೇಶಿಯಸ್‌ನ ಶಿಷ್ಯಸಂತ ಫ್ರಾನ್ಸಿಸ್ ಕ್ಸೇವಿಯರ್ ಕನ್ನಡ ನಾಡಿನಲ್ಲೆಲ್ಲಾ ಸಂಚರಿಸಿ ಕ್ರೈಸ್ತ ಮತವನ್ನು ಪ್ರಚಾರ ಮಾಡಲು ಪ್ರಯತ್ನ ಪಟ್ಟನೆಂದು ತಿಳಿದುಬರುತ್ತದೆ. ೧೫೮೮ರ ಸುಮಾರಿಗೆ ಗೋವೆಯ ಕ್ರೈಸ್ತರು "ಕನ್ನಡ ಮಿಶನ್" ಎಂಬ ಧಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಿದರು. ೧೭೦೪ರ ಸಂದರ್ಭದಲ್ಲಿ ಪ್ರಬಲವಾದ ಸಂಸ್ಥೆಯಾಗಿ ಶ್ರೀರಂಗಪಟ್ಟ "ರೋಂ ಸನ್ಯಾಸಿ"ಗಳ ಕೇಂದ್ರವಾಯಿತು.

೧೯ನೇ ಶತಮಾನದ ಪ್ರಾರಂಭಕ್ಕೆ ಸಂಬಂಧಿಸಿದ ಚರ್ಚ್‌ಗಳು ಆರಾಧನಾ ಮಂದಿರಗಳು ಕರಾವಳಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಕಂಡುಬರುತ್ತವೆ. ಸಂತ ಅಲೋಶಿಯಸ್, ಕುಲಶೇಖರದ ಹೋಲಿಕ್ರಾಸ್ ಚರ್ಚ್, ಕೆಥೆಡ್ರಲ್ ಚರ್ಚ್, ತುಂಬಾ ಹಳೆಯದಾಗಿದ್ದು, ಇವು ಗಾಥಿಕ್ ಶೈಲಿಯಲ್ಲಿ ನಿರ್ಮಾಣಗೊಂಡಿವೆ. ಬಾಗಿಲು ಕಿಟಕಿಗಳು ಸಹ ಅದೇ ವಿನ್ಯಾಸವನ್ನು ಹೊಂದಿದ್ದು, ಕಿಟಕಿಗಳಲ್ಲಿ ಬಣ್ಣದ ಗಾಜುಗಳ ಚಿತ್ರಗಳಿವೆ. ಹೊರಗಿನ ಬೆಳಕಿನಿಂದ ಮನೋಹರವಾಗಿ ಕಾಣುತ್ತೇವೆ. ಚರ್ಚ್‌ದ ಪೀಠದ ಎಡ ಮತ್ತು ಬಲ ಗೋಡೆಗಳ ವೃತ್ತಾಕಾರದ ಕಿಟಕಿಗಳಲ್ಲಿ ಸುಂದರವಾದ ಗಾಜಿನ ಚಿತ್ರಗಳಿವೆ. ಚರ್ಚ್‌ನ ಕಂಬಗಳ ಸಾಲುಗಳ ಚೂಪಾದ ಗೂಡುಗಳಲ್ಲಿ ಪೀಠದ ತ್ರಿಕೋನಾಕಾರದ ಕಿಟಕಿಗಳಲ್ಲಿ ಕ್ರಿಸ್ತ ಕಥಾನಕ ದೃಶ್ಯಗಳನ್ನು ೧೯೦೦ರಲ್ಲಿ ಪ್ರಾರಂಭವಾದ ದಶಕದಲ್ಲಿ ಫ್ರಾನ್ಸ್‌ನಿಂದ ತಂದು ಅಳವಡಿಸಲಾಗಿದೆ.

೧೮ ಮತ್ತು ೧೯ನೇ ಶತಮಾನದಲ್ಲಿ ಕರಾವಳಿ ಕರ್ನಾಟಕದ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಅನೇಕ ಸ್ಥಳಗಳಲ್ಲಿ ಹಲವಾರು ಚರ್ಚ್‌ಗಳು ನಿರ್ಮಾಣಗೊಂಡಿದ್ದನ್ನು ಕಾಣಬಹುದು. ಮಂಗಳೂರು ನಗರದಲ್ಲಿಯೇ ಸಾಕಷ್ಟು ಚರ್ಚ್‌ಗಳು ಸಿಗುತ್ತವೆ. ಇಂತಹ ಅನೇಕ ಚರ್ಚ್‌ಗಳಲ್ಲಿ ಗಾಜಿನ ಚಿತ್ರಗಳನ್ನು ನೋಡಬಹುದು. ೧೮೮೫ರಲ್ಲಿ ನಿರ್ಮಾಣಗೊಂಡ ಮಂಗಳೂರಿನ ಸಂತ ಅಲೋಷಿಇಯಸ್ ಚರ್ಚ್‌ನಲ್ಲಿ ಕೋಮ್‌ನಲ್ಲಿರುವ ಸಂತ ಫಿಲಿಫ್ ಚರ್ಚ್‌ನ ಮಾದರಿಯನ್ನು ಹೋಲುವಂತೆ ನಿರ್ಮಿಸಲಾಗಿದೆ. ಈ ಚರ್ಚ್‌ನ್ನು ಫಾದರ್ ಜೋಸೆಪ್‌ರು ನಿರ್ಮಿಸಿದರು. ಚರ್ಚ್‌ನ ಒಳಗೋಡೆಯಲ್ಲಿ ಕಲಾವಿದ ಆಂಟೋನಿ ಮೋಶ್ಚಿನಿ ರಚಿಸಿದ ಭಿತ್ತಿ ಚಿತ್ರ ಮತ್ತು ತೈಲ ಚಿತ್ರ ವರ್ಣಗಳಿವೆ. ಇವು ಫ್ರೆಸ್ಕೊ ಹಾಗೂ ಸೆಸ್ಕೊ ಪದ್ಧತಿಯಲ್ಲಿ ರಚನೆಗೊಂಡಿವೆ. ಈ ಚಿತ್ರ ಸರಣಿಯನ್ನು ಕರಾವಳಿ ಕರ್ನಾಟಕದ ಅನೇಕ ಚರ್ಚ್‌ಗಳಲ್ಲಿ ಪ್ರಾರಂಭಿಸಿ, ಉತ್ತಮವಾದ ಕಲಾಕೃತಿಗಳನ್ನು ರಚಿಸಿರುವ ಗಾಜಿನ ಚಿತ್ರಗಳನ್ನು ಬಾಗಿಲು ಮತ್ತು ಅಲಂಕಾರಕ್ಕಾಗಿ ಗೋಡೆಗೆ ಬಳಸಲಾಗಿದೆ. ಹೆಚ್ಚು

ಬಳಸಲಾಗಿರುವುದು ೧೮೯೯ ರಲ್ಲಿ ಇಲ್ಲಿ ಕಾಣಸಿಗುವ ಚಿತ್ರಗಳು ಯೇಸುವಿಗೆ ಸಂಬಂಧಿಸಿದ್ದಾಗಿವೆ.[೨]

ಇಲ್ಲಿ ಕಾಣಸಿಗುವ ಚರ್ಚ್‌ಗಳಲ್ಲಿ ಚರ್ಚಿನ ಪೂರ್ವಗೋಡೆಯ (ಬಲಭಾಗ) ಕ್ರಿಸ್ತನ ಪೀಠ ಹೊಂದಿರುವ ಗೂಡಿನ ಎಡ ಮತ್ತು ಬಲಭಾಗದ ಕಿಟಕಿಗಳಿಗೆ ೨ ಗಾಜಿನ ಚಿತ್ರಗಳನ್ನು ಕಾಣಬಹುದು. ಧರ್ಮ ಪ್ರವರ್ತಕರಾದ Beatus caludin, colomier, s.s.j. ಹಾಗೂ stmargaitamemoria, Alaloque ರ ಚಿತ್ರಗಳೆನ್ನಬಹುದು. ಬಹುತೇಕ ಎಲ್ಲನೂ ಗಾಜಿನಿಂದ ರಚಿಸಿದ ಚಿತ್ರಗಳಾಗಿರಬಹುದು. ಭಿತ್ತಿ ಚಿತ್ರ ತೈಲ ವರ್ಣಚಿತ್ರ ಹಾಗೂ ಗಾಜಿನ ಚಿತ್ರಗಳಲ್ಲಿ ಮುಖ್ಯವಾಗಿ ಧರ್ಮಕ್ಕೆ ಸಂಬಂಧಿಸಿದಂತೆ ದಂತಕತೆಗಳು, ಪವಾಡಗಳು, ಪಾದ್ರಿಗಳು, ದೇವದೂತರು, ೧೨ಜನ ಶಿಷ್ಯಂದಿರು, ಚರ್ಚ್‌ನ ಸಹಾಯ ಮಾಡಿದಂತಹವರ ಕೆಲ ಚಿತ್ರಗಳನ್ನು ನೋಡಬಹುದು. ಹೆಚ್ಚಾಗಿ ಕಿಟಕಿ ಮತ್ತು ಬಾಗಿಲುಗಳಲ್ಲಿ ಇಟಲಿ ಶೈಲಿಯ ಚಿತ್ರಗಳನ್ನು ಕಾಣಬಹುದಾಗಿದೆ.

ಕರಾವಳಿ ಕರ್ನಾಟಕದ ಪ್ರಮುಖ ಚರ್ಚ್‌ಗಳಾದ ಕಂಕನಾಡಿಯ ಕ್ಲೋಯಿಸ್ಟ್ರೆಡ್ ಕಾರ್ಮಲ್ ಹೌಸ್‌ನಲ್ಲಿ ಗಾಜಿನ ಚಿತ್ರಗಳಿದ್ದು, ಸುಮಾರು ೧೦ ಅಡಿ ದೊಡ್ಡದಾಗಿವೆ. ಕಿಟಕಿಗಳಿಗೆಲ್ಲಾ ಚಿತ್ರವಿರುವ ಗಾಜನ್ನು ಹಾಕಲಾಗಿದ್ದು, ಫ್ರಾನ್ಸ್‌ನಿಂದ ಗಾಜನ್ನು ತಂದು, ಪ್ಯಾರಿಸ್ ಕಲಾವಿದನಿಂದ ೧೮೯೯ರಲ್ಲಿ ರಚಿಸಲಾಗಿದೆ. ಇಲ್ಲಿಯೂ ಕೂಡ ಚಿತ್ರವಿನ್ಯಾಸವಿರುವ ಕಲೆಯು ತುಂಬಾ ಗಾಢವಾದ ಪರಿಣಾಮವನ್ನುಂಟು ಮಾಡುತ್ತದೆ. ಹಾಗೆಯೇ ಕುಲಶೇಖರದ ಹೋಲಿಕ್ರಾಸ್, ಮಂಗಳೂರಿನ ಬೆಂದೂರನ ಸಂತ ಸೆಬಾಸ್ಟಿಯನ್ ಚರ್ಚ್ ಮತ್ತು ಮಂಗಳೂರಿನ ಫಾದರ್ ಮುಲ್ಲರ್ ಮೇಡಿಕಲ್ ಕಾಲೇಜ್ ಆವರಣದಲ್ಲಿರುವ ಚರ್ಚ್‌ನಲ್ಲಿಯೂ ಕೂಡ ವಿಶೇಷವಾಗಿ ಕಿಟಕಿ, ಯೇಸುವಿನ ವ್ಯಕ್ತಿ ಚಿತ್ರವಿರುವ ಅನೇಕ ಚಿತ್ರಕಲಾಕೃತಿಗಳು ಹಾಗೂ ಚಿತ್ರವಿನ್ಯಾಸವಿರುವ ಗಾಜಿನ ಚಿತ್ರಗಳನ್ನು ಇಲ್ಲಿ ಕಾಣಬಹುದಾಗಿದೆ. ಒಟ್ಟಾರೆಯಾಗಿ ಸಂಶೋಧನೆ ಕೈಗೊಂಡ ಸಮಯದಲ್ಲಿ ಸಿಕ್ಕಂತಹ ಕೆಲವೇ ಕೆಲವು ಚರ್ಚ್‌ಗಳಲ್ಲಿ ಮಾತ್ರ ಗಾಜಿನ ಚಿತ್ರವಿರುವುದನ್ನು ಕಾಣುತ್ತೇವೆ.

ಗಾಜಿನ ಮೇಲಿನ ಕ್ರೈಸ್ತಧರ್ಮದ ಚಿತ್ರಗಳು

ಯಾವುದೇ ಒಂದು ದೇಶದ ಸಂಸ್ಕೃತಿಯನ್ನು ಅರಿಯಬೇಕಾದರೆ ಆ ದೇಶದ ಕಲೆ, ಧರ್ಮ, ಪುರಾಣ, ಪುಣ್ಯಕಥೆಗಳಿಂದ ತಿಳಿಯಬಹುದು. ಅದರಂತೆ ಚಿತ್ರಕಲೆಯಾಗಲಿ, ಶಿಲ್ಪಕಲೆಯಾಗಲಿ ಬೆಳೆಯಲು ಆ ದೇಶದ ಧರ್ಮ ಸಂಸ್ಕೃತಿಯು ಪ್ರಮುಖ ಪಾತ್ರವಹಿಸುತ್ತದೆ. ಇದಕ್ಕೆ ಭಾರತವು ಕೂಡ ಹೊರತಾಗಿಲ್ಲ. ಭಾರತವು ವಿವಿಧ ಮತಧರ್ಮಗಳಿಂದ ಕೂಡಿದ

೨. ಡಾ. ಎನ್.ಎಂ. ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ ಹಂಪಿ, ಪುಟ-೧೭೬

ವಿಶಾಲವಾದ ರಾಷ್ಟ್ರ. ಇದು ಹಿಂದೂ ರಾಷ್ಟ್ರವಾಗಿದ್ದರು ಸಹ ಕ್ರೈಸ್ತ, ಇಸ್ಲಾಂ ಸಿಖ್‌ನಂತಹ ಅನೇಕ ಮತ ಧರ್ಮಗಳಿಂದ ಕೂಡಿದೆ.

ಕ್ರೈಸ್ತ ಧರ್ಮವು ಭಾರತದಲ್ಲಿ ಮಧ್ಯಕಾಲದಿಂದಲೂ ಪ್ರಚಲಿತವಾಗಿದ್ದು, ಇತಿಹಾಸಗಳಿಂದ ತಿಳಿದುಕೊಳ್ಳಬಹುದಾಗಿದೆ. ಈ ಧರ್ಮವು ಯೇಸುಕ್ರಿಸ್ತನಿಂದ ಪ್ರಾರಂಭವಾಯಿತೆಂದು ತಿಳಿಯಬಹುದು. ಯೇಸುವಿನ ಮರಣದ ನಂತರ ಕ್ರೈಸ್ತ ಧರ್ಮವು ವ್ಯಾಪಕ ಪ್ರಚಾರ ಪಡೆದುಕೊಂಡಿತು. ಈ ಧರ್ಮವು ಯುರೋಪ್ ರಾಷ್ಟ್ರಗಳ ಮೂಲಕ ಭಾರತಕ್ಕೂ ಪ್ರವೇಶ ಪಡೆಯಿತು. ಇಲ್ಲಿ ಅನೇಕ ಕ್ರೈಸ್ತ ಮಿಷನರಿಗಳು ಉದಯಗೊಂಡವು. ಮೊದಲು ಕ್ರೈಸ್ತ ಮತ ಪ್ರಚಾರಕ್ಕಾಗಿ ದೇವಾಲಯಗಳನ್ನು ನಿರ್ಮಿಸಿ ಆ ಮೂಲಕ ಶಿಲ್ಪ ಹಾಗೂ ಚಿತ್ರಗಳ ಮೂಲಕ ಕ್ರೈಸ್ತ ಕಥಾನಕ ದೃಶ್ಯಗಳನ್ನು ಬರೆದು ವ್ಯಾಪಕ ಪ್ರಚಾರ ಮಾಡಲು ಪ್ರಾರಂಭಿಸಿದರು. ಈ ಬಗೆಯ ಕ್ರೈಸ್ತ ಕಥಾನಕ ದೃಶ್ಯಗಳು ಗೋಡೆಯ ಮೇಲೆ, ಲೋಹದ ಮೇಲೆ, ಕಟ್ಟಿಗೆಯ ಮೇಲೆ ಹಾಗೂ ಗಾಜಿನ ಮೇಲೆ ವರ್ಣರಂಜಿತವಾಗಿ ಮೂಡಿ ಬಂದಿವೆ. ಇಂಥ ವರ್ಣರಂಜಿತ ಗಾಜಿನ ಚಿತ್ರಗಳು ಕರಾವಳಿ ಕರ್ನಾಟಕದ ಅನೇಕ ಕ್ರೈಸ್ತ ದೇವಾಲಯಗಳ ಕಿಟಕಿಗಳ ಮೇಲೆ ಚಿತ್ರಿತಗೊಂಡಿವೆ. ಈ ಗಾಜಿನ ಚಿತ್ರಗಳು ಕ್ರಿಸ್ತ ಹಾಗೂ ಅವನ ಅನುಯಾಯಿಗಳಿಗೆ ಸಂಬಂಧಪಟ್ಟಿವೆ. ಜೊತಗೆ ಕ್ರೈಸ್ತ ಧರ್ಮದ ಪ್ರವರ್ತಕರಿಗೆ ಸಂಬಂಧಿಸಿವೆ. ಅವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಯೇಸುಕ್ರಿಸ್ತನು ಕ್ರೈಸ್ತ ಧರ್ಮದ ಮೂಲ ಪುರುಷನೂ ಮತ್ತು ಈ ಮತಧರ್ಮದವರ ಆರಾಧ್ಯ ದೈವನಾಗಿದ್ದಾನೆ. ಮಾನವ ಸ್ವರೂಪದಲ್ಲಿ ಹುಟ್ಟಿ ಭೂಮಿಯ ಮೇಲೆ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ, ಸಮಗ್ರ ಮಾನವ ಕಲ್ಯಾಣಕ್ಕಾಗಿ ಹೋರಾಡಿ ಕೊನೆಗೆ ದೇಹತ್ಯಾಗ ಮಾಡಿ ದೈವಿಪುರುಷನಾಗಿ ನಿಲ್ಲುತ್ತಾನೆ. ಇಂಥಹ ಮಹಾನ್ ಪುರುಷನ ಹಿಂದೆ ಅವನ ಸಂಗಡಿಗರು ಸಹ ಇವನಂತೆ ಹಿಂಬಾಲಕರಾಗಿ ಧರ್ಮರಕ್ಷಣೆಯಲ್ಲಿ ತೊಡಗುತ್ತಾರೆ. ಇಂಥ ವಿಷಯಗಳನ್ನು ತಿಳಿಸುವ ಅನೇಕ ಗಾಜಿನ ಚಿತ್ರಗಳು ಇಲ್ಲಿ ಕಾಣಸಿಗುತ್ತವೆ. ಅಂತಹವನ್ನು ಇಲ್ಲಿ ಚರ್ಚಿಸಲಾಗುತ್ತಿದೆ.

ಯೇಸುವಿನ ಮರಣದಿಂದ ಪುನರುತ್ಥಾನದ ಸರಣಿ ಚಿತ್ರ

ಈ ಕಲಾಕೃತಿಯು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯ ಆವರಣದಲ್ಲಿನ ಚರ್ಚ್ ಒಂದರ ೧೭ ಕಿಟಕಿಗಳಲ್ಲಿ ಅಳವಡಿಸಲಾಗಿದೆ. ಗಾಜುಗಳ ಮೇಲೆ ಚಿತ್ರಿತಗೊಂಡಿವೆ. ಈ ಚಿತ್ರ ಸರಣಿಯು ಸಂಪೂರ್ಣ ಆಧುನಿಕ ರೀತಿಯ ರಚನಾ ಪದ್ಧತಿಯಲ್ಲಿ ರೂಪುಗೊಂಡಿದ್ದು, ಅತ್ಯಂತ ಭಾವನಾ ನಿರೂಪಣೆಯಿಂದ ಅಭಿವ್ಯಕ್ತಿಗೊಂಡಿದೆ. ಚರ್ಚ್‌ನ ಒಂದನೇಯ ಕಿಟಕಿಯಲ್ಲಿ ಯೇಸು ಅವನ ಅನುಯಾಯಿಗಳು ಸಂತೈಸುತ್ತಿರುವುದನ್ನು ಕಾಣುತ್ತೇವೆ. ಈ ಚಿತ್ರದಲ್ಲಿ

ಯೇಸುವನ್ನು ದೊಡ್ಡ ಆಕೃತಿಯಲ್ಲಿ ಚಿತ್ರಿಸಿದ್ದು, ಬಹುಶಃ ಮರಣಕ್ಕೆ ಗುರಿಯಾದ ಸಂದರ್ಭದಲ್ಲಿ ಆ ನಗರದ ಜನರ ಭಯವನ್ನು ಅವರ ಭಕ್ತಿ ಆಧರತೆಗಳನ್ನು ಗಮನಿಸಿ, ಅವರನ್ನು ಸಂತೈಸುತ್ತಿರುವಂತೆ ನಿರೂಪಣೆಗೊಳಿಸಲಾಗಿದೆ. ಹಿನ್ನೆಲೆಯ ಪ್ರಕೃತಿ ದೃಶ್ಯವು ಬೃಹತ್ ಮರ, ಕೋಟೆ ಕೊತ್ತಲುಗಳ ದೃಶ್ಯಗಳು, ಬೆಟ್ಟಗಳ ಸಾಲುಗಳು ಹಾಗೂ ಸ್ವಚ್ಛ ನೀಲಿ ಬಣ್ಣದಿಂದ ಕೂಡಿದ ಆಕಾಶವು ರಚನೆಗೊಂಡಿದೆ.

ಎರಡನೇ ಕಿಟಕಿಯಲ್ಲಿ ಯೇಸು ದೇವನು ಒರ್ವ ಅನುಯಾಯಿಗಳನ್ನು ಸಂತೈಸುತ್ತಿರುವನು ಹಿನ್ನೆಲೆಯಲ್ಲಿ ಮೂವರು ವ್ಯಕ್ತಿಗಳು ಯಾವುದೋ ಆಲೋಚನೆಯಲ್ಲಿ ನಿರತರಾಗಿರುವಂತೆ ರೂಪುಗೊಂಡಿರುವರು. ಚಿತ್ರದ ಹಿನ್ನಲೆಯು ಸುಂದರವಾದ ಪ್ರಕೃತಿಯು ಚಿತ್ರಿತಗೊಂಡಿದ್ದು, ಯೇಸುವಿನ ಹಿಂಬದಿಯಲ್ಲಿ ಅಚ್ಚ ಹಸಿರು ವರ್ಣದಿಂದ, ಎಲೆಗಳ ಗುಂಪು ನಿಚ್ಚಳವಾಗಿ ಕಾಣುವಂತೆ ಕಲಾವಿದನು ನಿರೂಪಿಸಿದ್ದಾನೆ. ಶುಭ್ರ ಆಕಾಶ, ಕೋಟೆಯ ವಿಹಂಗಮ ನೋಟ ಹಾಗೂ ಹಸಿರು ಹೊದಿಕೆಯಿಂದ ಕೂಡಿದ ಭೂದೃಶ್ಯವು ಚಿತ್ರಿತಗೊಂಡಿದೆ. ಈ ಚಿತ್ರದಲ್ಲಿ ನೀಲಿ, ಕೆಂಪು, ಹಸಿರು, ಕಪ್ಪು ಹಾಗೂ ಬಿಳಿ ವರ್ಣಗಳ ಬೆಳಕು ನೆರಳುಗಳ ವರ್ಣ ಛಾಯೆಯು ಉತ್ತಮವಾಗಿ ಮೂಡಿಬಂದಿದೆ.

ಕಿಟಕಿ ಮೂರರಲ್ಲಿರುವ ಈ ಕಲಾಕೃತಿಯು ಮರಣ ಶಿಕ್ಷೆಗೆ ಗುರಿಯಾದ ಯೇಸುವನ್ನು ರಾಜಭಟರು ದೊರೆಯ ಮುಂದೆ ತಂದು ನಿಲ್ಲಿಸಿ ವಿಚಾರಣೆ ಮಾಡುತ್ತಿರುವಂತೆ ಈ ಚಿತ್ರವು ಸೂಚಿಸುತ್ತಿದೆ. ಇಲ್ಲಿ ಯೇಸುವನ್ನು ಮುಳ್ಳಿನ ತಂತಿಯಿಂದ ತಲೆಯನ್ನು ಸುತ್ತಿದ್ದು, ಮುಖದಲ್ಲಿ ಶಾಂತತೆ ಒಡಮೂಡಿದೆ ರಾಜ ಭಟನು ಆವೇಶ ಭರಿತನಾಗಿ ದೊರೆಯೊಂದಿಗೆ ಏನೋ ಪ್ರಸ್ತಾಪ ಮಾಡುತ್ತಿರುವಂತೆ ಚಿತ್ರಿತಗೊಂಡಿರುವನು. ಚಿತ್ರದ ಹಿಂದೆ ಅರಮನೆಯ ಬೃಹತ್ ವಾಸ್ತುಕಲ್ಪನೆಯು ರೂಪುಗೊಂಡಿದ್ದು, ಈ ಚಿತ್ರದಲ್ಲಿಯೂ ಸಹ ಸಂಯೋಜನೆ ಹಾಗೂ ಭಾವ ನಿರೂಪಣೆಯೂ ಉತ್ತಮವಾಗಿ ಪ್ರದರ್ಶಿತಗೊಂಡಿದೆ.

ಕಿಟಕಿ ನಾಲ್ಕರಲ್ಲಿ ಯೇಸು ಕ್ರೊಜೆ (ಶಿಲುಬೆ)ಯನ್ನು ಹೊತ್ತು ನಡೆಯುತ್ತಿರುವ ಸಂದರ್ಭವನ್ನು ನಿರೂಪಿಸಲಾಗಿದೆ. ಭಗವಾನ್ ಯೇಸುವಿಗೆ ಎಂತಹ ಶಿಕ್ಷೆಯನ್ನು ಕೊಡುತ್ತಿದ್ದರು ಸಹಿತ ಜಗತ್ತಿನ ಅಂದಕಾರವನ್ನು ದೂರಮಾಡುವುದು ಮಾನವೀಯತೆಯನ್ನು ಜನರಲ್ಲಿ ಮೂಡಿಸುವುದಾಗಿತ್ತು. ಇಲ್ಲಿ ಭಾರವಾದ ಶಿಲುಬೆಯನ್ನು ಹೊತ್ತು ನಡೆದಿರುವ ಯೇಸುವಿನ ಮುಖ ಭಾವನೆಯಲ್ಲಿ ಜನರ ಒಳಿತನ್ನು ಬಯಸುವ ಭಾವ ಭಂಗಿಯು ಎದ್ದು ತೋರುತ್ತಿದೆ. ಕ್ರೊಜೆಯನ್ನು ವರ್ಣಛಾಯೆಗಳಿಂದ ತ್ರಿಕರಣ ರೂಪವನ್ನು ತರಲಾಗಿದೆ. ಇಲ್ಲಿಯೂ ಸಹ ಕೆಂಪು, ನೀಲಿ, ಬಿಳಿ, ಕಂದುಗೆಂಪು ಹಾಗೂ ಬಿಳಿವರ್ಣಗಳ ಸಂಯೋಜನೆ ನಿರೂಪಣೆ ಗೊಂಡಿದೆ.

ಕಿಟಕಿ ಐದರಲ್ಲಿ ಯೇಸು ಕ್ರೂಜೆಯನ್ನು ಹೊತ್ತು ನಡೆಯುತ್ತಿರುವ ಸಂದರ್ಭದಲ್ಲಿ ಕ್ರೂಜೆಯ ಭಾರದಿಂದ ಆಯತಪ್ಪಿ ಬೀಳುವ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಇಲ್ಲಿ ಯೇಸು ಭಾರವಾದ ಕ್ರೂಜೆಯನ್ನು ಹೊತಿದ್ದು, ಇಬ್ಬರು ರಾಜ ಭಟರು ಬೀಳುತ್ತಿರುವ ಕ್ರೂಜೆಯನ್ನು ಮೇಲಕ್ಕೆತ್ತುವ ಸಾಹಸ ಮಾಡುತ್ತಿರುವರು. ಚಿತ್ರದ ಹಿನ್ನೆಲೆಯ ಭೂ ದೃಶ್ಯದಲ್ಲಿ ಬೆಟ್ಟಗಳ ಸಾಲು, ಹಸಿರು ಗಿಡ, ಮರಗಳು ಆಕಾಶವು ವ್ಯಕ್ತಗೊಂಡಿದೆ. ಇಲ್ಲಿ ಯೇಸುವಿನ ತಲೆಗೆ ಮುಳ್ಳಿನ ತಂತಿ ಸುತ್ತಿರುವುದನ್ನು ನೋಡಿದರೆ, ಒಬ್ಬ ಮಾನವ ರೂಪದ ದೇವನನ್ನು ಹಿಂಸಿಸುತ್ತಿರುವ ಪ್ರಸಂಗವು ಭಾರತೀಯ ಪುರಾಣ ಕಲ್ಪನೆಗಳು ನಮ್ಮ ಸ್ಮೃತಿಪಟಲಕ್ಕೆ ಕರೆದೊಯ್ಯುತ್ತವೆ. ಇಲ್ಲಿ ಕಲಾವಿದನ ಕಲ್ಪನೆಯು ಉತ್ತಮವಾಗಿ ಅಭಿವ್ಯಕ್ತಿಗೊಂಡಿದೆ.

ಕಿಟಕಿ ಆರರಲ್ಲಿ ಮರಣದಂಡನೆಗೆ ಗುರಿಯಾದ ಯೇಸುದೇವನು ತನ್ನ ತಾಯಿಯನ್ನು ಬೇಟಿಯಾಗುವ ಸನ್ನಿವೇಶವನ್ನು ಸೂಚಿಸುವ ಚಿತ್ರವಾಗಿದೆ. ತಾಯಿ ಮತ್ತು ಮಗನ ಭಾವನಾತ್ಮಕ ನಿರೂಪಣೆಯು ಇಲ್ಲಿ ಮೂಡಿಬಂದಿದೆ. ಒಬ್ಬ ಸಾಮಾನ್ಯ ತಾಯಿಯ ಮಗನ ಮನದಾಳವು ಈ ಸಂದರ್ಭಗಳಲ್ಲಿ ಹೇಗೆ ಇರುತ್ತದೆಯೋ ಅದನ್ನು ಇಲ್ಲಿ ನಿರೂಪಿಸಲಾಗಿದೆ. ಈ ಚಿತ್ರದ ಆಕೃತಿಗಳಲ್ಲಿನ ಬಟ್ಟೆಯ ವಿನ್ಯಾಸ, ವರ್ಣ ಸಂಯೋಜನೆ ಹಾಗೂ ಹಿನ್ನೆಲೆಯನ್ನು ವಾಸ್ತು ಕಟ್ಟಡಗಳ ವಿನ್ಯಾಸದಿಂದ ಸಮರ್ಪಕವಾಗಿ ಸಂಯೋಜಿಸಲಾಗಿದೆ.

ಕಿಟಕಿ ಏಳರಲ್ಲಿ ಕ್ರೂಜೆಯನ್ನು ಹೊತ್ತು ಯೇಸು ಅದರ ಬಾರವನ್ನು ತಡೆಯಲಾರದೆ ಬೀಳುತ್ತಿದ್ದು, ಎಬ್ಬಿಸಿ ಮತ್ತೆ ನಡೆಸುವ ಪ್ರಸಂಗ ಇಲ್ಲಿ ರೂಪಿತಗೊಂಡಿದೆ. ಭಾರವಾದ ಕ್ರೂಜೆಯನ್ನು ಹೊತ್ತುಕೊಂಡಿದ್ದಾನೆ. ಈ ಭಾರವನ್ನು ಹೊರಲಾರದೇ ಬೀಳುತ್ತಿರುವ ಯೇಸುವಿಗೆ ಸಹಾಯ ಮಾಡಲು ಸೀಮಾನನು ನಿರತನಾಗಿದ್ದಾನೆ. ರಾಜಭಟನು ಶಿಲುಬೆಯನ್ನು ಹೊತ್ತು ನಡೆಯಲು ಯೇಸುವಿಗೆ ಆಜ್ಞೆಮಾಡುತ್ತಿರುವಂತೆ ಚಿತ್ರಿತಗೊಂಡಿರುವುದು ಹಿನ್ನೆಲೆಯ ಪ್ರಕೃತಿ ಸನ್ನಿವೇವು ಗಿಡ ಮರಗಳು, ಬೆಟ್ಟ ಸಾಲುಗಳ ಹಾಗು ಪ್ರಕಾಶಮಾನ ಆಕಾಶನೂ ನಿರೂಪಿತಗೊಂಡಿದೆ. ಇದರಲ್ಲಿ ನೆರಳು ಬೆಳಕಿನ ಛಾಯೇ ಉತ್ತಮವಾಗಿ ಮೂಡಿ ಬಂದಿದೆ.

ಕಿಟಕಿ ಎಂಟರಲ್ಲಿ ಕಂಡುಬಂದಿರುವ ಚಿತ್ರಕಲಾಕೃತಿಯಲ್ಲಿ ಭಾರದ ಶಿಲುಬೆಯನ್ನು ಹೊತ್ತಿರುವ ಯೇಸು ಸುಸ್ತಾಗಿದ್ದು, ಮೈಯೆಲ್ಲಾ ಬೆವರು, ವೆರೋನಿಕಾ ಎಂಬುವಳು ಶುಭ್ರವಾದ ಬಟ್ಟೆಯಿಂದ ಮುಖವನ್ನು, ದೇಹವನ್ನು ವರೆಸುತ್ತಿರುವುದು ರೂಪುಗೊಂಡಿದೆ. ತುಂಬಾ ಸುತ್ತಾಗಿರುವ ಯೇಸುವಿಗೆ ಸಾಂತ್ವನ ಮಾಡುವುದರ ಜೊತೆಗೆ ಬೆವರನ್ನು ಒರೆಸಲು ಸಹಾಯ ಮಾಡುತ್ತಿರುವುದು ಈ ಚಿತ್ರದಲ್ಲಿ ಕಾಣಬಹುದು. ಹಿನ್ನೆಲೆಯ ದೃಶ್ಯವು ಪ್ರಕೃತಿಯಾಗಿದ್ದು, ಬೆಟ್ಟ ಗಿಡ, ಮರಗಳಿಂದ ಆವೃತಗೊಂಡಿದೆ.

ಕಿಟಕಿ ಒಂಬತ್ತರಲ್ಲಿ ಯೇಸುದೇವನು ಶಿಲುಬೆಯನ್ನು ಹೊತ್ತು ನಡೆಯುತ್ತಿರುವಾಗ ಎರಡನೇಯ ಸಲ ಬೀಳುತ್ತಿರುವ ಸನ್ನಿವೇಶ ಇದಾಗಿದ್ದು, ಇಲ್ಲಿ ಭಾರವಾದ ಶಿಲುಬೆಯನ್ನು ಯೇಸು ಹೊತ್ತುಕೊಂಡಿರುವುದು ಇಲ್ಲಿಯೂ ಸಹ ಭಾರವನ್ನು ತಡೆಯಲಾರದೆ ಮುಗ್ಗರಿಸಿ ಬೀಳುತ್ತಿದ್ದಾನೆ. ಬೀಳುವುದನ್ನು ಒಬ್ಬ ವ್ಯಕ್ತಿಯು ತಡೆಯುತ್ತಿದ್ದಾನೆ. ಮತ್ತೊಬ್ಬ ವ್ಯಕ್ತಿಯು ಯೇಸುವಿಗೆ ಆಜ್ಞೆಮಾಡುವ ಭಾವಭಂಗಿಯಲ್ಲಿ ಚಿತ್ರಿತಗೊಂಡಿದ್ದಾನೆ. ಚಿತ್ರದ ಹಿನ್ನೆಲೆಯು ವಾಸ್ತು ಕಟ್ಟಡಗಳಿಂದ ಹಾಗೂ ಬೆಟ್ಟಗಳ ಸಾಲುಗಳಿಂದ ಸಂಯೋಜನೆಗೊಂಡಿದೆ. ಕೆಂಪು, ನೀಲಿ, ಹಸಿರು, ಹಳದಿ ಕಂದು ಬಣ್ಣಗಳ ವರ್ಣಗಳ ಛಾಯೇಯು ಅಭಿವ್ಯಕ್ತಗೊಂಡಿದೆ. ಈ ಚಿತ್ರದಲ್ಲಿ ಉತ್ತಮ ಭಾವ ನಿರೂಪಣೆಯು ಸಾಂದರ್ಭಿಕವಾಗಿ ಮೂಡಿ ಬಂದಿದೆ.

ಕಿಟಕಿ ಹತ್ತರಲ್ಲಿ ಯೇರು ಸೆಲೋಮಿನ ಸ್ತ್ರೀಯರಿಗೆ ಯೇಸು ಸಾಂತ್ವನ ಹೇಳುತ್ತಿರುವ ಪ್ರಸಂಗವನ್ನು ಚಿತ್ರಿಸಲಾಗಿದೆ. ಇಲ್ಲಿ ಯೇಸು ಭಾರದ ಕ್ರೂಜೆಯನ್ನು ಹೆಗಲ ಮೇಲೆ ಹೊತ್ತಿರುವನು. ತಲೆಗೆ ಮುಳ್ಳಿನ ತಂತಿಯನ್ನು ಬಿಗಿಯಲಾಗಿದೆ. ಇಬ್ಬರೂ ಸ್ತ್ರೀಯರು ದುಃಖಭರಿತರಾಗಿ ಯೇಸುವನ್ನು ಕಾಣುವ ಉತ್ಕಟತೆಯನ್ನು ವ್ಯಕ್ತಪಡಿಸಿದ್ದಾರೆ. ಇವರನ್ನು ಶಾಂತಮನಸ್ಕರಿಂದ ಸಮಾದಾನ ಮಾಡುತ್ತಿರುವಂತೆ ಯೇಸು ರೂಪಗೊಂಡಿರುವನು ಯೇಸುವಿನ ಉಡುಪುಗಳ ನೆರಿಗೆಗಳು ನೈಜ ಸ್ವರೂಪದಲ್ಲಿ ಮೂಡಿಬಂದಿದ್ದು, ಕಂದುಗೆಂಪು ಬಣ್ಣದ ಕೆಸವಿನ್ಯಾಸವು ಕಲಾತ್ಮಕವಾಗಿ ಚಿತ್ರಿತಗೊಂಡಿದೆ ಇಲ್ಲಿ ಇಬ್ಬರು ಯುವತಿಯರ ವೇಷ ಭೂಷಣಗಳು ಕೇಶ ವಿನ್ಯಾಸವು ಹಾಗೂ ಭಾವ ಲಕ್ಷಣಗಳು ಉತ್ತಮವಾಗಿ ನಿರೂಪಣೆಗೊಂಡಿವೆ. ಹಿನ್ನೆಲೆಯ ಪ್ರಕೃತಿಯು ಉತ್ತಮ ವರ್ಣಸಂಯೋಜನೆಯಿಂದ ರಚನೆಗೊಂಡಿದೆ.

ಕಿಟಕಿ ಹನ್ನೊಂದರಲ್ಲಿ ಕ್ರೂಜೆಯನ್ನು ಹೊತ್ತು ಯೇಸು ಕ್ರೂಜೆಯನ್ನು ಹೊರಲಾರದೇ ಬೀಳುತ್ತಿರುವುದೂ, ಮೂರ್ಚಿತನಾಗಿರುವನು. ಕ್ರೂಜೆಯು ಪಕ್ಕಕ್ಕೆ ಬಿದ್ದಿದೆ. ರಾಜಭಟನು ನಿರುತ್ಸಾಹ ವ್ಯಕ್ತಪಡಿಸುತ್ತಿರುವಂತೆ ಕಾಣಿಸುತ್ತಿದ್ದು, ಯೇಸುವಿನ ಅನುಯಾಯಿಯು ಭಯಭೀತನಾಗಿರುವಂತೆ ಚಿತ್ರಿತಗೊಂಡಿರುವನು. ಚಿತ್ರವು ಭಾವನಾತ್ಮಕವಾಗಿ ಮೂಡಿ ಬಂದಿದ್ದು, ವರ್ಣಗಳ ಬೆಳಕು, ನೆರಳುಗಳ ಛಾಯೆಯು ಉತ್ತಮವಾಗಿ ಅನಾವರಣಗೊಂಡಿದೆ. ಚಿತ್ರದ ಹಿನ್ನೆಲೆಯು ಉತ್ತಮ ಭೂ ದೃಶ್ಯವನ್ನು ಹೊಂದಿದೆ.

ಕಿಟಕಿ ಹನ್ನೆರಡರಲ್ಲಿ ಯೇಸುವನ್ನು ಶಿಲುಬೆಗೇರಿಸುವ ಮೊದಲು ಅವನ ಬಟ್ಟೆಗಳನ್ನು ಕಳಚುತ್ತಿರುವುದು ಇಲ್ಲಿ ಪ್ರಮುಖವಾದ ದೃಶ್ಯವಾಗಿದೆ. ಯೇಸು ಶಾಂತಭಾವದಿಂದ ನಿಂತಿರುವನು. ಇಬ್ಬರು ಭಟರು ಅವನ ಬಟ್ಟೆಯನ್ನು ಕಳುಚುತ್ತಿರುವರು. ಇನ್ನೊಬ್ಬನು ಕೈಯಲ್ಲಿ ಪಾತ್ರೆಯನ್ನು ಹಿಡಿದಿರುವನು. ಆಕೃತಿಗಳ ದೈಹಿಕ ರೂಪುರೇಷೆಗಳು ನೈಜತೆಯಿಂದ ಪ್ರಕಟಗೊಂಡಿದ್ದು, ಬಟ್ಟೆಯ ನೆರಿಗೆಗಳು ವರ್ಣಛಾಯೆಗಳಿಂದ ಉತ್ತಮವಾಗಿ ಮೂಡಿ ಬಂದಿವೆ. ಒಟ್ಟಾರೆ ಆ ಕೃತಿಯು ಸಂಯೋಜನೆಯಿಂದ ಕೂಡಿದ್ದಾಗಿದೆ.

ಕಿಟಕಿ ಹದಿಮೂರರಲ್ಲಿ ಕ್ರೈಸ್ತಪ್ರಭು ಯೇಸುವನ್ನು ಅರೆ ಬೆತ್ತಲೆ ಮಾಡಿ ಸಿಲುಬೆಗೇರಿಸಿ ದೊಡ್ಡ ಮೊಳೆಗಳನ್ನು ಹೊಡೆಯುತ್ತಿರುವುದನ್ನು ಕಾಣಬಹುದು. ಇಲ್ಲಿ ಯೇಸುವನ್ನು ಶಿಲುಬೆಯ ಮೇಲೆ ಮಲಗಿಸಿದ್ದು, ಒಬ್ಬ ಯೇಸುವಿನ ಕೈ ಮೈಗೆ ಮೊಳೆಯನ್ನು ಹೊಡೆಯುತ್ತಿದ್ದು, ಭಟನು ಶಿಲುಬೆಯನ್ನು ಹಿಡಿದಿರುವಂತೆ ಚಿತ್ರಿತಗೊಂಡಿದೆ. ಯೇಸುವಿನ ಅರೆಬೆತ್ತಲೆಯ ದೇಹದ ರಚನೆ ಮಾಂಸಖಂಡಗಳ ಉಬ್ಬುತಗ್ಗುಗಳನ್ನು ವರ್ಣಗಳ ಛಾಯೆಯ ಮೂಲಕ ಕಲಾವಿದನು ಪ್ರಕಟಪಡಿಸಿದ್ದು, ಹಾಗೂ ಮೂವರು ರಾಜಭಟರ ಉಡುಗೆ ತೊಡುಗೆಗಳನ್ನು ಉತ್ತಮ ನೆರಿಗೆಗಳನ್ನು, ವರ್ಣ ಸಂಯೋಜನೆಗಳನ್ನು ಸೃಜನಾತ್ಮಕವಾಗಿ ಚಿತ್ರಿಸಲಾಗಿದೆ. ಚಿತ್ರದ ಹಿನ್ನೆಲೆಯು ಗಿಡ, ಮರಗಳಿಂದ ಹಾಗೂ ಬಯಲು ಭೂ ದೃಶ್ಯಗಳಿಂದ ರೂಪುಗೊಂಡಿದೆ.

ಕಿಟಕಿ ಹದಿನಾಲ್ಕರಲ್ಲಿ ಪ್ರಭು ಯೇಸುವನ್ನು ಶಿಲುಬೆಗೆ ಮೊಳೆಯಿಂದ ಜಡಿದು ನಿಲ್ಲಿಸಿದ್ದಾರೆ. ಯೇಸು ಇಲ್ಲಿ ಪ್ರಾಣತ್ಯಾಗಮಾಡಿದ ಪ್ರಸಂಗವನ್ನು ಸೂಚಿಸುತ್ತದೆ. ಯೇಸುವನ್ನು ನಿಲ್ಲಿಸಿದ ಶಿಲುಬೆಗೆ ಮೊಳೆಗಳಿಂದ ಜಡಿದಿದ್ದಾರೆ. ಯೇಸು ಅರೆಬೆತ್ತಲೆಯಾಗಿದ್ದು, ಪ್ರಾಣ ಪಕ್ಷಿಯು ಹಾರಿ ಕಳೆಬರ ಮಾತ್ರ ಉಳಿದಿದೆ. ಇಬ್ಬರು ಸ್ತ್ರೀಯರು ದುಃಖಿತರಾಗಿದ್ದಾರೆ. ಆಕೃತಿಗಳ ಉಡುಪುಗಳಲ್ಲಿ ನೆರಿಗೆಗಳ ವರ್ಣ ಸಂಯೋಜನೆ ಹಾಗೂ ಭಾವನೆರೂಪಣೆಯೂ ಉತ್ತಮವಾಗಿ ಮೂಡಿಬಂದಿದೆ. ಚಿತ್ರದ ಹಿನ್ನೆಲೆಯು ಹಸಿರು ಗಿಡ ಮರಗಳಿಂದ ಕೂಡಿದ್ದು, ಬೆಟ್ಟಗಳ ಸಾಲುಗಳು ಆಕರ್ಷಕವಾಗಿ ರಚನೆಗೊಂಡಿವೆ. ಆಕಾಶದಲ್ಲಿ ಶುಭ್ರತೆಯು ಎದ್ದು ತೋರುತ್ತದೆ. ಚಿತ್ರವು ವರ್ಣ ಹಾಗೂ ಭಾವನಾ ನಿರೂಪಣೆಯಿಂದ ಅನಾವರಣಗೊಂಡಿದೆ.

ಕಿಟಕಿ ಹದಿನೈದರಲ್ಲಿ ಯೇಸುವಿನ ಮೃತ ಶರೀರವನ್ನು ಕ್ರೂಜೆಯಿಂದ ಕೆಳಗೆ ಇಳಿಸಿದ ನಂತರ ತಾಯಿ ಮೇರಿ ಮಾತೆಯು ಯೇಸುವಿನ ಕಳೇಬರವನ್ನು ತನ್ನ ಮಡಿಲಲ್ಲಿ ಇರಿಸಿಕೊಂಡು ರೋಧಿಸುತ್ತಿರುವ ಪ್ರಂಸಗವು ಈ ಚಿತ್ರದಲ್ಲಿ ಮೂಡಿಬಂದಿದೆ. ಯೇಸುವಿನ ಮೃತ ಶರೀರವು ಅರೆಬೆತ್ತಲೆಯಾಗಿದ್ದು, ಮಾತೆಯು ತುಂಬು ಉಡುಪುಗಳನ್ನು ಧರಿಸಿದ್ದಾಳೆ. ಜೊತೆಗೆ ಇಬ್ಬರು ಮಹಿಳೆಯರು ತಾಯಿ ಮೇರಿ ಮಾತೆಯೊಂದಿಗೆ ದುಃಖಭರಿತರಾಗಿದ್ದಾರೆ. ಇವರು ಇಲ್ಲಿ ತುಂಬು ತೋಳಿನ ನಿಲುವಂಗಿಯನ್ನು ಧರಿಸಿದ್ದಾರೆ. ಹಿನ್ನೆಲೆಯಲ್ಲಿ ಬೆಟ್ಟಗಳ ಸಂಯೋಜನೆ ಆಕಾಶವನ್ನು ನೀಲಿ ಹಸಿರು, ಹಾಗೂ ಬಿಳಿ ಮಿಶ್ರಿತ ವರ್ಣಗಳಿಂದ ಲೇಪನ ಮಾಡಲಾಗಿದೆ. ಈ ಚಿತ್ರವು ಸಂಯೋಜನೆಯಿಂದ ಕೂಡಿದ ದುಃಖದ ನಿರೂಪಣೆಯನ್ನು ಹೊಂದಿದೆ.

ಕಿಟಕಿ ಹದಿನಾರರಲ್ಲಿ ಯೇಸುವಿನ ಕಳೆಬರವನ್ನು ಸಮಾಧಿ ಮಾಡುತ್ತಿರುವ ಸಂಗತಿಯನ್ನು ಚಿತ್ರಿಸಲಾಗಿದೆ. ಇಲ್ಲಿ ಯೇಸುವಿನ ಕಳೆಬರವನ್ನು ಒಬ್ಬ ಪ್ರಾದಿಯು ಹೊತ್ತುಕೊಂಡಿರುವನು, ಮೇರಿ ಮಾತೆ ಹಾಗೂ ಒರ್ವ ಹೆಣ್ಣು ಮಗಳು ಇದ್ದಾರೆ. ಇಲ್ಲಿ ಹೆಣ್ಣು ಮಗಳು ಛಾಮರವನ್ನು

ಬೀಸುತ್ತಿದ್ದಾಳೆ. ಚಿತ್ರದ ಹಿನ್ನೆಲೆಯಲ್ಲಿ ಹೂಜಿ, ಬ್ರೆಡ್ ತುಂಡುಗಳು, ಬಟ್ಟೆಗಳು, ಮುಳ್ಳಿನ ತಂತಿ, ದೀಪದ ಪಾತ್ರೆಯನ್ನು ಸಂಯೋಜಿಸಿದ್ದು, ಸಮಾಧಿಯ ಕಟ್ಟಡವು ಸುಸಜ್ಜಿತವಾಗಿದೆ. ಎಂಬುದನ್ನು ಈ ಚಿತ್ರದ ಮೂಲಕ ಕಲ್ಪಿಸಬಹುದು. ಇಲ್ಲಿ ದೊಡ್ಡ ದೊಡ್ಡ ಗ್ರಾನೈಟ್ ತುಂಡುಗಳಿಂದ ನಿರ್ಮಿಸಿದಂತೆ ಸಂಯೋಜನೆಗೊಂಡಿದೆ ಕೆಂಪು, ಹಸಿರು, ನೀಲಿ, ಹಳದಿ, ಬಿಳಿ ಹಾಗೂ ಕಪ್ಪು ವರ್ಣ ಛಾಯಗಳ ಮಿಶ್ರಣದಿಂದ ಪ್ರಕಟಗೊಂಡಿದೆ.

ಕಿಟಕಿ ಹದಿನೇಳರಲ್ಲಿ ಭಗವಾನ್ ಯೇಸುದೇವನ ಪುನರುತ್ಥಾನದ ಚಿತ್ರವು ಕಂಡುಬರುತ್ತದೆ. ಚರ್ಚ್‌ನ ಮುಖ್ಯದ್ವಾರವನ್ನು ಹೊಂದಿರುವ ಗೋಡೆಯಲ್ಲಿ ಪಂಚಭುಜಗಳ ದೊಡ್ಡ ಕಿಟಕಿಯ ಗಾಜಿನ ಮೇಲೆ ಈ ಚಿತ್ರವು ರೂಪುಗೊಂಡಿದೆ. ಈ ಚಿತ್ರದಲ್ಲಿ ಯೇಸು ಬಾಲ ಶಿಶುವಾಗಿ ಬದುಕಿನ ಕೊನೆಯವರೆಗೂ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿ ಕೊನೆಗೆ ಮರಣದಂಡನೆಗೆ ಗುರಿಯಾಗಿ ಮರಣಹೊಂದಿ ಮತ್ತೊಮ್ಮೆ ದೇವಮಾನವನಾಗಿ ಭೂಮಿಯಲ್ಲಿ ಅವತರಿಸುವ ಪ್ರಸಂಗವು ಚಿತ್ರಿತವಾಗಿದೆ. ಇಲ್ಲಿ ಯೇಸುದೇವನು ಮನುಕುಲದ ಕಲ್ಯಾಣಕ್ಕಾಗಿ ಮತ್ತೊಮ್ಮೆ ಹುಟ್ಟಿ ಶಾಂತಿ, ಸಹನೆ, ಆನಂದ, ಸಮಾಧಾನ, ಪ್ರೀತಿ ದಯೆ, ಸದ್ಗುಣ, ಪ್ರಾಮಾಣಿಕತೆ, ಸೌಜನ್ಯ ಸಂಯಮಗಳನ್ನು ಸಾರುವ ಪ್ರತೀಕದ ನಿರೂಪಣೆಯ ಚಿತ್ರವಾಗಿದೆ.

ಇದರಲ್ಲಿ ನೀಲಿ ವರ್ಣ, ಕೆಂಪು, ಬಿಳಿ ಮತ್ತು ಆನಂದ ವರ್ಣಗಳ ಸಂಯೋಜನೆ ಪ್ರಧಾನವಾಗಿ ರೂಪುಗೊಂಡಿದೆ. ಜ್ಞಾನ ಕಿರಣಗಳು ಯೇಸುವಿನ ಹೃದಯಂತರಾಳದಿಂದ ಹೊರಹೊಮ್ಮುವಂತೆ ಕಲಾವಿದನು ಬಿಳಿ, ನೀಲಿ, ಹಾಗೂ ಕೆಂಪು ವರ್ಣಗಳಿಂದ ರಚಿಸಿದ್ದಾನೆ. ಈ ಚರ್ಚ್‌ನಲ್ಲಿ ಕಂಡುಬರುವ ಬಿಳಿ, ನೀಲಿ ಹಾಗೂ ಕೆಂಪು ವರ್ಣಗಳಿಂದ ರಚಿಸಿದ್ದಾನೆ. ಈ ಚರ್ಚ್‌ನಲ್ಲಿ ಕಂಡುಬರುವ ಎಲ್ಲಾ ಚಿತ್ರಗಳು ಆಧುನಿಕ ತಂತ್ರಗಾರಿಕೆಯಿಂದ ಕೂಡಿದ್ದು, ಅಲಂಕಾರಿಕತೆ, ಆಡಂಬರತೆ ಕಂಡುಬರುವುದಿಲ್ಲವಾದರೂ ವಿಷಯದ ನಿರೂಪಣೆ ಉತ್ತಮ ರೀತಿಯಲ್ಲಿ ಮೂಡಿಬಂದಿದೆ. ಇಲ್ಲಿ ಗಾಜಿನ ಮೇಲೆ ರಚನೆಯಾಗಿರುವ ಚಿತ್ರಕೃತಿಯಲ್ಲಿ ಸಂಯೋಜನೆಗೊಂಡಂತೆ ಚಿತ್ರಿಸಲಾಗಿದೆ.

ಯೇಸುವಿನ ಸಾಂಕೇತಿಕ ಚಿತ್ರಗಳು

ಇಲ್ಲಿ ಚಿತ್ರಿತಗೊಂಡಿರುವ ಕ್ರಿಸ್ತನ ಸಾಂಕೇತಿಕ ಚಿತ್ರಗಳು ಮಂಗಳೂರಿನ ಸಂತ ಸೆಬಾಸ್ಟಿಯನ್ ಚರ್ಚ್‌ದ ಕಿಟಕಿಗಳಲ್ಲಿ ಕಂಡುಬರುತ್ತವೆ. ಚಿತ್ರ ಸಂಖ್ಯೆ ೧ ರಲ್ಲಿ ಯೇಸು ಕ್ರಿಸ್ತ ಕುರಿಗಳನ್ನು ಕಾಯುತ್ತಿರುವ ಸಾಂಕೇತಿಕ ದೃಶ್ಯವು ಚಿತ್ರಿತಗೊಂಡಿದ್ದು, ಬಿಳಿವರ್ಣದ ನಿಲುವಾಗಿ, ಕೆಂಪು ದುಪ್ಪಟವನ್ನು ಹೊಂದಿದ್ದಾನೆ. ಕೈಯಲ್ಲಿ ಕೋಲು ಹಾಗೂ ಕುರಿಮರಿಯನ್ನು ಹೊತ್ತುಕೊಂಡಿರುವನು. ಹಿನ್ನೆಲೆಯಲ್ಲಿ ನೀಲಿವರ್ಣದ ಆಕಾಶ, ಹಸಿರು ನೆಲಹಾಸು ಚಿತ್ರಿತಗೊಂಡಿದೆ. ಚಿತ್ರ ಸಂಖ್ಯೆ ೨ರಲ್ಲಿ ಸಿಲುಬೆಸ್ತಂಭವಿದ್ದು, ಆ ಸ್ತಂಭಕ್ಕೆ ತುಟಿಗಳ (ಮಾನನ)

ಸಂಕೇತವನ್ನು ಚಿತ್ರಿಸಲಾಗಿದೆ. ಸ್ತಂಭದ ಕೆಳಗೆ ಎರಡು ಕೈಗಳಲ್ಲಿ ದ್ರಾಕ್ಷರಸ ತುಂಬಿದ ಬಟ್ಟಲನ್ನು ಹಿಡಿದಿರುವುದನ್ನು ಸಂಯೋಜಿಸಲಾಗಿದೆ. ಈ ಚಿತ್ರದಲ್ಲಿ ಒಟ್ಟಾರೆ ಸಂಕೇತಗಳನ್ನು ಗಮನಿಸಿದರೆ, ಕ್ರಿಸ್ತ ದೇವನನ್ನು ಕುರಿತು ಆರಾಧಿಸುವ ನಿರೂಪಣಾ ಚಿತ್ರವೆಂದು ಹೇಳಬಹುದು.

ಚಿತ್ರ ಸಂಖ್ಯೆ ೩ರಲ್ಲಿ ಕೆಂಪು ವರ್ಣದ ಸಿಲುಬೆ ಸ್ತಂಭವನ್ನು ಚಿತ್ರಿಸಿದ್ದು, ಸ್ತಂಭದಲ್ಲಿ ಕ್ರಿಶ್ಚಿಯನ್ ಮಿಶನರಿಯ ಸಂಕೇತವಿದೆ. ಸ್ತಂಭದ ಕೆಳಗೆ ಎರಡು ಕೈ ಜೋಡಿಸಿ ನಮಿಸುವ ಸಂಕೇತದ ಚಿತ್ರವಿದೆ. ಕರಿದ್ರಾಕ್ಷಿಯ ಹಣ್ಣು ಹಾಗೂ ಬಳ್ಳಿಗಳನ್ನು ಚಿತ್ರಿಸಲಾಗಿದೆ ಈ ಚಿತ್ರನೂ ಸಹ ಕ್ರಿಸ್ತನು ಧ್ಯಾನಿಸುವ ಸಾಂಕೇತಿಕ ಭಾವವು ಎದ್ದು ತೋರುತ್ತದೆ. ಚಿತ್ರಸಂಖ್ಯೆ ೪ ರಲ್ಲಿ ಕೆಂಪು ವರ್ಣದ ದೊಡ್ಡ ಶಿಲುಬೆ, ಶಿಲುಬೆಯಲ್ಲಿ ತುಟಿಗಲಿಗೆ ಹೊಲಿಗೆ ಹಾಕಿದ ಚಿತ್ರವಿದೆ. ಇದು ಕೆಂಪು ವರ್ಣದಿಂದ ಲೇಪಿತಗೊಂಡಿದ್ದು, ಶಿಲುಬೆಯ ಕೆಳಗೆ ಶ್ವೇತ ವರ್ಣದ ಪಾರಿವಾಳ ಪಿಂಗಾಣಿ ಬಟ್ಟಲು, ಉರಿಯುತ್ತಿರುವ ಮೇಣದ ಬತ್ತಿ, ದ್ರಾಕ್ಷಿಗೊಂಚಲು ಮತ್ತು ಬತ್ತದ ತೆನೆಗಳನ್ನು ಸಾಂಕೇತಿಕವಾಗಿ ಚಿತ್ರಿಸಲಾಗಿದ್ದು, ಇವು ಕ್ರಿಸ್ತನ ಜ್ಞಾನ ಸಂದೇಶ ಹಾಗೂ ಶಾಂತಿಯ ಭಾವ ಸಂಕೇತವನ್ನು ಸೂಚಿಸುತ್ತವೆ.

ಚಿತ್ರ ಸಂಖ್ಯೆ ೦೫ರಲ್ಲಿ ಕೈಯಲ್ಲಿ ಹಿಡಿದಿರುವ ಜಪಮಣಿಗೆ ಚಿಕ್ಕದಾದ ಶಿಲುಬೆಯು ಹೂಜಿಯಂತಹ ಪಾತ್ರೆಯಲ್ಲಿ ನೇತಾಡುತ್ತಿದೆ. ಕರಿದ್ರಾಕ್ಷಿಯ ಗೊಂಚಲು ಹಾಗೂ ಗೋಧಿ ತೆನೆಗಳನ್ನು ಚಿತ್ರಲಾಗಿದೆ. ಈ ಚಿತ್ರವನ್ನು ಗಮನಿಸಿದರೆ ದೇವರನ್ನು ಕುರಿತು ಜಪಮಾಡುವ ಭಾವನಿರೂಪಣೆಯು ವ್ಯಕ್ತಪಡಿಸುತ್ತಿದೆ. ಚಿತ್ರಸಂಖ್ಯೆ ೦೬ರಲ್ಲಿ ಯೇಸುಕ್ರಿಸ್ತನು ಶ್ವೇತ ವಸ್ತ್ರಧಾರಿಯಾಗಿ ಕೈಯಲ್ಲಿ ಕೋಲು ಹಿಡಿದು ಭೂಮಿಯಲ್ಲಿ ಅವತರಿಸಿದಂತೆ ಸಂಯೋಜನೆಗೊಂಡಿರುವನು. ಅವನ ಸುತ್ತಲೂ ಚಿಕ್ಕಗಾತ್ರದ ರೆಕ್ಕೆ ಹೊಂದಿದೆ ದೇವದೂತರನ್ನು ಚಿತ್ರಿಸಲಾಗಿದೆ. ಈ ಚಿತ್ರನೂ ಕೂಡ ಕ್ರಿಸ್ತದೇವನ ನಿರೂಪಣಾ ಚಿತ್ರವಾಗಿದ್ದು, ತಿಳಿಹಳದಿ, ಕೆಂಪು, ಕಂದು ಹಾಗೂ ಬಿಳಿವರ್ಣಗಳ ಸಂಯೋಜನೆಯನ್ನು ಮಾಡಲಾಗಿದೆ.

ಒಟ್ಟಾರೆ ಆರು ಚಿತ್ರಗಳು ನಿರೂಪಿಸುವುದೇನೆಂದರೆ, ಯೇಸು ಕ್ರಿಸ್ತನು ತನ್ನ ಜೀವಿತ ಕಾಲದಲ್ಲಿ ಸಾಕಷ್ಟು ಮಾನಸಿಕ ಹಾಗೂ ದೈಹಿಕ ಹಿಂಸೆಗಳನ್ನು ಅನುಭವಿಸಿದರೂ ಜಗತ್ತಿನ ಮಾನವ ಕುಲದ ಶಾಂತಿ, ಪ್ರೀತಿಯನ್ನು ಬಯಸಿದನು. ಜಗತ್ತಿನ ಕಲ್ಯಾಣಕ್ಕಾಗಿ ತನ್ನ ಪ್ರಾಣ ತ್ಯಾಗಮಾಡಿದನು. ಮೇಣದ ಭತ್ತಿಯೂ ತನ್ನನ್ನು ಸುಟ್ಟುಕೊಂಡು ಹೇಗೆ ಬೆಳಕನ್ನು ಕೊಡುತ್ತದೆಯೋ ಅದೇ ರೀತಿ ಕ್ರಿಸ್ತದೇವನು ಜ್ಞಾನದ ಸಾರವನ್ನು ಉಣಬಡಿಸಿದನು. ಈ ಸಾಂಕೇತಿಕ ಭಾವನಿರೂಪಣೆಯನ್ನು ಕಲಾವಿದ ಈ ಚಿತ್ರಗಳಲ್ಲಿ ಪ್ರಕಟಪಡಿಸಿದ್ದಾನೆ.

ಸಂತ ಮಾರ್ಗರಿಟಾ ಮರಿಯ ಅಲಾ ಕೂಕ್ಯೂ

ಈ ಗಾಜಿನ ಚಿತ್ರವು ಮಂಗಳೂರಿನ ಸಂತ ಅಲೋಶಿಯಸ್ ಚರ್ಚಿನಲ್ಲಿ ಕಿಟಕಿಯೊಂದರಲ್ಲಿ ಕಂಡುಬರುತ್ತಿದೆ. ಅಲಂಕಾರ ಪ್ರಧಾನವಾದ ಈ ಚಿತ್ರವು ಕ್ರಿಸ್ತನ ಅನುಯಾಯಿ

ಸ್ತ್ರೀಯಳ ನಿರೂಪಣೆಯು ಕಂಡುಬರುತ್ತಿದೆ. ಮಾರ್ಗರೇಟಳು ತುಂಬು ಉಡುಪುಗಳನ್ನು ಧರಿಸಿದ್ದು, ಕೈಗಳಲ್ಲಿ ಹೂಗುಚ್ಛ ಹಾಗೂ ಜ್ಯೋತಿಯನ್ನು ಹಿಡಿದಿರುವಳು. ಮುಖಭಾವ ತೇಜಸ್ಸಿನಿಂದ ಕೂಡಿದ್ದು, ವರ್ಣ ಸಂಯೋಜನೆಯು ಭಾವ ಪೂರ್ಣವಾಗಿ ಮೂಡಿಬಂದಿದೆ. ಹಿನ್ನೆಲೆಯಲ್ಲಿ ಅಲಂಕಾರ ನಕ್ಷಾವಿನ್ಯಾಸಗಳನ್ನು ಆಕರ್ಷಕವಾಗಿ ಸಂಯೋಜನೆ ಮಾಡಲಾಗಿದೆ.

ಬಿಟಸ್ ಕಾಲುಡಿ ಯಸ್ ಡಿ-ಲಾ-ಕೋಲೊಂಬಿಯೋನ ಭಾವಚಿತ್ರ

ಈ ಚಿತ್ರವು ಸಹ ಮಂಗಳೂರಿನ ಸೆಂಟ್ ಅಲೋಷಿಯಸ್ ಚರ್ಚ್‌ದ ಕಿಟಕಿಯಲ್ಲಿ ಕಂಡುಬರುತ್ತದೆ. ಇದು ಕ್ರಿಸ್ತನ ಅನುಯಾಯಿ ಪುರುಷ ಸಂತ ಬಿಟಸ್‌ಕಾಲುಡಿಯಸ್ ಡಿ-ಲಾ-ಕೊಲೊಂಬಿಯೋನ ಭಾವಚಿತ್ರವಾಗಿದೆ. ಈ ಪುರುಷನನ್ನು ತೈಲವರ್ಣದ ನಿಲುವಾಗಿ ಹಾಗೂ ಪಾದದ ತನಕ ತೊಟ್ಟ ದೊಗಳೆ ಪ್ಯಾಂಟ್ ಪಾಯಿಜಾಮ್ ಭುಜದ ಮೇಲೆ ನೇರಳೆ ಸ್ಕಾರ್ಪ್ ಧರಿಸಿದಂತೆ ಚಿತ್ರಿಸಲಾಗಿದ್ದು, ಕೈಯಲ್ಲಿ ಕ್ರೈಸ್ತ ಸಂಕೇತವಾದ ಸಿಲುಬೆಯನ್ನು ಹಿಡಿದುಕೊಂಡಿರುವನು. ಮುಖದಲ್ಲಿ ಮಂದಹಾಸವು ವ್ಯಕ್ತಗೊಂಡಿದ್ದು, ಆಕರ್ಷಕ ನಿಲುವನ್ನು ನಿರೂಪಿಸಲಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಅಲಂಕಾರಿಕ ನಕ್ಷಾ ವಿನ್ಯಾಸಗಳನ್ನು ಚಿತ್ರಿಸಿ ಕೆಂಪು, ಹಳದಿ, ನೀಲಿ, ಬಿಳಿ, ನೇರಳೆ, ಹಸಿರು, ವರ್ಣಗಳ ಸಂಯೋಜನೆಯನ್ನು ಮಾಡಲಾಗಿದೆ.

ಧಾರ್ಮಿಕ ಸ್ತ್ರೀ ಪುರುಷರ ಚಿತ್ರಗಳು

ಇಲ್ಲಿ ರಚನೆಗೊಂಡಿರುವ ಆರು ಚಿತ್ರಗಳು ಮಂಗಳೂರಿನ ಹೊಲಿಕ್ರಾಸ್ ಚರ್ಚ್‌ದ ಕಿಟಕಿಗಳಲ್ಲಿ ಕಂಡುಬರುತ್ತವೆ. ಈ ಎಲ್ಲಾ ಚಿತ್ರಗಳು ಕ್ರಿಸ್ತ ಧರ್ಮಿಯರ ಸ್ತ್ರಿ ಪುರುಷರ ವ್ಯಕ್ತಿತ್ವನ್ನು ಪ್ರತಿನಿಧಿಸುತ್ತವೆ. ಸಂತ ಪ್ರಾನ್ಸಿಸ್ ಕ್ಯಾರೊ, ಸಂತಎಲೆಲಾ, ಸಂತ ಅನ್ನಾ, ಕಿಂಗ್ ಡಾವಿಡ್, ಸಂತ ಇಗ್ನೋಟಿಸ್ ಲೋಯೋಲಾ ಹಾಗೂ ಸಂತ ಪ್ರಾನ್ಸಿಸ್ ಆಫ್ ಅಸ್ಸಿಸಿಯರ ಜೀವನ ಕ್ರಮವನ್ನು ನಿರೂಪಿಸುತ್ತೇವೆ. ಆರು ಚಿತ್ರಗಳಲ್ಲಿ ಆಕೃತಿಗಳ ಉಡುಪುಗಳು ಹಾಗೂ ಅವುಗಳ ನೆರಿಗೆಗಳು ಆಕರ್ಷಕವಾಗಿ ರೂಪುಗೊಂಡಿದ್ದು, ಅವುಗಳಲ್ಲಿನ ವರ್ಣ ಛಾಯೆಗಳು ಸಂದರ್ಭಕ್ಕನುಸಾರವಾಗಿ ಸಂಯೋಜನೆಗೊಂಡಿವೆ. ಚಿತ್ರ ೧ರಲ್ಲಿ ಅಲಂಕಾರದ ಆಶಯ ಉದ್ದೀಪನಗೊಂಡಿದ್ದು, ಆಕೃತಿಗಳ ಸಂಯೋಜನೆ ಹಿನ್ನಲೆಯ ಭೂದೃಶ್ಯ ಹಾಗೂ ಅರಮನೆಯ ಸಾಂಕೇತಿಕ ನಿರೂಪಣೆಯು ಕಲಾತ್ಮಕವಾಗಿ ಮೂಡಿಬಂದಿದೆ. ಮತ್ತು ತ್ರಿ ಆಯಾಮ ವರ್ಣ ಛಾಯೆಯು ಎದ್ದು ತೋರುತ್ತಿದೆ. ಚಿತ್ರ ೨ರಲ್ಲಿ ಆಕೃತಿಗಳ ಉಡುಪುಗಳು ಆಕರ್ಷಕವಾಗಿ ಮೂಡಿಬಂದಿದ್ದು, ಅರಮನೆಯ ಒಳಾಂಗಣದ ದೃಶ್ಯವು ವೈಭವದ ಚಿತ್ರವನ್ನು ನಿರ್ದೇಶಿಸುತ್ತಿದೆ. ಹಿನ್ನೆಲೆಯ ಆಕೃತಿ ದೃಶ್ಯವು ಅತ್ಯಂತ ನೈಜವಾಗಿ ನಿರೂಪಿತಗೊಂಡಿದ್ದು, ನೋಡುಗನನ್ನು ವಿಸ್ಮಯಗೊಳಿಸುತ್ತದೆ. ವರ್ಣಗಳ ಬಳಕೆ ಉಜ್ವಲವಾಗಿ ಮೂಡಿಬಂದಿದ್ದು, ಆಕರ್ಷಕ ಸಂಯೋಜನೆ ಪ್ರಕಟಗೊಂಡಿದೆ. ಚಿತ್ರ ೩ರಲ್ಲಿ ಹಿಂದಿನ ಚಿತ್ರದಂತೆ ಮೂಡಿಬಂದಿದೆ. ಆದರೂ

ಭಾವನಾ ನಿರೂಪಣೆಯು ಉತ್ತಮವಾಗಿ ರೂಪುಗೊಂಡಿದೆ. ಕೆಂಪು, ಬಿಳಿ, ಹಸಿರು, ಕಂದು ಬಣ್ಣಗಳನ್ನು ಬಳಸಲಾಗಿದೆ. ಚಿತ್ರ ೪ರಲ್ಲಿ ವ್ಯಕ್ತಿಯ ಆಕರ್ಷಕ ನಿಲುವು, ಭಾವಯೋಜನೆ ಚಲನೆಯಿಂದ ಕೂಡಿದ್ದು, ಅರಮನೆಯ ದೃಶ್ಯವು ವೈಭವವನ್ನು ವ್ಯಕ್ತಪಡಿಸುತ್ತದೆ. ಚಿತ್ರ ೫ರಲ್ಲಿ ಆಕಾಶದಿಂದ ಹೊರಡುವ ಪ್ರಕಾಶಯುತ ಕಿರಣಗಳು ಈ ಧಾರ್ಮಿಕ ಪುರುಷನನ್ನು ಪ್ರವೇಶ ಮಾಡುತ್ತಿರುವಂತೆ ರಚನೆಗೊಂಡಿವೆ. ಪ್ರಕೃತಿಯ ದೃಶ್ಯವು ಅತ್ಯಂತ ಸುಂದರವಾಗಿ ರೂಪುಗೊಂಡಿದೆ. ಕಂದು ನೀಲಿ, ಬಣ್ಣಗಳು ಚಿತ್ರದಲ್ಲಿ ಪ್ರಧಾನವಾಗಿ ಸಂಯೋಜನೆಗೊಂಡಿವೆ. ಉಳಿದಂತೆ ಚಿತ್ರದ ಸುತ್ತಲೂ ಅಲಂಕಾರಿಕ ಕಂಬಗಳ ನಿರೂಪಣೆ ವ್ಯಕ್ತಗೊಂಡಿದೆ. ಚಿತ್ರ೬ರಲ್ಲಿ ಅರಮನೆಯ ಒಳಾಂಗಣ ದೃಶ್ಯವು ಅತ್ಯಂತ ಕಲಾತ್ಮಕ ಹಾಗೂ ವೈಭವದ ಸಾಂಕೇತಿಕ ರೂಪ ಲಕ್ಷಣಗಳು ಚಿತ್ರಿತಗೊಂಡಿವೆ. ದೊಡ್ಡ ದೊಡ್ಡ ಗೋಡೆಗಳು, ಕಂಬಗಳು, ಮರದ ಡಯಾಸ್‌ಗಳು, ಪೀಠೋಪಕರಣಗಳು, ವರ್ಣರಂಜಿತ ಪರದೆಗಳು ಮೂಡಿಬಂದಿವೆ. ಇಲ್ಲಿ ಬಳಕೆಗೊಂಡಿರುವ ವರ್ಣಗಳ ಛಾಯ ಮೂಲಕ ಕಿರಣರೂಪವು ಅನಾವರಣಗೊಂಡಿದೆ. ಒಟ್ಟರೆ ಆರುಚಿತ್ರಗಳು ಆಕೃತಿಗಳ ಸಂಯೋಜನೆ, ವೇಷ ಭೂಷಗಳು, ವರ್ಣ ನಿರೂಪಣೆಯ ಅಲಂಕಾರದ ಆಶಯ, ಬೆಳಕು, ನೆರಳು ಹಾಗೂ ಯಥಾ ದೃಷ್ಟಿಯು ಉತ್ತಮವಾಗಿ ಪ್ರಕಟಗೊಂಡಿದೆ.

ಮಂಗಳೂರಿನ ಕಂಕನಾಡಿಯ ಕ್ಲೋಯಿಸ್ಟ್ರಡ್ ಕಾರ್ಮೆಲ್ ಚರ್ಚ್

ಈ ಗಾಜಿನ ಚಿತ್ರವು ಮಂಗಳೂರಿನ ಕಂಕನಾಡಿಯ ಕ್ಲೊಯಿಸ್ಟ್ರಡ್ ಕಾರ್ಮೆಲ್ ಚರ್ಚ್‌ನಲ್ಲಿದ್ದು, ವಿಶೇಷವಾಗಿ ಎರಡು ಚಿತ್ರಗಳಲ್ಲಿ ಯೇಸುವು ತನ್ನ ಭಕ್ತರಿಗೆ ಆಶೀರ್ವಾದ ನೀಡುತ್ತಿರುವಂತೆ ಗೋಚರಿಸುತ್ತದೆ. ಚಿತ್ರ ಒಂದರಲ್ಲಿ ಯೇಸುವು ಸ್ವಲ್ಪ ಮೇಲೆ ನಿಂತಿದ್ದು, ಮಹಿಳಾ ಭಕ್ತೆಯೊಬ್ಬಳು ತನ್ನ ಪ್ರಾರ್ಥನೆಯನ್ನು ಕೋರುತ್ತಿದ್ದು, ಆಶಿರ್ವಾದ ಪಡೆಯುವ ಇಚ್ಛೆಯಂತೆ ಸ್ವಾಮಿ ನಿನ್ನ ಕೊರಿಕೆಯು ಬೇಗವಾಗಲಿ ಎಂದು ಆದೇಶಿಸುವಂತಿದೆ. ಇದರಲ್ಲಿ ಯೇಸುವು ಕೆಂಪು ಬಟ್ಟೆಯನ್ನುಟ್ಟಿದ್ದು, ನೀಲಿ ಬಣ್ಣದ ಶಾಲನ್ನು ಹೊದ್ದುಕೊಂಡಿದ್ದಾನೆ. ಕೆಳಗಡೆ ನಿಂತಿರುವ ಹುಡುಗಿಯು ಲಂಗ ದಾವಣಿ ಉಟ್ಟಿದ್ದು, ಅದು ಗಿಳಿ ಹಸಿರು ಮತ್ತು ಬೂದುಗೆಂಪು ಬಣ್ಣದ ಜಾಕೆಟನ್ನು ಹಾಕಲಾಗಿದೆ. ಮೇಲ್ಗಡೆ ದೇವದೂತರ ಮಕ್ಕಳನ್ನು ಚಿತ್ರಿಸಿದ್ದು ಅವುಗಳಿಗೆ ಎರಡೆರಡು ರೆಕ್ಕೆಗಳು ಕಾಣುತ್ತಿವೆ. ಈ ಕಲಾಕೃತಿಯು ಕಿಟಕಿಗೆ ಹೊಂದಿಸಲಾಗಿದೆ. ಮೇಲೆ ಕೆಳಗೆ ಚಿತ್ರವಿನ್ಯಾಸದ ಬಳ್ಳಿಗಳನ್ನು ಬಂಗಾರದ ಬಣ್ಣಗಳಿಂದ ಚಿತ್ರಿಸಿದ್ದಾರೆ. ಹಾಗೆ ಇಲ್ಲಿ ಹಸಿರು, ಕೆಂಪು, ನೀಲಿ, ಹಳದಿ, ಎಲ್ಲೊ ಬಿಳಿ ವರ್ಣಗಳು ಇಲ್ಲಿ ರಾರಾಜಿಸುತ್ತಿವೆ.

ಇದೇ ಶೈಲಿಯಲ್ಲಿ ಮತ್ತೊಂದು ಪಕ್ಕದ ಕಿಟಕಿಯಲ್ಲಿ ಯಥಾವತ್ತಾದ ಚಿತ್ರವಾಗಿ ಕಂಡರೂ ಅದರಲ್ಲಿ ಅನೇಕ ಬದಲಾವಣೆಗಳನ್ನು ಕಾಣಬಹುದು. ಈ ಚಿತ್ರದಲ್ಲಿ ಯೇಸುವು

ಕ್ಯಾನ್ವಾಸ್‌ನಲ್ಲಿ ನಿಂತಿರುವಂತೆ ಕಾಣುತ್ತಿದ್ದು, ಅವರ ಪಾದದಡಿಯಲ್ಲಿ ಒಬ್ಬ ಗಂಡು ಹಾಗೂ ಹೆಣ್ಣು ಮೊಣಕಾಲೂರಿ ನಮಸ್ಕರಿಸುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಯೇಸುವಿನ ಹಿಂದೆ ಜನರು ಕಾಣುತ್ತಿದ್ದು, ಯೇಸುವಿಗೆ ಬೆಂಬಲವಾಗಿರುವಂತೆ ಕಾಣುತ್ತಿದೆ. ಈ ಚಿತ್ರವು ಗೋಪುರದ ಶೈಲಿಯಲ್ಲಿದ್ದೂ, ಮೇಲೆ ಕೆಳಗೆ ಚಿತ್ರವಿನ್ಯಾಸ ಬಳ್ಳಿಯನ್ನು ಬಂಗಾರದ ಬಣ್ಣದಿಂದ ಚಿತ್ರಿಸಿರುವುದನ್ನು ಕಾಣಬಹುದು. ಈ ಕಲಾಕೃತಿಯಲ್ಲಿ ಹೆಚ್ಚು ಕೆಂಪು ಗೋಲ್ಡನ್ ಕಲರ್, ನೀಲಿವರ್ಣ, ಹಳದಿ, ಹಸಿರು, ಕಂದುಗೆಂಪು ಮತ್ತು ಬಿಳಿವರ್ಣಗಳು ಗೋಚರಿಸಲ್ಪಡುತ್ತಿವೆ.

ಚಿಗುರು

ಈ ಕಲಾಕೃತಿಯು ೫ x ೮ ಅಡಿ ಎತ್ತರ ವುಳ್ಳದ್ದಾಗಿದ್ದು, ಗಾಜಿನ ಮೇಲೆ ರಚಿತವಾಗಿದೆ. ಹುಟ್ಟು, ಸಾವುಗಳ ನಡುವಿನ ಅಂತರವನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ. ಸುಖ, ದುಃಖಗಳು ಸಹ ಜೀವನದಲ್ಲಿ ಹೇಗೆ ಬರುತ್ತವೆ ಎಂಬುದನ್ನು ಸಾರುವಂತೆ ಚಿತ್ರಿಸಲಾಗಿದೆ. ಕೊಂಬೆಗಳಲ್ಲಿನ ಎಲೆಗಳು, ಕಾಯಿಗಳ ಸಮೇತ ಚಿತ್ರಿಸಿರುವುದು ಮುಖ್ಯವಾಗಿದ್ದು, ದೇವರ ನಾಮವನ್ನು ಬರೆಯಲಾಗಿದೆ. ವಿಶೇಷವಾಗಿ ಚರ್ಚ್‌ನ ಅಲಂಕಾರಕ್ಕಾಗಿಯು ಇತ್ತೀಚಿನ ದಿನಗಳಲ್ಲಿ ರಚನೆಯಾಗಿರುವ ಈ ಕೃತಿಯು "ಚಿಗುರು" ಎಂಬುದು ನಾಮಾಂಕಿತವಾಗಿದೆ. ಯೇಸುವಿಗೆ ಪ್ರಿಯವಾದ ಬಿಳಿಯ ವರ್ಣವನ್ನು ಹೆಚ್ಚು ತೋರಿಸಲಾಗಿದ್ದು, ಅಲ್ಲಲ್ಲಿ ಶಿಲುಬೆಯನ್ನು ಸೃಜನ ಶೀಲತೆಯಲ್ಲಿ ತೋರ್ಪಡಿಸಿದೆ. ಹಾವಭಾವಗಳಂತೆ ಚಿತ್ರಿಸಿರುವ ರೇಖೆಗಳಲ್ಲಿ ಜೀವ ಇದೆ. ಇದು ಕಾರವಾರದ ಸೆಂಟ್ ಚರ್ಚ್‌ನಲ್ಲಿ ನೆಲೆಗೊಂಡಿದೆ.

ಶಿಲುಬೆಯನ್ನೊಳಗೊಂಡ ಚಿತ್ರ

ಈ ಕಲಾಕೃತಿಯು ೫ x ೮ ಅಡಿ ಇದ್ದು ಇಲ್ಲಿ ಪ್ರಮುಖವಾಗಿ ಈ ಗಾಜಿನ ಚಿತ್ರದಲ್ಲಿ ರಂಜಿಸುವ, ಆಕರ್ಷಿಸುವ ರೀತಿಯಲ್ಲಿ ಶಿಲುಬೆಯು ಚಿತ್ರಿತವಾಗಿದೆ. ನೇತಾಡುತ್ತಿರುವ ನಕ್ಷತ್ರಗಳು, ಸುಂದರವಾದ ಪಟ್ಟಿಕೆಗಳು, ವಿವಿಧ ಆಯಾಮಗಳಲ್ಲಿ ರಚಿಸಲಾದ ವೃತ್ತಾಕಾರಗಳು, ವಿವಿಧ ಬಣ್ಣಗಳು ಇಲ್ಲಿ ತುಂಬಾ ಸುಂದರವಾಗಿವೆ. ಕಣ್ಣಿಗೆ ಕುಕ್ಕುವ ರೀತಿಯಲ್ಲಿ ಚಿತ್ರರಚನೆ ಮಾಡಿರುತ್ತಾರೆ. ಸ್ಥಳೀಯ ಎಚ್ಚಿಂಗ್ ಕಲಾವಿದರಿಂದ ಇತ್ತೀಚಿಗೆ ನಿರ್ಮಿಸಲ್ಪಟ್ಟಿರುವ ಈ ಕೃತಿಯಲ್ಲಿ ಹಳದಿ, ಬಿಳಿ, ನೀಲಿ, ಕೆಂಪು ಹಸಿರು, ಬಂಗಾರದ ಬಣ್ಣದಿಂದ ಚಿತ್ರಿಸಲಾಗಿದ್ದು, ನೀಲಿಯಿಂದ ಹೊರ ರೇಖೆಹೊಂದಲಾಗಿದೆ. ಒಟ್ಟಾರೆ ಸುಂದರವಾದ ಸಂಯೋಜನೆಯಿಂದ ಕೂಡಿದ್ದಾಗಿದ್ದು, ನೋಡುಗನ ಮನಸಲ್ಲಿ ಅಚ್ಚಳಿಯದೇ ಉಳಿಯುವಂತಿದೆ.

ರೇಖೆಗಳೊಂದಿಗೆ ಹೂವಿನ ಚಿತ್ರ

ಈ ಕಲಾಕೃತಿಯು ೫ ಅಡಿ ಉದ್ದ ೮ ಅಡಿ ಅಗಲವಿದ್ದು, ಗಾಜಿನ ಮೇಲೆ ಏನೆಲ್ಲಾ ಪ್ರಯೋಗಗಳನ್ನು ಮಾಡಬಹುದು ಎನ್ನುವುದಕ್ಕೆ ಈ ಚಿತ್ರಕೃತಿಯೇ ಸಾಕ್ಷಿ ಎಂಬಂತೆ

ವಿವಿಧ ಆಕಾರ, ಬಣ್ಣ ರೇಖೆಗಳನ್ನೊಳಗೊಂಡಂತಹ ಚಿತ್ರವಾಗಿದ್ದು, ಯೇಸುವಿನ ಪ್ರಿಯ ಶಿಲುಬೆಯು ಹೂವಾಗಿ ಚಿತ್ರಿಸಲಾಗಿದೆ. ಬಾಡದಿರುವ ಹೂವು ಒಂದು ಪಟ್ಟಿಯಲ್ಲಿದ್ದರೆ, ಕಪ್ಪು ಪಟ್ಟಿಯನ್ನು ಅಡ್ಡ ತೋರಿಸಲಾಗಿದೆ. ಅಕ್ಕ ಪಕ್ಕಗಳಲ್ಲಿ ಪ್ರಜ್ವಲಿಸುವ ದೀಪಗಳನ್ನು ತೋರಿಸಿರುವುದು ವಿಶೇಷ. ಇದರಲ್ಲಿ ಹಳದಿ, ನೀಲಿ, ಕೆಂಪು, ಬಿಳಿ, ಕಪ್ಪು ಬಣ್ಣಗಳನ್ನು ಬಳಸಿ ಸುಂದರತೆಯನ್ನು ತೋರಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ರಚಿಸಿರುವ ಈ ಕಲಾಕೃತಿಯು ಸಂತ ಮೇರಿ ಕ್ಯಾಥಡ್ರಲ್, ಕಾರವಾರದಲ್ಲಿ ಸಂಗ್ರಹಗೊಂಡಿದೆ.

ಗಾಜಿನಲ್ಲಿ ರಚಿತವಾದ ಕಲಾಕೃತಿ

ಈ ಕಲಾಕೃತಿಯು ೬ x ೧೨ ಅಡಿ ಎತ್ತರವಿದ್ದು, ಸಂಪೂರ್ಣ ಗಾಜಿನ ಮೇಲೆ ರಚಿತವಾಗಿದೆ. ಕ್ರೈಸ್ತರ ಸಮುದಾಯದಲ್ಲಿ ಬರುವ ಸನ್ನಿವೇಶಗಳನ್ನು ಸಂಕೇತದ ರೂಪದಲ್ಲಿ ತೋರಿಸಲಾಗಿದ್ದು, ಶಿಲುಬೆ, ಅರ್ಧಚಂದ್ರಾಕೃತಿ, ಭತ್ತದ ತೆನೆ, ನೇರ ರೇಖೆಗಳನ್ನು ಇದರೊಳಗೆ ತೋರ್ಪಡಿಸಲಾಗಿದೆ. ಪದ್ಯದಲ್ಲಿ ಯೇಸುವಿಗೆ ನಮಿಸುವ ಕೆಲವು ಪದಗಳನ್ನು ಹೇಳಲಾಗಿದೆ. ಇಲ್ಲಿಯು ಕೂಡ ಯೇಸುವನ್ನು ಕಾಣುವ ದೃಷ್ಟಿಯಿಂದ ಈ ಚಿತ್ರವನ್ನು ರಚಿಸಲಾಗಿದೆ. ಹಸಿರು ಬಿಳಿ, ನೀಲಿ ಗಾಡ ಕೆಂಪು ಹಳದಿ ಮತ್ತು ಕಪ್ಪು ಹೀಗೆ ವಿವಿಧ ಸಮೃದ್ಧಿಯ ವರ್ಣಗಳನ್ನು ಬಳಸಿರುವುದು ಕಲಾಕೃತಿಯ ಮೆರಗನ್ನು ಎತ್ತಿಹಿಡಿಯುವಂತಿದೆ. ಕಾರವಾರದ ಸೆಂಟ್ ಚರ್ಚ್‌ನಲ್ಲಿ ನೆಲೆಸಿದಂತಾಗಿದೆ. ಅವರ್ ಲೇಡಿ ರಿಸಪ್ಷನ್ ಕ್ಯಾಥೆಡ್ರಲ್ ಚರ್ಚ್ ಕಾರವಾರದಲ್ಲಿ ಸಂಗ್ರಹಗೊಂಡಿದೆ.

ಬಣ್ಣ ಬಣ್ಣದ ಗಾಜುಗಳ ಕೃತಿ

ಗೋಡೆಯ ಮೇಲ್ಭಾಗದಲ್ಲಿ ಹಾಕಲಾಗಿರುವ ಗಾಜಿನ ಚಿತ್ರಗಳು, ನೋಡುಗನನ್ನು ಆಕರ್ಷಿಸುತ್ತವೆ. ವಿನಃ ಯಾವುದೇ ಸಂದೇಶವನ್ನು ಕೊಡುವುದಿಲ್ಲ. ಅನ್ನುವ ಅಂಶಕ್ಕೆ ವಿರುದ್ಧವಾಗಿ ತೋರಿಸಿರುವ ಈ ಕೃತಿಗಳಲ್ಲಿ ಶಿಲುಬೆಯನ್ನು ನೇರ ರೇಖೆಗಳನ್ನು ಎಳೆಯುವುದರ ಮೂಲಕ ತೋರ್ಪಡಿಸಲಾಗಿದೆ. ಹಾಗೆಯೇ ಸಮೃದ್ದವಾದ ಬಣ್ಣಗಳನ್ನು ಬಳಸಲಾಗಿದೆ. ಹಳದಿ, ನೀಲಿ, ಕೆಂಪು, ಆಕಾರ್ ಎಲ್ಲೊ, ಬೂದು ನೀಲಿ ಮತ್ತು ಬಿಳಿ ವರ್ಣಗಳನ್ನು ಇಲ್ಲಿ ಕಾಣಬಹುದಾಗಿದೆ. ಈ ಕಲಾಕೃತಿಯು ಅವರ್ ಲೇಡಿ ರಿಸಪ್ಷನ್ ಕ್ಯಾಥೆಡ್ರಲ್ ಚರ್ಚ್‌ನಲ್ಲಿ ಕಾಣಬಹುದು.

ದೇವದೂತರು

ಈ ಕಲಾಕೃತಿಯು ಗಾಜಿನ ಚಿತ್ರವಾಗಿದ್ದು ಮೂರು ಅಡಿ ಉದ್ದ, ನಾಲ್ಕು ಅಡಿ ಅಗಲವಿದ್ದು, ಮೇಲ್ಛಾವಣಿಯ ಕಿಟಕಿಯಲ್ಲಿ ಜೋಡಿಸಿರುವ ಈ ಚಿತ್ರದಲ್ಲಿ ದೇವದೂತರ

ಮಗುವೊಂದನ್ನು ಎತ್ತಿಕೊಂಡಿರುವುದು. ಒಬ್ಬ ಮೈತುಂಬಾ ಉಡುಪನ್ನು ಹಾಕಿಕೊಂಡು ಬರಿಮೈಯಲ್ಲಿರುವ ಮಗುವನ್ನು ಎತ್ತಿಕೊಂಡಿದ್ದು ತುಂಬಾ ವಿಶೇಷವಾಗಿದೆ. ಯೋಚನಾಗ್ರಸ್ಥರಾದಂತೆ ಕಂಡರು. ವಿಭಿನ್ನ ರೀತಿಯಲ್ಲಿ ಈ ವ್ಯಕ್ತಿಯನ್ನು ಚಿತ್ರಿಸಲಾಗಿದೆ. ಈ ಕಲಾಕೃತಿಯಲ್ಲಿ ಹಿಂದೆ ಸೌಜನ್ಯವರ್ಣವನ್ನು ತೋರಿಸಲಾಗಿದೆ. ಬಿಳಿ, ಕೆಂಪು, ಆರೆಂಜ್, ಹಳದಿ, ಮತ್ತು ಹಸಿರು ವರ್ಣಗಳು ಪ್ರಮುಖವಾಗಿವೆ. ಮಂಗಳೂರಿನ ಕುಲಶೇಖರ ಚರ್ಚ್‌ನಲ್ಲಿ ನೆಲೆಗೊಂಡಿದೆ.

ಮೇಲ್ಫಾವಣಿಯ ಕಿಟಕಿಗಳು

ಕುಲಶೇಖರದ ಹೋಲಿಕ್ರಾಸ್ ಚರ್ಚ್‌ನಲ್ಲಿರುವ ಮೇಲ್ಫಾವಣಿಗೆ ಹಾಕಲಾಗಿರುವ ಗಾಜಿನ ಚಿತ್ರಗಳು ಇವಾಗಿದ್ದು, ವಿವಿಧ ಬಣ್ಣಗಳನ್ನು ವಿವಿಧ ಆಕೃತಿಗಳ ಮೂಲಕ ರಚಿಸಲಾಗಿದೆ. ಕತ್ತಲೆಯಲ್ಲಿ ಹೊಳಪನ್ನು ಕೊಡಬಲ್ಲಂತಹವು ಇವಾಗಿದ್ದು, ಚುಕ್ಕಿ ಮತ್ತು ಹೂಗಳಿಂದ ಆವೃತವಾಗಿರುವಂತೆ ಭಿತ್ತಿಸಲಾಗಿದೆ. ಬಿಳಿ, ಕೆಂಪು, ಹಳದಿ, ವರ್ಣಗಳು ಮುಖ್ಯವಾಗಿವೆ. ಇತ್ತೀಚನ ದಿನಗಳಲ್ಲಿ ಚಿತ್ರಿಸಿರುವಂತೆ ಕಾಣುತ್ತಿದೆ.

ಸೃಜನಾತ್ಮಕ ದೃಶ್ಯ

ಈ ಕಲಾಕೃತಿಯು ೬ x ೧೦ ಇದ್ದು, ಸೃಜನಾತ್ಮಕತೆಯಿಂದ ಕೂಡಿರುವ ಚಿತ್ರಕೃತಿಯನ್ನು ಗಾಜಿನ ಮೇಲೆ ರಚನೆ ಮಾಡಿದ್ದು, ವಿವಿಧ ಆಯಾಮಗಳನ್ನೊಳಗೊಂಡಿದೆ. ಚಿಗುರೊಡೆದ ಅಂಶಗಳನ್ನೊಳಗೊಂಡಿದೆ. ಕಲಾಕೃತಿಯ ಮದ್ಯದಲ್ಲಿ ಮೇಕೆಯ ತಲೆಯಿದ್ದು ನಾಲಿಗೆಯನ್ನು ಚಾಚಿದೆ. ಹೂವಿನ ಎಲೆಗಳು ಮತ್ತು ಹೂವುಗಳು ನಕ್ಷಾಬಳ್ಳಿಯಂತೆ ಹರಡಿಕೊಂಡಿದೆ. ಬೆಟ್ಟ ಗುಡ್ಡ ಪ್ರಕೃತಿಯನ್ನು ಹಂತ ಹಂತವಾಗಿ ಚಿತ್ರದಲ್ಲಿ ತೋರಿಸಲಾಗಿದ್ದು ಯೇಸುವಿನ ಕೆಲವು ಮುಖ್ಯ ಅಂಶಗಳನ್ನು ಅಕ್ಷರಗಳ ಮೂಲಕ ಹೇಳಲಾಗಿದೆ. ಇದರಲ್ಲಿ ಎರಡು ಕಪ್ಪು ಪಟ್ಟಿಗಳು ಬಂದಿದ್ದು, ಮದ್ಯದಲ್ಲಿರುವ ಕೃತಿಗೆ ಸೌಂದರ್ಯವನ್ನು ಕೊಟ್ಟಂತಾಗಿದೆ. ಬಿಳಿ, ನೀಲಿ, ಕೆಂಪು, ಹಸಿರು, ಹಳದಿ, ಸುವರ್ಣ ವರ್ಣಗಳನ್ನು ಬಳಸಲಾಗಿರುವುದು ವಿಶೇಷವಾಗಿದೆ. ಅವರ್ ಲೇಡಿ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್ ಕಾರವಾರದಲ್ಲಿ ಸಂಗ್ರಹಗೊಂಡಿದೆ.

ಗಾಜಿನ ಮೇಲಿನ ಚಿತ್ರಕಲೆಯಲ್ಲಿ ವರ್ಣಗಳ ಬಳಕೆ ತುಂಬಾ ಸೂಕ್ಷ್ಮವಾಗಿ ಮಾಡಬೇಕಾಗಿರುತ್ತದೆ. ಅದರಂತೆಯೇ ಈ ಅಧ್ಯಾಯದಲ್ಲಿಯೂ ಕೂಡ ಕೆಲವು ಚರ್ಚ್‌ಗಳಲ್ಲಿ ಪಾಶ್ಚಾತ್ಯದ ಪ್ರಭಾವ ತುಂಬಿದ್ದು, ಇನ್ನೂ ಕೆಲವು ಚರ್ಚ್‌ಗಳಲ್ಲಿ ಭಾರತೀಯ ಕಲೆಗೆ ಸಂಬಂಧಿಸಿದಂತೆ ಸ್ಥಳೀಯ ಕಲಾವಿದರನ್ನು ಕರೆತಂದು ಚಿತ್ರಗಳನ್ನು ರಚಿಸಿರುತ್ತಾರೆ. ಒಟ್ಟಾರೆ ಈ ಕಲಾಕೃತಿಗಳಲ್ಲಿ ಬರುವ ಸನ್ನಿವೇಶ ಅದನ್ನು ರಚಿಸುವ ಹಂತಗಳು ತುಂಬಾ

ಪ್ರಾಮುಖ್ಯವಹಿಸಿರುತ್ತವೆ ಎಂಬುದನ್ನು ಬಲವಾಗಿ ಹೇಳಬಹುದಾಗಿದೆ. ಪ್ರಸ್ತುತ ದಿನಗಳಲ್ಲಿ ಚರ್ಚ್ ಅಲಂಕಾರಕ್ಕಾಗಿ ಚಿತ್ರಸಲಾಗಿದೆ.

ಶಾಂತಿಯ ಪ್ರತಿರೂಪ

ಸುಮಾರು ೮ x ೧೨ ಅಡಿ ಎತ್ತರವಿರುವ ಈ ಗಾಜಿನ ಚಿತ್ರಕಲೆಯು ಪ್ರಮುಖ ಅಂಶಗಳನ್ನೊಳಗೊಂಡಿದೆ. ಯೇಸುವಿಗೆ ನಮನಸಲ್ಲಿಸುತ್ತಿರುವ ಅಂಶಗಳು ಇದರಲ್ಲಿದ್ದು, ಹಾರಾಡುತ್ತಿರುವ ಪಕ್ಷಿಗಳು, ಶಿಲುಬೆ, ಪ್ರಜ್ವಲಿಸುವ ದ್ವೀಪಗಳು ಝುಳ ಝುಳ ಹರಿಯುವ ನದಿ, ನಿಸರ್ಗ, ಬೆಟ್ಟ ಹೀಗೆ ಸೃಜನಶೀಲತೆಯನ್ನೊತ್ತಿರುವ ಈ ಚಿತ್ರದಲ್ಲಿ ಏನಿಲ್ಲ? ಎಂಬುದೇ ಪ್ರಶ್ನೆ ಹಾಗೆಯೇ ಸಮೃದ್ದಿಯ ಸ್ವರೂಪವನ್ನು ಎತ್ತಿತೋರಿಸುವಂತಿದೆ ವೃತ್ತಾಕಾರ, ವಕ್ರಾಕಾರ, ತ್ರಿಭುಜ, ನೇರರೇಖೆ, ದುಂಡುರೇಖೆ, ಮನೋರಂಜನೆಯಾಗಿವೆ. ಮೂರು ಭಾಗವಾಗಿ ಪರಿಗಣಿಸಲ್ಪಟ್ಟಿರುವ ಈ ಕೃತಿಯಲ್ಲಿ ಒಂದೊಂದರಲ್ಲಿ ಒಂದು ಸಂದೇಶವನ್ನು ನೋಡುಗನು ಕಾಣಬಹುದು. ಬಿಳಿ, ನೀಲಿ, ಕೆಂಪು, ಹಳದಿ, ಹಸಿರು, ತಿಳಿಹಸಿರು, ಬ್ರೌನ್, ಸುವರ್ಣ ವರ್ಣಗಳನ್ನು ಬಳಸಿಕೊಂಡು ಸುಂದರವಾಗಿ ಚಿತ್ರವನ್ನು ರಚಿಸಲಾಗಿದೆ. ಈ ಕಲಾಕೃತಿಯು ಅವರ್ ಲೇಡಿ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್ ಕಾರವಾರದಲ್ಲಿ ಸಂಗ್ರಹಗೊಂಡಿದೆ.

ಜೋಳದ ತೆನೆಗಳು

ಈ ಕಲಾಕೃತಿಯು ೮ x ೧೨ ಅಡಿ ಉದ್ದವಿದ್ದು ಈ ಕಲಾಕೃತಿಯ ಹಿಂದೆ ಭತ್ತದ ತೆನೆಗಳನ್ನು ನೋಡಿದ್ದೇವೆ. ಆದರೆ ಇಲ್ಲಿ ಜೋಳದ ತೆನೆಗಳನ್ನು ಕಾಣಬಹುದು. ಇದು ಗಾಜಿನ ಚಿತ್ರವಾಗಿರುವುದು. ಪ್ರಮುಖವಾಗಿ ಎಲೆಗಳಿರುವ ದಂಟಿನ ಸಮೇತ ಚಾಚಿರುವ ತೆನೆಯನ್ನು ತೋರಿಸಲಾಗಿದೆ. ಅದು ನಗುತ್ತಾ ಸಂತೋಷದಿಂದಿದ್ದು, ಆವೃತಗಳಲ್ಲಿರುವ ಬಣ್ಣಗಳನ್ನು ನಾಚಿಸುವಂತಿದೆ. ಗಾಢವಾದ, ತೆಳುವಾದ ವರ್ಣಗಳನ್ನು ಬಳಸಿ, ಚಿತ್ರಿಸಲಾಗಿದೆ. ಈ ಕಲಾಕೃತಿಯು ಸಹ ಅವರ್ ಲೇಡಿ ರಿಸಪ್ಷನ್, ಕ್ಯಾಥಡ್ರಲ್ ಚರ್ಚ್ ಕಾರವಾರದಲ್ಲಿದೆ.

ಕ್ರೈಸ್ತ ಧರ್ಮದ ಸಂಕೇತಗಳು

ಮೂರು ಭಾಗವಾಗಿರುವ ಈ ಕಲಾಕೃತಿಯು ಒಂದೇ ಆಗಿ ಪರಿಗಣಿಸಿದೆ. ಒಂದರಲ್ಲಿ ಹೂಜಿಯ ಮೇಲೆ ಶಿಲುಬೆಯಿದ್ದು, ಮಧ್ಯದರಲ್ಲಿ ಎರಡು ಕೈಗಳನ್ನು ತೋರಿಸಿದ್ದು, ಮೂರನೆಯದರಲ್ಲಿ ಪುಸ್ತಕ, ಶಿಲುಬೆಗಳನ್ನು ತೋರಿಸಲಾಗಿದೆ. ಗಾಜಿನ ಮೇಲೆ ಚಿತ್ರಿಸಲಾಗಿರುವ ಕೃತಿಯಾಗಿದ್ದು, ವಿವಿಧ ಆಯಾಮಗಳನ್ನು ಇಲ್ಲಿ ಪ್ರಜ್ವಲಿಸಲಾಗಿದೆ. ಕ್ರೈಸ್ತರ ಸಂದೇಶ ಸಾರುವಂತಹ ಅಂಶಗಳು ಪ್ರಬಲವಾಗಿವೆ. ಇದರಲ್ಲಿ ಬಿಳಿ, ಕೆಂಪು, ನೀಲಿ, ಹಸಿರು, ಹಳದಿ, ಕಡುನೀಲಿ, ಆರೆಂಜ್ ಮತ್ತು ಸುವರ್ಣ ವರ್ಣಗಳಿಂದ ರಚಿಸಿರುವುದರಿಂದ ಬಣ್ಣ ಬಣ್ಣದ

ಆವೃತ್ತಿಯನ್ನು ಹೊಂದಲಾಗಿದೆ. ಈ ಕಲಾಕೃತಿಯು ಸಹ ಅವರ್ ಲೇಡಿ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್ ಕಾರವಾರದಲ್ಲಿದೆ.

ಮೇರಿ ಮತ್ತು ಮಗು

೩ x ೫ ಅಡಿ ಇರುವ ಈ ಕಲಾಕೃತಿಯು ಗಾಜಿನ ಮೇಲೆ ಚಿತ್ರಿಸಲಾಗಿದ್ದು, ವೃತ್ತಾಕಾರದಿಂದ ಕೂಡಿದೆ. ತಾಯಿ ಮತ್ತು ಮಗುವಿನ ಚಿತ್ರವಿದ್ದು, ಮಗುವು ಬಿಳಿ ಟೇಬಲಿನ ಮೇಲೆ ನಿಂತಿದ್ದು, ತಾಯಿ ಕೆಳಗಡೆ ನೋಡುತ್ತಾ ನಿಂತಿರುತ್ತಾಳೆ. ಮಗುವನ್ನು ಆಡಿಸುತ್ತಿರುವ ದೃಶ್ಯ ಇದಾಗಿದ್ದು, ಮನೆಯ ಒಳಗಿನ ದೃಶ್ಯವನ್ನು ಕಾಣಬಹುದು. ಬಿಳಿ, ಹಳದಿ, ಕಪ್ಪು, ಕಂದುಗೆಂಪು ಮತ್ತು ಹಸಿರು ವರ್ಣಗಳು ಪ್ರಮುಖವಾಗಿವೆ. ಕಾರವಾರದ ಅವರ್ ಲೇಡಿ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್‌ನಲ್ಲಿ ನೆಲೆಗೊಂಡಿದೆ.

ಭಕ್ತರಿಂದ ನಮನ

ವಿಶೇಷವಾದ ಈ ಕಲಾಕೃತಿಯಲ್ಲಿ ಯೇಸುಸ್ವಾಮಿಗೆ ಭಕ್ತರಿಂದ ಪ್ರೀತಿಯ ನಮನ, ಇದು ಗಾಜಿನ ಮೇಲೆ ರಚಿಸಲಾದ ಚಿತ್ರವಾಗಿದ್ದು, ಸುಮಾರು ೪ ಜನರನ್ನೊಳಗೊಂಡಿದೆ. ಬಿಳಿಯ ಪಾದ್ರಿಗಳು ಇಲ್ಲಿದ್ದು, ಯೇಸುವನ್ನು ಶಿಕ್ಷೆಗೆ ಗುರಿಪಡಿಸಲು ಕರೆದುಕೊಂಡು ಹೋಗುತ್ತಿರುವಂತೆಯು ಕಾಣುತ್ತಿದೆ. ಹಿಂದೆ ಬೆಟ್ಟ ಗುಡ್ಡಗಳ ಸಾಲು, ಪ್ರಕೃತಿಯ ಚಿತ್ರವನ್ನು ಸುಂದರವಾಗಿ ತೋರಿಸಲಾಗಿದೆ. ವೃತ್ತಾಕಾರವಾಗಿರುವ ಚಿತ್ರದಲ್ಲಿ ಬಿಳಿ, ಕೆಂಪು, ಹಸಿರು, ಹಳದಿ, ಕಂದುಗೆಂಪು ಬಣ್ಣಗಳು ಪ್ರಮುಖವಾಗಿವೆ. ಕಾರವಾರದ ಅವರ್ ಲೇಡಿ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್‌ನಲ್ಲಿ ನೆಲೆಗೊಂಡಿದೆ.

ಸಿಸ್ಟರ್ ಮತ್ತು ದೋಣಿ

ಪ್ರಮುಖವಾಗಿ ಈ ಕಲಾಕೃತಿಯು ವೃತ್ತಾಕಾರವಿರುವ ಈ ಗಾಜಿನ ಚಿತ್ರದಲ್ಲಿ ಒಬ್ಬ ಸಿಸ್ಟರ್ ಹೂ ಗೊಂಚಲನ್ನಿಡಿದುಕೊಂಡು ನೀರಲ್ಲಿರುವ ದೋಣಿಯ ಕಡೆ ನೋಡುತ್ತಿದ್ದಾಳೆ. ಇವೆರಡರ ಸಂಬಂಧ ತುಂಬಾ ಸೂಕ್ಷ್ಮತೆಯಿಂದಿದ್ದು, ದೋಣಿಯಲ್ಲಿಯೇ ಮನೆಯ ವಾತಾವರಣವಿದೆ. ಮೋಡದಲ್ಲಿ ಚಂದ್ರನನ್ನು ತೋರಿಸಲಾಗಿದೆ. ಇದು ಸೃಜನ ಶೀಲತೆಯಿಂದ ಕೂಡಿದ್ದಾಗಿದೆ. ಒಟ್ಟಾರೆಯಾಗಿ ಈ ಕಲಾಕೃತಿಯು ಯೇಸುವಿನ ಉತ್ತಮ ಬಾಂದವ್ಯಕ್ಕೆ ಬೆಂಬಲವೆಂಬುದು ಮುಖ್ಯವಾದ ಅಂಶ ಬಿಳಿ, ನೀಲಿ, ಕಂದುಗೆಂಪು, ನೀಲಿ, ಹಸಿರು, ಹಳದಿ ವರ್ಣಗಳು ತುಂಬಾ ಮುಖ್ಯವಾದವುಗಳಾಗಿದೆ. ಮಂಗಳೂರಿನ ಕ್ಯಾಥಡ್ರಲ್ ಚರ್ಚ್‌ನ ಹೊರಭಾಗದಲ್ಲಿದೆ.

ಗಾಜಿನಿಂದ ಅಲಂಕೃತಗೊಂಡಿರುವ ಕೋಣೆ

ಯೇಸುವಿನ ಜ್ಞಾನಮಂದಿರವಿದ್ದಂತೆ ಗೋಚರಿಸುವ ಈ ಕೋಣೆಯು ರಂಜನೀಯ ಅಲಂಕಾರದಿಂದ ಕೂಡಿದ ಈ ಕೋಣೆಯ ಸೂಕ್ತ ಗಾಜಿನಿಂದ ಕೂಡಿಸಲ್ಪಟ್ಟಿದೆ. ಗಾಳಿ ಪ್ಯಾನ್‌ನಂತಿರುವ ಬಂಗಾರದ ವಸ್ತು ಜೀವಂತಿಕೆಗೆ ಗಾಜು ತುಂಬಾ ಸೌಂದರ್ಯಕೊಟ್ಟಿದೆ. ಪ್ರಮುಖವಾಗಿ ವಿವಿಧ ಆಕಾರಗಳಲ್ಲಿರುವುದು ಮುಖ್ಯವಾದ ಅಂಶವಾಗಿದೆ. ಮಂಗಳೂರಿನ ಕ್ಯಾಥಡ್ರಲ್ ಚರ್ಚ್‌ನಲ್ಲಿ ಸಂಗ್ರಹಿಸಿದೆ.

ಕಿಟಕಿಗೆ ಜೋಡಿಸಲಾದ ಬಣ್ಣದ ಗಾಜು

ಬಾಗಿಲಿನ ಬಟ್ಟೆಯಂತೆ ಕಾಣುವ ಈ ಕೃತಿಯು ಬಣ್ಣ ಬಣ್ಣದ ಗಾಜಿನಿಂದ ಜೋಡಿಸಲಾಗಿದೆ. ಚೈನಿನ ಕೊಂಡಿಯಂತೆ ಕಾಣುವ ಗಾಜಿನ ಚಿತ್ರವು ನೋಡಲು ಮನೋರಂಜನೆಯ ರೀತಿಯಲ್ಲಿವೆ. ಚುಕ್ಕಿದುಂಡನೆ, ನಕ್ಷತ್ರ ವಿವಿಧ ರೀತಿಯ ಆಕಾರಗಳನ್ನು ಇಲ್ಲಿ ಕಾಣಬಹುದು. ಸ್ಟೈನ್ ಗ್ಲಾಸ್ ರೂಪದಲ್ಲಿರುವ ಗಾಜುಗಳಲ್ಲಿ ಚಿತ್ರಗಳ ಬದಲು ಎಚ್ಚಿಂಗ್ ರೀತಿಯಲ್ಲಿ ಇತ್ತೀಚೆಗೆ ಕಾರವಾರದ ಅವರ್ ಲೇಡಿ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್‌ನಲ್ಲಿ ರೂಪುಗೊಂಡಿದೆ.

ಶಿಲುಬೆ ಮತ್ತು ಕೈ

ಸುಮಾರು ೪ ಅಡಿ ಎತ್ತರವಿರುವ ಈ ಕಲಾಕೃತಿಯು ಗಾಜಿನ ಮೇಲೆ ಚಿತ್ರಿತವಾಗಿದ್ದು, ಶಿಲುಬೆಗೆ ಕೈ ಮುಗಿಯುತ್ತಿರುವುದು. ಯೇಸುವಿಗೆ ನಮಸ್ಕರಿಸಿದಂತೆ ಗೋಚರವಾಗುತ್ತಿದೆ. ಕೈಗೆ ಅಂಟಿಕೊಂಡಂತಿರುವ ಚಿಗುರಿದ ಎಲೆಗಳು ಸುಂದರ ಶಿಲುಬೆಯ ಹಿಂದೆ ಬಿಳಿವರ್ಣದ ಗೋಡೆ ಇದ್ದಂತಿದೆ ಒಟ್ಟಾರೆಯಾಗಿ ಈ ಕಲಾಕೃತಿಯು ಸಂಯೋಜನೆಯಿಂದ ಕೂಡಿದ್ದಾಗಿದ್ದು, ಕ್ರೈಸ್ತ ದೇವರ ಆರಾಧಕ ವಸ್ತುವಾಗಿರುವುದಂತೂ ಸತ್ಯ. ಬಿಳಿ, ಕೆಂಪು, ಹಳದಿ, ಕಪ್ಪು, ಆರೆಂಜ್ ಬಣ್ಣಗಳನ್ನು ಈ ಕೃತಿಯಲ್ಲಿ ಕಾಣಬಹುದು. ಈ ಕಲಾಕೃತಿಯು ಕುಲಶೇಖರ ಚರ್ಚ್ ಮಂಗಳೂರಿನಲ್ಲಿ ನೆಲೆಗೊಂಡಿದೆ.

ಸಂಯೋಜನಾ ಚಿತ್ರ

ಮಂಗಳೂರಿನ ಕೆಥೊಡ್ರಲ್ ಚರ್ಚ್‌ನ ಹೊರಭಾಗದ ಮೇಲ್ಛಾವಣಿಯಲ್ಲಿರುವ ಈ ಚಿತ್ರಕೃತಿಯು ಗಾಜಿನಿಂದ ಕೂಡಿದೆ. ಇಲ್ಲಿ ಮೂರು ರೀತಿಯ ಸಂಯೋಜನೆಯನ್ನು ಕಾಣಬಹುದು. ಮೂರರಲ್ಲಿ ಚರ್ಚ್‌ನಡೆಯುತ್ತಿದೆ. ಹಿರಿಯ ಪಾದ್ರಿಯೊಬ್ಬರು ವಿವಿಧ ಬಂಗಿಗಳಲ್ಲಿ ಕ್ರೈಸ್ತದೇವರ ಕುರಿತು ಚರ್ಚಿಸುವಂತಿದೆ. ಮೊದಲನೆ ಚಿತ್ರದಲ್ಲಿ ಒಬ್ಬ ಕುರ್ಚಿ ಮೇಲೆ ಕುಳ್ಳಿತಿರುವುದು, ಇಬ್ಬರು ನಿಂತು ಚರ್ಚೆ ನಡೆಸುತ್ತಿದ್ದಾರೆ. ಎರಡನೇ ಚಿತ್ರದಲ್ಲಿ ಮಗುಕುಳಿತಿದ್ದು,

ಒಬ್ಬ ಸಂದೇಶ ನೀಡುತ್ತಿರುವಂತಿದೆ. ಮೂರನೇ ಚಿತ್ರದಲ್ಲಿ ಮೂವರು ನಿಂತಿದ್ದು, ಟೇಬಲ್ ಮೇಲೆ ಒಂದು ವಸ್ತುವನ್ನಿಟ್ಟು, ಚರ್ಚಿಸಲಾಗುತ್ತಿದೆ. ಬಿಳಿ, ಕಪ್ಪು, ಬ್ರೌನ್, ಹಳದಿ, ನೀಲಿ,ಕಂದು ನೀಲಿ ವರ್ಣಗಳನ್ನು ಮುಖ್ಯವಾಗಿ ಕಾಣಬಹುದು.

ಗೋಡೆ ಮತ್ತು ಬಟ್ಟೆ ಮಾಧ್ಯಮದ ಚಿತ್ರಕ್ಕೆ ಸವಾಲೆಂಬಂತೆ ರೂಪುಗೊಳ್ಳುತ್ತಿರುವ ಗಾಜಿನ ಮೇಲಿನ ಚಿತ್ರಕಲೆಯು ತುಂಬಾ ಸೂಕ್ಷ್ಮತೆಯಿಂದ ಕೂಡಿದ್ದಾಗಿದೆ. ಕನ್ನಡಿ ಹೇಗೋ ಹಾಗೆಯೇ ಗಾಜಿನ ಚಿತ್ರಗಳು, ಕರಾವಳಿ ಕರ್ನಾಟಕದ ಪ್ರಮುಖ ಚರ್ಚ್‌ಗಳಲ್ಲಿ ಕಾಣುತ್ತಿದ್ದು, ವಿಶೇಷವಾಗಿ ಅಲಂಕಾರಕ್ಕಾಗಿ ಬಳಸುತ್ತಿರುವ ಪ್ರಸ್ತುತ ದಿನಗಳಲ್ಲಿ ಕ್ರಿಯೇಟಿವ್ (ಗ್ಲಾಸ್ ಹೆಚ್ಚಿಂಗ್) ಮಾಡಲಾಗಿದೆ. ೧೮ನೇ ಶತಮಾನದ ಕೊನೆಯಲ್ಲಿ ರಚಿಸಿ ಹಾಕಲಾಗಿರುವ ಕಲಾಕೃತಿಗಳು ಸಹ ಇಲ್ಲಿ ಸಿಗಲಾಗುತ್ತಿದ್ದು, ಸ್ಟೈನ್ಡ್ ಗ್ಲಾಸ್‌ನಿಂದ ಹೆಚ್ಚು ರಚಿತವಾಗಿವೆ. ಪ್ರಮುಖವಾಗಿ ಸೆಂಟ್ ಅಲೋಶಿಯಸ್ ಚರ್ಚ್, ಮಂಗಳೂರು, ಕ್ಯಾಥಡ್ರಲ್ ಚರ್ಚ್ ಮಂಗಳೂರು, ಅವರ್ ಲೇಡಿ ಆಫ್ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್ ಕಾರವಾರ, ಕುಲಶೇಖರ ಮಂಗಳೂರು, ಹೋಲಿಕ್ರಾಸ್ ಮಂಗಳೂರು, ಸೆಂಟ್ ಮೈಕಲ್ ಚರ್ಚ್, ಬಂಟ್ವಾಳ, ಸೆಂಟ್ ಜೋಸೆಪ್ ಚರ್ಚ್, ಉಡುಪಿ ನಗರಗಳಲ್ಲಿ ಪ್ರಮುಖವಾಗಿ ಗಾಜಿನ ಮೇಲಿನ ಚಿತ್ರಗಳನ್ನು ಕಾಣಬಹುದಾಗಿದೆ. ಹಾಗೆಯೇ ಈ ಅಧ್ಯಯನದಲ್ಲಿ ಕ್ರೈಸ್ತರ ಕುರಿತು ಗಾಜಿನ ಮೇಲೆ ರಚಿತವಾಗಿರುವ ಪ್ರಮುಖ ಅಂಶಗಳನ್ನು ಇಲ್ಲಿ ಕಾಣಬಹುದಾಗಿದೆ.

* * *

ಸಂಯೋಜನೆಯಿಂದ ಕೂಡಿರುವ ಕಿಟಕಿಯ ಮೇಲಿರುವ ಗಾಜಿನ ಚಿತ್ರಗಳು




ಸಂಯೋಜನೆಯಿಂದ ಕೂಡಿರುವ ಕಿಟಕಿಯ ಮೇಲಿರುವ ಗಾಜಿನ ಚಿತ್ರಗಳು















ಸಂಯೋಜನೆಯಿಂದ ಕೂಡಿರುವ ಕಿಟಕಿಯ ಮೇಲಿರುವ ಗಾಜಿನ ಚಿತ್ರಗಳು














ಧಾರ್ಮಿಕ ಪ್ರವರ್ತಕರು (ಕ್ರೈಸ್ತ ಧರ್ಮಿಯರು)





















ಯೇಸು, ಮೇರಿ ಮತ್ತು ಧಾರ್ಮಿಕ ಪ್ರವತಕರು (ಕ್ರೈಸ್ತ ಧರ್ಮಿಯರು)






ರೇಖೆಗಳೊಂದಿಗೆ ಹೂವಿನ ಚಿತ್ರ



ಕಿಟಕಿಗೆ ಜೋಡಿಸಿರುವ ಬಣ್ಣದ ಚಿತ್ರ



ಗಾಜಿನಿಂದ ಅಲಂಕಾರಗೊಂಡಿರುವ ಕೋಣೆ



ಶಿಲುಬೆ ಮತ್ತು ಕೈ



ಟೈಲ್ಸ್‌ನಂತೆ ರೂಪಿತಗೊಂಡಿರುವ ಶಿಲುಬೆ



ಚಿಗುರು




ಶಾಂತಿಯ ರೂಪ



ಸೃಜನಾತ್ಮಕತೆ ಇರುವ ಚಿತ್ರಕಲೆ



ಶಿಲುಬೆಯನ್ನೊಳಗೊಂಡ ಚಿತ್ರಕಲೆ




ಗಾಜಿನಲ್ಲಿ ರಚಿತ ಕಲಾಕೃತಿ




ಬಣ್ಣದ ಗಾಳಿಪಟಗಳು



ಕ್ರೈಸ್ತ ಧರ್ಮದ ಸಂಕೇತಗಳು



ಬಣ್ಣ ಬಣ್ಣದ ಗಾಜಿನ ಕೃತಿ



ಜೋಳದ ತೆನೆಗಳು

ಅಧ್ಯಾಯ : ಐದು

ಕ್ರೈಸ್ತ ಬಟ್ಟೆಮಾಧ್ಯಮದ ಚಿತ್ರಗಳು

ಮಾನವ ಜೀವನದಲ್ಲಿ ಆಹಾರದ ನಂತರದ ಸ್ಥಾನ ಬಟ್ಟೆಯದು ಆದ್ದರಿಂದ ಅದು ಮನುಷ್ಯನ ಅತಿ ಪ್ರಮುಖವಾದ ವೃತ್ತಿಯಾಗಿದೆ. ಕಾಲ ಕಳೆದಂತೆ ಉತ್ಪಾದನಾ ತಾಂತ್ರಿಕತೆಯಲ್ಲಿ ಸುಧಾರಣೆಯಾದಂತೆ, ಬಟ್ಟೆಗಳಲ್ಲಿ ಸೌಂದರ್ಯದ ಅಂಶನೂ ಸೇರಿಕೊಂಡಿತು. ಕಲಾ ಕೌಶಲ್ಯವನ್ನು ವ್ಯಕ್ತಪಡಿಸಲು ಅದೂ ಪರಿಣಿತರಾಗಿದ್ದರು. ಕೈಗಾರಿಕಾ ಕ್ರಾಂತಿಯಾಗುವುದಕ್ಕೆ ಮೊದಲು ಭಾರತೀಯ ಬಟ್ಟೆಗಳು ವೈವಿಧ್ಯ ಗುಣಮಟ್ಟವನ್ನು ಮತ್ತು ನಯಗಾರಿಕೆಗಳಲ್ಲಿ ವಿಶ್ವಮಾನ್ಯತೆಯನ್ನು ಪಡೆದಿದ್ದವು. ಮಾನವನು ತನ್ನ ಸೌಂದರ್ಯದ ಹಂಬಲವನ್ನು ಅಭಿವ್ಯಕ್ತಿಸಲು ಕಲ್ಲು, ಲೋಹ, ಇಟ್ಟಿಗೆಗಳಂತಹ ಗಟ್ಟಿ ವಸ್ತುಗಳನ್ನು ಉಪಯೋಗಿಸುತ್ತಿದ್ದನು ತನ್ನ ಕೌಶಲ್ಯವನ್ನು ಪ್ರದರ್ಶಿಸಲು ಮಾತ್ರ ಹತ್ತಿ, ಉಣ್ಣೆ ಮತ್ತು ರೇಷ್ಮೆಗಳಂತಹ ನಯವಾದ, ಮಿದುವಾದ, ಮಾಧ್ಯಮವನ್ನು ಬಳಸಿರಬೇಕು.

ಕಾಲದ ಹೊಡೆತವನ್ನು ಎದುರಿಸಬಲ್ಲ ಕಲ್ಲು ಮತ್ತು ಲೋಹದ ಕೃತಿಗಳಿಗೆ ವಿರುದ್ಧವಾಗಿ ಬಟ್ಟೆಗಳು ಹಾಳಾಗುವ ವಸ್ತುಗಳು, ಶತಮಾನಗಳ ಕಾಲ ಅವು ಉಳಿಯುವುದಿಲ್ಲ. ಆದ್ದರಿಂದ ಪ್ರಾಚೀನ ಕಾಲದ ಬಟ್ಟೆಗಳ ಮಾದರಿಗಳು, ಅವುಗಳ ಸೌಂದರ್ಯ ಪ್ರಜ್ಞೆಯನ್ನು ಗುರುತಿಸಲು ಅವು ನಮಗೆ ಸಾಕಷ್ಟು ಪ್ರಮಾಣದಲ್ಲಿ ದೊರಕುವುದಿಲ್ಲ. ಹದಿನಾರನೆಯ ಮತ್ತು ಹದಿನೇಳನೆಯ ಶತಮಾನಗಳಿಗೆ ಸೇರಿದ ರತ್ನಗಂಬಳಿಗಳು[೧] ಸಿಗುವುದರ ಜೊತೆಗೆ ವಸ್ತು ಸಂಗ್ರಹಾಲಯದಲ್ಲಿಯ ರಾಜರ ಪೋಷಾಕುಗಳು ಮಾತ್ರ ನಮಗೆ ಉಪಲಬ್ದವಾಗಿವೆ.

ಕರ್ನಾಟಕವು ಪ್ರಾಚೀನ ಕಾಲದಲ್ಲಿ ಮರ ಚಿತ್ರಗಳಿಂದ ಕೂಡಿದ ಮುದ್ರಿತವಾದ ಮತ್ತು ಬಣ್ಣಕೊಟ್ಟ ಹತ್ತಿಯ ಚೀಟಿ ಬಟ್ಟೆಗಳಿಗಾಗಿ ಹೆಸರುಗಳಿಸಿತ್ತು. ರತ್ನಗಂಬಳಿಗಳು ಗಂಟು ರಚನೆಯ ಮತ್ತು ಸರಳ ನೇಯ್ಗೆಯವು ಅಮೂಲ್ಯವಾದ ರೇಷ್ಮೆ ಎಂಬ್ರಾಯಿಡರಿಗಳು ಮತ್ತು ಬ್ರೋಕೇಡುಗಳು ಕರ್ನಾಟಕದ ದಖ್ಖನಿ ಕಲೆಯ[೨] ಉತ್ಕೃಷ್ಟತೆಯ ಸೌಮ್ಯ ಕಲಾವಂತಿಕೆಗೆ ಸಾಕ್ಷಿಯಾಗಿದೆ.

---

೧. ಕೆ.ಆರ್. ಸಂಧ್ಯಾರೆಡ್ಡಿ : ಉಣ್ಣೆ ಮತ್ತು ಮಸ್ಲಿನ್ ವಸ್ತ್ರಗಳು, ಕರಕುಶಲಕಲೆ, ವಿಶ್ವಕೋಶ, ಪುಟ-೫೩

೨. ವಜೀರಭಾಷ ಬಿ. ಭಾಗವತ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಕ.ವಿ.ಹಂ

ಹತ್ತಿಯು ಮುಖ್ಯ ಬೆಳೆಯಾಗಿ ಕೆನರಾ ಪ್ರದೇಶದಲ್ಲಿ ಕಂಡುಬರುತ್ತಿದ್ದ ಆ ಕಾಲದಲ್ಲಿ ವಿವಿಧ ರೀತಿಯ ಆಕಾರ ಹಾಗೂ ಬಣ್ಣಗಳ ಬಟ್ಟೆಗಳ ನೇಯುವ ಕಾರ್ಖಾನೆಗಳು ಪ್ರಾರಂಭವಾದವು. ಪ್ರಮುಖವಾಗಿ ಕರಾವಳಿಯ ತೀರದಲ್ಲಿ ಹಾಗೂ ಕರಾವಳಿಯ ಮೇಲ್ಭಾಗದ ಪಟ್ಟಣಗಳಲ್ಲಿ ಹತ್ತಿ ಬಟ್ಟೆಯ ಕಾರ್ಖಾನೆಗಳಿದ್ದವು[೩]. ಇದರ ಬೆನ್ನಲ್ಲೆ ಮತ್ತೊಬ್ಬ "ಜೋರ್ಡಿ" ಎಂಬ ವಿದ್ವಾಂಸನು ಈ ದೇಶವು ಬಹಳ ಫಲವತ್ತಾದದ್ದು, ಮತ್ತು ಎಲ್ಲಾ ಬಗೆಯ ಹತ್ತಿಯ ಬಟ್ಟೆಗಳು ಅಂದರೆ ಬಪ್ತಾಸ್, ಬಿರಮ್ಸ, ಸೋಸಸ ಮತ್ತು ಇನ್ನಿತರ ಪ್ರಕಾರಗಳಿದ್ದವು ಎಂದು ಅಭಿಪ್ರಾಯ ಪಟ್ಟಿರುವುದು ಸರಿ ಎನಿಸಿದರೂ ಇತ್ತೀಚಿನ ದಿನಮಾನಗಳಲ್ಲಿ ವರ್ತಮಾನದ ಅವಾಂತರದಿಂದ ಬಟ್ಟೆಯ ಪ್ರಮುಖ ಅಂಶವಾದ ಹತ್ತಿಯು ನಶಿಸಿ ಹೋಗುತ್ತಿದೆಯೇನೋ ಅನ್ನುವಷ್ಟರ ಮಟ್ಟಿಗೆ ಸಾಗಿರುವುದು ವಿಷಾದನೀಯ.

ದಕ್ಷಿಣ ಭಾಗಗಳಾದ ಹುಬ್ಬಳ್ಳಿ ಮತ್ತು ಕಾರವಾರ ಪ್ರದೇಶಗಳಲ್ಲಿ ಹತ್ತಿಯ ನೂಲಿನ ಗಿರಣಿಗಳಿದ್ದವು. ಆದ್ದರಿಂದ ಪುರುಷರು ಸ್ತ್ರೀಯರು ಧರಿಸುವ ಬಟ್ಟೆಗಳಾದ ಸೀರೆ, ಧೋತರ, ಕುಬ್ಬಸ, ಮೇಲು ಹೊದಿಕೆ, ಖಾದಿ ಕೈಮಗ್ಗದ ಬಟ್ಟೆಗಳು, ಪಿತಾಂಬರ ಜಮಖಾನೆಗಳು ತಯಾರಿಸುತ್ತಿದ್ದರು. ಈ ದಕ್ಷಿಣ ಭಾಗದಲ್ಲಿ ದಪ್ಪ, ಬಿಳಿಯ ಬಟ್ಟೆ ಮತ್ತು ಮಕಮಲ್ಲಿನ ಬಟ್ಟೆಗಳನ್ನು ಪ್ರಮುಖವಾಗಿ ತಯಾರಿಸಲಾಗುತ್ತಿತ್ತು. ದಪ್ಪ ಬಿಳಿ ಬಟ್ಟೆಯನ್ನು ಸುಮಾರಾಗಿ ಭಾರತದ ಎಲ್ಲೆಡೆ ತಯಾರಿಸಲಾಗುತಿತ್ತು. ದಪ್ಪ ಬಿಳಿ ಬಟ್ಟೆಯನ್ನು ಸಾಮಾನ್ಯವಾಗಿ ಭಾರತದ ಎಲ್ಲೆಡೆ ತಯಾರಿಸಲಾಗುತ್ತಿತ್ತು. ಆದರೆ ಮಕಮಲ್ಲಿನ ಬಟ್ಟೆಯ ತಯಾರಿಕೆ ದಕ್ಷಿಣದಲ್ಲಿ ಮತ್ತು ಬಂಗಾಳಿಗಳಲ್ಲಿ ಮಾತ್ರ ಇತ್ತು. ಕೊಂಕಣ ಕರಾವಳಿಗಳಲ್ಲಿ ವಿಶೇಷವಾಗಿ ದಾಬೋಳ, ರಾಜಾಪುರ ಮತ್ತು ಜಾಲ ಪ್ರದೇಶಗಳಲ್ಲಿ ದಪ್ಪ ಬಿಳಿಯ ಬಟ್ಟೆ ಮತ್ತು ಮಕಮಲ್ಲಿಗೆ ಹೆಸರಾಗಿತ್ತು. ಆದರೆ ಕರ್ನಾಟಕದಲ್ಲಿ ಇಳಕಲ್ಲು, ಶಹಾಪುರ, ಮೊಳಕಾಲ್ಮೂರು ಸೀರೆಗಳಿಗೆ ಎಲ್ಲೆಲ್ಲಿಂದ ಬೇಡಿಕೆಯಾಗಿದೆ. ಈ ಬಟ್ಟೆಗಳಿಗೆ ಬಣ್ಣಹಾಕಲು ಕೆಲವು ಪ್ರಮಾಣದ ಬೋರ್ರ್ಯಾಕ್ಸನ್ನು ತಯಾರಿಸಿ ಅರಳೆ ಬಟ್ಟೆಗಳನ್ನು ಡೈಮಾಡಲು ಉಪಯೋಗಿಸುತ್ತಿದ್ದರು. ಇದನ್ನು ಬ್ರೀಟಿಷ್ ವ್ಯಾಪಾರಸ್ಥರು ಅವರ ದೇಶಗಳಿಗೆ ರಫ್ತು ಮಾಡುತ್ತಿದ್ದುದು ವಿಶೇಷ ಹಾಗೆಯೇ ಇಲ್ಲಿನ ಹತ್ತಿಯು ಸಹ ಹೊರ ದೇಶಗಳಿಗೆ ರಫ್ತು ಮಾಡುತ್ತಿದ್ದುದರಿಂದ ದಪ್ಪ ಬಿಳಿ ಬಟ್ಟೆಯ ತಯಾರಿಕಾ ಘಟಕವನ್ನು ಪ್ರಾರಂಭಿಸಿ ಬೆಳೆಸಿದರೆನ್ನಲಾಗಿದೆ.

---

೩. ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ: ವಿಜಾಪುರದ ಆದಿಲ್‌ಷಾಹಿ, ಪುಟ-೨೧೬

ಬಟ್ಟೆ ಮಾಧ್ಯಮ ಚಿತ್ರಕಲೆ

ಹತ್ತಿಬಟ್ಟೆ	ಉಣ್ಣೆಯ ಬಟ್ಟೆ	ರೇಷ್ಮೇಯ ಬಟ್ಟೆ	ಮಸ್ಲಿನ್ ಬಟ್ಟೆ
ಚೋಲಿ	ಕಂಬಳಿ		
ಕುಪ್ಪಸ	ರತ್ನಗಂಬಳಿ		
ಜಮಖಾನೆ	ಬ್ಲಾಂಕೆಟ್ಸ್		
ಸೀರೆ ರೇಷ್ಮೇ	ಸೀರೆ ಶಾಲು		
ಹತ್ತಿ ಸೀರೆ			
ಉಡುಪುಗಳು			

ಬಟ್ಟೆಮಾಧ್ಯಮ ಎಂದಾಗ ಕ್ಯಾನ್ವಾಸ್ ಫ್ರೇಂ ಮೇಲೆ ಬಟ್ಟೆಯನ್ನು ಬಡಿದು ನಂತರ ಕಲಾಕೃತಿ ರಚನೆಗೆ ಬೇಕಾದಂತಹ ಹದವನ್ನು ಮಾಡಿಕೊಳ್ಳಬೇಕಾಗುತ್ತದೆ. ಅದೇ ರೀತಿ ಇಲ್ಲಿಯು ಮೇಲೆ ತಿಳಿಸಿರುವ ಹಾಗೆ ಹತ್ತಿಯಿಂದ ತಯಾರಾದ ದಪ್ಪ, ಸ್ಟ್ರಚ್ಚರ್ ಇರುವ ಕ್ಯಾನ್ವಾಸ್ ಬಟ್ಟೆ ಎಂದೇ ಬಿಂಬಿಸುವುದನ್ನು ತಂದು ಚಿತ್ರರಚನೆಗೆ ಬಳಸುವುದು ಕರಾವಳಿ ಕರ್ನಾಟಕದ ಭಾಗದಲ್ಲಿಯೇ ಹೆಚ್ಚು ಹತ್ತಿಯನ್ನು ಬೆಳೆಯುತ್ತಿದ್ದರಿಂದ ಇಲ್ಲಿಯೇ ತಯಾರಾಗಿರಬಹುದು ಎಂಬ ಊಹೆ ಪ್ರಶ್ನಾತೀತವಾದದ್ದು, ಇದರ ಪ್ರಕಾರ ಮಾಹಿತಿ ಒದಗಿಸುವಲ್ಲಿ ಈ ಧರ್ಮದ ಮತಬಾಂಧವರು ಹಿಂದೆ ಸರಿದಿರುವುದರಿಂದ ಖಚಿತ ಮಾಹಿತಿ ಇಲ್ಲ ಹಾಗೆಯೇ ಬಟ್ಟೆಯ ಮೇಲೆ ಪಾಶ್ಚಾತ್ಯ ಕಲಾವಿದ ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದಾನೆ. ೧೮೯೯ರಲ್ಲಿ ಅನೇಕ ಚರ್ಚ್‌ಗಳಲ್ಲಿ ಅಡ್ಡಾಡಿದ್ದಾನೆ. ಧರ್ಮ ಪ್ರಚಾರಕ್ಕಾಗಿ ಮಾಡದ ಕೆಲಸವಿಲ್ಲ ಅದು ಉತ್ತಮ ಬೋಧನೆಯಲ್ಲಿ ಇದರ ಜೊತೆಗೆ ಉಪಯುಕ್ತ ವೆನಿಸುವಂತಹ ಚಿತ್ರಕೃತಿಗಳನ್ನು ರಚಿಸಿರುವುದನ್ನು ಪ್ರಮುಖವಾಗಿ ಈ ಅಧ್ಯಾಯನದಲ್ಲಿ ಹೇಳಲಾಗಿದೆ.

ಬಟ್ಟೆ ಮೇಲೆ ತೈಲವರ್ಣದಿಂದ ರಚಿಸಿರುವ ಕಲಾಕೃತಿಗಳೆಂದರೆ ಚಿತ್ರ ವಿನ್ಯಾಸ, ಯೇಸುವಿನ ಪವಾಡಗಳು ಪಾದ್ರಿ, ನವದೂತರು, ೧೨ ಜನ ಶಿಷ್ಯರು ಮಕ್ಕಳು ಹೀಗೆ ಪಟ್ಟಿಯೇ ಬೆಳೆದರು ಚರ್ಚ್‌ನ ಸೌಂದರ್ಯವನ್ನು ಹೆಚ್ಚಿಸಿರುವುದರಲ್ಲಿ ಸಂಶಯವಿಲ್ಲ.

ಮೇರಿ ಮತ್ತು ಯೇಸುವಿನೊಂದಿಗೆ ಅರಸರು

ಈ ಕಲಾಕೃತಿಯು ಕ್ಯಾನ್ವಾಸ್‌ನ ಮೇಲೆ ರಚನೆಯಾಗಿದ್ದು, ೮ x ೧೦ ಅಡಿ ಇದ್ದು, ತೈಲವರ್ಣದಿಂದ ಚಿತ್ರಿಸಲಾಗಿದೆ. ಈ ಕಲಾಕೃತಿಯಲ್ಲಿ ಸಂಯೋಜನೆಯ ದೃಶ್ಯವನ್ನು

ಕಾಣಬಹುದಾಗಿದೆ. ತಾಯಿ ಮೇರಿಯ ತನ್ನ ಮಗುವಾದ ಯೇಸುವನ್ನು ತನ್ನ ತೊಡೆಯ ಮೇಲೆ ಕುಂದಿರಿಸಿಕೊಂಡಿದ್ದು, ಭಕ್ತರು ಸಾಲುಗಟ್ಟಿ ನಿಂತಿದ್ದಾರೆ. ಅದರಲ್ಲಿ ಪ್ರಮುಖವಾಗಿ ಮೂವರು ಅರಸರು ದೇವರ ಆಶೀರ್ವಾದ ಪಡೆಯುವುದು ಚಿತ್ರಿತವಾಗಿರುವ ಪ್ರಮುಖ ಅಂಶ, ಯೇಸು ಚಿಕ್ಕಮಗುವಾಗಿದ್ದಾಗಲೇ ತಮ್ಮಲ್ಲಿರುವ ಶಕ್ತಿಯನ್ನು ಜನರಲ್ಲಿ ಪ್ರದರ್ಶಿಸಿರುವುದರ ಸಂಕೇತವಾಗಿ ಕಂದಮ್ಮನಿಗೆ ಹಿರಿಯರು, ಸಮಾಜ ಸುಧಾರಕರು ಆದ ಅರಸರು ಬಂದು ನಮಸ್ಕರಿಸುತ್ತಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಈ ಚಿತ್ರವು ಬಟ್ಟೆಯ ಮೆಲೆ ರಚನೆಯಾಗಿದ್ದು, ಚಿತ್ರದಲ್ಲಿ ನೆರಳು ಬೆಳಕಿನ ಕುರಿತು ಸೂಕ್ಷ್ಮವಾಗಿ ವೀಕ್ಷಿಸಬಹುದು. ಇಲ್ಲಿ ಮೇರಿಯ ಉಡುಪು ಬಿಳಿಯದ್ದಾಗಿದ್ದು, ಮಗುವಿನ ಬರಿ ಮೈಗೆ ಸುತ್ತುವರೆದಿದೆ. ಕುಳಿತಿರುವ ಮೇರಿ ಮತ್ತು ಯೇಸುವನ್ನು ಅರಸರು ತುಂಬಾ ಗಂಭೀರವಾಗಿ ನೋಡುತ್ತಿದ್ದು, ಅಷ್ಟೇ ವಿನಯ, ಭಕ್ತಿ ತುಂಬಿದ್ದು, ಸಾಲಾಗಿ ನಿಂತಿರುವುದನ್ನು ಕಾಣಬಹುದು. ಮನೆಯಿಂದ ಸ್ವಲ್ಪ ದೂರದಲ್ಲಿ ಕಲ್ಲಿನಿಂದ ಕೂಡಿದ ಚರ್ಚ್ ಒಂದು ಕಾಣುತ್ತಿರುವುದು ಹಿಂದೆ ಮರ, ಒಂಟೆಗಳು ಗೋಚರಿಸುತ್ತಿವೆ. ಕುಲಿತಿರುವ ಮೇರಿಯ ಕಾಲಲ್ಲಿ ತನ್ನ ಶಿರವನ್ನು ಬಾಗಿಸಿ ಆಶೀರ್ವಾದ ಪಡೆಯುತ್ತಿರುವಂತಿದ್ದು, ಇನ್ನೊಬ್ಬ ಅರಸ ಮೊಣಕಾಲೂರಿ ಎದೆಯು ಬಾಗಿ ತನ್ನ ಭಕ್ತಿಯನ್ನು ತೋರಿಸುತ್ತಿದ್ದಾನೆ. ಮತ್ತೊಬ್ಬ ಅರಸ ಕೈಯಲ್ಲಿ ಅಲಂಕಾರಿಕ ಹೂಜಿಯನ್ನು ಹಿಡಿದುಕೊಂಡಿದ್ದು, ಮಗುವನ್ನು ಮುಟ್ಟಲು ಹಾತೊರೆಯುವನಂತೆ ಗೋಚರಿಸುವನು. ಇವರ ಹಿಂದೆನಿಂತಿರುವ ಭಕ್ತರು ಸಹನೆ, ತಾಳ್ಮೆಯಿಂದ ಯೇಸುವನ್ನು ನೋಡುತ್ತಾ ಮುಖದಲ್ಲೆ ಆನಂದ ಬಾಷ್ಪ ಸುರಿಯುತ್ತಿರುವಂತೆ ಚಿತ್ರಿಸಲಾಗಿದೆ. ಇಲ್ಲಿ ಬಿಳಿ, ನೀಲಿ, ಕೆಂಪು, ಹಳದಿ ಆಕಾರ್ ಎಲ್ಲೊ, ನೇರಳೆ, ಹಸಿರು ಬ್ರೌನ್, ಒಟ್ಟಾರೆಯಾಗಿ ವರ್ಣಗಳ ಗುಂಪೆ ಆವರಿಸಿರುವುದರಿಂದ ಕಲಾಕೃತಿಯು ತನ್ನದೇ ಆದ ವಿಶಿಷ್ಟತೆಯಲ್ಲಿ ಕಾಣುವಂತಾಗಿದೆ. ಇದು ಸಂಯೋಜನೆಯ ಚಿತ್ರವಾಗಿರುವುದರಿಂದ ಕಥೆಯ ರೂಪವನ್ನು ಬಟ್ಟೆಯ ಮೇಲೆ ಜೀವ ತುಂಬಿರುವುದರಿಂದ ಇಂದಿಗೂ ಮಾಸದೇ ಅಚ್ಚಳಿಯದ ರೀತಿಯಲ್ಲಿ ಸಂರಕ್ಷಿಸಲಾಗಿದೆ. ೧೮೯೯ರಲ್ಲಿ ರಚನೆಯಾಗಿದ್ದು, ಪಾಶ್ಚಾತ್ಯ ಕಲಾವಿದ ಆಂಟೋನಿ ಮೋಶ್ಚಿನಿಯು ಚಿತ್ರಿಸಿದ್ದು, ಸೆಂಟ್ ಅಲೋಶಿಯಸ್ ಚರ್ಚ್ ಮಂಗಳೂರಿನಲ್ಲಿ ಸಂಗ್ರಹಗೊಂಡಿದೆ.

ಸಮುದ್ರದಲ್ಲಿ ದೋಣಿಯ ದುರಂತದ ದೃಶ್ಯ

ಈ ಕಲಾಕೃತಿಯು ೧೦ x ೮ ಅಡಿಯಿದ್ದು, ತೈಲವರ್ಣದಿಂದ ಚಿತ್ರಸಲಾಗಿದ್ದು, ಸಿಡಿಲು, ಮಿಂಚು ಇದರ ಮಧ್ಯೆ ರಾತ್ರಿ ಸಮಯವನ್ನು ಎಂಥಹವರು ಗುರುತಿಸುವಂತೆ ಈ ಕಲಾಕೃತಿ ಕಾಣುತ್ತಿದ್ದು, ಸಮುದ್ರದಲ್ಲಿ ಊರಿಗೆ ದೋಣಿಯ ಮೂಲಕ ಬರುತ್ತಿದ್ದ ಸಂದರ್ಭವದು, ಅಂದು ಸುನಾಮಿಯ ಅಲೆ ಶುರುವಾಯಿತು. ಆ ಸಂದರ್ಭಕ್ಕೆ ಸರಿಯಾಗಿ ಯೇಸುವು

ದೋಣಿಯಲ್ಲಿದ್ದಿದ್ದು, ಸುಮಾರು ಎತ್ತರದ ದೋಣಿ ಅದು. ಗಾಳಿಗೆ ಅಲುಗಾಡುವಂತಿರುವ ಇದು ಬಿರುಗಾಳಿ, ಅಲೆಯೆತ್ತರ ಬಂದಾಗ ಅದರಲ್ಲಿದ್ದವರು ಹಾಗೆ ಜಾರುವುದಂತೂ ಸರಿ, ಆದರೆ ಇಲ್ಲಿ ಜನರಿಗೆ ಭಯವಾದರೂ ಅವರಿಗೆ ಜೀಸಸ್ ಎಂಬ ಮಂತ್ರ ಜೊತೆಗಿದ್ದದ್ದು, ಆ ಬಿರುಗಾಳಿಯನ್ನು ಕೈ ಮೇಲಕ್ಕೆತ್ತಿ ಕೆಳಗಿಳಿಸುವ ಹೊತ್ತಿಗೆ ಸರಿಹೋಯಿತು. ಬಿರುಗಾಳಿಯಿಂದ ಆಶ್ಚರ್ಯ ಚಕಿತರಾದ ಜನರು ಜೋರಾಗಿ ಕೂಗಿ ದೇವರನ್ನು ಜ್ಞಾಪಿಸಿಕೊಂಡರು. ಇಲ್ಲಿ ಕಲಾವಿದನು ವಿಜೃಂಭಣೆಯಿಂದ ಭಯಂಕರ ಹುಟ್ಟುವ ರೀತಿಯಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಬಣ್ಣ, ರೇಖೆಗಳನ್ನು ಬಳಸಿದ್ದಾನೆ. ಯೇಸುವಿನ ಜೊತೆ ನಾಲ್ಕೈದು ಜನ ಕಾಣುವ ಈ ದೃಶ್ಯದಲ್ಲಿ ಎಲ್ಲಾರೂ ನೀರೋಳಗೆ ಜಾರಿದ್ದಾರೆ ಎಂಬಂತೆ ಚಿತ್ರಿಸಲಾಗಿದೆ. ಯೇಸುವು ನಿಂತಿದ್ದು, ಕಂದು ಗೆಂಪು ಬಟ್ಟೆಯನ್ನು ಹಾಕಿಕೊಂಡು ನೀಲಿ ಬಣ್ಣದ ಶಾಲನ್ನು ಹೆಗಲ ಮೇಲೆ ಹಾಕಿಕೊಂಡಿದ್ದಾರೆ. ಸಮುದ್ರದ ಅಲೆಗಳು ಅಪ್ಪಳಿಸಿದ್ದು, ಆಕಾಶದಲ್ಲಿ ಮಿಂಚನ್ನು ಬೇರ್ಪಡಿಸಿರುವುದು ಆಶ್ಚರ್ಯ. ರಾತ್ರಿಸಮಯವನ್ನು ಬಿಂಬಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ದೋಣಿಯು ಹಿಂದೆ ಮುಳುಗಿದಂತಿದ್ದು, ಮೇಲೆರಗಿದೆ ಎಂಬುದನ್ನು ನೋಡಬಹುದು. ದೋಣಿ ಎತ್ತರಕ್ಕೆ ನೀರು ಚಿಮ್ಮುತ್ತಿದೆ. ಬಿಳಿ, ಹಳದಿ, ನೀಲಿ, ಕಂದುಗೆಂಪು, ಆರೆಂಜ್, ಆಕಾರ್ ಎಲ್ಲೋ ಬಣ್ಣಗಳು ಇಲ್ಲಿ ಪ್ರಮುಖವಾಗಿವೆ. ಸೆಂಟ್ ಅಲೋಶಿಯಸ್ ಚರ್ಚ್ ಮಂಗಳೂರಿನಲ್ಲಿ ನೆಲೆಗೊಂಡಿದೆ.

ಹನ್ನೆರಡು ಮಂದಿ ಶಿಷ್ಯರಲ್ಲೊಬ್ಬ (ದೇವದೂತರು)

ಈ ಚಿತ್ರವು ಮಂಗಳೂರಿನ ಚರ್ಚ್‌ನ ಗೋಡೆಯ ಮೇಲ್ಭಾವಣಿಯಲ್ಲಿರುವ ಕ್ಯಾನ್ವಾಸ್ ಮೇಲೆ ರಚಿಸಿದ ಚಿತ್ರವಾಗಿದ್ದು, ಚಿತ್ರದಲ್ಲಿ ದೇವದೂತ ಕುಳಿತಿದ್ದು, ಈತನ ಕೈಯಲ್ಲಿ ಜಪಮಾಲೆ ಇದ್ದು, ಇನ್ನೊಂದು ಕೈಯಲ್ಲಿ ಬಟ್ಟೆಯನ್ನು ಹಿಡಿದಿರುವ ಹಾಗೆ ತೊರುತ್ತದೆ. ಇವನು ಕೆಂಪು ಬಟ್ಟೆಯನ್ನು ಧರಿಸಿದ್ದು, ಕುಳಿತಿರುವ ಎಡ ಬಲ ಹಾಗೂ ಮುಂಭಾಗದಲ್ಲಿ ವಿವಿಧ ರೀತಿಯ ಹೂಗಳು ಹಾಗೂ ಬಳ್ಳಿಗಳಿದ್ದು, ಹಿಂದೆ ದೊಡ್ಡದಾದ ಬಿಳಿಯ ದುಂಡಾದ ವೃತ್ತವಿದೆ. ನಾಲ್ಕು ಮೂಲೆಯು ಸಮನಾಗಿದ್ದು, ದೇವದೂತನು ಬಲಗೈಯಲ್ಲಿ ಜಪಮಾಲೆ ಹಿಡಿದು, ಎಡಗೈಯಲ್ಲಿ ಬಟ್ಟೆಯನ್ನಿಡಿದಿರುವಂತೆ, ದ್ಯಾನದ ರೂಪದಲ್ಲಿ ಬಿಂಬಿತವಾಗಿದೆ. ತಲೆಗೆ ಹಳದಿ ಬಟ್ಟೆಯನ್ನು ಕಟ್ಟಿಕೊಂಡಿದ್ದು, ಕೆಂಪು ಬಟ್ಟೆಯನ್ನು ಧರಿಸಿ, ಸೊಂಟದಲ್ಲಿ ನೀಲಿಯ ವಸ್ತ್ರ ಕಾಣುತ್ತಿದೆ. ಬಿಳಿ, ನೀಲಿ, ಕೆಂಪು, ಹಳದಿ, ಹಸಿರು, ಕಪ್ಪು ವರ್ಣಗಳು ಇದರಲ್ಲಿ ಪ್ರಮುಖವಾದವು. ಈ ಚಿತ್ರವನ್ನು ತೈಲವರ್ಣದಿಂದ ೧೯೦೦ರಲ್ಲಿ ಆಂಟೋನಿ ಮೋಶ್ಚಿನಿಯು ರಚಿಸಿದ್ದಾನೆ. ಅಲೋಶಿಯಸ್ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ಅಲೋಷಿಯಸ್‌ನು ೭ನೇ ವಯಸ್ಸಿನಲ್ಲಿ ದೇವರ ವಾಖ್ಯ ಜನರಿಗೆ ಬೋಧಿಸುತ್ತಿರುವುದು

೫ ಅಡಿ ಉದ್ದ, ೮ ಅಡಿ ಅಗಲವಿರುವ ಈ ಕಲಾಕೃತಿಯು ತೈಲವರ್ಣದಿಂದ ರಚಿಸಲಾಗಿದ್ದು, ಪ್ರಮುಖವಾಗಿ ಇಲ್ಲಿ ಬೋಧಿಸುತ್ತಿರುವ ಹುಡುಗನು ತನ್ನ ಕೈಯನ್ನು ಮೇಲಕ್ಕೆ ತೋರಿಸುತ್ತಿರುವ ಬಾಲಯೇಸುವನ್ನು ಅವರ ತಲೆಯ ಹಿಂಭಾಗದ ಪ್ರಭಾವಳಿಯಂತಹ ವೃತ್ತಾಕಾರದಲ್ಲಿ ಗುರುತಿಸಲಾಗಿದೆ. ಸುತ್ತಲೂ ಮಕ್ಕಳು, ದೊಡ್ಡ, ಮುದುಕರನ್ನು ಕಾಣಬಹುದು. ಎಲ್ಲರೂ ಅವರು ಹೇಳುವುದನ್ನು ಏಕಚಿತ್ತದಲ್ಲಿ ಕೇಳುತ್ತಿದ್ದಾರೆ. ಉತ್ತಮವಾದ ವರ್ಣಗಾರಿಕೆ ಅತ್ಯಂತ ಹೊಳಪುಳ್ಳ ಮೆರಗನ್ನು ಕಾಣಬಹುದು. ಕೆಲವೇ ವರ್ಣಗಳಿಂದ ಕಲಾಕೃತಿಯ ರಚನೆ ಮೂಡಿರುವುದನ್ನು ಗಮನಿಸಬಹುದು. ಕೆಂಪು, ಹಳದಿ, ನೀಲಿ, ಹಸಿರು, ಬಿಳಿ ಕಂದು ವರ್ಣಗಳ ಬಳಕೆಯಿಂದ ಮಿಶ್ರಣಮಾಡಿ ಮೆದುಗೊಳಿಸಲಾಗಿದೆ ಹರಿದ ಭಾಗವನ್ನು ತೇಪೆಯರೀತಿ ಚಿತ್ರಿಸಿರುವುದನ್ನು ಕಾಣಬಹುದು. ಈ ಕಲಾಕೃತಿಯು ಸೆಂಟ್ ಅಲೋಶಿಯಸ್ ಚರ್ಚ್ ಮಂಗಳೂರಿನಲ್ಲಿ ಸಂಗ್ರಹಗೊಂಡಿದೆ.

ಜನೋಪದೇಶದಲ್ಲಿ ಯೇಸು

೧೦ x ೧೨ ಅಡಿಯಿರುವ ಬಟ್ಟೆಯ ಮಾಧ್ಯಮದಲ್ಲಿ ತೈಲವರ್ಣದಿಂದ ರಚಿಸಿರುವ ಈ ಕಲಾಕೃತಿಯ ದೃಶ್ಯವನ್ನು ಗಮನಿಸಿದಾಗ ಯೇಸುವು ಜನಸಾಮಾನ್ಯರ ಮರುಕಟ್ಟೆಯಲ್ಲಿ ಉಪದೇಶಿಸುತ್ತಿರುವುದನ್ನು ಕಾಣಬಹುದು. ಯೇಸುವು ಕಪ್ಪು ಹಾಗೂ ನೀಲಿ ವರ್ಣದ ವಸ್ತ್ರದಿಂದ ಗುರುತಿಸಬಹುದು. ಅವರು ತನ್ನ ಎಡಗೈಯಲ್ಲಿ ಯಾರನ್ನು ತೋರಿಸುತ್ತ ನಿಂತಿದ್ದಾರೆ. ಅವರ ಪಕ್ಕದಲ್ಲಿ ಕೆಳಗಡೆ ಮಗುವೊಂದು ಪಾರಿವಾಳದ ಪಂಜರವನ್ನು ಹಿಡಿದುಕೊಂಡು ಕುಳಿತಿದೆ. ಅವರ ಮುಂದೆ ವ್ಯಕ್ತಿಯೊಬ್ಬ ಮೇಜನ ವರೆಸುತ್ತಿದ್ದಾನೆ. ಅವರ ಎದುರಿಗೆ ಎಲ್ಲಾರು ಯೇಸುವನ್ನು ನೋಡುತ್ತಿದ್ದಾರೆ. ಉತ್ತಮವಾದ ವರ್ಣಗಾರಿಕೆ ಹಾಗೂ ನೆರಳು ಬೆಳಕಿನ ಸಂಯೋಜನೆಯನ್ನು ಕಾಣಬಹುದು. ವರ್ಣಗಳ ಮೈವಳಿಕೆಯನ್ನು ನೋಡುಗನ ಗಮನ ಸೆಳೆಯುತ್ತದೆ. ನೀಲಿ, ಕೆಂಪು, ಬಿಳಿ, ಹಳದಿ, ಆರೆಂಜ್ ಮುಂತಾದ ಬಣ್ಣಗಳನ್ನು ಇಲ್ಲಿ ಕಾಣಬಹುದಾಗಿದೆ. ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್, ಮಂಗಳೂರಿನಲ್ಲಿ ಸಂಗ್ರಹಗೊಂಡಿದೆ.

ದೇವದೂತರು

ಈ ಕಲಾಕೃತಿಯು ೮ x ೧೨ ಅಡಿ ಉದ್ದವಿದ್ದು, ದೇವರಿಗೆ ಸಂದೇಶವನ್ನು ಮುಟ್ಟಿಸುವವರನ್ನು ದೇವದೂತರು ಎನ್ನುತ್ತಾರೆ. ಯೇಸುವಿನ ಚಿತ್ರಗಳನ್ನು ರಚಿಸುವಾಗ ಇದೇ ದೇವದೂತರ ಕಲ್ಪನೆಯನ್ನು ಕಲಾವಿದರು ಚರ್ಚ್‌ಗಳಲ್ಲಿ ಚಿತ್ರಿಸಿದ್ದಾರೆ. ಅವರ ಬೆನ್ನಹಿಂದೆ

ರೇಖೆಗಳನ್ನು ಚಿತ್ರಿಸಿ, ಆಕಾಶದಲ್ಲಿ ಹಾರಾಡುತ್ತಾ ಇರುವುದನ್ನು ಕಾಣಬಹುದು. ಯೇಸುವಿಗೆ ಮಕ್ಕಳು ಎಂದರೇ ದೇವರ ಸಮಾನ ಎಂದು ತಿಳಿದಿರುವರು. ಅದರಿಂದ ಅವರ ಕಲಾಕೃತಿಗಳಲ್ಲಿ ಮಕ್ಕಳಿಗೆ ಹೊಸ ಕಲ್ಪನೆಯನ್ನು ಸೇರಿಸಿ ಚಿತ್ರಸಲಾಗಿದೆ. ಈ ಕಲಾಕೃತಿಯಲ್ಲಿ ಹೂವನ್ನು ತಗೆದುಕೊಳ್ಳುತ್ತಿರುವ ದೇವದೂತರ ಚಿತ್ರವಾಗಿದೆ. ಉತ್ತಮವಾದ ವರ್ಣಗಾರಿಕೆ, ಕಡಿಮೆ ವರ್ಣಗಳ ಬಳಕೆಯಿಂದ ಚಿತ್ರಿಸಿರುವುದನ್ನು ಕಾಣಬಹುದು. ಉತ್ತಮವಾದ ನೆರಳು ಬೆಳಕಿನ ಪ್ರಭಾವವು ಕಾಣಬಹುದು. ತೈಲವರ್ಣದಿಂದ ರಚಿಸಿರುವ ಈ ಕಲಾಕೃತಿಯನ್ನು ಸೆಂಟ್ ಅಲೋಶಿಯಸ್ ಚರ್ಚ್, ಮಂಗಳೂರಿನಲ್ಲಿ ಸಂಗ್ರಹಿಸಿದೆ.

ಕಪ್ಪು ಅಲೋಶಿಯಸ್‌ನು ತಮ್ಮನಿಗೆ ಅಧಿಕಾರ ತ್ಯಾಗಮಾಡುತ್ತಿರುವುದು

ಈ ಕಲಾಕೃತಿಯು ತೈಲವರ್ಣದ ಸಹಾಯದಿಂದ ಬಟ್ಟೆಯ ಮೇಲೆ ರಚಿಸಲಾಗಿದ್ದು ಕ್ರೈಸ್ತ ಧರ್ಮದ ಸಂಸ್ಕೃತಿಗೆ ಅನುಸಾರವಾಗಿ, ಸೆಂಟ್ ಅಲೋಷಿಯಸ್‌ರ ಆಡಳಿತದ ಅವಧಿಯನ್ನು ಹದಿನಾಲ್ಕು ವರ್ಷಕ್ಕೆ ಕಡಿತಗೊಳಿಸಿ ತನ್ನ ತಮ್ಮನಿಗೆ ವಹಿಸುವಂತಹ ಜವಾಬ್ದಾರಿ ಅಣ್ಣನಿಗೆ ಇರಬೇಕಾಗದೆ. ಅದರ ಪ್ರಯುಕ್ತ ಕಪ್ಪು ಅಲೋಷಿಯಸ್‌ನು ತನ್ನ ಅಧಿಕಾರವನ್ನು ಹಸ್ತಾಂತರ ಮಾಡುವ ದೃಶ್ಯವನ್ನು ಈ ಕ್ಯಾನ್ವಾಸ್‌ನಲ್ಲಿ ಕಾಣಬಹುದಾಗಿದೆ. ಮುಖ್ಯವಾಗಿ ಅಣ್ಣ ತಮ್ಮರನ್ನು ಗುರುತಿಸುವ ರೀತಿಯಲ್ಲಿ ಹೊಳಪನ್ನು ಕೊಟ್ಟಿರುವುದು ಕಲಾವಿದರ ಚಾಣಾಕ್ಷತನ, ರಾಜರ ವೇಷದಲ್ಲಿರುವ ತಮ್ಮ ಕಪ್ಪುಬಟ್ಟೆಯನ್ನು ಧರಿಸಿರುವ ಅಣ್ಣ ಅಕ್ಕಪಕ್ಕದಲ್ಲಿ ರಾಜರು ಮಂತ್ರಿಗಳೆಂಬಂತೆ ಆಡಳಿತ ನಡೆಸುವ ಮುಖ್ಯ ಅಧಿಕಾರಿಗಳು ಸಾಕ್ಷಿಯಾಗಿದ್ದಾರೆ. ಇದು ರಾಜರ ಮನೆಯಾಗಿದ್ದು, ಅರಮನೆಯಂತಿದೆ. ವಿಶಾಲವಾದ ರೂಂನಲ್ಲಿ ಈ ಕಾರ್ಯಕ್ರಮ ನಡೆದಿದೆಯಂತೆ ಟೇಬಲ್‌ನ ಸುತ್ತ ನಾಲ್ವರು ಕುಳಿತಿದ್ದು ವಿಶೇಷ, ಎಲ್ಲಾರೂ ಆಶ್ಚರ್ಯ ಚಕಿತರಾಗಿ ನೋಡುತ್ತಿದ್ದಾರೆ. ಬಿಳಿ, ಕಪ್ಪು, ಕೆಂಪು, ಬೂದುಗೆಂಪು, ಹಸಿರು, ಹಳದಿ ಹೀಗೆ ಸಂದರ್ಭ ಸಂಯೋಜನೆಯ ವಸ್ತುವಿಗೆ ತಕ್ಕಂತೆ ಬಣ್ಣಗಳನ್ನು ಬಳಸಲಾಗಿದೆ. ಸೆಂಟ್ ಅಲೋಶಿಯಸ್ ಚರ್ಚ್, ಮಂಗಳೂರಿನಲ್ಲಿ ಸಂಗ್ರಹಗೊಂಡಿದೆ.

ಅಲೋಶಿಯಸ್‌ನು ದೇವರ ಕುರಿತು ಬೋಧಿಸುತ್ತಿರುವುದು

ಈ ಕಲಾಕೃತಿಯು ೧೦ x ೧೨ ಅಡಿ ಎತ್ತರವಿದ್ದು, ತೈಲವರ್ಣದ ಮೂಲಕ ಬಟ್ಟೆಯ ಮೇಲೆ ಚಿತ್ರವನ್ನು ರಚಿಸಲಾಗಿದೆ. ಅಲೋಷಿಯುಸ್‌ನು ಸುಮಾರು ಏಳನೇ ವಯಸ್ಸಿನಲ್ಲಿರುವಾಗಲೇ ಯೇಸುವಿನ ಕುರಿತು ತತ್ವ, ಬೋಧನೆ ಮಾಡುತ್ತಿರುವ ದೃಶ್ಯ ಇದಾಗಿದ್ದು, ಈ ಚಿತ್ರವು ಸೆಂಟ್ ಅಲೋಷಿಯಸ್ ಚರ್ಚ್‌ನ ಮೇಲ್ಛಾವಣಿಯಲ್ಲಿದೆ. ಇದರಲ್ಲಿ ಕೈ ಮೇಲೆ ತೋರಿಸಿ ಹೇಳುತ್ತಿರುವುದನ್ನು ಎಲ್ಲರೂ ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಎಡಬದಿಯಲ್ಲಿ ಕಿಟಕಿಯನ್ನಿಡಿದು ನಿಂತಿರುವ ಟೋಪಿಯ ವ್ಯಕ್ತಿಯು ತುಂಬಾ ಆಕರ್ಷಕ,

ಹಾಗೆಯೇ ಅಲೋಷಿಯಸ್‌ನ ಮುಂದೆ ಒಬ್ಬ ಮುದುಕ ನಿಂತಿದ್ದು, ತಲೆಗೆ ಹಳದಿ ಬಣ್ಣದ ಟೋಪಿಯನ್ನು ಧರಿಸಿ, ಕೈಯಲ್ಲಿರುವ ಕೋಲನ್ನು ಭೂಮಿಗೆ ಚಾಚಿರುವುದು ಎಡಭಾಗಕ್ಕೆ ಅವನ ತಾಯಿ ತಲೆಗೆ ಕೆಂಪು ಬಟ್ಟೆಯನ್ನು ಕಟ್ಟಿಕೊಂಡು ಬಿಳಿ ಮತ್ತು ನೀಲಿಯ ಉಡುಪನ್ನು ಧರಿಸಿ, ಕುಳಿತಿದ್ದು, ಆಲಿಸುವಂತಿದೆ. ಮಕ್ಕಳು ಗಂಭೀರವಾಗಿ ಕೇಳುತ್ತಿದ್ದಾರೆ. ಮನೆಯ ಮುಂದಿನ ಆವರಣವಾದ್ದರಿಂದ ಪರಿಸರದಲ್ಲಿ ಕಾಣುವಂತಹ ವಸ್ತುಗಳನ್ನು ರಚನೆಮಾಡಲು ಪ್ರಯತ್ನಿಸಿರುವುದು ಮುಖ್ಯವಾಗಿ ಮನೆಗಳ ಕಟ್ಟಗಳು ಗೋಚರಿಸುತ್ತಿವೆ. ಅಲೋಶಿಯಸ್‌ನು ಬಿಳಿಯ ಬಣ್ಣದ ಉಡುಪನ್ನು ಧರಿಸಿದ್ದುದರಿಂದ ಪ್ರಮುಖ ಆಕರ್ಷಣೆ, ಈ ಚಿತ್ರದ ಅಂಚೆಚೀಟಿಯಾಗಿ ೨೦೦೧ರಲ್ಲಿ ಸರ್ಕಾರವು ಅಧಿಕೃತ ಘೋಷಣೆಯ ಮೂಲಕ ಪ್ರಸ್ತುತ ದಿನಗಳಲ್ಲಿ ಚಾಲ್ತಿಯಲ್ಲಿದೆ. ಬಿಳಿ, ನೀಲಿ, ಕೆಂಪು, ಕಂದುಗೆಂಪು, ಹಳದಿ, ಆಕಾಶ ನೀಲಿ, ಮುಂತಾದ ವರ್ಣಗಳನ್ನು ಈ ಕಲಾಕೃತಿಯಲ್ಲಿ ಬಳಸಲಾಗಿದೆ. ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ಏಂಜಿಲ್ಸ್ ದೇವದೂತ

೧೦ x ೧೨ ಅಡಿ ಉದ್ದವಿರುವ ಈ ಕಲಾಕೃತಿಯು ತೈಲವರ್ಣದಿಂದ ಬಟ್ಟೆಯಲ್ಲಿ ರಚಿತವಾಗಿದ್ದು, ಇದು ಒಬ್ಬ ದೇವದೂತನಾದ ಏಂಜಿಲ್ಸ್‌ನ ವ್ಯಕ್ತಿ ಚಿತ್ರವಾಗಿದೆ. ಇದರಲ್ಲಿ ಪ್ರಮುಖವಾಗಿ ಕಾಣುವ ಈ ವ್ಯಕ್ತಿಯು ತುಂಬ ಬಸವಳಿದಂತೆ ಚಿತ್ರಿಸಲಾಗಿದೆ. ತುಂಬಾ ವಯಸ್ಸುದಂತೆ ಬಲಗೈಯಲ್ಲಿ ಬ್ಯಾಲೆನ್ಸ್‌ಗಾಗಿ ಕೆಂಪು ಬಟ್ಟೆಯನ್ನು ಹಿಡಿದಿರುವನು, ಎಡಗೈಯನ್ನು ಪಕ್ಕದ ಟೇಬಲ್‌ನ ಮೇಲೆ ಇಟ್ಟಿರುವುದು ಯೇಸುವಿಗೋಸ್ಕರ ತನ್ನ ಜೀವನವನ್ನೇ ಮುಡುಪಾಗಿಟ್ಟವರಲ್ಲಿ ಇವನು ಪ್ರಮುಖನಾಗಿದ್ದಾನೆ. ಆದ್ದರಿಂದ ಸುಮಾರು ಎತ್ತರದ ಮಂಗಳೂರಿನ ಚರ್ಚ್‌ನಲ್ಲಿ ಚಿತ್ರ ರಚನೆಯನ್ನು ಮಾಡಿಸಲಾಗಿದೆ. ಬೆನ್ನ ಹಿಂದೆ ದೊಡ್ಡದಾದ ವೃತ್ತಾಕಾರವಿದ್ದು, ಅಕ್ಕಪಕ್ಕದಲ್ಲಿ ವಿನ್ಯಾಸವಿರುವ ಚಿತ್ರಕೃತಿಗಳನ್ನು ಕಾಣಬಹುದು. ಹೂವಿನ ಮಧ್ಯೆ ಕೂತಿರುವಂತೆ ಚಿತ್ರಿಸಿರುವುದು ವಿಶೇಷ, ಬಿಳಿ, ಹಳದಿ, ಕೆಂಪು, ಹೂಗಳನ್ನು ಇಲ್ಲಿ ನೋಡಬಹುದಾಗಿದೆ. ನೀರಿನಂತೆ ಹರಿದಂತೆ ಕಾಣುವ ಹೂವುಗಳ ಸರಮಾಲೆ ತುಂಬಾ ಸುಂದರವಾಗಿದೆ. ಏಂಜಿಲ್ಸ್‌ಗೆ ಗೌರವ ಸೂಚಕವಾಗಿ ಈ ರೀತಿ ಚಿತ್ರರಚಿಸಿರಬಹುದೆಂದು ಈ ಚರ್ಚ್‌ನ ಸಿಬ್ಬಂದಿಯ ಅಭಿಪ್ರಾಯ. ಈ ಕಲಾಕೃತಿಯು ತೈಲವರ್ಣದಿಂದ ಚಿತ್ರಿಸಿದ್ದು, ಸೆಂಟ್ ಅಲೋಶಿಯಸ್, ಮಂಗಳೂರಿನಲ್ಲಿ ಸಂಗ್ರಹಗೊಂಡಿದೆ.

ಸೆಂಟ್ ಆಂಡ್ರೋಯರ್

ಈ ಕಲಾಕೃತಿಯೂ ಬಟ್ಟೆ ಮೇಲೆ ತೈಲವರ್ಣದಿಂದ ರಚಿಸಲಾಗಿದ್ದು, ಹಿರಿಯರು ಯೇಸುವಿಗೆ ತುಂಬಾ ಹತ್ತಿರದವರಾದರೂ ಆದಕಾರಣ ಇವರ ಚಿತ್ರವನ್ನು ಆಂಟೋನಿ

ಮೋಶ್ಚಿನಿ ಎಂಬಾತನು ೧೮೯೯ರ ಕೊನೆಯ ಭಾಗದಲ್ಲಿ ಚಿತ್ರಿಸಿದ್ದಾನೆ. ಶಿಲುಬೆಯನ್ನಪ್ಪಿ ಕುಳಿತಿರುವ ಇವನು ಮೇಲೆ ನೋಡುತ್ತಾ ಓ ಜೀಸಸ್ ಎಂದು ಭಕ್ತಿಯಿಂದ ತನ್ನ ಒಲವನ್ನು ತೋರಿಸುತ್ತಿರುವಂತಿದ್ದು, ವರ್ಣಮಯಗಳಿಂದ ಕೂಡಿದ್ದಾಗಿದೆ. ಕ್ಯಾನ್ವಾಸ್‌ನ ಮಧ್ಯಭಾಗದಲ್ಲಿ ಕುಳಿತಿರುವ ಇವನು ಕೆಂಪು ಬಟ್ಟೆಯನ್ನು ಮೇಲೆ ಕೆಳಗೆ ತಿಳಿ ಹಸಿರಿನ ಪಂಚೆಯನ್ನುಟ್ಟಿದ್ದಾನೆ. ಹಿಂದೆ ಬೃಹದಾಕಾರದ ದುಂಡನೆಯ ಗೋಪುರವಿದ್ದು, ತಲೆಗೆ ರೇಖೆ ಎಳೆದಿರುವಂತೆ ಕಾಣುತ್ತದೆ. ಗೌರವ ಪೂರ್ವಕವಾಗಿ ರಚಿರುವುದು ಎಂಬಂತೆ ಹೂವಿನ ಮಧ್ಯಕುಳಿತಿರುವ ಇವರು ಶಿಲುಬೆಯ ಪ್ರಿಯರು ಬಿಳಿ, ಕೇಸರಿ ಕೆಂಪು, ನೀಲಿ, ಹಳದಿ, ಹಸಿರು ಮತ್ತು ಕಂದುಗೆಂಪು ಬಣ್ಣಗಳನ್ನು ಬಳಸಲಾಗಿದ್ದು, ಕ್ಯಾನ್ವಾಸ್‌ನ ಪ್ರತಿರೂಪದ ಪ್ರತೀಕತೆಗೆ ವಿನ್ಯಾಸಗಳನ್ನು ರಚಿಸಿ ಇನ್ನಷ್ಟು ವಿಜೃಂಬಿಸಿರುವಂತೆ ತೋರಿಸಲಾಗಿದೆ. ಇದು ೪ x ೫ ಅಡಿ ಇದ್ದು, ತೈಲವರ್ಣದಿಂದ ರಚನೆಯಾಗಿದ್ದು, ಸೆಂಟ್ ಅಲೋಶಿಯಸ್ ಚರ್ಚ್ ಮಂಗಳೂರಿನಲ್ಲಿ ಸಂಗ್ರಹಗೊಂಡಿದೆ.

ಸ್ವರ್ಗ ಸುಖಿಯಾದ ಯೇಸು

೧೦ x ೧೨ ಅಡಿ ಇರುವ ಈ ಕಲಾಕೃತಿಯು ಕ್ಯಾನ್ವಾಸ್‌ನ ಮೇಲೆ ರಚನೆಯಾಗಿದ್ದು, ವಿಶೇಷವಾದ ಕೃತಿಯಾಗಿದೆ. God the Fathear ಮತ್ತು ಯೇಸುವು ಮೋಡದಲ್ಲಿ ಸಮಲೋಚನೆಯಲ್ಲಿ ನಿರತರಾಗಿದ್ದಾರೆ. ಸರ್ವಶಕ್ತವುಳ್ಳವರಾದ ಪಾದರ್‌ರವರು ಯೇಸುವಿನೊಂದಿಗೆ ಚರ್ಚೆಯಲ್ಲಿದ್ದಾರೆ. ಮೋಡಗಳೆ ಇವರಿಬ್ಬರಿಗೆ ಆಸನಗಳಾಗಿರುವುದು ಯೇಸುವು ಎರಡು ಕೈಗಳನ್ನು ಅಗಲಿಸಿದ್ದು, ಬೆನ್ನ ಹಿಂದೆ ಶಿಲುಬೆ ಇರಿಸಲ್ಪಟ್ಟಿದೆ. ಅರೆಬೆತ್ತಲೆಯಲ್ಲಿ ಕುಳಿತಿರುವ ಯೇಸುವು ಹಸಿದ ಹೊಟ್ಟೆಯನ್ನು ಬಿಂಬಿಸಲಾಗಿದೆ. ತನ್ನ ದುಗುಡದುಮ್ಮಾನವನ್ನು ಚರ್ಚಿಸುವಂತಿದೆ. ಅದಕ್ಕೆ ತಲೆಯಾಡಿಸುತ್ತಿರುವ ಪ್ರಾದಿಯು ಗಡ್ಡದಾರಿಯಾಗಿದ್ದು, ಎಡಗೈಯಲ್ಲಿ ಬೆತ್ತವನ್ನಿಡಿದುಕೊಂಡಿದ್ದಾರೆ. ಮೈಗೆ ಕಪ್ಪು ಬಟ್ಟೆಯನ್ನು ಧರಿಸಿದ್ದು, ಅರ್ಧ ಮೈಗೆ ಶಾಲನ್ನು ಹೊದಿಸಲಾಗಿದೆ. ಇಬ್ಬರಿಬ್ಬರ ಮಧ್ಯ ಪಾರಿವಾಳವು ಬರುತ್ತಿರುವಂತೆ ಗೋಚರಿಸುತ್ತದೆ. ವಿಶೇಷವಾಗಿ ಈ ಕಲಾಕೃತಿಯಲ್ಲಿ ದೇವದೂತ ಮಕ್ಕಳು ಸುಮಾರು ಹದಿನಾರರಿಂದ ಹದಿನೇಳು ಮಕ್ಕಳಿದ್ದು, ಮೋಡದಲ್ಲಿ ಮುಳುಗಿರುವ ದೃಶ್ಯವು ಒಂದು ರೀತಿ ನೀರಿನಲ್ಲಿ ಮುಳುಗಿದಂತೆ ತಲೆಗಳು ಮಾತ್ರ ದಡದಲ್ಲಿವೆ ಎಂಬುದಾಗಿ ಚಿತ್ರಿಸಿರುವುದು ಕಲಾವಿದರ ಶ್ರೇಷ್ಠತೆಗೆ ಸಾಕ್ಷಿ, ಇವರಿಬ್ಬರ ಸುತ್ತಲೂ ಇಣುಕಿ ನೋಡುತ್ತಿರುವ ದೇವದೂತರಿಗೆಲ್ಲಾ ಬೆನ್ನಿಗೆ ರೆಕ್ಕೆಗಳಿರುವುದು ವಿಶೇಷ, ಕ್ಯಾನ್‌ವಾಸ್‌ನ ಕೆಳಭಾಗದಲ್ಲಿ ಒಬ್ಬ ದೇವದೂತ ಮಗು ಕುಣಿಯುತ್ತಿರುವುದನ್ನು ಗಮನಿಸಿದಾಗ ಸ್ವರ್ಗವು ಯಾವಾಗಲೂ ಆನಂದದ ಸಂಕೇತ ಎನ್ನುವುದು ಸ್ಪಷ್ಟ ಹಾಗೆಯೇ ಈ ಕಲಾಕೃತಿಯಲ್ಲಿ ಬಿಳಿ, ಹಳದಿ, ಕೆಂಪು, ನೀಲಿ, ನೇರಳೆ, ಆಕಾರ್ ಎಲ್ಲೋ, ಮುಂತಾದ

ಎರಡನೇ ದರ್ಜೆಯ ಬಣ್ಣಗಳು ಗೋಚರಿಸುತ್ತವೆ. ಒಟ್ಟಾರೆಯಾಗಿ ಈ ಕಲಾಕೃತಿಯು ಸಂಯೋಜನೆಯಾಗಿದ್ದು, ಮನರಂಜನೆ ಕೊಡುತ್ತಿರುವುದಂತೂ ಸತ್ಯ. ತೈಲವರ್ಣದಿಂದ ರಚನೆಯಾಗಿದ್ದು, ಸೆಂಟ್ ಅಲೋಶಿಯಸ್ ಚರ್ಚ್, ಮಂಗಳೂರಿನಲ್ಲಿ ಸಂಗ್ರಹಗೊಂಡಿದೆ.

ವಂಜಿಲ್ದೋ (ದೇವದೂತರು)

ಈ ಕಲಾಕೃತಿಯು ತೈಲವರ್ಣದಿಂದ ಕ್ಯಾನ್‌ವಾಸ್‌ನ ಮೇಲೆ ರಚಿತವಾಗಿದ್ದು, ದೇವದೂತನಾದ ಇವನು ಅನೇಕ ಉಪಯುಕ್ತ ಕೆಲಸವನ್ನು ಕ್ರೈಸ್ತ ಧರ್ಮದಲ್ಲಿ ಮಾಡಿದ್ದಾನೆ. ಹಾಗೆಯೇ ಪ್ರಮುಖವಾಗಿ ಹನ್ನೆರಡು ಮಂದಿ ಶಿಷ್ಯರಲ್ಲಿ ಇವನೊಬ್ಬನೆಂದೇಳಬಹುದು. ಯೇಸುವಿಗೆ ತುಂಬಾ ಹತ್ತಿರದ ವ್ಯಕ್ತಿಗಳು ಈ ಕೃತಿಯ ಮಧ್ಯದಲ್ಲಿ ಕುಳಿತಿರುವ ಇವನು ನೀಲಿ ಉಡುಪು ಧರಿಸಿದ್ದು, ಮೈ ಮೇಲೆ ಎಲ್ಲೋ ವರ್ಣದ ಶಲ್ಲೆಯನ್ನು ಹಾಕಿಕೊಂಡು ಕುಳಿತಿರುತ್ತಾನೆ. ಇವನ ಹಿಂದೆ ಬೃಹತ್ತಾದ ವೃತ್ತವಿದ್ದು, ಅಕ್ಕಪಕ್ಕ ಹಿಂದೆ ಮುಂದೆ ಹೊಗಳಿರುವುದನ್ನು ಕಾಣಬಹುದು. ಎಡಗೈಯಲ್ಲಿ ಗರಿಯನ್ನು ಹಿಡಿದುಕೊಂಡಿದ್ದು ಬಲಗೈಯಲ್ಲಿ ಹೂವನ್ನು ಹಿಡಿದ್ದಿದ್ದಾನೆ. ತಲೆಯ ಸುತ್ತವೃತ್ತಾಕಾರದ ರೇಖೆಯನ್ನು ಸುತ್ತಲಾಗಿದೆ. ಹೂವಿನ ಸಡಗರದ ಮಧ್ಯ ಕುಳಿತಿರುವ ಇವನಿಗೆ ಅಲಂಕಾರದ ಮೂಲಕ ಗೌರವ ಸೂಚಿಸಲಾಗದೆ. ಬಿಳಿ, ಹಳದಿ, ನೀಲಿ, ಕೆಂಪು, ಆಕಾರ್ ಎಲ್ಲೋ ಮುಂತಾದ ಬಣ್ಣಗಳನ್ನು ಬಳಸಿರುವುದು ಕಲಾವಿದನ ಚಾಣಾಕ್ಷತನ. ಈ ಕಲಾಕೃತಿಯು ಸೆಂಟ್ ಅಲೋಶಿಯಸ್ ಚರ್ಚ್, ಮಂಗಳೂರಿನಲ್ಲಿ ಸಂಗ್ರಹಿಸಿದೆ.

ಯೇಸು ಜನರಿಗೆ ಬೋಧಿಸುತ್ತಿರುವ ದೃಶ್ಯ

೧೦ x ೧೨ ಅಡಿಯಿರುವ ಈ ಕಲಾಕೃತಿಯು, ತೈಲವರ್ಣದಿಂದ ಬಟ್ಟೆಯ ಮೇಲೆ ರಚಿಸಿದ್ದು, ಕಲಾಕೃತಿಯಲ್ಲಿ ಯೇಸುಸ್ವಾಮಿಯು ಜನರಲ್ಲಿ ಅಚ್ಚಳಿಯದೇ ಉಳಿದಿದ್ದು, ಹೇಗೆ? ಎಂಬುದಕ್ಕೆ ಇಂತಹ ಹಲವಾರು ಉದಾಹರಣೆಗಳು ಸಿಗುತ್ತವೆ. ಅದರಲ್ಲೊಂದು ವಿಶೇಷ ಈ ಕಲಾಕೃತಿಯು ಮುಖ್ಯ ಪಾತ್ರದಲ್ಲಿ ಯೇಸುವು ಮದ್ಯ ಕುಳಿತಿದ್ದು, ಅಕ್ಕ ಪಕ್ಕದಲ್ಲಿ ಅನೇಕ ಜನರು ಕುಳಿತಿದ್ದಾರೆ. ಏನೋ ಹೇಳುತ್ತಿರುವ ಯೇಸುವು ಎಡಗೈಯನ್ನು ಮೇಲಕ್ಕೆತ್ತಿದ್ದಾರೆ. ಅಕ್ಕ ಪಕ್ಕದಲ್ಲಿ ತಿಳಿ ಹಸಿರು ತೊಟ್ಟಿರುವ ವ್ಯಕ್ತಿಯು, ನೀಲಿ ಮತ್ತು ಹಳದಿ ಉಡುಪನ್ನು ತೊಟ್ಟಿರುವ ಮಹಿಳೆಯು ತುಂಬಾ ಗಾಂಭಿರ್ಯತೆ ಹೊಂದಿದವರು. ಇಬ್ಬರು ಭಕ್ತರು ಕೆಳಗಡೆ ಮೊಣಕಾಲೂರಿ ಮಾತುಗಳನ್ನಾಲಿಸುತ್ತಿದ್ದಾರೆ. ಇನ್ನೊಬ್ಬ ತನ್ನ ಬಲಗೈಯನ್ನು ಎಡ ಕೈಯ ಬುಜಕ್ಕೆ ಮುಟ್ಟಿಕೊಳ್ಳುತ್ತಿರುವುದು ಇದರಲ್ಲಿ ಪ್ರಮುಖವಾಗಿ ನೆರಳು ಬೆಳಕನ್ನು ಅಚ್ಚುಕಟ್ಟಾಗಿ ತೋರಿಸಲಾಗಿದೆ. ಇವರೆಲ್ಲರ ಹಿಂದೆ ಬೆಟ್ಟ ಹಾಗೂ ಬಿಳಿಯ ಮೋಡಗಳನ್ನು ತೋರಿಸಲಾಗಿದೆ. ಕೆಂಪು, ಬಿಳಿ, ನೀಲಿ, ಹಳದಿ, ತಿಳಿ ಹಸಿರು, ನೇರಳೆ, ಕಂದುಗೆಂಪು ಮುಂತಾದ ಕಲಾಕೃತಿಗೆ

ಅವಶ್ಯಕವಿರುವಂತಹ ವರ್ಣಗಳನ್ನು ಬಳಸಿಕೊಳ್ಳಲಾಗಿದೆ. ಇದು ಕೂಡ ಸಂಯೋಜನೆಯ ಚಿತ್ರವಾಗಿದ್ದು, ಮಂಗಳೂರಿನ ಸೆಂಟ್ ಅಲೋಶಿಯಸ್ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ಶಿಲುಬೆಯನ್ನೇರುತ್ತಿರುವ ಯೇಸು

೧೦ x ೧೨ ಅಡಿ ಇರುವ ಈ ಕಲಾಕೃತಿಯನ್ನು ಕ್ಯಾನ್ವಾಸ್ (ಬಟ್ಟೆ ಮಾಧ್ಯಮ)ನಲ್ಲಿ ತೈಲವರ್ಣದಿಂದ ರಚನೆಮಾಡಿದ್ದು, ಚಿತ್ರದಲ್ಲಿ ಯೇಸುವಿಗೆ ಶಿಲುಬೆಯನ್ನೇರಿಸಿರುವುದು ತುಂಬಾ ಮುಖ್ಯವಾದ ಅಂಶವಾಗಿದ್ದು, ಈ ಕಲಾಕೃತಿಯಲ್ಲಿ ಒಟ್ಟು ಐದು ಜನರನ್ನು ಗುರುತಿಸಲಾಗಿದ್ದು, ಕೆಂಪು ಉಡುಪನ್ನು ಧರಿಸಿರುವ ವ್ಯಕ್ತಿಯು ಎಡ ಪಕ್ಕೆಯಲ್ಲಿ ಬಲವಾಗಿ ಹಿಡಿದಿರುವ ಶಿಲುಬೆಯನ್ನು ಯೇಸುವಿನ ಬಲ ಬುಜದ ಮೇಲೆ ಇಡುತ್ತಿರುವುದು. ರೂರಿಕ್‌ನ ಅಧಿಕಾರ ಹಾಗೂ ಸೈನಿಕ ಕಪ್ಪು ಬಟ್ಟೆ, ಟೊಪ್ಪಿಗೆ, ಕೈಯಲ್ಲಿ ಬರ್ಚಿ ಹಿಡಿದುಕೊಂಡಿರುವುದನ್ನು ಕಾಣಬಹುದು. ತಾಯಿ ಮೇರಿಯು ನೀಲಿ ಉಡುಪನ್ನು ದರಿಸಿ ಮಗನಿಗಾಗಿ ಬಿಳಿ ಬಣ್ಣದ ಉಡುಪನ್ನು ಕೊಡುತ್ತಿರುವುದು ಎರಡು ಮೊಣಕಾಲೂರಿ ಹಾಗೆ ಮುಂದೆ ಕೈ ಚಾಚಿ, ಬಗ್ಗಿತೆಗೆದುಕೊಳ್ಳುತ್ತಿರುವ ಮುಖ್ಯ ದೃಶ್ಯ ಎದುರಿಗಿದೆ. ಯೇಸುವಿನ ತಲೆಯ ಸುತ್ತಲು ದೇವರ ಶಕ್ತಿಯ ಪ್ರತಿರೂಪ ಇದ್ದಂತಿದ್ದು, ನನಗೇನು ಆಗೋದಿಲ್ಲ ಎಂಬ ಸೂಚನೆ ಕಾಣುತ್ತಿದೆ. ಇದು ಸಂಯೋಜನಾ ಚಿತ್ರವಾಗಿದ್ದು, ಐದು ಜನರನ್ನೊಳಗೊಂಡಿದೆ. ಕೆಂಪು, ನೀಲಿ,ಬಿಳಿ, ಕಂದು, ಕಪ್ಪು, ಹಸಿರು ಹೀಗೆ ವಿವಿಧ ಬಣ್ಣಗಳನ್ನು ಬಳಸಿರುವುದು ಕಾಣಬಹುದು. ನೆಲದ ಮೇಲೆ ಹೋಗುತ್ತಿರುವ ಇವರು ಹಸಿರು ಹಾಸಿಗೆಯ ಮೇಲೆ ನಡೆದಂತಿದೆ. ಕಾರವಾರದ ಅವರ್ ಲೇಡಿ ರಿಸಪ್ಷನ್, ಕ್ಯಾಥಡ್ರಲ್ ಚರ್ಚ್‌ನಲ್ಲಿರುವ ಈ ಕೃತಿಯು ಯೇಸುವಿಗೆ ಶಿಕ್ಷೆಯನ್ನು ಕೊಡುತ್ತಿರುವ ಅಂಶವನ್ನು ಕಾಣಬಹುದು.

ಶಿಕ್ಷೆ ಪಡೆದಿರುವ ಯೇಸು

ಈ ಕಲಾಕೃತಿಯು ಸಂಯೋಜನೆಯನ್ನು ಹೊಂದಿದ್ದು, ತೈಲವರ್ಣದಿಂದ ಚಿತ್ರಿತವಾಗಿದೆ. ಯೇಸುವನ್ನು ಶಿಲುಬೆಗೇರಿಸಿ ಶಿಕ್ಷೆಯನ್ನು ಕೊಟ್ಟಿರುವುದು ಖಾತ್ರಿಯಾದಂತಿದೆ. ಹಸಿದ ಹೊಟ್ಟೆ ಮೈಗಂಟಿಕೊಂಡಂತಿರುವ ಯೇಸುವು ತನ್ನ ರೋಧನೆಯನ್ನು ತಾನೆ ಅನುಭವಿಸುತ್ತಿರುವುದು ಶಿಲುಬೆಗೇರಿಸಿ ಕೈ ಕಾಲುಗಳಿಗೆ ಮಳೆಗಳಿಂದ ಭದ್ರವಾಗಿ ಬಡಿದಿರುವುದು ಕ್ರೂರ ವ್ಯಕ್ತಿಗಳ ಶಿಕ್ಷೆ ಕುದುರೆ, ಸೈನಿಕ, ತಾಯಿ ಮೇರಿಯ ಜೊತೆ ಬಂಧುಗಳು ಪ್ರಾರ್ಥನೆಯಲ್ಲಿ ಸುಮಾರು ದೂರದಲ್ಲಿ ಒಬ್ಬ ಶಿಲುಬೆಗೇರಿರುವುದು. ಒಬ್ಬಳು ನೆಲಕ್ಕೆ ಬಿದ್ದು ಮುಖ ಮುಚ್ಚಿಕೊಂಡು ತನ್ನ ಅಳಲನ್ನು ವ್ಯಕ್ತಪಡಿಸುತ್ತಿರುವುದನ್ನು ಕಾಣಬಹುದು. ದೂರದಲ್ಲಿ ಕಪ್ಪು ಮೊಡಗಳನ್ನು ಪ್ರದರ್ಶಿಸಿದ್ದಾರೆ. ಒಟ್ಟಾರೆ ಸೃಜನಶೀಲತೆಯಿಂದ ಕೂಡಿರುವ ಕೃತಿಯಾದ್ದರಿಂದ ವಿವಿಧ ರೀತಿಯ ಬಣ್ಣಗಳನ್ನು ಬಳಸಿದ್ದಾರೆ. ಅದರಲ್ಲಿ ಬಿಳಿ, ನೀಲಿ, ಕೆಂಪು, ಹಳದಿ, ಹಸಿರು,

ಆಕಾರ್ ಎಲ್ಲೋ ಕಪ್ಪು ಮುಂತಾದವುಗಳನ್ನು ಕಾಣಬಹುದು. ಇದರಲ್ಲಿಯೂ ಕೂಡ ತಲೆಯ ಸುತ್ತ ಚಕ್ರದಂತಿದ್ದು, ನೋವನ್ನು ಹೀರುತ್ತಿರುವಂತೆ ಚಿತ್ರಿಸಲಾಗಿದೆ. ಈ ಕಲಾಕೃತಿಯು ಕಾರವಾರದ ಅವರ್ ಲೇಡಿ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ಭಕ್ತಿಯ ದ್ಯಾನದಲ್ಲಿರುವದು ಭಾವಚಿತ್ರ

೫ x ೭ ಅಡಿಯ ಈ ಕಲಾಕೃತಿಯು ತೈಲವರ್ಣದಿಂದ ಬಟ್ಟೆಯ ಮೇಲೆ ರಚಿತವಾಗಿದ್ದು, ಮುಖ್ಯವಾಗಿ ಎದೆಯಿಂದ ತಲೆಯವರೆಗೆ ಸುಂದರವಾಗಿ ಚಿತ್ರಿಸಲಾಗಿದೆ. ಕೂದಲನ್ನು ಬೆನ್ನಿನವರೆಗೆ ಬಿಟ್ಟಿರುವ ಹಾಗೇ ಚಿತ್ರಿಸಿದ್ದು, ಎಡಗೈಯಲ್ಲಿ ದೀಪ ಪ್ರಜ್ವಲಿಸುತ್ತಿದೆ. ಎಡಗೈಯು ಏನೋ ಬಂದು ಮಂತ್ರ ಜಪಿಸುತ್ತಿರುವಾಗ ತೋರುವ ದೃಶ್ಯ ಇದಾಗಿದೆ. ಭಾವಚಿತ್ರವನ್ನು ಹೋಲುತ್ತಿರುವುದರಿಂದ ಮುಖ ಮುಚ್ಚಲಾಗಿದೆ. ತಲೆಯ ಸುತ್ತಲೂ ರೇಖೆಯನ್ನು ಹೊಂದಲಾಗಿದೆ. ಕೆಂಪು ಮತ್ತು ಬಿಳಿವರ್ಣದ ಬಟ್ಟೆಯನ್ನು ಹಾಕಲಾಗಿದ್ದು, ಅಲ್ಲಲ್ಲಿ ಬೆಳಕಿನ ಅಂಶವನ್ನು ರೂಪಿಸಿದ್ದಾರೆ. ಒಟ್ಟಾರೆ ಸೌಂದರ್ಯವೇ ಇಲ್ಲಡಗಿದೆ. ಕಾರವಾರದ ಅವರ್ ಲೇಡಿ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್‌ನಲ್ಲಿರುವುದು.

ಮಕ್ಕಳನ್ನು ಸಂತೈಸುತ್ತಿರುವುದು

೧೦ x ೧೨ ಅಡಿ ಇರುವ ಈ ಕಲಾಕೃತಿಯಲ್ಲಿ ಯೇಸುವು ಕುಳಿತಿದ್ದು, ಮಕ್ಕಳನ್ನು ಪ್ರೀತಿಯಿಂದ ಮಾತನಾಡಿಸುತ್ತಿರುವುದು. ಒಂದು ಮಗು ಅವನ ಭುಜದ ಮೇಲೆ ತಲೆ ಇಟ್ಟು ಮಲಗಿರುವುದನ್ನು ಕಾಣಬಹುದು. ಇವರ ಹಿಂದೆ ಅನೇಕ ಭಕ್ತರಿದ್ದು, ಇವನನ್ನು ದಿಟ್ಟಿಸಿ ನೋಡುತ್ತಿರುವಂತೆ ಚಿತ್ರಿಸಲಾಗಿದೆ. ಈ ಕಲಾಕೃತಿಯನ್ನು ತೈಲವರ್ಣದಿಂದ ಕ್ಯಾನ್‌ವಾಸ್ (ಬಟ್ಟೆಯ) ಮೇಲೆ ಚಿತ್ರಿಸಲಾಗಿದೆ. ಗಾಢವಾದ ವರ್ಣ ಹಾಗೂ ಯೋಜನೆಗಳಿಂದ ಕೂಡಿರುವ ದೃಶ್ಯವು ಮನಮೋಹಕವಾಗಿದೆ. ಯೇಸುವು ಒಳಗೆ ಬಿಳಿ, ಮೇಲೆ ಕಂದುಗೆಂಪು ಉಡುಪು ಧರಿಸಿದ್ದು, ಉಳಿದವರು ಹಳದಿ, ಬಿಳಿ, ನೀಲಿ, ಕೆಂಪು ಉಡುಪನ್ನು ಧರಿಸಿರುವುದನ್ನು ಕಾಣಬಹುದಾಗಿದೆ. ಇವರ ಹಿಂಬದಿಯಲ್ಲಿ ನಿಸರ್ಗದ ಸಂಕೇತವಾಗಿ ಹಸಿರು, ಹಳದಿ ಬಣ್ಣಗಳಿಂದ ಮೆರ್ಜುಗೊಳಿಸಲಾಗಿದೆ. ಒಟ್ಟಾರೆಯಾಗಿ ಸಂಯೋಜನೆಯಿಂದ ಕೂಡಿರುವ ದೃಶ್ಯವಾಗಿದೆ. ತೈಲವರ್ಣದಿಂದ ರಚಿತವಾಗಿರುವ ಈ ಕಲಾಕೃತಿಯು ಮಂಗಳೂರಿನ ಕುಲಶೇಖರ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ಭಾರ ತಾಳದೆ ಬಿದ್ದಿರುವ ಯೇಸು

೧೦ x ೧೨ ಅಡಿ ಇರುವ ಕಲಾಕೃತಿಯು ಮುಖ್ಯವಾಗಿ ಬಟ್ಟೆಯ ಮೇಲೆ ರಚನೆಯಾಗಿದ್ದು, ಕಾರವಾರದ ಬೃಹದಾಕಾರದ ಚರ್ಚ್‌ನಲ್ಲಿ ಒಳಗೊಂಡಿದ್ದು, ಯೇಸುವು

ಶಿಲಬೆಯನ್ನು ಹೊತ್ತಿರುವ ಸಂದರ್ಭದಲ್ಲಿ ನೆಲಕ್ಕೆ ಬಿದ್ದಿರುವುದು ಮುಖ್ಯ ಅಂಶ. ಬಿದ್ದಿರುವುದನ್ನು ತಿಳಿದ ವಿರೋಧಿಗಳು ಅವನ ಮೇಲೆ ಎರಗಿದರಂತೆ ಕಾಣುತ್ತಿದೆ. ಒಬ್ಬ ಕೆಂಪು, ಮತ್ತೊಬ್ಬ ಬಿಳಿ ಮತ್ತು ನೀಲಿ ಉಡುಪನ್ನು ಧರಿಸಿದ್ದು, ಭಾರ ಹಾಕಬೇಡಿ ಎಂದು ರೋಧಿಸುತ್ತಿರುವ ವ್ಯಕ್ತಿಯು ಬೂದುಕೆಂಪುನ್ನು ಧರಿಸಿದ್ದಾನೆ. ಒಬ್ಬ ಶಿಷ್ಯ ಮೇಲೆ ಬಿದ್ದಿರುವ ಶಿಲುಬೆಯನ್ನು ಮೇಲಕ್ಕೆತ್ತಿರುವುದನ್ನು ಕಾಣಬಹುದು. ಯೇಸುವು ಬಿಳಿಯ ಉಡುಪನ್ನು ಧರಿಸಿದ್ದು, ಎರಡು ಕೈಯನ್ನು ಎಲ್ಲಕ್ಕೆ ಇಟ್ಟು ಮೌನಗ್ರಸ್ಥನಾಗಿದ್ದಾನೆ. ಹಾಗೆಯೇ ಹಿಂದೆ ಗಿಡ, ಮರ, ಕಲ್ಲು, ಬಂಡೆಗಳು ಚಾಚಿಕೊಂಡಿದ್ದು, ಮೋಡಗಳು ಆರ್ಭಟಿಸುತ್ತಿದೆ. ಸಂಯೋಜನೆಯಿಂದ ಕೂಡಿರುವ ಈ ಕೃತಿಯು ತೈಲವರ್ಣದಿಂದ ರಚನೆ ಮಾಡಲಾಗಿದೆ. ಈ ಕಲಾಕೃತಿಯು ತೈಲವರ್ಣದಿಂದ ರಚನೆಮಾಡಲಾಗಿದ್ದು, ಅವರ್ ಲೇಡಿ ಆಫ್ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ಶಿಕ್ಷೆಗೊಳಗಾಗಿರುವ ಯೇಸು

೧೦ x ೧೨ ಅಡಿ ಇರುವ ಈ ಕಲಾಕೃತಿಯ ಮುಖ್ಯ ಭೂಮಿಕೆಯಲ್ಲಿ ಬೃಹದಾಕಾರದ ಶಿಲುಬೆಯಲ್ಲಿ ಮಲಗಿರುವ ಯೇಸುವಿಗೆ ಎರಡು ಕೈಗೆ ಮೊಳೆ ಹೊಡೆಯುತ್ತಿರುವುದನ್ನು ಕಾಣಬಹುದು. ಅಧಿಕಾರಿಗಳಿರುವುದನ್ನು ಕಾಣಬಹುದು. ದೇವರ ದ್ಯಾನದಲ್ಲಿರುವ ಯೇಸುವು ಮೌನವಾಗಿದ್ದಾರೆ. ಬಸವಳಿದಿರುವ ಮೈ ಹಾಗೂ ಹೊಟ್ಟೆಯ ನೋವನ್ನು ತೋರಿಸುವಂತಿದೆ. ಅರೆನಗ್ನವಾಗಿರುವ ಯೇಸುವಿಗೆ ಇರಾಕ್‌ನ ವಿರೋಧಿಗಳಿಂದ ಶಿಕ್ಷೆ, ಇದು ಶಿಲುಬೆಗೇರಿಸುವ ವಿಧಾನ ಒಟ್ಟಾರೆ ಸಂಯೋಜನಾ ಚಿತ್ರವಾಗಿರುವ ಇದರಲ್ಲಿ ಯೇಸುವು ಸೇರಿ ಐದು ಜನರಿದ್ದು, ಹಳದಿ, ನೀಲಿ, ಕೆಂಪು, ಬಿಳಿ, ಆಕಾರ್ ಎಲ್ಲೊ, ಬಟ್ಟೆಯನ್ನು ತೊಟ್ಟಿರುವುದನ್ನು ಕಾಣಬಹುದು. ಇವರ ಹಿಂದೆ ಅನೇಕ ಭಕ್ತರಿದ್ದು, ಅಲ್ಪ ಸ್ವಲ್ಪ ಕಾಣುವಂತಿದೆ. ಗಿಡ ಮರಗಳು ಕಾಣುತ್ತಿದ್ದು, ಮೋಡಗಳನ್ನು ತೋರಿಸಲಾಗಿದೆ. ಭೂಮಿಯ ಮೇಲೆ ಮಳೆ, ಉಳಿ, ಚಮಟಿಗೆ ಸಂಬಂಧಿಸಿದ ಅನೇಕ ವಸ್ತುಗಳ ಪೆಟ್ಟಿಗೆಯನ್ನು ಕಾಣಬಹುದಾಗಿದೆ. ತೈಲವರ್ಣದಿಂದ ರಚಿತವಾಗಿರುವ ಈ ಕೃತಿಯು ಕಾರವಾರದ ಅವರ್ ಲೇಡಿ ಆಫ್ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ದೈವಾದೀನವಾಗಿರುವ ಯೇಸುವಿನ ದೃಶ್ಯ

೧೦ x ೧೨ ಅಡಿಯಿರುವ ಈ ಕಲಾಕೃತಿಯನ್ನು ಬಟ್ಟೆಯ ಮೇಲೆ ತೈಲವರ್ಣದಿಂದ ಚಿತ್ರಿಸಲಾಗಿದ್ದು, ಯೇಸುವು ಮರಣಹೊಂದಿರುವಂತೆ ತೋರಿಸಲಾಗಿದೆ. ತಾಯಿ ಮೇರಿ ಕೆಂಪು ಮತ್ತು ನೀಲಿವರ್ಣದಿಂದ ಕೂಡಿದ ಉಡುಪನ್ನು ಧರಿಸಿದ್ದು, ಮೌನವಾಗಿ ನಿಂತಿರುತ್ತಾಳೆ.

ಭಕ್ತರು ಸುತ್ತುವರಿದಿದ್ದು, ಮಂಚದ ಮೇಲೆ ಮಲಗಿಸಲಾಗಿದೆ. ಅರೆನಗ್ನದಲ್ಲಿರುವ ಯೇಸುವಿಗೆ ಬಿಳಿ ಬಟ್ಟೆಯಿಂದ ಸೊಂಟವನ್ನು ಮುಚ್ಚಲ್ಪಟ್ಟಿದೆ. ಒಬ್ಬ ಬೆಳಕಿನ ದೀಪವನ್ನಿಡಿದಿದ್ದರಿಂದ ರಾತ್ರಿ ಸಮಯದಲ್ಲಿ ದೃಶ್ಯದಲ್ಲಿರುವರೆಲ್ಲರೂ ಗೋಚರಿಸುವಂತಿದೆ. ಎಲ್ಲಾರು ದುಃಖದಿಂದ ಕೂಡಿದ್ದು, ಭಕ್ತಿಯ ಪರವಶೆಯಲ್ಲಿ ತಲ್ಲೀನರಾಗಿದ್ದಾರೆ. ಹಿಂದೆ ಪ್ರಕೃತಿಯನ್ನು ತೋರಿಸಲಾಗಿದ್ದು, ವರ್ಣಮಯವಾಗಿದೆ. ಯೇಸುವಿನ ಮುಂದೆ ಕುಳಿತಿರುವ ಭಕ್ತೆಯು ಕೈ ಮುಗಿದು ನಮಸ್ಕರಿಸುವಂತಿದೆ. ಬಿಳಿ, ನೀಲಿ, ಹಸಿರು, ಕೆಂಪು, ಬೂದುಕೆಂಪು, ಹಳದಿ ವರ್ಣಗಳು ಇಲ್ಲಿ ರಾರಾಜಿಸುತ್ತಿವೆ. ಇದು ಕಾರವಾರದ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ. ಕಾರವಾರದ ಮುಖ್ಯ ಚರ್ಚ್ ಆದ ಅವರ್ ಲೇಡಿ ಆಫ್ ರಿಸಪ್ಷನ್ ಕ್ಯಾಥಡ್ರಲ್ ಚರ್ಚ್‌ನಲ್ಲಿ ಸಂಗ್ರಹಗೊಂಡಿದೆ.

ಯೇಸುವಿನ ಬಟ್ಟೆ ಕಳಚುತ್ತಿರುವುದು

ಇದು ಸಂಯೋಜನೆಗೊಂಡಿರುವ ಕಲಾಕೃತಿಯಾಗಿದ್ದು, ತೈಲವರ್ಣದಿಂದ ಕ್ಯಾನ್‌ವಾಸ್ (ಬಟ್ಟೆ ಮಾಧ್ಯಮ)ನ ಮೇಲೆ ಚಿತ್ರಿತಗೊಂಡಿದೆ. ಶಿಲುಬೆಗೇರಿಸುವ ಮುನ್ನ ಬಟ್ಟೆಯನ್ನು ಕೇಳುತ್ತಿರುವಂತೆ ಚಿತ್ರಿಸುವ ದೃಶ್ಯ ಇದಾಗಿದ್ದು, ಅರೆ ನಗ್ನದಲ್ಲಿ ನಿಂತಿರುವ ಯೇಸುವು ಮುಖದಲ್ಲಿ ಮೌನ. ಬೃಹದಾಕಾರದ ದೇಹ, ತಲೆಯ ಸುತ್ತಲು ಅಶೋಕ ಚಕ್ರವೆಂಬಂತೆ ಸಕ್ತಿಯ ಬೆಂಬಲ ನಿಂತಿದೆ. ಇಬ್ಬರು ಅರೆನಗ್ನದಲ್ಲಿರುವ ವ್ಯಕ್ತಿಗಳು ಕೆಂಪು ವಸ್ತ್ರವನ್ನು ಧರಿಸಿದ್ದಾರೆ. ಮುಂದೆ ಒಬ್ಬ ವ್ಯಕ್ತಿ ಯೇಸುವಿಗೆ ಏನೋ ಕೊಡುವಂತೆ ಚಿತ್ರಸಲಾಗಿದೆ. ಹಿಂದುಗಡೆ ಭಕ್ತರು ನಿಂತಿರುತ್ತಾರೆ. ಭೂಮಿಗೂ ಆಕಾಶಕ್ಕೂ ಸಂಬಂಧವನ್ನು ಕಲ್ಪಿಸಿದ್ದಾರೆ. ಒಟ್ಟಾರೆ ಕೃತಿಯು ಸಂಯೋಜನೆಗೊಂಡಿದ್ದು, ಕಲಾವಿದನ ಚಾಣಾಕ್ಷತನಕ್ಕೆ ಸಾಕ್ಷಿಯೆನಿಸುತ್ತದೆ. ನೀಲಿ, ಬಿಳಿ, ಹಸಿರು, ಹಳದಿ, ಕೆಂಪು, ಬೂದುಕೆಂಪು ಮತ್ತು ಗಿಳಿ ಹಸಿರು ವರ್ಣಗಳನ್ನು ಚಿತ್ರಿಸಿರುವುದನ್ನು ಕಾಣಬಹುದು. ಕಾರವಾರದ ಪ್ರಮುಖ ಬಿಷಪ್‌ನಲ್ಲಿ ಸಂಗ್ರಹಗೊಂಡಿದೆ.

ತಾಯಿ ಮೇರಿಯ ಮಡಿಲಲ್ಲಿ ಯೇಸು

ಈ ಕಲಾಕೃತಿಯಲ್ಲಿ ತಾಯಿ ಮೇರಿ ತನ್ನ ಮಗುವಿನ ಹಾರೈಕೆಯಲ್ಲಿ ನೋವನ್ನು ಕಾಣುತ್ತಿದ್ದು, ತನ್ನ ತೊಡೆಯ ಮೇಲೆ ಮಲಗಿಸಿಕೊಂಡಿರುವ ಅರೆನಗ್ನದಲ್ಲಿರುವ ಯೇಸುವು, ಶಿಕ್ಷೆಯಿಂದ ಬಸವಳಿದಂತೆ ಚಿತ್ರಿಸಲಾಗಿದೆ. ಅಕ್ಕಪಕ್ಕದಲ್ಲಿರುವ ಭಕ್ತರು ತಾಯಿ ಮತ್ತು ಮಗುವನ್ನು ನೋಡಿ ದುಃಖಿತರಾಗಿದ್ದಾರೆ. ಈ ಕಲಾಕೃತಿಯಲ್ಲಿ ನೆರಳು ಬೆಳಕು ಅತ್ಯುತ್ತಮವಾಗಿ ಗೋಚರಿಸಿದ್ದು, ನೀಲಿ, ಕೆಂಪು ಮತ್ತು ಬಿಳಿಯ ಉಡುಪನ್ನು ಮೇರಿ ಧರಿಸಿದ್ದು, ಬಿಳಿಯ ವಸ್ತ್ರವನ್ನು ಸೊಂಟಕ್ಕೆ ಯೇಸುವಿಗೆ ಸುತ್ತಲಾಗಿದೆ. ಕತ್ತಲಕೋಣೆಯಲ್ಲಿರುವ ಇವರು ಅಲ್ಪ

ಸ್ವಲ್ಪ ಕಾಣಲ್ಪಡುತ್ತಿದ್ದಾರೆ. ತೈಲವರ್ಣದಿಂದ ಬಟ್ಟೆಯ ಮೇಲೆ ರಚಿಸಿರುವ ಕೃತಿ ಇದಾಗಿದೆ. ಹಳದಿ, ನೀಲಿ, ಬಿಳಿ, ಕೆಂಪು ವರ್ಣಗಳು ತುಂಬಾ ಮುಖ್ಯವೆನಿಸಿವೆ. ಕಾರವಾರದ ಮುಖ್ಯ ಚರ್ಚ್‌ಗಳಲ್ಲಿ ಒಂದಾದ ಮೇರಿ ಚರ್ಚ್‌ನಲ್ಲಿ ಸಂಗ್ರಹಿಸಿದೆ.

ಪ್ರೀತಿಯಿಂದ ಶಿಕ್ಷೆ ಅನುಭವಿಸುತ್ತಿರುವುದು

೧೦ x೧೨ ಅಡಿಯಿರುವ ಈ ಕಲಾಕೃತಿಯು ಬಟ್ಟೆ ಮಾಧ್ಯಮದಲ್ಲಿ ತೈಲವರ್ಣದಿಂದ ಚಿತ್ರಿತವಾಗಿರುವುದು ಮುಖ್ಯವಾಗಿದ್ದು, ಯೇಸುವು ಶಿಲುಬೆಯನ್ನೇರುತ್ತಿರುವುದು. ಹಿರಿದಾದ ಶಿಲುಬೆಯನ್ನು ಖುಷಿಯಿಂದಲೇ ಎತ್ತಿಕೊಂಡು ಹೋಗುತ್ತಿದ್ದಾನೆ. ಪಕ್ಕದಲ್ಲೇ ಕುಳಿತು ನಿಂತಿರುವ ಭಕ್ತರಿಗೆ ಕೈ ತೋರಿಸುತ್ತಾ ಸಾಗುತ್ತಿದ್ದಾನೆ. ಯೇಸುವಿನ ಪಕ್ಕದಲ್ಲಿ ಶಿಲುಬೆಯಿದ್ದು, ಅದರ ಪಕ್ಕದಲ್ಲಿ ರೂರಿಕ್ ಪ್ರಜೆ ಚೈನನ್ನು ಹಿಡಿದುಕೊಂಡು ಸಾಗುತ್ತಿರುವಂತಿದೆ. ಹಿಂದೆ ಬೆಟ್ಟಗಳ ಸಾಲು ರಮಣಿಯವಾಗಿದ್ದು, ತುಂಬು ಪ್ರೀತಿಯಿಂದ ಯೇಸುವಿಗೆ ನಮಸ್ಕರಿಸುವಂತಿದೆ. ನೆಲವು ಸಮೃದ್ಧಿಯಿಂದ ಕೂಡಿದ್ದಾಗಿದ್ದು, ಇಬ್ಬರು ಮಕ್ಕಳ ಸಮೇತ ನಾಲ್ವರು ಕುಳಿತುಕೊಂಡು ನಮಸ್ಕರಿಸುತ್ತಿದ್ದಾರೆ. ಬಿಳಿ, ನೀಲಿ, ಕಡುನೀಲಿ, ಹಸಿರು, ಹಳದಿ, ಆರೆಂಜ್ ಕೆಂಪು ಮತ್ತು ಕಪ್ಪು ಬಣ್ಣಗಳು ಇಲ್ಲಿ ರಾರಾಜಿಸುತ್ತವೆ. ಈ ಕಲಾಕೃತಿಯಲ್ಲಿ ದಿ ಅವರ್ ಲೇಡಿ ಆಫ್ ಚಾಪೆಲ್ ಚರ್ಚ್, ಕಾರವಾರದಲ್ಲಿ ಸಂಗ್ರಹಗೊಂಡಿದೆ.

ಬಿದ್ದಿರುವ ಯೇಸುವಿನ ದೃಶ್ಯ

ಈ ಕಲಾಕೃತಿಯು ಹಿರಿದಾದ ಶಿಲುಬೆಯುನ್ನು ಹೊತ್ತು ಸುಸ್ತಾಗಿರುವಂತೆ ಗೋಚರಿಸುತ್ತಿರುವುದು ಇಲ್ಲಿ ಕಾಣಬಹುದು. ಕಲ್ಲು ಮುಳ್ಳುಗಳ ಸಾಲಿನಲ್ಲಿ ನಡೆದ ಯೇಸುವು ಸುಸ್ತಾಗಿ ಬಿದ್ದಿದ್ದು, ವಿರೋಧಿಗಳು ಸುತ್ತುವರಿದಿದ್ದಾರೆ. ಅವರ ಯಾತನೆಯನ್ನು ನೋಡಿ. ಶಿಲುಬೆಯನ್ನು ಇಬ್ಬರು ಮೇಲೆತ್ತುತ್ತಿದ್ದಾರೆ. ಒಬ್ಬ ಬರ್ಚಿ ಹಿಡಿದುಕೊಂಡು ಮುಂದೆ ಬರುತ್ತಿರುವಂತೆ, ಇನ್ನೊಬ್ಬ ಸನ್ಯಾಸಿ ವೇಷದಾರಿ, ಇಬ್ಬರ ಭಕ್ತರಂತೆ ಇಲ್ಲಿ ಕಾಣಬಹುದು ಬೆಟ್ಟ, ಗುಡ್ಡ, ನಿಸರ್ಗವು ಸೌಂದರ್ಯದಿಂದ ಕೂಡಿದ್ದಾಗಿದೆ. ಕರೆಂಟ್ ಕಂಬಗಳಂತೆ ಕಾಣುತ್ತಿರುವ ದೂರದಲ್ಲಿ ಶಿಲುಬೆಗಳ ಗೋಚರಿಸುತ್ತವೆ. ಈ ಸಂಯೋಜನಾ ಕೃತಿಯಲ್ಲಿ ಐದು ಜನರು ಒಂದೊಂದು ಬಣ್ಣದ ಉಡುಪನ್ನು ಹಾಕಿರುವುದನ್ನು ಕಾಣಬಹುದು. ಬಿಳಿ ಹಸಿರು ನೀಲಿ, ಕೆಂಪು, ಹಳದಿ ವರ್ಣಗಳಿಂದ ಅಲಂಕೃತಗೊಂಡಿದೆ. ತೈಲವರ್ಣದಿಂದ ಕ್ಯಾನ್‌ವಾಸ್ ಮೇಲೆ ಚಿತ್ರಿಸಲಾಗಿದೆ. ಕಾರವಾರದ ದಿ ಅವರ್ ಲೇಡಿ ಆಫ್ ಚಾಪಲ್ ಚರ್ಚ್‌ನಲ್ಲಿ ಕಾಣಬಹುದಾಗಿದೆ.

ಬಟ್ಟೆಯ ಮೇಲೆ ಚಿತ್ರರಚನೆ ಮಾಡಬೇಕಾದರೆ ತನ್ನದೇ ಆದ ಇತಿಹಾಸವಿರುತ್ತದೆ. ಅಂತಹ ಇತಿಹಾಸವನ್ನು ಈ ಅಧ್ಯಾಯದಲ್ಲಿ ಹೇಳುವುದರ ಜೊತೆಗೆ ಕಲಾಕೃತಿ ರಚನೆ

ಮಾಡಲಾಗಿರುವ ಕೆಲವು ಅಂಶಗಳನ್ನು ಹೇಳಲಾಗಿದ್ದು, ವಿವಿಧ ರೀತಿಯಲ್ಲಿ ರಚಿಸಬಹುದಾದ ಕಲಾಕೃತಿಗಳಲ್ಲಿ ಇದು ಒಂದಾದರೂ ದಪ್ಪ ಬಟ್ಟೆಯ ಮೇಲೆ ವಜ್ರಸರಿಯಂತಹ ಅಂಟನ್ನು ಲೇಪಿಸಿ ತೈಲವರ್ಣದಿಂದ ರಚಿಸಿರುವ ವಸ್ತು ವಿಷಯಗಳ ಕುರಿತು ಸ್ಥೂಲವಾಗಿ ಹೇಳುವುದರ ಜೊತೆಗೆ ಚಿತ್ರಪಟಗಳನ್ನು ಗುರುತಿಸಿ ಸಂಶೋಧಿಸುವ ಮುಖ್ಯ ಅಂಶವು ಇದರೊಳಗಡಗಿದೆ.

ಈ ಅಧ್ಯಾಯದಲ್ಲಿ ರಚನೆಯಾಗಿರುವ ಕಲಾಕೃತಿಗಳು ಪ್ರಮುಖವಾಗಿದ್ದು, ಬಟ್ಟೆ ಮಾಧ್ಯಮದಿಂದ ರಚಿತವಾಗಿವೆ. ಹಾಗೆಯೇ ಕರಾವಳಿ ಭಾಗದ ಕೆಲವೇ ಕೆಲವು ಚರ್ಚ್‌ಗಳಲ್ಲಿ ಚಿತ್ರಕೃತಿಗಳು ಕಂಡರೂ, ವರ್ಣಮಯವಾಗಿ ರಂಜಿಸಲ್ಪಟಿವೆ. ಹಾಗೆಯೇ ಈ ಅಧ್ಯಾಯದ ಪ್ರಮುಖ ಅಂಶವನ್ನು ಇದರಲ್ಲಿ ಕಾಣಬಹುದಾಗಿದೆ.

* * *



ಯೇಸುವಿನ ಶಿಕ್ಷೆಗಾಗಿ ಹೋರಾಟ



ಯೇಸು ಜನರಿಗೆ ಭೊದನೆ ಮಾಡುತ್ತಿರುವುದ



ಜನೋಪದೇಶದಲ್ಲಿ ಯೇಸು



ಭಕ್ತರಿಗೆ ಉಪದೇಶ ನೀಡುತ್ತಿರುವ ಯೇಸು



ಸೆಂಟ್ ಆಂಡ್ರ್ಯೊ



ಬರ್ತೋಲೋಮಿಯ



ಎಸುವಿನ ಶಿಷ್ಯ ಜೇಮ್ಸ ಡಿ.ಎಲ್ಡರ್

ಯೇಸುವಿನ ಶಿಷ್ಯಂದಿರು









ಯೇಸುವಿನ ಶಿಷ್ಯ



ಏಂಜಿಲ್ಸ್(ದೇವದೂತ)



ಯೇಸುವಿನ ಶಿಷ್ಯ ಜೇಮ್ಸ್ ಡಿ. ಎಲ್ಡರ್



ಸಮುದ್ರದಲ್ಲಿ ದೋಣಿಯ ದುರಂತದ ನೋಟ



ಯೇಸು ಮತ್ತು ದೇವದೂತರ



ಯೇಸುವಿನ ಬಟ್ಟೆ ಕಳಚುತ್ತಿರುವುದು



ಪ್ರೀತಿಯಿಂದ ಶಿಕ್ಷೆ ಅನುಬವಿಸುತ್ತಿರುವುದು



ಶಿಲುಬೆಯನ್ನೆರುತ್ತಿರುವ ಯೇಸುದೇವ



ಬಿದ್ದಿರುವ ಯೇಸು



ಶಿಲುಬೆಯಲ್ಲಿ ಮಲಗಿರುವ ಯೇಸು



ಶಿಕ್ಷೆ ಪಡೆದಿರುವ ಯೇಸು



ದೈವಾಧೀನವಾಗಿರುವ ಯೇಸು



ತಾಯಿ ಮೇರಿ ಮಡಿಲಲ್ಲಿ ಯೇಸು

ಅಧ್ಯಾಯ : ಆರು

ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆಯ ಪ್ರಮುಖ ಲಕ್ಷಣಗಳು, ಕಲಾವಿದರು ಮತ್ತು ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ

ಎಲ್ಲಾ ಚರ್ಚ್‌ಗಳನ್ನು ಹೊಡೆದು ಹಾಕಿದ ಎನ್ನುವುದಕ್ಕೆ ಸಾಕಷ್ಟು ಉಲ್ಲೇಖಗಳಿವೆ. ಬ್ರೀಟಿಷರು ಭಾರತಕ್ಕೆ ಸಾಂಬಾರ ಪದಾರ್ಥಗಳ ಮಾರಟಕ್ಕೆಂದು ಬಂದ ದಾರಿ ಸಮುದ್ರದಲ್ಲಿದ್ದು, ಅದರಂತೆ ಹಡಗಿನ ಮೂಲಕ ಕರಾವಳಿಯ ದಡಕ್ಕೆ ಬಂದು, ಇಲ್ಲಿನ ಸುತ್ತಮುತ್ತಲಲ್ಲಿ ತಮ್ಮ ವ್ಯಾಪಾರವನ್ನು ಪ್ರಾರಂಭಿಸಿ ಗಟ್ಟಿಯಾಗಿರುವ ಪದಾರ್ಥಗಳ ಜೊತೆ ಇವರು ಗಟ್ಟಿಯಾಗಿ ಭಾರತದಲ್ಲಿ ಪ್ರಮುಖವಾಗಿ ಕರ್ನಾಟಕದಲ್ಲಿ ನೆಲೆಯೂರಿದರು. ಆಗ ಪ್ರಾರಂಭವಾಗಿದ್ದೆ ಕ್ರೈಸ್ತ ಮತ ಬಾಂಧವರ ಸಂಸ್ಕೃತಿ ಹಾಗೂ ವಿವಿಧ ಆಚರಣೆಗಳು.

ಮುಂಚೆ ಗೋವಾ ಪ್ರಾಂತ್ಯಕ್ಕೆ ಸೇರಿದ್ದ ಈ ಕರಾವಳಿಯಲ್ಲಿ ಕೊಂಕಣಿ ಕ್ರೈಸ್ತರು ಹೆಚ್ಚಾಗಿದ್ದರು. ವಿಭಜನೆಯ ನಂತರ ಮೂರು ಜಿಲ್ಲೆಗಳಾಗಿ ಪ್ರಸ್ತುತ ದಿನಗಳಲ್ಲಿ ಉತ್ತಮ ಆಡಳಿತ ಹಾಗೂ ಜನರ ನಡುವಿನ ಸಹ ಸಂಬಂಧ ಉತ್ತಮವಾಗಿದೆ. ಹಾಗೆಯೇ ಭಾರತ ದೇಶವು ವಿವಿಧ ಜಾತಿ ಧರ್ಮಗಳನ್ನು ಹೊಂದಿದ ರಾಷ್ಟ್ರವಾಗಿದ್ದು, ಮುಖ್ಯವಾಗಿ ಹಿಂದೂ ಕ್ರೈಸ್ತ, ಮುಸಲ್ಮಾನ, ಬೌದ್ಧ, ಜೈನ, ವೈಷ್ಣವ ಹೀಗೆ ಮುಂದುವರೆದಂತೆ ದೊಡ್ಡ ಪಟ್ಟಿಯೇ ಬೆಳೆಯಲಾರಂಭಿಸುತ್ತದೆ.

ಪ್ರಮುಖವಾದ ಹಿಂದೂ ಮತ್ತು ಮುಸ್ಲಿಂ ಧರ್ಮಗಳು ಬಿಟ್ಟರೆ ಮೂರನೇ ಸ್ಥಾನದಲ್ಲಿರುವುದೇ ಕ್ರೈಸ್ತ ಧರ್ಮ ವಿಶೇಷವಾಗಿ ಅವರವರ ಧರ್ಮಗಳಲ್ಲಿ ಸಾಂಸ್ಕೃತಿಕ ಪರಿಸರ ಸೃಷ್ಟಿಗಾಗಿ ವಿವಿಧ ರೀತಿಯ ಲಲಿತಕಲೆಗಳು, ಜನಪದ ಕಲೆಗಳು ಅತ್ಯವಶ್ಯಕವಾಗಿ ನಿರ್ಮಿಸಿಕೊಳ್ಳುತ್ತ, ಕ್ರೈಸ್ತ ಧರ್ಮದಲ್ಲಿಯೂ ಕೂಡ ವಿವಿಧ ಆಯಾಮ, ನಿಯಮ, ಕ್ರಮಬದ್ಧತೆಯ ಅನುಸಾರ ತಮ್ಮ ದೇವದೂತನ ನೆನಪು, ಚರ್ಚ್‌ಗಳು, ಪಾದ್ರಿಗಳು, ವಿವಿಧ ಸಾಂಸ್ಕೃತಿಕ ಆಚರಣೆಗಳನ್ನು ನವೀಕರಿಸಿಕೊಂಡು ಪಾಶ್ಚಾತ್ಯ ದೇಶಗಳಲ್ಲಿ ಕಂಡುಬರುವಂತಹ ವಿಶೇಷ ಹಬ್ಬ ಹರಿದಿನಗಳನ್ನು ಇಲ್ಲಿ ಸ್ವಾಗತಿಸಿ, ಅದರಂತೆ ಆಚರಿಸುತ್ತಿದ್ದಾರೆ.

ಕರಾವಳಿ ಕರ್ನಾಟಕದ ಅನೇಕ ಚರ್ಚ್‌ಗಳಲ್ಲಿ ಮಠಗಳಲ್ಲಿ ಖಾಸಗಿ ಮನೆಗಳಲ್ಲಿ ಶಾಲಾ ಕಾಲೇಜಿನಲ್ಲಿ ಭಿತ್ತಿಚಿತ್ರ, ಬಟ್ಟೆ ಮೇಲೆ ರಚಿಸಿರುವ ಚಿತ್ರಗಳು ಹಾಗೂ ಗಾಜಿನ ಮೇಲೆ ರಚಿಸಿರುವ ಕಲಾಕೃತಿಗಳು ಇಲ್ಲಿ ಪ್ರಮುಖವಾಗಿ ಕಂಡುಬರುತ್ತಿವೆ. ಮುಖ್ಯವಾಗಿ ಕರಾವಳಿಯ ಕ್ರೈಸ್ತ ಚಿತ್ರಗಳು ಎಂದಾಗ ಹೆಚ್ಚು ಭಿತ್ತಿಚಿತ್ರಗಳೆ ಕಾಣಸಿಗುತ್ತವೆ.

ವಿಜಯನಗರ, ಹೊಯ್ಸಳ, ಚಾಲುಕ್ಯ ಅರಸರ ಕಾಲದಲ್ಲಿ ರಚಿಸಲಾದ ಭಿತ್ತಿ ಚಿತ್ರಗಳು, ಶಿಲ್ಪಗಳು ವಿಶೇಷವೆನಿಸಿದ್ದಾವೆ. ಇಲ್ಲಿ ಗಾರೆ ಹಾಕಲಾದ ಹಸಿ ಚಿತ್ರವನ್ನು ರಚಿಸುವುದು ಇನ್ನೊಂದು ಗಾರೆ ಒಣಗಿದ ಸಂದರ್ಭಕ್ಕೆ ರಚಿತವಾಗಿರುವ ಕಲಾಕೃತಿಗಳನ್ನು ಹೆಚ್ಚು ಕಾಣಬಹುದು. ಸಾವಿರಾರು ವರ್ಷಗಳ ಇತಿಹಾಸವಿರುವ ಅಂಜಂತಾ ಎಲ್ಲೋರ ಭಿತ್ತಿಚಿತ್ರಗಳು ಸಹ ಸ್ಪಷ್ಟವಾಗಿ ಗೋಚರಿಸುವಂತಿದೆ. ಇವರ ಇತಿಹಾಸದಂತೆ ಇಂದಿಗೂ ರಾರಾಜಿಸುತ್ತವೆ.

ಆದರೆ ಕರ್ನಾಟಕದ ಕರಾವಳಿಯ ಭಾಗದಲ್ಲಿ ಕ್ರೈಸ್ತ ಚಿತ್ರಕಲೆಯು ೧೮ನೇ ಶತಮಾನದಲ್ಲಿ ಹುಟ್ಟಿಕೊಂಡಿದೆ. ಆಗಿನ ಸಂದರ್ಭದಲ್ಲಿಯೇ ಸುಮಾರು ಕ್ರೈಸ್ತರಿದ್ದು, ತಮ್ಮ ದೇವಾಲಯವನ್ನು ನೂರಕ್ಕೂ ಹೆಚ್ಚು ಸ್ಥಾಪಿಸಿಕೊಂಡಿರುವುದು ವಿಶೇಷವಾಗಿಸುತ್ತದೆ. ಅವನ್ನೆಲ್ಲಾ ನೆಲಸಮ ಮಾಡಿದ ಟಿಪ್ಪು, ಒಂದೆರಡು ಚರ್ಚ್‌ಗಳು ಮಾತ್ರ ಉಳಿದಿದ್ದವು. ಅಂತವುಗಳಲ್ಲಿ ಈ ಮತಬಾಂಧವರು ಹುಡುಕಿ ತಮ್ಮ ಭಕ್ತಿಯನ್ನು ಪ್ರದರ್ಶಿಸಿದ್ದುಂಟು ೧೫೬೮ರಲ್ಲಿ ನಿರ್ಮಿಸಿದ ರೋಸರಿ ದಿ ಅವರ್ ಲೇಡಿ ಆಫ್ ಚರ್ಚ್ ಮಂಗಳೂರು, ಬಂಟ್ವಾಳದಲ್ಲಿರುವ ಹೆಚ್ಚು ಪವಿತ್ರ ಸೇವಿಯರ್ ಚರ್ಚ್ ಕಾರ್ಕಳ ತಾಲೂಕಿನಲ್ಲಿರುವ ಅವರ್ ಲೇಡಿ ಚರ್ಚ್ ಇಮ್ಯಾಕ್ಯುಲೇಟ್ ಕಾನ್ಸೆಪ್ಷನ್ ಚರ್ಚ್ ಮಂಗಳೂರು ಮಿಲಾಗ್ರಿಸ್ ಪವಾಡಗಳು ಅವರ್ ಲೇಡಿ ಆಫ್ ಚರ್ಚ್ ಗಾಡ್‌ತಾಯಿಯ ಚರ್ಚ್ ಮಂಗಳೂರು, ಚರ್ಚ್ ಆಫ್ ಕ್ರಿಸ್ಟ್ ಮಣಿಪಾಲ್ ಮುಂತಾದ ಅನೇಕ ಕರಾವಳಿ ಭಾಗದ ಚರ್ಚ್‌ಗಳು ೧೭ ಮತ್ತು ೧೮ನೇ ಶತಮಾನದಲ್ಲಿ ಕಟ್ಟಲ್ಪಟ್ಟಿದ್ದು. ಅವುಗಳಲ್ಲಿ ಚಿತ್ರ ರಚನೆಮಾಡಿಸಿರುವುದು ಮಾತ್ರ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಹಾಗೆಯೇ ಕೆಲವೇ ಕೆಲವು ಪ್ರಮುಖ ಹಾಗೂ ಹಿರಿಯದಾದ ಗೌರವಕ್ಕೆ ಪಾತ್ರರಾಗಿರುವ ಚರ್ಚ್‌ಗಳಲ್ಲಿ ಮಾತ್ರ ಭಿತ್ತಿ, ಕ್ಯಾನ್‌ವಾಸ್ (ಬಟ್ಟೆ ಮಾಧ್ಯಮ) ಮತ್ತು ಗಾಜಿನ ಚಿತ್ರಗಳಿರುವುದನ್ನು ಕಾಣಬಹುದು.

ಕ್ರೈಸ್ತ ಚಿತ್ರಕಲೆಯ ಪ್ರಮುಖ ಅಂಶಗಳು

* ಕ್ರೈಸ್ತ ದೇವರ ಕುರಿತು ಪ್ರಚಾರಪಡಿಸುವುದು.
* ಯೇಸುವಿನ ಪವಾಡಗಳು ಹಾಗೂ ಬೋಧನೆಯ ನಿಯಮಗಳನ್ನು ತಿಳಿಸುವುದು.
* ಕರಾವಳಿಯ ಭಾಗದಲ್ಲಿರುವ ಅನೇಕ ಕ್ರೈಸ್ತರ ಒಡನಾಟದ ಸಂಕೇತವಾಗಿ ಚರ್ಚ್‌ಗಳ ನಿರ್ಮಾಣ.
* ಕ್ರೈಸ್ತ ದೇವಾಲಯಗಳು ಪಾಶ್ಚಾತ್ಯ ಶೈಲಿಯಲ್ಲಿಯೇ ಹೆಚ್ಚು ನಿರ್ಮಾಣವಾಗಿರುವುದು.
* ಮೂರು ಭಾಗಗಳಲ್ಲಿ ಚಿತ್ರಗಳನ್ನು ಕಾಣುವುದು ಭಿತ್ತಿ ಬಟ್ಟೆ ಮತ್ತು ಗಾಜಿನಲ್ಲಿ ಚಿತ್ರಿಸಿರುವುದು.
* ೧೮೯೯ರಲ್ಲಿ ಆಂಟೋನಿ ಮಾಶ್ಚಿನಿ ಎಂಬಾತನು ತನ್ನ ಕಲೆಯ ಕೌಶಲ್ಯವನ್ನು ತೋರ್ಪಡಿಸುವುದರ ಜೊತೆ ಕ್ರೈಸ್ತ ಸಮುದಾಯಕ್ಕೆ ನನ್ನದೊಂದು ಕೊಡುಗೆ ಕೊಡುವ ದೃಷ್ಟಿಯಿಂದ ಸ್ಥಳೀಯ ಕಲಾವಿದರೊಂದಿಗೆ ಸುತ್ತಮುತ್ತಲಿರುವ ಅನೇಕ ಚರ್ಚ್‌ಗಳಿಗೆ ಬೇಟಿ ನೀಡಿ, ಕ್ರೈಸ್ತ ಧಾರ್ಮಿಕ ಚಿತ್ರಗಳನ್ನು ರಚಿಸಿರುವುದು.
* ರಚಿಸಿರುವ ಕಲಾಕೃತಿಗಳೆಲ್ಲಾ ಕ್ರೈಸ್ತಮತಕ್ಕೆ ಸಂಬಂಧಿಸಿದ್ದಾಗಿವೆ.

ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಗಳ ಪ್ರಮುಖ ಕೆಲವು ಕಲಾಕೃತಿಗಳು

ಸಂಯೋಜನಾ ಚಿತ್ರಕೃತಿಗಳು

* ಯೇಸುವಿನ ಭಾವಚಿತ್ರ.
* ಯೇಸುವನ್ನು ಶಿಲುಬೆಗೆ ಏರಿಸುತ್ತಿರುವುದು.
* ಚಿಕ್ಕಪ್ಪನ ಜೊತೆ ಅಲೋಷಿಯಸ್. (ಮಂಗಳೂರು)
* ಮಗುವಿನೊಂದಿಗೆ ಕಾಲ ಕಳೆಯುತ್ತಿರುವ ಮೇರಿ.
* ಜೀಸಸ್ ನೀರನ್ನು ಮಧ್ಯವನ್ನಾಗಿ ಬದಲಾಯಿಸಿದ ಪವಾಡದ ದೃಶ್ಯ.
* ಪ್ಯಾರಿಸ್‌ನ ಸಾರ್ವಜನಿಕರ ಮಧ್ಯೆ ಯೇಸು.
* ಗಾಯಾಳು ವ್ಯಕ್ತಿಗೆ ಔಷದೋಪಚಾರ ನೀಡುತ್ತಿರುವುದು.
* ಅಲೋಷಿಯಸ್‌ನು ಮಗುವಾಗಿದ್ದಾಗಲೇ ಯೋಸುವಿನ ಕುರಿತು ಬೋಧನೆ ಮಾಡುತ್ತಿರುವುದು.
* ಮೇರಿ ಮಕ್ಕಳಿಗೆ ಬೋಧನೆ ಮಾಡುತ್ತಿರುವುದು.
* ಬಾಲಕ ಪ್ರತಿಜ್ಞೆಮಾಡುತ್ತಿರುವ ಚಿತ್ರ.
* ಜ್ಞಾನೋದಯದ ನಂತರ ಯೇಸು ಹಾರುತ್ತಿರುವುದು.
* ಮಕ್ಕಳಿಗೆ ಮಿತ್ರನಾಗಿರುವ ಯೇಸು.
* ತಾಯಿಯ ಜೊತೆ ಸೆಂಟ್ (ಅಲೋಶಿಯಸ್)
* ಯೇಸುವಿಗೆ ಶಿಲುಬೆ ಹೊರಿಸುತ್ತಿರುವ ದೃಶ್ಯ
* ಯೇಸುವು ಶಿಲುಬೆ ಹೊತ್ತುಕೊಂಡು ಬಿದ್ದಿರುವ ದೃಶ್ಯವು ಸುಮಾರು ೧೭ ಚಿತ್ರಗಳಿವೆ. (ಗಾಜಿನ ಮೇಲೆ ರಚಿಸಿರುವ)
* ಯೇಸುವಿನ ಜನ, ದೋಣಿ ದುರಂತ, ಜ್ಞಾನ ಸ್ನಾನ, ಮೇರಿ, ದೇವ ದೂತರು, ನಕ್ಷಾಚಿತ್ರ, ಪ್ರಾರ್ಥನಾ ದೃಶ್ಯ ಮುಂತಾದವು ಅನೇಕ ಚಿತ್ರಗಳನ್ನು ಕಾಣಬಹುದು.

ಭಾವ ಮತ್ತು ವ್ಯಕ್ತಿ ಚಿತ್ರಗಳು

* ಆಂಟೋನಿ ಮೋಶ್ಚಿನಿ
* ಸೆಂಟ್ ಜೆಮ್ಸ್
* ಯೇಸುವಿನ ಚಿತ್ರ

* ಯೇಸು ಮತ್ತು ಮೇರಿ
* ಜಾರ್ಜಸ್ ಮತ್ತು ಜೀಸಸ್
* ಅಲೋಶಿಯಸ್‌ನ ಭಾವ ಚಿತ್ರ
* ೧೨ ಜನ ಯೇಸುವಿನ ಶಿಷ್ಯರು
* ಧರ್ಮ ಪ್ರಚಾರಕ ಸೆಂಟ್ ಮಾರ್ಕ್‌ನ್
* ಸೆಂಟ್ ಜಾನ್ ಡಿ ಬ್ರೀಣ್ಣೋ
* ಯೋಚನಾಗ್ರಸ್ತನಾದ ಯೇಸು
* ಯುವಕನ ವ್ಯಕ್ತಿ ಚಿತ್ರಗಳು
* ಬರ್ತಲೋಮಿಯೊ
* ಜಾನ್ ದ ಬ್ರೇಟ್
* ರೊಡಾಲ್ಬಂ ಅಕ್ರಿಯಾಬ್
* ಸಂತರ ಚಿತ್ರಗಳು
* ಅಹಂಕಾರಿ ಪರಿಜಯ
* ಸೆಂಟ್ ಅಲೋಷಿಯಸ್‌ನಲ್ಲಿ ಅನೇಕ ಚಿತ್ರಗಳಿದ್ದು ಅವು ಚರ್ಚ್‌ಗಳ ಉದ್ದಾರಕ್ಕೆ ಸಂಬಂಧಿಸಿದಂತಹ ವ್ಯಕ್ತಿಗಳ ಚಿತ್ರಗಳು

ಗ್ಲಾಸ್ ಪೇಂಟಿಂಗ್

ಇಲ್ಲಿಯು ಕೂಡ ಅಲಂಕಾರಕ್ಕಾಗಿ ವಿವಿಧ ರೀತಿಯ ಚಿತ್ರಗಳನ್ನು ರಚಿಸಿರುವುದು ವಿಶೇಷ, ಕಿಟಕಿ, ಬಾಗಿಲು ಹಾಗೂ ಮೇಲ್ಭಾವಣಿಯ ಬೆಳಕು ಬರುವುದಕ್ಕಾಗಿ ಗ್ಲಾಸ್‌ಗಳನ್ನು ಬಳಸಿರುವುದು ಹಾಗೆಯೇ ಅದರಲ್ಲಿ ಯೇಸುವಿಗೆ ಸಂಬಂಧಿಸಿದ ಚಿತ್ರಗಳನ್ನು ಚಿತ್ರಿಸಲಾಗಿದೆ. ಮಂಗಳೂರಿನ ಸೆಂಟ್ ಅಲೋಶಿಯಸ್, ಮಿಲಾಗ್ರಿಸ್ ಚರ್ಚ್ ಮತ್ತು ಕಾರವಾರದಲ್ಲಿರುವ ಸೈಂಟ್ ಆಂಟೋನಿ ಚರ್ಚ್‌ನಲ್ಲಿ ಗಾಜಿನ ಚಿತ್ರಗಳನ್ನು ಕಾಣಬಹುದಾಗಿದೆ. ಮನೋರಂಜನೆಯ ಪ್ರತೀಕವೆಂಬಂತೆ ಆಕರ್ಷಣೆಗಾಗಿ ವಿವಿಧ ಆಯಾಮಗಳಲ್ಲಿ ಗಾಜಿನ ಮೇಲೆ ಚಿತ್ರಗಳನ್ನು ಚಿತ್ರಿಸಲಾಗಿದೆ. ಕಾರವಾರದಲ್ಲಿರುವ ಚರ್ಚ್‌ನಲ್ಲಿ ಅಲಂಕೃತಗೊಂಡಿರುವ ಉತ್ತಮವಾದ ಕಲಾಕೃತಿಗಳು ಕಂಡುಬರುತ್ತವೆ. ಇದರಲ್ಲಿ ಚಿತ್ರವಿನ್ಯಾಸ ಹಾಗೂ ಅಬ್‌ಸ್ಟ್ರಾಕ್ ಚಿತ್ರಕಲೆಗೆ ಹೆಚ್ಚು ಒತ್ತನ್ನು ಕೊಡಲಾಗಿದೆ. ಕರಾವಳಿ ಭಾಗದಲ್ಲಿ ಕೆಲವೇ ಕೆಲವು ಕಡೆ ಮಾತ್ರ ಗ್ಲಾಸ್ ಪೇಂಟಿಂಗ್‌ನ್ನು ಕಾಣಬಹುದು.

ಕಲಾವಿದರು

ಕರಾವಳಿ ಕರ್ನಾಟಕದಲ್ಲಿರುವ ಕ್ರೈಸ್ತ ಚಿತ್ರಗಳನ್ನು ರಚನೆ ಮಾಡಲು ಇಟಲಿಯ ಆಂಟೋನಿ ಮೋಶ್ಚಿನಿಯು ೧೮೯೯ರಲ್ಲಿ ಭಾರತಕ್ಕೆ ಬಂದಿದ್ದು, ಸೆಂಟ್ ಅಲೋಶಿಯಸ್ ಚರ್ಚ್, ಕುಲಶೇಖರದ ಹೋಳಿ ಕ್ರಾಸ್ ಚರ್ಚ್, ಮಂಗಳೂರಿನ ಮಿಲಾಗ್ರಿಸ್ ಚರ್ಚ್‌ನಲ್ಲಿ ಭಿತ್ತಿ ಹಾಗೂ ಬಟ್ಟೆಯ ಮೇಲೆ ಚಿತ್ರಗಳನ್ನು ರಚಿಸಿರುವುದನ್ನು ಕಾಣಬಹುದಾಗಿದೆ.

ಜನವರಿ ೧೭ ೧೮೫೪ರಂದು ಇಟಲಿಯ ಬೆರ್ಗೊಮೊ ಬಳಿ ಸ್ಪೇಜ್‌ನೋ ಎಂಬ ಹಳ್ಳಿಯಲ್ಲಿ ಜನಿಸಿದ ಆಂಟೋನಿ ಮೋಶ್ಚಿನಿ ಬಹಳ ಬೇಗ ಈ ಕಲೆಯಲ್ಲಿ ಯಶಸ್ಸನ್ನು ಕಂಡವರು, ಕಲಾಕೃತಿಗಳ ಜೊತೆ ನಿತ್ಯ ಒಡನಾಟ, ಇವರು ಮುಖ್ಯವಾಗಿ ಗೋಡೆಯ ಮೇಲೆ ಹಾಗೂ ಕ್ಯಾನ್‌ವಾಸ್ ಮೇಲೆ ಚಿತ್ರವನ್ನು ರಚನೆ ಮಾಡಿದ್ದಾರೆ. ಈ ಕಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಇವನಿಗೆ ಪ್ರತಿಷ್ಠಿತ ಬೆಗೋಮಾ ವಿಶ್ವವಿದ್ಯಾಲಯ ಧನಸಹಾಯ ನೀಡಿತು. ವ್ಯಾಟಿಕನ್‌ನಲ್ಲಿ ಅಭ್ಯಾಸಮಾಡಿದ ಆಂಟೋನಿ ದೇಶ ವಿದೇಶಗಳನ್ನು ಸುತ್ತಿ ಹಲವಾರು ಕಲಾಕೃತಿಗಳನ್ನು ವೀಕ್ಷಿಸಿದ, ಇವನ ಕಲಾಕೃತಿಗಳಿಗೆ ಪ್ರೇರಣೆ ಮೈಕೆಲ್ ಎಂಜಿಲ್‌ನ ಹಸಿ ಚಿತ್ರಗಳು, ಇವು ಸಿಸ್ಟನ್ ಛಾಪಲ್‌ನಲ್ಲಿರುತ್ತವೆ. ಯುವ ನೇತಾರನಾಗಿದ್ದ ಹಂತ ಹಂತವಾಗಿ ಮೋಶ್ಚಿನಿ ಒಂದು ಮಹಾಗುರುತಿನ ಮುದ್ರೆಯನ್ನೊತ್ತುವನು. ಪ್ರಮುಖವಾಗಿ ವರ್ಣಚಿತ್ರಗಳು ಇವನ ಆಸಕ್ತಿಯನ್ನು ಹೆಚ್ಚಿಸಿದವು.

೧೮೮೯ರಲ್ಲಿ ಆಂಟೋನಿ ಮೋಶ್ಚಿನಿ ಯೇಸುವಿನ ಸಮಾಜದಲ್ಲಿ ಧಾರ್ಮಿಕವಾಯಿತು. ಧಾರ್ಮಿಕದ ಮೇಲಾಧಿಕಾರಿಗಳು ಅಲ್ಬೋನಿಯಾ ಮತ್ತು ಯುಗೋಸ್ಲಾವಿಯಾದ ತಮ್ಮ ಸ್ಥಳದಲ್ಲಿರುವ ಹಲವಾರು ಚರ್ಚ್‌ಗಳಲ್ಲಿ ಚಿತ್ರಗಳನ್ನು ಚಿತ್ರಿಸಲು ಆದೇಶಿದರು. ಇದಾದ ನಂತರ ಮಂಗಳೂರಿನ ಸೆಂಟ್ ಅಲೋಶಿಯಸ್ ಕಾಲೇಜ್ ಛಾಪಲ್‌ನಲ್ಲಿ ಚಿತ್ರಿಸಲು ಕಳುಹಿಸಿದರು. ಬರೀ ಎರಡು ವರ್ಷದಲ್ಲಿಯೇ ಹಸಿಚಿತ್ರ ಹಾಗೂ ಕ್ಯಾನ್‌ವಾಸ್ (ಬಟ್ಟೆ ಮಾಧ್ಯಮ) ಮೇಲೆ ಚಿತ್ರಗಳನ್ನು ಸ್ಥಳೀಯ ಕಲಾವಿದರ ಸಹಾಯದ ಮೂಲಕ ಚಿತ್ರಿಸಿದರು. ಇದರಲ್ಲಿ ಸ್ವಲ್ಪವು ಖಾಲಿಗೋಡೆ ಕಾಣದ ರೀತಿಯಲ್ಲಿ ಚಿತ್ರಿಸಲಾಗಿದೆ. ಎಡ, ಬಲ, ಎದುರು-ಬದುರು, ಕಂಬಗಳಲ್ಲಿ ಮೇಲ್ಛಾವಣಿಗಳಲ್ಲಿ ನೆಲದ ಟೈಲ್ಸ್ ಕೂಡ ಇವರ ಸೃಜನಶೀಲತೆಯ ಪ್ರತೀಕವಂತೆ ಇದರಲ್ಲಿ ಚಿತ್ರಿಸಲಾಗಿದೆ. ಕೊಚ್ಚಿನ್ ಮತ್ತು ಬಾಂಬೆಗಳಲ್ಲಿಯು ಚಿತ್ರರಚನೆ ಮಾಡಿದ್ದಾರೆ. ಹಗಲಿರುಳು ದುಡಿದ ಈ ಮಹಾನ್ ವ್ಯಕ್ತಿಯು ನವೆಂಬರ್ ೧೫, ೧೯೦೫ರಂದು ೫೧ರ ಇಳಿವಯಸ್ಸಿನಲ್ಲಿ ಮರಗಟ್ಟುವರು.



ಸೈಂಟ್ ಅಲೋಶಿಯಸ್ ಚರ್ಚ್‌ನಲ್ಲಿರುವ ಟೈಲ್ಸ್ ದಾರಿ



ಕಲಾವಿದ ಆಂಟೋನಿ ಮೋಶ್ಚಿನಿ

ಪ್ರಭಾವ

ಕನ್ನಡದ ನೆಲ ಬಗೆ ಬಗೆಯ ಕಲೆಗಳಿಗೆ ಜನ್ಮ ನೀಡಿ, ಉನ್ನತ ಮಟ್ಟಕ್ಕೆ ಕರೆದುಕೊಂಡು ಹೋಗಿದೆ. ವಿಶೇಷವಾದ ಅರ್ಥದಲ್ಲಿ ಹೇಳಬೇಕಾದರೆ ದೇಶಬದ್ಧ ಕಲೆಗಳು, ಕನ್ನಡದ ಪರಿಸರ, ಜನರ ಬದುಕು, ಬವಣೆ, ಧಾರ್ಮಿಕ, ಜನಪದ ಆಚರಣೆಗಳು, ಅಚ್ಚಳಿಯದ ಪ್ರಭಾವವನ್ನು ಅಚ್ಚುತ್ತಿವೆ. ಇಷ್ಟಕ್ಕೆ ಸಾಲವೆಂಬಂತೆ ಅಂದಿನ ಸಂದರ್ಭದಲ್ಲಿ ಭಾರತದ ನೆಲದ ಮೇಲೆ ತಮ್ಮ ಆಳ್ವಿಕೆಯ ಪತಾಕೆಯನ್ನು ಹಾರಿಸಿದ್ದು, ಪೋರ್ಚ್‌ಗೀಸ್ ಮತ್ತು ಪಿರಂಗಿಗಳ ಜೀವನ ಶೈಲಿಗಳನ್ನು ತಮ್ಮ ಸಾಂಪ್ರದಾಯಿಕ ಕಲೆಗಳಲ್ಲಿ ಅತ್ಯಲ್ಪವಾಗಿ ದುಡಿಸಿಕೊಂಡ ನಮ್ಮ ಕಲಾವಿದರು ಭಾರತ ಗಣರಾಜ್ಯವಾಗಿ ರೂಪುಗೊಳ್ಳುವುದಕ್ಕಿಂತ ಮುಂಚೆ ಅಕ್ಕ ಪಕ್ಕದ ಪ್ರಾಂತ್ಯದ ಜನರ ಜೀವನ ಶೈಲಿಯನ್ನು ತಮ್ಮ ಕಲಾರಚನೆಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ.

ಯಾವುದೇ ಕಲೆಯಾದರೂ ಅದು ಮಾನವ ನಿರ್ಮಿತವಾದದ್ದು, ಹೀಗಾಗಿ ಯಾವುದೇ ಕಲೆಯನ್ನು "ಮಾನವ ಕಲೆ" ಎಂದು ಕರೆಯುವುದು ಕೂಡ ಔಚಿತ್ಯವಾದುದಲ್ಲ. ಈ ಮಾನವ ನಿರ್ಮಿತ ಕಲೆ ಸಮಾಜವನ್ನು ಹೊರತುಪಡಿಸಿ ರಚಿತವಾದುದಲ್ಲ ಅದು ನಮ್ಮವರ ಬದುಕಿನ ಭಾಗವಾಗಿಯೇ ಪ್ರಭಾವಗೊಂಡಿದೆ. ಹೀಗೆ ಪ್ರಭಾವಗೊಂಡ ಕಲೆ ಕೇವಲ ಸಮಾಜದ ಧ್ವನಿಯಾಗಿರದೆ ಮನುನಿರ್ಮಿತ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಪೌರಾಣಿಕಗಳ ಧ್ವನಿಯಾಗಿಯೂ ಪ್ರತಿನಿಧಿಸುತ್ತದೆ. ನಮ್ಮ ನಡುವಿನ ಪೌರಾಣಿಕ ಕಥಾನಕಗಳು ಮೊದಲು ಹುಟ್ಟಿದ್ದೇ ಅಕ್ಷರ ರೂಪದಲ್ಲಿ ಅದು ವೇದಗಳ ರೂಪಗಳಲ್ಲಿ ಆ ವೇದಗಳಿಗೆ ನಿರೂಪಣಾ ಭಾವದ ದೃಶ್ಯಗಳನ್ನು ನೀಡಿರುವ ಕಲಾವಿದ. ಪ್ರಪಂಚದ ಬಹು ಸಂಖ್ಯೆಯ ಕಲಾವಿದರು ತಮ್ಮ ದೃಶ್ಯಾತ್ಮಕ ಅಭಿವ್ಯಕ್ತಿಗೆ ಪ್ರೇರಣೆ ಪಡೆದುಕೊಂಡಿರುವುದು ಧಾರ್ಮಿಕ ಕಥಾನಕಗಳಿಂದ ಹಾಗೆಯೇ ಕ್ರೈಸ್ತ ಧರ್ಮದ ಹಿನ್ನೆಲೆಯ ಕಥೆಯು ಈ ಅಧ್ಯಯನಕ್ಕೆ ಸ್ಫೂರ್ತಿಯಾಗಿದ್ದು, ಅದರ ಕಲಾಕೃತಿಗಳ ಕುರಿತು ವಿವರಿಸಿದಾಗ, ಅದರಿಂದ ಯಾವುದೇ ಒಂದು ಚಿಂತನಶೀಲ ಬದುಕನ್ನು ನೆನಪಿಸಿಕೊಳ್ಳಲೇಬೇಕು. ಅದೇ ರೀತಿ ಇಂದು ಜನರು ಸೃಷ್ಟಿಸಿಕೊಂಡಿರುವ ಅವರವರ ಧರ್ಮಗಳಿಗನುಸಾರವಾಗಿ ಚಿತ್ರಗಳನ್ನು ರಚಿಸಿ ಪ್ರದರ್ಶಿಸುವ ಮುಖ್ಯ ಉದ್ದೇಶವು ತುಂಬಾ ಪ್ರಭಾವಿಯಾಗಿದೆ.

ತಂತ್ರ

ಕರಾವಳಿ ಕರ್ನಾಟಕದಲ್ಲಿ ಸಿಗುವಂತಹ ಧರ್ಮದ ಚಿತ್ರಕಲೆಯು ಸುಮಾರು ಇನ್ನೂರು ವರ್ಷಗಳ ಹಳೆಯದು. ಈ ಚಿತ್ರಕಲೆಯು ಕರ್ನಾಟಕಕ್ಕೆ ಬಂದದ್ದು, ಕ್ರೈಸ್ತರು ಇಲ್ಲಿಗೆ ಆಗಮಿಸಿದಾಗಲಿಂದ ಚರ್ಚ್‌ಗಳು ಹುಟ್ಟಿಕೊಂಡವು. ತದನಂತರ ಚಿತ್ರಕಲೆಯು

ಪ್ರಾರಂಭವಾಯಿತು. ಇಲ್ಲಿ ಕಲಾವಿದನು ವಿಶಿಷ್ಟವಾದ ತಂತ್ರವನ್ನು ಬಳಸಿರುವುದನ್ನು ಕಲಾಕೃತಿಗಳು ನೋಡಿದಾಗ ಗೊತ್ತಾಗುತ್ತದೆ. ಸೀಮಿತ ಅವಧಿಯಲ್ಲಿಯೇ ತನ್ನ ಚಾಣಾಕ್ಷತನದಿಂದ ಚಿತ್ರಗಳನ್ನು ರಚನೆಮಾಡಿದ್ದಾನೆ. ಗೋಡೆಗಳಿಗೆ ಏಕರೂಪದಲ್ಲಿ ಬಣ್ಣವನ್ನು ಲೇಪಿಸಿ, ತೈಲವರ್ಣದ ಸಹಾಯದಿಂದ ಅನೇಕ ಚಿತ್ರಗಳನ್ನು ಕ್ರೈಸ್ತ ಧಾರ್ಮಿಕಕ್ಕೆ ಸಂಬಂಧಿಸಿದಂತೆ ಚಿತ್ರಿಸಲಾಗಿದೆ. ಇದರಲ್ಲಿ ಬ್ರೆಷ್, ವಿವಿಧ ರೀತಿಯ ಸ್ವರೂಪಡೆದಿದ್ದು, ಗೋಡೆ ಬಳಿಯುವ ಬ್ರೆಷ್‌ಗಳನ್ನು ಭಾವಚಿತ್ರ ರಚನೆಮಾಡಲು ಬಳಸಲಾಗಿದೆ. ತೈಲವರ್ಣವನ್ನು ಇಟಲಿಯಿಂದ ತರಿಸಿಕೊಳ್ಳಲಾಗಿತ್ತು ಎಂಬ ಅಂಶವನ್ನು ಸ್ವತಃ ಚರ್ಚ್‌ನ ಹಿರಿಯರು ತುಂಬು ಪ್ರೀತಿಯಿಂದ ಇತಿಹಾಸವನ್ನು ಜ್ಞಾಪಿಸಿಕೊಳ್ಳುವರು.

ಕರಾವಳಿ ಭಾಗದಲ್ಲಿ ಚಿತ್ರ ರಚಿಸಲು ಪಾಶ್ಚಾತ್ಯರ ಪ್ರಭಾವ ಹೆಚ್ಚೆಂದೇಳಬಹುದು ವ್ಯಾಪಾರಕ್ಕಾಗಿ ಬರುತ್ತಿದ್ದ ವಿದೇಸಿಯರು ಸ್ಥಳಿಯ ಕ್ರೈಸ್ತರಿಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಬೆಂಬಲವಾಗಿ ನಿಂತರು. ಕಲಾಕೃತಿಗಳ ಜೊತೆ ಚರ್ಚ್‌ಗಳನ್ನು ನಿರ್ಮಿಸಿದರು. ಸದ್ಯ ಪರಿಸ್ಥಿತಿಯಲ್ಲಿ ಕರಾವಳಿ ಭಾಗದಲ್ಲಿ ಸುಮಾರು ಮೂರುನೂರು ಚರ್ಚ್‌ಗಳಿವೆ ಎಂಬ ಇತಿಹಾಸ, ಅಷ್ಟರ ಮಟ್ಟಿಗೆ ಕ್ರೈಸ್ತ ಸಮುದಾಯ ಬೆಳೆಯಲ್ಪಟ್ಟಿದೆ. ಇದಕ್ಕೆಲ್ಲಾ ಹೊರದೇಶದವರ ಪ್ರಭಾವ ಎಂದೇ ಊಹಿಸಬಹುದು. ಹಿಂದೂ ರಾಷ್ಟ್ರವಾದ ಭಾರತದಲ್ಲಿ ಮೂರನೇ ಸ್ಥಾನವನ್ನಲಂಕರಿಸಿದುವು ಕ್ರೈಸ್ತರು ಕರ್ನಾಟಕದ ಕರಾವಳಿ ಭಾಗದಲ್ಲಿ ಹೆಚ್ಚುವಾಸವಾಗಿರುವುದು ಕಂಡುಬರುತ್ತದೆ. ಅದರಂತೆ ಕ್ರೈಸ್ತ ಚರ್ಚ್‌ಗಳು ಪಾಶ್ಚಾತ್ಯರ ಬೆಂಬಲವಾಗಿ ಇಲ್ಲಿ ನೆಲೆನಿಂತಿವೆ ಎಂದು ಹೇಳಿದರು ತಪ್ಪಾಗಲಾರದು.

ಶೈಲಿ

ಜಾಗತಿಕ ಮಟ್ಟದಲ್ಲಿ ಅನೇಕ ಬಗೆಯ ಕಲೆಗಳು ಹುಟ್ಟಿದ್ದು, ಪ್ರತಿಕಲೆಗಳು ತಮ್ಮದೇ ಆದ ಒಂದು ಶೈಲಿಯನ್ನು ರೂಢಿಗತ ಮಾಡಿಕೊಂಡಿವೆ. ಭಾರತದಲ್ಲಿಯೇ ಕೆಲವು ಸಾಂಪ್ರದಾಯಿಕ ಕಲೆಗಳಲ್ಲಿ ಶೈಲಿ ಮಹತ್ವದ ತಂತ್ರಗಾರಿಕೆಯಾಗಿಯೂ ಮೇಳೈಸಿದೆ. ಕಾಂಗ್ರಾಬಸೂಲಿ, ತಂಜಾನೂರು, ವಿಜಯನಗರ, ಜೈನ, ಬೌದ್ಧ, ಕ್ರೈಸ್ತ ಹೀಗೆ ಹಲವಾರು ಧರ್ಮಗಳಿಗನುಸಾರವಾಗಿ ಅವರವರ ಚಿತ್ರ ಶೈಲಿಗಳ ಪರಂಪರೆಯನ್ನು ಇತಿಹಾಸದುದ್ದಕ್ಕೂ ಕಾಣಬಹುದಾಗಿದೆ.

ಪ್ರತಿಚಿತ್ರ ಪರಂಪರೆಗಳಲ್ಲಿ ಆಯಾ ಪ್ರಾಂತಿಯ ಪರಿಸರದ ಪ್ರಭಾವ ಅಚ್ಚಳಿಯದೇ ಮೂಡಿರುತ್ತವೆ. ಆದರೆ ವಿಷಯದಲ್ಲಿ ಒಂದು ಬಗೆಯ ಏಕತೆ ಭಾರತೀಯ ಚಿಕಣಿ ಚಿತ್ರ ಪರಂಪರೆಯಲ್ಲಿ ಕಂಡುಬರುತ್ತದೆ. ಭಾರತದ ಅನೇಕ ಸಾಂಪ್ರದಾಯಿಕ ಚಿತ್ರಗಳಲ್ಲಿ ಮಹಾಭಾರತ,

ರಾಮಾಯಣ, ಭಾಗವತದ ಕುರಿತಾದ ಚಿತ್ರಗಳು ಬಹುವಾಗಿ ಕಲಾವಿದರನ್ನು ಕಾಡಿವೆ. ಹಾಗೆಯೇ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದಂತೆ ಭಿತ್ತಿ ಕ್ಯಾನ್‌ವಾಸ್ ಮತ್ತು ಗಾಜಿನ ಮೇಲಿನ ಚಿತ್ರಕಲೆಯನ್ನು ವಿವಿಧ ಶೈಲಿಗಳ ಕೇಂದ್ರಿಕೃತದಂತೆ ಇಲ್ಲಿ ವಿಭಿನ್ನವಾಗಿ ಚಿತ್ರಿಸಲಾಗಿರುವುದು ಕರಾವಳಿ ಭಾಗದ ಕ್ರೈಸ್ತ ಚಿತ್ರಕಲೆಯ ಪ್ರಭಾವ, ಶೈಲಿ, ತಂತ್ರದ ಮುಖ್ಯ ಅಂಶಗಳಾಗಿವೆ.

* * *

ಅಧ್ಯಾಯ : ಏಳು

ಸಮಾರೋಪ

ಕರ್ನಾಟಕವು ಲಲಿತಕಲೆಗಳಲ್ಲಿನ ಮುಖ್ಯ ಕಲೆಗಳಲ್ಲಿ ಸಮೃದ್ಧಿಯನ್ನು ಹೊಂದಿದ್ದು, ಮುಖ್ಯವಾಗಿ ಅವುಗಳನ್ನು ಉಳಿಸಿ-ಬೆಳೆಸಿಕೊಂಡು ತನ್ನದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಂಡಿದೆ. ಅದಲ್ಲದೆ ವಿಶ್ವವ್ಯಾಪಿ ಕಲೆಯ ಬೀಡೆಂದು ಹೆಸರುಗಳಿಸಿ ಅತ್ಯುನ್ನತ ಸ್ಥಾನವನ್ನು ಪಡೆದಿದೆ. ಇಂತಹ ನಾಡಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ವಿಜಯನಗರ, ಮೈಸೂರು, ಚಾಲುಕ್ಯ, ಹೊಯ್ಸಳ, ಸುರಪುರ, ದಖ್ಖನಿ, ಕರಾವಳಿ ಬ್ರೀಟಿಷ್ ಇನ್ನೂ ಇತ್ಯಾದಿ ಆಧುನಿಕ ಕಲಾ ಶೈಲಿಗಳನ್ನು ತನ್ನದೇಯಾದ ಅನೇಕ ಧಾರ್ಮಿಕ ಮತ್ತು ಧಾರ್ಮಿಕೇತರ ಚೌಕಟ್ಟಿನಲ್ಲಿ ಸೃಷ್ಟಿಸಿದ ಶೈಲಿರೂಪದ ಚಿತ್ರ, ಶಿಲ್ಪ ಹಾಗೂ ವಾಸ್ತುಕಲೆಯನ್ನು ಬೆಳೆಸಿದಂತವುಗಳು ನಾಡಿನ ಸಾಂಸ್ಕೃತಿಕ ಆಸ್ತಿಯಾಗಿದೆ. ಅನೇಕ ಅರಸರು, ಮಾಂಡಲೀಕರು, ಧರ್ಮೋದ್ಧಾರಕರು ಶ್ರೀಮಂತ ವರ್ಗದವರು, ಪಾಶ್ಚಿಮಾತ್ಯರು, ಕಲಾದಾರ್ಶನಿಕರು ಹಾಗೂ ಕಲಾವಿದರುಗಳ ಪ್ರೋತ್ಸಾಹದ ಪ್ರತಿಫಲವೇ ಇಂದು ನಾಡಿನಲ್ಲಿ ಶಿಲ್ಪ ಚಿತ್ರ, ವಾಸ್ತುಶಿಲ್ಪ ಭಿತ್ತಿಚಿತ್ರದಂತಹ ಕಲೆಗಳು ಹರಳಿಕೊಂಡು ಅನೇಕ ಧರ್ಮ ಪಂಗಡಗಳಲ್ಲಿ ತಮ್ಮ ಇಚ್ಛಾದೇವರ ಪರವಾಗಿ ಚಿತ್ರ ಕೆಲಸಗಳು ನಡೆದಿದ್ದು,, ಅದರಂತೆಯೇ ಅವರ ಸೃಷ್ಟಿಯ ಹಿನ್ನೆಲೆಯ ಜೊತೆಗೆ ಅಲ್ಲಿ ಕಂಡುಬರುವಂತಹ ಚಿತ್ರಕೃತಿಗಳನ್ನು ಸಂರಕ್ಷಿಸುವ ಕೆಲಸ ವಿದ್ವಾಂಸರಿಗೆ ಇರುತ್ತದೆ. ಅಂತಹ ದೃಷ್ಟಿಯನಿಟ್ಟುಕೊಂಡಿರುವುದರಲ್ಲಿ ಈ ಅಧ್ಯಯನವು ಒಂದು.

ಹಿಂದಿನ ಕರ್ನಾಟಕ ರಾಜ್ಯ ಮೈಸೂರು ಎಂಬ ಹೆಸರನ್ನೊತ್ತಿದ್ದು. ಹಂತ ಹಂತವಾಗಿ ಬದಲಾಗುತ್ತಾ ಸ್ವಾತಂತ್ರ ನಂತರದಲ್ಲಿ ಅದಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ಅದರಂತೆಯೇ ಬ್ರಿಟೀಷ್‌ರ ಕಾಲದಲ್ಲಿ ಗೋವಾ ಪ್ರಾಂತ್ಯಕ್ಕೆ ಸೇರಿ ಕೆನರಾ ಭಾಗ ಎಂದೇ ಬಿಂಬಿತವಾಗಿದ್ದ, ಕರ್ನಾಟಕ ಕರಾವಳಿ ಭಾಗದಲ್ಲಿ ಹೆಚ್ಚು ಕ್ರೈಸ್ತರು ಕಂಡುಬರುತ್ತಿದ್ದಾರೆ. ಕರ್ನಾಟಕದಲ್ಲಿ ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಕರಾವಳಿ ಕರ್ನಾಟಕ ಎಂಬವುಗಳಾಗಿ ವಿಂಗಡಿಸಿ ಪರಿಚಯಿಸಿರುವುದರಿಂದ ಆ ಭಾಗಕ್ಕೆ ಬರುವ ಜಿಲ್ಲೆಗಳು ಎಷ್ಟು ಎಂಬುದನ್ನು ತ್ವರಿತವಾಗಿ ಹೇಳುವುದು ಸುಲಭ ಹಾಗೆಯೇ ಆ

ಭಾಗದಲ್ಲಿ ವಿಶೇಷವಾದ ವೈಶಿಷ್ಟ್ಯಗಳಿರುತ್ತವೆ. ಅದರೊಳಗೊಂದು ಕರ್ನಾಟಕದ ಕರಾವಳಿ ಕಡಲ ತೀರದ ಕಡಲ ಮಣಿಗಳು ಇಲ್ಲಿ ಹೆಚ್ಚು, ಯಾವಾಗಲೂ ತಂಪಿನಾಮೃತವಾಗಿರುವ ಈ ಭೂಮಿಯಲ್ಲಿ ಹತ್ತಿ, ತೆಂಗು, ರಾಗಿ, ಜೋಳ, ಕಬ್ಬು ತರಕಾರಿ, ಬೇಳೆ-ಕಾಳುಗಳ ಜೊತೆ ತೆಂಗನ್ನು ಉತ್ತಮವಾಗಿ ಬೆಳೆಯುವರು.

ಕರಾವಳಿ ಭಾಗಕ್ಕೆ ಕ್ರಿ.ಪೂ.ದ ಇತಿಹಾಸವಿದ್ದು ಹಂತ ಹಂತವಾಗಿ ಬೆಳೆಯುತ್ತಾ ಬಂದಿದೆ. ಮುಖ್ಯವಾಗಿ ಕರಾವಳಿ ಕರ್ನಾಟಕದಲ್ಲಿ ಅನೇಕ ಕಲೆಗಳು ಮೈಚಾಚಿಕೊಂಡಿದ್ದು ಅದರಲ್ಲಿ ಮುಖ್ಯವಾಗಿ ಹಚ್ಚೆ, ಹಸೆ, ಕಾವಿಚಿತ್ರ ಶಿಲ್ಪ, ಸಂಗೀತ, ಚಿತ್ರಕಲೆಗಳ ಜೊತೆ ಯಕ್ಷಗಾನ ತುಂಬ ಪ್ರಿಯವಾದದ್ದಾಗಿದ್ದು, ಈ ಅಧ್ಯಯನದ ದೃಷ್ಟಿಯಿಂದ ಚಿತ್ರಕಲೆಗೆ ಹೆಚ್ಚು ಪ್ರಾಶಸ್ತ್ಯ ಕೊಡುವ ಉದ್ದೇಶವಾಗಿರುವುದರಿಂದ ಕ್ರಿ.ಶ. ೧೬ನೇ ಶತಮಾನದಲ್ಲಿಯೇ ಕ್ರೈಸ್ತರ ಆಗಮನ ವಾಸ್ತು ಕಲೆಗೆ ಹೆಚ್ಚು ಒತ್ತನ್ನು ಕೊಟ್ಟಿರುತ್ತಾರೆ. ನಂತರ ಹಂತ ಹಂತವಾಗಿ ಚಿತ್ರ ಶಿಲ್ಪ, ಮತ್ತು ಭಿತ್ತಿಗಳಲ್ಲಿ ಉತ್ತಮ ಯೋಜನೆಗಳನ್ನು ನಿರೂಪಿಸಿ ಬೆಳಕಿನೆಡೆಗೆ ತಂದಿರುವುದು ಈ ಅಧ್ಯಯನ ಸಂಶೋಧನೆಯಿಂದ ಗೊತ್ತಾಗುತ್ತದೆ. ಹಾಗೆಂಯೇ ಚಿತ್ರಕಲೆ ಮುಖ್ಯವಾಗಿರುವುದರಿಂದ ಕರಾವಳಿ ಭಾಗದಲ್ಲಿ ಸಿಗುವಂತಹ ವಿಶೇಷ ಚರ್ಚ್‌ಗಳಲ್ಲಿ ಚಿತ್ರ ಮತ್ತು ಭಿತ್ತಿ ಚಿತ್ರಗಳ ಪರಂಪರೆಯನ್ನು ಕಾಣುವುದು. ಆಂಟೋನಿ ವೋಶ್ಚಿನಿ ಕಲಾವಿದನೊಬ್ಬನಿಂದಲೇ ಸ್ಥಳೀಯ ಕಲಾವಿದರ ಜೊತೆಗೂಡಿ ಅನೇಕ ಭಿತ್ತಿ ಚಿತ್ರ ಹಾಗೂ ಸೃಜನಶೀಲ ಚಿತ್ರಗಳು ಇಲ್ಲಿರುವುದನ್ನು ಕಾಣಬಹುದಾಗಿದೆ.

ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆಯ ಹಲವು ಮುಖಗಳು ಕ್ರೈಸ್ತರ ಧಾರ್ಮಿಕ ಪ್ರಭಾವ ಹಾಗೂ ಸ್ಥಳೀಯ ವೈಶಿಷ್ಟತೆಗಳನ್ನು ಒಳಗೊಂಡಂತೆ ರೂಪುಗೊಂಡಿರುವ ಈ ಸಂಪ್ರಬಂಧವು ಒಟ್ಟು ಏಳು ಅಧ್ಯಾಯಗಳಲ್ಲಿ ವಿಸ್ತರಿಸಿಕೊಂಡು ವಿಶ್ಲೇಷಿಸಲಾಗಿದೆ.

ಮೊದಲನೆ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಗಳನ್ನೊಳ ಗೊಂಡಿದೆ. ವಿಶೇಷವಾಗಿ ಕರಾವಳಿ ಕರ್ನಾಟಕದಲ್ಲಿರುವ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳ ರೂಪು ರೇಷೆಗಳನ್ನು ಹುಡುಕುವಂತಹ ಕೆಲಸ ಇದಾಗಿದ್ದು, ಪ್ರಸ್ತುತ ಅಲ್ಲಿನ ಚರ್ಚ್‌ಗಳು, ಹಾಗೂ ಚಿತ್ರಗಳ ಕುರಿತು ವೈವಿದ್ಯತೆಗಳಿಂದ ಕೂಡಿದ ಉದ್ದೇಶಗಳನ್ನು ಇಟ್ಟುಕೊಂಡು ಪ್ರಸ್ತುತ ಅಧ್ಯಯನದ ಸ್ವರೂಪವನ್ನು ತಿಳಿಸಲಾಗಿದ್ದು, ಕರ್ನಾಟಕದ ಕರಾವಳಿಯಲ್ಲಿರುವ ಚರ್ಚ್‌ಗಳು ಹಾಗೂ ಚಿತ್ರ ಕೃತಿಗಳ ನೆಲೆಗಳನ್ನು ವ್ಯಾಪ್ತಿಗೊಳಪಡಿಸಿರುವುದು ಹಾಗೂ ಮುಖ್ಯ ಆಕರ ಸಾಮಗ್ರಿ ಮತ್ತು ಆನುಷಂಗಿಕ ಆಕರ ಸಾಮಗ್ರಿಗಳಲ್ಲಿ ಬಳಸಿಕೊಂಡಿರುವ ಮಾಹಿತಿಯು ಈ ಅಧ್ಯಯನಕ್ಕೆ ಅತ್ಯಮೂಲ್ಯವಾದದ್ದು ಇಂತಹ ಮಾಹಿತಿಯನ್ನು ಈ ಅಧ್ಯಯನಕ್ಕೆ ಅಳವಡಿಸಿಕೊಂಡು ವಿವರಗಳನ್ನು ಪ್ರಸ್ತಾಪ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕರಾವಳಿ ಕರ್ನಾಟಕದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಕಟ್ಟಿಕೊಡಲಾಗಿದ್ದು ಮುಖ್ಯವಾಗಿ ಕ್ರೈಸ್ತರ ಆಗಮನ, ಅವರಿಗಾದ ನಷ್ಟ, ಅವರ ಧರ್ಮ ಬೆಳೆಯುವ ಮುಖ್ಯ ಅಂಶಗಳನ್ನೊಳಗೊಂಡಿರುವುದು. ಸಾಂಸ್ಕೃತಿಕ ಪರಿಸರ, ವಿವಿಧ ಧರ್ಮಗಳ ಪರಿಚಯ. ಜೊತೆಗೆ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದಂತೆ ಕ್ರೈಸ್ತ ದೇವಾಲಯಗಳ ಪರಿಚಯಿಸುವುದು. ರಾಜಕೀಯ ಅರಾಜಕತೆಯಿಂದಾದ ಕಲೆ ಪ್ರಾದೇಶಿಕ ವಿಸ್ತಾರವನ್ನು ವಿದೇಶಿಯ ಹಾಗೂ ದೇಶಿಯ ಪ್ರಾಂತ್ಯಗಳ ವಿವರಗಳು, ನಂತರ ವಲಸೆಗೆ ಕಾರಣವಾದ ಮೂಲಾಂಶಗಳಂತಹ ಇತ್ಯಾದಿ ವಿವರಗಳನ್ನು ಚಿತ್ರಕಲೆಯ ಪ್ರಸ್ತಾಪವನ್ನು ಆಧರಿಸಿ ಕ್ರೈಸ್ತ ಧರ್ಮದ ಚಿತ್ರ ಕಲೆಯ ಇತಿಹಾಸವನ್ನು ಸಾಹಿತ್ಯದ ಮೂಲಕ ತಿಳಿಸಿಕೊಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕರಾವಳಿ ಕರ್ನಾಟಕದಲ್ಲಿರುವ ಕ್ರೈಸ್ತ ದೇವಾಲಯಗಳಲ್ಲಿ ಸಿಗುವ ಭಿತ್ತಿ ಚಿತ್ರಗಳ ಕುರಿತು. ಹೇಳುವುದ್ದಾಗಿರುವುದರಿಂದ ಮುಖ್ಯ ಭಾಗವಾಗಿ ಭಿತ್ತಿಯ ಪರಂಪರೆ, ಭಿತ್ತಿ ಮಾಧ್ಯಮದ ವಸ್ತು ಸ್ಥಿತಿ ಹಾಗೂ ಇಲ್ಲಿ ಕಂಡುಬರುವಂತಹ ಭಿತ್ತಿ ಚಿತ್ರಗಳ ಕುರಿತು ವಿಶೇಷವಾಗಿ ಚಿತ್ರಪಟಗಳನ್ನು ತೋರಿಸುವ ಮುಖೇನ ಅವುಗಳನ್ನು ವಿವರಿಸಲಾಗಿದೆ. ಹಾಗೆಯೇ ಭಿತ್ತಿಮಾಧ್ಯಮದಲ್ಲಿ ರಚಿಸಲಾದ ಒಟ್ಟು ಕಲಾಕೃತಿಗಳು ಕರಾವಳಿಯಲ್ಲಿ ಎಲ್ಲೆಲ್ಲಿ ನೆಲೆಗೊಂಡಿವೆ ಎಂಬುದನ್ನು ಅರಿತು ವಿಶ್ಲೇಷಿಸಿರುವುದು ಪ್ರಮುಖ.

ನಾಲ್ಕನೆಯ ಅಧ್ಯಾಯದಲ್ಲಿ ಕ್ರೈಸ್ತ ಧರ್ಮದ ಗಾಜಿನ ಮೇಲಿನ ಚಿತ್ರಕಲೆ ಕುರಿತಾಗಿದ್ದು, ಗಾಜಿನ ಮೇಲೆ ಚಿತ್ರವನ್ನು ರಚನೆ ಮಾಡಿದ ಪರಿ ಹೇಗೆ ಎಂಬ ಅಂಶವನ್ನು ಗಟ್ಟಿಯಾಗಿ ಹೇಳಲಾಗಿದ್ದು, ಇದರ ಇತಿಹಾಸವನ್ನು ಪರಿಚಯಿಸಲಾಗಿದೆ. ಮುಖ್ಯವಾಗಿ ಕರಾವಳಿ ಭಾಗದಲ್ಲಿರುವ ಕ್ರೈಸ್ತ ಮಿಷನರಿಗಳು ಹಾಗೂ ಅಲ್ಲಿ ಕಂಡುಬರುವಂತಹ ಗಾಜಿನ ಮೇಲಿನ ಚಿತ್ರಗಳ ಕುರಿತು ವಿವರಿಸಲಾಗಿರುವ ಈ ಅಧ್ಯಯನದಲ್ಲಿ ವಿವಿಧ ಸಂಶೋಧನಾ ಗ್ರಂಥಗಳಲ್ಲಿ ಕಂಡುಬರುವಂತಹ ಈ ವಿಷಯಕ್ಕೆ ಹತ್ತಿರವಿರುವಂತಹದ್ದನ್ನು ಆಯ್ಕೆ ಮಾಡಿಕೊಂಡು ಸೇರಿಸಲಾಗಿದೆ. ಹಾಗೆಯೇ ಒಟ್ಟಾರೆಯಾಗಿ ಕ್ರೈಸ್ತದೇವಾಲಯದಲ್ಲಿ ಯೇಸುಸ್ವಾಮಿ, ಕಿಟಕಿ ಮೇಲೆ ರಚಿಸಿರುವ ಚಿತ್ರಕಲಾ ಕೃತಿ, ಬಾಗಿಲ ಮೇಲಿರುವ ಚಿತ್ರ, ಗೋಡೆ ಅಲಂಕಾರವಾಗಿ ಹಾಕಲಾಗಿರುವ ಚಿತ್ರ ಹೀಗೆ ವಿವಿಧ ರೀತಿಯಲ್ಲಿ ರಚಿಸಲಾದ ಗಾಜಿನ ಚಿತ್ರಗಳನ್ನು ಅಧ್ಯಾಯನದಲ್ಲಿ ಕಾಣಬಹುದಾಗಿದೆ.

ಐದನೆಯ ಅಧ್ಯಾಯವು ಬಟ್ಟೆಯ ಮೇಲೆ ರಚಿಸಲಾದ ತೈಲವರ್ಣದ ಕಲಾಕೃತಿಗಳು ಎಂಬುದಾಗಿದ್ದು, ಅಧ್ಯಾಯವೇ ಸೂಚಿಸುವಂತೆ ಬಟ್ಟೆ ಮಾಧ್ಯಮದ ಜೊತೆ ತೈಲಮಾಧ್ಯಮ ಜೊತೆಗೂಡಿದರೆ ಆಗುವಂತಹ ವಿಭಿನ್ನ ಶೈಲಿಯ ಚಿತ್ರಗಳನ್ನು ಈ ಅಧ್ಯಾಯದಲ್ಲಿ ಕಾಣಬಹುದು. ಪ್ರಮುಖವಾಗಿ ಬಟ್ಟೆ ಮೇಲೆ ರಚಿಸಿರುವ ಒಟ್ಟು ಕಲಾಕೃತಿಗಳ ಪಟ್ಟಿಗಳನ್ನು ಇಲ್ಲಿ ತೋರಿಸುವುದರ

ಜೊತೆಗೆ ಅವುಗಳ ವಿಸ್ತರಣೆ ಮಾಡಲಾಗಿದೆ. ಹಾಗೆಯೇ ಕಲಾವಿದನ ಚಾಣಾಕ್ಷತನದ ಬದುಕು, ಬವಣೆ ಅವರ ಉತ್ತಮ ಕಾರ್ಯಗಳಲ್ಲೊಂದಾದ ವಿಭಿನ್ನ ಕಲೆಯೇ ಈ ಬಟ್ಟೆ ಮಾಧ್ಯಮದ ಚಿತ್ರಕಲೆಯಾಗಿದೆ. ಹಾಗೂ ವಿವರವಾದ ಮಾಹಿತಿಯನ್ನು ಇಲ್ಲಿ ಕೊಡಲಾಗಿದೆ.

ಆರನೇಯ ಅಧ್ಯಾಯದಲ್ಲಿ ಕಲಾಕೃತಿಗಳ ಸಂಯೋಜನೆಯಲ್ಲಿ ಕೈಗೊಂಡಿರುವ ವಿವಿಧ ಅಂಶಗಳನ್ನು ಹೇಳುವುದರ ಜೊತೆ ಕಲಾವಿದರ ಪರಿಚಯವು ಆಗಿದೆ. ಕ್ರೈಸ್ತ ಚಿತ್ರಕಲೆ ಹಾಗೂ ಇತಿಹಾಸವನ್ನು ಪರಿಗಣಿಸಿ ಚಿತ್ರಗಳ ಸಂರಕ್ಷಣೆಯ ಪರಿಯನ್ನು ಸ್ಥೂಲವಾಗಿ ಪರಿಚಯಿಸದಿದ್ದರೂ ಸ್ವರೂಪದ ರೀತಿ ಅಧ್ಯಯನ ಕೈಗೊಂಡಿರುವುದು ಮುಖ್ಯ ಅಂಶ. ಹೊರದೇಶದಿಂದ ಬಂದ ಆಂಟೋನಿ ಮೋಶ್ಚಿನಿ ಒಬ್ಬನೇ ಸುಮಾರು ಎರಡು ವರ್ಷಗಳ ಕಾಲ ತಮ್ಮ ನಿತ್ಯ ಪರಿಶ್ರಮದ ಫಲವೇ ಇಲ್ಲಿ ನೆಲೆಕಂಡಿರುವ ಕಲಾಕೃತಿಗಳು ಎಂಬ ಅಂಶವನ್ನು ಬಲವಾಗಿ ಒಪ್ಪಿಕೊಂಡಿರುವುದು. ಕ್ರೈಸ್ತ ಚಿತ್ರಗಳು ಪ್ರಸ್ತುತ ದಿನಗಳಲ್ಲಿ ಹೇಗೆ ಸಂರಕ್ಷಿಸಲಾಗಿದೆ ಎನ್ನುವುದೇ ಈ ಅಧ್ಯಾಯದ ಮುಖ್ಯ ಅಂಶವಾಗಿದ್ದು, ಇಂತಹ ಪ್ರಮುಖ ಅಂಶಗಳನ್ನು ಇಲ್ಲಿ ಕಾಣಬಹುದಾಗಿದೆ.

ಈ ಮೇಲೆ ಹೇಳಿದ ಪ್ರತಿಯೊಂದು ಅಧ್ಯಾಯಗಳಲ್ಲಿ ಚರ್ಚಿಸಿದ ಅನೇಕ ವಿಷಯಗಳನ್ನು ಈ ಕೊನೆಯ ಅಧ್ಯಾಯವಾದ ಸಮಾರೋಪದಲ್ಲಿ ಸಮೀಕ್ಷಿಸಲಾಗಿದೆ. ಅಲ್ಲದೇ ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಉತ್ತಮವಾದ ಫಲಿತಾಂಶಗಳನ್ನು ಸಹ ಇಲ್ಲಿ ಸಮೀಕ್ಷಿಸಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಕಂಡುಬರುವ ಫಲಿತಗಳು

1 ಕರ್ನಾಟಕದ ಇತಿಹಾಸವನ್ನು ಓದಿದ್ದೇವೆ, ಕೇಳಿದ್ದೇವೆ ಅದರಲ್ಲಿ ಅಲ್ಪಸ್ವಲ್ಪ ಮಾಹಿತಿ ಲಭ್ಯವಾಗಿತ್ತು ಆದರೆ ಪ್ರಸ್ತುತ ಈ ಪದವಿಯ ಮುಖ್ಯ ಅಂಶವಾಗಿರುವ ಸಂಪ್ರಬಂಧದ ಸಂಶೋಧನಾ ಪ್ರಭಾವದಿಂದ ತೆಗೆದುಕೊಂಡಿರುವ ವಿಷಯದ ಸಾಂಸ್ಕೃತಿಕ ಹಿನ್ನೆಲೆ, ಪರಿಸರವು ತಾನಾಗಿಯೇ ಪರಿಚಯಗೊಳ್ಳುತ್ತಾ ಹೋಗುತ್ತದೆ. ಅದೇ ರೀತಿ ಅಧ್ಯಯನದ ವಿಷಯವು ಕರಾವಳಿ ಕರ್ನಾಟಕದ ಕ್ರೈಸ್ತ ಚಿತ್ರಕಲೆಯಾದ್ದರಿಂದ ಇತಿಹಾಸದ ಪರಿಚಯ ಮಾಡಿಕೊಡಲಾಗಿದೆ.

2 ಮನುಷ್ಯನು ಮೂಲ ಪರಿಸರದ ಪ್ರಭಾವ, ಜೀವನ ಶೈಲಿ, ಧರ್ಮಗಳ ಜೊತೆ ಚಿತ್ರ, ಶಿಲ್ಪ ಮತ್ತು ವಾಸ್ತು ಇತ್ಯಾದಿ ಕಲೆಗಳು ಎಷ್ಟರ ಮಟ್ಟಿಗೆ ನಿರಂತರವಾಗಿ ಉಳಿದುಕೊಂಡು ಬಂದಿರುತ್ತವೆ ಎಂಬುದನ್ನು ಕ್ರೈಸ್ತರ ನೆಲೆಯಾದ ಕರಾವಳಿ ಭಾಗದ ಚರ್ಚ್ ಹಾಗೂ ಚಿತ್ರಗಳ ಕುರಿತು ಅಭ್ಯಸಿಸುವುದಕ್ಕೆ ಅನುಕೂಲಮಾಡಲಾಗಿದೆ.

* ಕ್ರೈಸ್ತರ ದೇವಾಲಯಗಳ ಇತಿಹಾಸ ಹಾಗೂ ಬ್ರೀಟಿಷರು ಸ್ಥಳೀಯರ ಮೇಲೆ ತೋರಿದ ಆಸಕ್ತಿಯು ಜೊತೆ ಚರ್ಚ್ ಹಾಗೂ ಬಿಷಪ್‌ಗಳ ಬೆಳವಣಿಗೆಯು ಕುರಿತು ತಿಳಿದುಕೊಳ್ಳಲಾಯಿತು.
* ಧರ್ಮ ಎಂದಾಗ ಭಾರತದಲ್ಲಿ ಅನೇಕ, ಅದರಲ್ಲಿ ಪ್ರಮುಖವಾದದ್ದು ಕ್ರೈಸ್ತ ಧರ್ಮ ಈ ಧರ್ಮ ಆಚರಣೆಗಳು, ಯೇಸುಸ್ವಾಮಿಯ ಪವಾಡಗಳು ಮತ್ತು ಕ್ರೈಸ್ತರ ಸಾಂಸ್ಕೃತಿಕ ಜೀವನ ಕುರಿತು ಚರ್ಚಿಸಿ ತಿಳಿದುಕೊಂಡಿದ್ದು.
* ಹಿಂದೂ, ಮುಸ್ಲಿಂ, ಬೌದ್ಧ, ಜೈನ, ವೈಷ್ಣವ ಹೀಗೆ ಮುಂತಾದ ಅನೇಕ ಧರ್ಮಗಳ ಸಾಲಿನಲ್ಲಿರುವ ಕ್ರೈಸ್ತ ಚಿತ್ರಕಲೆಯು ವಿಶಿಷ್ಟ, ಅದರಲ್ಲಿ ಭಿತ್ತಿ ಮತ್ತು ಚಿತ್ರ ಎಂಬ ಎರಡು ಶೈಲಿಗಳಲ್ಲಿ ೧೮ನೇ ಶತಮಾನದಿಂದ ರಚಿಸುತ್ತಾ ಬಂದಿರುವುದನ್ನು ಕಂಡುಕೊಳ್ಳಲಾಯಿತು.
* ಕರಾವಳಿ ಕರ್ನಾಟಕದ ಕ್ರೈಸ್ತರ ದೇವಾಲಯಗಳಲ್ಲಿ ಯೇಸುವನ್ನು ಆರಾಧಿಸುತ್ತಿರುವುದು 'ಯೇಸು'ವನ್ನು ಕುರಿತ ವಿವಿಧ ಆಲೋಚನೆಗಳ ಜೊತೆ ವಿಮರ್ಶಿಸಿ ಅವನ ಪವಾಡದ ದೃಶ್ಯ ಹಿಂಸೆಪಡೆಯುತ್ತಿರುವ ದೃಶ್ಯ, ಅನೇಕ ಕುಶಲೋಪರಿಯ ದೃಶ್ಯ, ಮಕ್ಕಳು ದೇವರಂತೆ ಬಿಂಬಿಸುತ್ತಿರುವ ದೃಶ್ಯ. ಹೀಗೆ ವಿವಿಧ ಸನ್ನಿವೇಶಗಳ ಆಗರವೇ ಈ ಭಾಗದ ಕೆಲ ಹಿರಿಯ ಚರ್ಚ್‌ಗಳಲ್ಲಿ ಕಂಡಿರುವುದು.
* ಸ್ವಾತಂತ್ರ್ಯ ನಂತರ ಹಾಗೂ ಸ್ವಾತಂತ್ರ್ಯ ಪೂರ್ವದಲ್ಲಿ ನಡೆದಿರುವ ಇತಿಹಾಸವನ್ನು ಪರಿಚಯಿಸಿಕೊಂಡಂತಾಗಿ, ಕರಾವಳಿ ಭಾಗದಲ್ಲಿ ನಡೆಸಿದ ಬ್ರಿಟಿಷ್‌ರ ಹಾರಾಟ ಹಾಗೂ ಹೋರಾಟವನ್ನು ವಿಶೇಷವಾಗಿ ಸ್ಮರಿಸಲೇಬೇಕು. ಅದು ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಕ್ರೈಸ್ತರ ಚರ್ಚ್‌ಗಳ ಮೇಲೆ ಮಾಡಿದ ದಾಳಿಯಿಂದಾಗಿ ಅನೇಕರು ಬಂದಿತರಾದರು, ಹಿಂಸೆ ಕೊಟ್ಟರು, ಬಿಡದ ಧರ್ಮದ ಪ್ರಭಾವ ಮತ್ತೆ ಉತ್ತೇಜನ ಬಂದಂತೆ ಒಡೆದೋಗಿರುವ ಸ್ಥಳದಲ್ಲಿಯೇ ಮರು ದೇವಾಲಯ ನಿರ್ಮಾಣಮಾಡಿದ್ದು, ವಿಶೇಷವಾಗಿದೆ.
* ೧೮ನೇ ಶತಮಾನದ ಕೊನೆಯಲ್ಲಿ ರಚಿಸಿರುವ ಇಲ್ಲಿನ ಚಿತ್ರ ಹಾಗೂ ಭಿತ್ತಿ ಚಿತ್ರಗಳು ತುಂಬಾ ಸುಂದರವಾಗಿವೆ. ಪಾಶ್ಚಾತ್ಯ ಕಲಾವಿದರೊಬ್ಬರಿಂದಲೇ ಕೆಲಸವಾಗಿರುವುದರಿಂದ ಅವರನ್ನು ಮೆಚ್ಚಲೇಬೇಕು. ಕಲಾವಿದ ಕ್ಯಾನ್‌ವಾಸ್‌ನ ಮೇಲೆ ಎಷ್ಟು ಚಿತ್ರವನ್ನಾದರೂ ರಚಿಸಬಹುದು. ಆದರೆ ಗೋಡೆಯ ಮೇಲೆ ಒಂದಿಂಚು ಖಾಲಿಜಾಗ ಬಿಡದೆ ಸೊಂದಿ-ಗೊಂದಿಲಗಳಲ್ಲಿ ಚಿತ್ರ ರಚನೆ ಮಾಡಿರುವುದನ್ನು ಕಂಡಿರುವುದು. ಅದನ್ನು ಈ ಸಂಶೋಧನೆಯಲ್ಲಿ ಶೋಧಿಸಿದಾಗ ಕಂಡದ್ದು ವಿಶೇಷ ಅನುಭವ.

* ವಿಶೇಷವಾಗಿ ಎಲ್ಲಾ ಚಿತ್ರಗಳಲ್ಲಿ ಹೆಚ್ಚು ಅಲಂಕಾರಿಕ ವಿನ್ಯಾಸಗಳಂತಹ ಆಕಾರವನ್ನು ರೂಪಿಸಿದ್ದು, ಇಂತಹ ಚಿತ್ರಕಲೆಯನ್ನು ನಮ್ಮ ನಾಡಿನಲ್ಲಿ ಉಳಿಸಿಕೊಳ್ಳುವ ಪ್ರಯತ್ನವು ಕಲಾ ಸಾಹಿತಿಗಳ ಹಾಗೂ ಸಂಶೋಧಕರ ಕೆಲಸವಾಗಿದ್ದು, ಇಂತಹ ಅನ್ಯ ಶೈಲಿಗಳಂತಹ ವಿಷಯಗಳ ಬಗ್ಗೆ ಆಳವಾದ ಸಂಶೋಧನೆ ಕೈಗೊಂಡು ಚಿತ್ರಕಲಾ ಕ್ಷೇತ್ರಕ್ಕೆ ಕಲಾ ಸಾಹಿತ್ಯ ರೂಪದಲ್ಲಿ ರಚಿಸಿ ಮುಂದಿನ ತಲೆಮಾರಿಗೆ ದಾಖಲಾತಿಯಾಗಿ ಸಂರಕ್ಷಿಸುವ ಕೆಲಸ ಮುಖ್ಯವಾಗಿದೆ.

ಇದುವರೆಗೆ ಈ ವಿಷಯದ ಕುರಿತು ಗಂಭೀರವಾಗಿ ಅಧ್ಯಯನಗಳು ನಡೆದಿಲ್ಲವಾದ್ದರಿಂದ ಈ ಕಲಾ ಸಮಾಜದ ವ್ಯವಸ್ಥೆಯಡಿ ಒಳಪಡುವ ಸದಸ್ಯರಾದ ನಾವು ಇಲ್ಲಿ ಪ್ರಥಮ ಪ್ರಯತ್ನಮಾಡಲಾಗಿದೆ. ಶೈಕ್ಷಣಿಕ ಸಂದರ್ಭದಲ್ಲಿ ಈ ಪಾರಂಪರಿಕ ಕಲೆಯನ್ನು ಶಿಕ್ಷಣದ ಒಂದು ಭಾಗವಾಗಿ ಪಠ್ಯಕ್ರಮದೊಳಗೆ ಅಭ್ಯಸಿಸುವಂತಾದರೆ ಈ ಕಲೆಯ ಉಳಿವು ಸಾಧ್ಯ. ಅದರಂತೆ ಕಲೆಯನ್ನು ಹೊರಗಿಡುವ ಉದ್ದೇಶವು ಇಲ್ಲಿ ಮುಖ್ಯ. ಹಾಗೆಯೇ ಕರ್ನಾಟಕದ ಕರಾವಳಿ ಭಾಗದ ಕ್ರೈಸ್ತ ದೇವಾಲಯಗಳು ಹಾಗೂ ಚಿತ್ರಕಲೆ ಕುರಿತು ಅಧ್ಯಯನವನ್ನು ಗಂಭೀರವಾಗಿ ಚಿಂತಿಸಿ, ಉಳಿಸಿ-ಬೆಳೆಸುವ ಆಶಯದೊಂದಿಗೆ ಈ ಅಧ್ಯಯನವನ್ನು ಸಮಾರೋಪಗೊಳಿಸಲಾಗಿದೆ.

* * *

ಅನುಬಂಧಗಳು

ಸಂಕ್ಷೇಪಗಳು

೧.	ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨.	ಕ.ವಿ.ವಿ.ಹಂ	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
೩.	ಕ.ಲ.ಅ.ಬೆಂ	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೪.	ಕ.ಸಾ.ಪ.ಬೆಂ	:	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೫.	ಕಾ.ಶಿ	:	ಕಾಶ್ಯಪ ಶಿಲ್ಪಶಾಸ್ತ್ರ
೬.	ಕ್ರಿ.ಶ.	:	ಕ್ರಿಸ್ತ ಶಕ
೭.	ಮೈ.ವಿ.ವಿ.	:	ಮೈಸೂರು ವಿಶ್ವವಿದ್ಯಾಲಯ
೮.	ಗು.ವಿ.ವಿ.	:	ಗುಲಬರ್ಗಾ ವಿಶ್ವವಿದ್ಯಾಲಯ
೯.	ಚಿ.ಪ.ಬೆಂ	:	ಚಿತ್ರಕಲಾ ಪರಿಷತ್ತು, ಬೆಂಗಳೂರು
೧೦.	ಪ್ರ.ಮೈ.ವಿ.ವಿ.	:	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
೧೧.	ವಿ.ಧ.ಪುರಾಣ	:	ವಿಷ್ಣು ಧರ್ಮೋತ್ತರ ಪುರಾಣ.
೧೨.	ಶಿ.ರ.	:	ಶಿಲ್ಪರತ್ನ
೧೩.	ಪು	:	ಪುಟ
೧೪.	ಕ.ಕ	:	ಕರಾವಳಿ ಕರ್ನಾಟಕ
೧೫.	ಉ.ಕ	:	ಉತ್ತಕ ಕರ್ನಾಟಕ
೧೬.	ದ.ಕ	:	ದಕ್ಷಿಣ ಕನ್ನಡ
೧೭.	ಪ್ರ.ಕ.ವಿ.ವಿ	:	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

* * *

ಗ್ರಂಥಋಣ

೧. ಕರ್ನಾಟಕದ ಜನಪದ ಚಿತ್ರಕಲೆ - ಡಾ. ಎಸ್.ಸಿ. ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ
ಗದಗ-೧೯೯೩

೨. ಕರ್ನಾಟಕದ ಭಿತ್ತಿ ಪರಂಪರೆ - ಡಾ. ಅ.ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು-೧೯೯೮

೩. ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ - ಎಚ್.ಎನ್. ಚಿತ್ರಗಾರ
ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೫

೪. ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ - ಯಾದಪ್ಪ ಪರದೇಶಿ
ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೧

೫. ಕರ್ನಾಟಕದ ಭಿತ್ತಿ ಚಿತ್ರಗಳು - ಬಿ.ವಿ.ಕೆ. ಶಾಸ್ತ್ರಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು-೧೯೮೩

೬. ಕರ್ನಾಟಕದಲ್ಲಿ ಚಿತ್ರಕಲೆ - ಡಾ. ಕೆ. ಶಿವರಾಮ ಕಾರಂತ
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ
ಮೈಸೂರು-೧೯೭೮

೭. ಕರ್ನಾಟಕದ ನಾಥಪಂಥ - ಡಾ. ರಹಮತ್ ತರೀಕೆರೆ
ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೪

೮. ಕರ್ನಾಟಕ ಚಿತ್ರಕಲೆಯಲ್ಲಿ ಬಣ್ಣದ ಬಳಕೆ - ಕೆ.ವಿ. ಕಾಳೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ-೨೦೦೦

೯. ಕರ್ನಾಟಕ ಸಂಸ್ಕೃತಿ ಸಮೀಕ್ಷೆ - ಡಾ. ಎಚ್. ತಿಪ್ಪೇರುದ್ರಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು-೧೯೮೩

೧೦ ನಿಜದ ನೆಲೆ - (ಸಂ.) ಡಾ. ಎಸ್.ಸಿ. ಪಾಟೀಲ
ಡಾ. ಬಿ.ಕೆ. ಹಿರೇಮಠ ಅಭಿನಂದನ ಗ್ರಂಥ ಸತ್ಯಾನಂದ ಪಾತ್ರೋಟ
ಬಸವೇಶ್ವರ ವಿದ್ಯಾವರ್ಧಕ ಸಂಘ
ಬಾಗಲಕೋಟೆ - ೨೦೦೩

೧೧. ಪ್ರಾಚೀನ ಭಾರತದ ಭಿತ್ತಿ ಚಿತ್ರಗಳು - ಪಿ.ಆರ್. ತಿಪ್ಪೇಸ್ವಾಮಿ
ಚಿತ್ರಾಕ್ಷಿ ಸ್ಕೂಲ್ ಆಫ್ ಆರ್ಟ್
ಧಾರವಾಡ - ೧೯೯೫

೧೨. ಬೆಳೆದು ಬಂದ ಭಾರತದ ಚಿತ್ರಕಲೆ - ಪಿ.ಆರ್. ತಿಪ್ಪೇಸ್ವಾಮಿ
ಕಲಾ ಕ್ಷೇತ್ರ, ಮೈಸೂರು - ೧೯೬೨

೧೩. ಭಾರತ ದರ್ಶನ - ಜವಾಹರ್‌ಲಾಲ್ ನೆಹರು,
ಕಾವ್ಯಾಲಯ, ಪ್ರಕಾಶಕರು - ಅನು.(ಸಂ)ವಾ.ಕೃಷ್ಣಮೂರ್ತಿ ರಾವ್,
ಮೈಸೂರು - ೧೯೭೩

೧೪. ಭಾರತೀಯ ಚಿತ್ರಕಲೆ - ಬಿ.ಪಿ. ಬಾಯಿರಿ
ಸಮಾನ ಪುಸ್ತಕಾಲಯ
ಧಾರವಾಡ - ೧೯೮೦

೧೫. ಉತ್ತರ ಕರ್ನಾಟಕದ ಜನಪದ ಕಲೆ - ಎ.ವಿ. ಪಾಟೀಲ
ಮತ್ತು ವಿಧಿಕ್ರಿಯೆ
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೧೯೮೦

೧೬. ಕರ್ನಾಟಕ ಚರಿತ್ರೆ, (ಸಂ-೬) - ಸಂ. ಡಾ.ಸೆಬಾಸ್ಟಿಯನ್ ಜೋಸೆಫ್
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ-೧೯೯೭

೧೭. ಕರ್ನಾಟಕದ ಕಲೆಗಳು ಭಾಗ-೧ -ಪ್ರೊ.ಎಸ್.ಕೆ. ರಾಮಚಂದ್ರರಾವ್
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು - ೧೯೮೧

೧೮. ಕರ್ನಾಟಕ ಭಿತ್ತಿ ಚಿತ್ರ ಪರಂಪರೆ - ಡಾ. ಅ.ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು-೨೦೦೨

೧೯. ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು - ಡಾ. ಎಸ್.ಸಿ. ಪಾಟೀಲ
ಸ್ಕೂಲ್ ಆಫ್ ಆರ್ಟ್,
ಧಾರವಾಡ-೧೯೯೬

೨೦. ಚಿತ್ರಕಲಾ ಪ್ರಪಂಚ - (ಸಂ.) ಅ.ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ ಎನ್. ಮರಿಶಾಮಾಚಾರ್
ಬೆಂಗಳೂರು-೨೦೦೮

೨೧. ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ - ಡಾ.ಟಿ.ಎಸ್. ರಾಜಗೋಪಾಲ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು - ೧೯೮೩

೨೨. ಭಾರತೀಯ ಚಿತ್ರಕಲೆ - ಡಾ. ಶಿವರಾಮ ಕಾರಂತ
ಪುತ್ತೂರು-೧೯೯೦

೨೩. ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ - ಡಾ. ಆನಂದ ಕೆ. ಪೂಜಾರ
ಅಪ್ರಕಟಿತ ಡಿ.ಲಿಟ್ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೫

೨೪. ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ - ಡಾ.ಪಿಯೂಸ್ ಫಿಡಿಲೆಸ್ ಪಿಂಟೋ
ಸಮನ್ವಯ ಪ್ರಕಾಶನ
ಮಂಗಳೂರು

೨೫ ಕರಾವಳಿ ಕರ್ನಾಟಕದ ಇತಿಹಾಸ - ಡಾ. ಮೋಹನಕೃಷ್ಣ ರೈ
ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ
ವಿದ್ಯಾರಣ್ಯ

೨೬. ನವ್ಯಕಲೆ ಮತ್ತು ಕಲೆಗಾರರು - ಬಿ.ಪಿ. ಬಾಯಾರಿ
ಸಮಾಜ ಪುಸ್ತಕಾಲಯ
ಧಾರವಾಡ

೨೭. ಕಲಾ ಸಂವೇಧನೆಯ ಒಳನೋಟಗಳು - ಕೆ.ವಿ. ಸುಬ್ರಮಣ್ಯಂ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು

೨೮. ಕಲಾಪ್ರಕಾರಗಳು - ವಾಸುದೇವ ಕಾಣೆಮಾರ್
ಭಾರದ್ವಜ ಪ್ರಕಾಶನ, ಕದಿರೆ
ಮಂಗಳೂರು

೨೯. ಕಲಾಸಿದ್ಧಾಂತ - ವಿ.ಕೃ. ಗೋಕಾಕ್
ಸಾಹಿತ್ಯ ಪ್ರಕಾಶನ, ಕೊಪ್ಪಿಕರ್ ಬೀದಿ
ಹುಬ್ಬಳ್ಳಿ

* * *


IHS
IN REVERED MEMORY OF
FR. ANGELO FRANCIS XAVIER MAFFEI. S.J
FORMERLY RECTOR & PRINCIPAL
OF ST ALOYSIUS COLLEGE
WHO FOLLOWING THE APOSTLE OF INDIA
IN HIS SAINTLY MISSIONARY LIFE
ENDED IT IN A LONE HUT AT NELLIKUNJA
ON 31 MAY 1899
R I P